ಮಂಗಳವಾರ, ಆಗಸ್ಟ್ 2, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಶಿವಸೇನಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಅವರು ಸೋಮವಾರ ನವದೆಹಲಿಯ ಸಂಸತ್ ಭವನದ ಮುಂದೆ ಜಾರಿ ನಿರ್ದೇಶನಾಲಯದ ವಿರುದ್ಧ ಘೋಷಣಾ ಫಲಕ ಪ್ರದರ್ಶಿಸಿದರು



ಹಣ ನೀಡಿದ್ದ ಡಿವೈಎಸ್ಪಿ ಶಾಂತಕುಮಾರ್ • ದೂರು ನೀಡುತ್ತಿದ್ದಂತೆ ಹೆದರಿದ್ದ ಅಮ್ರಿತ್ ಪೌಲ್

₹ 1.35 ಕೋಟಿ ಮುಂಗಡ ಪಡೆದಿದ್ದ ಎಡಿಜಿಪಿ

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಗೂ ಮುನ್ನವೇ ಅಭ್ಯರ್ಥಿಗಳಿಂದ ಮುಂಗಡವಾಗಿ ₹ 1.35 ಕೋಟಿ ಪಡೆದಿದ್ದ ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್, ಅದೇ ಹಣವನ್ನು ಎಡಿಜಿಪಿ ಅಮ್ರಿತ್ ಪೌಲ್ ಅವರಿಗೆ ನೀಡಿದ್ದರೆಂಬ ಸಂಗತಿಯನ್ನು ಸಿಐಡಿ ಅಧಿಕಾರಿಗಳು ದಾಖಲೆ ಸಮೇತ ಮುಂದಿಟ್ಟಿದ್ದಾರೆ.

ಡಿವೈಎಸ್ಪಿ ಸೇರಿ 30 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಐಡಿ, ಅವರೆಲ್ಲರ ಹೇಳಿಕೆಯನ್ನು ಲಗತ್ತಿಸಿದೆ.

'545 ಪಿಎಸ್‌ಐ ಹುದ್ದೆಗಳ ನೇಮಕಕ್ಕೆ ಸರ್ಕಾರ ಒಪ್ಪಿಗೆ ನೀಡುತ್ತಿದ್ದಂತೆ ಎಡಿಜಿಪಿ ಅಮ್ರಿತ್ ಪೌಲ್, ಡಿವೈಎಸ್ಪಿ ಶಾಂತಕುಮಾರ್ ಹಾಗೂ ಇತರರನ್ನು ಬಳಸಿಕೊಂಡು ಹಣ ಮಾಡುವ ದಾರಿ ಕಂಡುಕೊಂಡಿದ್ದರು. ಶಾಂತಕುಮಾರ್ ಅವರನ್ನು ಮುಂದಿಟ್ಟುಕೊಂಡು ಅಭ್ಯರ್ಥಿಗಳನ್ನು ಸಂಪರ್ಕಿಸಿ, ಮುಂಗಡವಾಗಿ ₹ 1.35 ಕೋಟಿ ಸಂಗ್ರಹಿಸಿದ್ದರು. ಅದೇ ಹಣವನ್ನು ಎಡಿಜಿಪಿ ವಿವಿಧ ಖಾತೆಗಳಿಗೆ ಜಮೆ ಮಾಡಿಸಿಕೊಂಡಿದ್ದರು' ಎಂಬ ಮಾಹಿತಿ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖವಾಗಿದೆ.

ಮುಖ್ಯಾಂಶಗಳು

- ಹಣ ಸಂಪಾದನೆಗೆಂದೇ ನೇಮಕಾತಿಯಲ್ಲಿ ಅಕ್ರಮ
- ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ₹ 2.50 ಕೋಟಿ ಜಪ್ತಿ
- ಎಡಿಜಿಪಿ ಪಡೆದಿದ್ದ ಹಣದ ಬಗ್ಗೆ ಸಿಗದ ಮಾಹಿತಿ

'ಎಡಿಜಿಪಿ ಯಾವುದೇ ಅಭ್ಯರ್ಥಿಯನ್ನು ನೇರವಾಗಿ ಸಂಪರ್ಕಿಸಿಲ್ಲ. ಕಿರಿಯ ಸಿಬ್ಬಂದಿ ಹಾಗೂ ಮಧ್ಯವರ್ತಿಗಳ ಮೂಲಕವೇ ಅಕ್ರಮ ಮಾಡಿಸಿದ್ದಾರೆ. ಪ್ರತಿಯೊಬ್ಬ ಅಭ್ಯರ್ಥಿಯಿಂದ ಸಂಗ್ರಹವಾಗುತ್ತಿದ್ದ ಹಣದ ಬಗ್ಗೆ ಮಾತ್ರ ಎಡಿಜಿಪಿ ಮಾಹಿತಿ ಪಡೆದುಕೊಳ್ಳುತ್ತಿದ್ದರು. ಶಾಂತಕುಮಾರ್ ಅವರೇ ಲೆಕ್ಕ ಒಪ್ಪಿಸುತ್ತಿದ್ದರು' ಎಂಬ ಸಂಗತಿಯೂ ಪಟ್ಟಿಯಲ್ಲಿದೆ.

'ಹೆಸರು ಬಾಯ್ಬಿಡದಂತೆ ಎಡಿಜಿಪಿ ಎಚ್ಚರಿಕೆ'

'ಪಿಎಸ್‌ಐ ನೇಮಕಾತಿ ಅಕ್ರಮದ ಬಗ್ಗೆ ಸಿಐಡಿ ತನಿಖೆ ಆರಂಭವಾಗುತ್ತಿದ್ದಂತೆ ಹೆದರಿದ್ದ ಎಡಿಜಿಪಿ ಅಮ್ರಿತ್ ಪೌಲ್, ತಮ್ಮ ಹೆಸರು ಬಾಯ್ಬಿಡದಂತೆ ಎಚ್ಚರಿಕೆ ನೀಡಿದ್ದರು. ಇದೇ ಕಾರಣಕ್ಕೆ ಹಲವು ಆರೋಪಿಗಳು, ಎಡಿಜಿಪಿ ಹೆಸರು ಹೇಳಿರಲಿಲ್ಲ' ಎಂದು ಡಿವೈಎಸ್ಪಿ ಶಾಂತಕುಮಾರ್, ಸಿಐಡಿ ಎದುರು ಹೇಳಿದ್ದಾರೆ. ಈ ಅಂಶವನ್ನೂ ದೋಷಾರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

ಪರೀಕ್ಷೆ ನಂತರ ಎಡಿಜಿಪಿಗೆ ಭಯ: '2021ರ ಅಕ್ಟೋಬರ್ 3ರಂದು ರಾಜ್ಯದ 92 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಒಎಂಆರ್ ಪ್ರತಿಗಳು ಭದ್ರತಾ ಕೊಠಡಿ ಸೇರಿದ್ದವು. ಈ ಅವಧಿಯಲ್ಲಿ ಶಾಂತಕುಮಾರ್ ಹಾಗೂ ಇತರರು, ಬೆಂಗಳೂರಿನ 27 ಅಭ್ಯರ್ಥಿಗಳಿಂದ ಎರಡನೇ ಕಂತಿನ ರೂಪದಲ್ಲಿ ₹ 2.50 ಕೋಟಿ ಪಡೆದಿದ್ದರು' ಎಂಬ ಮಾಹಿತಿಯನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'₹ 2.50 ಕೋಟಿ ಲೆಕ್ಕವನ್ನು ಕೆಲದಿನ ಬಿಟ್ಟು ಎಡಿಜಿಪಿಗೆ ತಿಳಿಸಿದ್ದ ಶಾಂತಕುಮಾರ್, ಹಣವನ್ನು ಪಡೆಯುವಂತೆ ಕೋರಿದ್ದರು. ಅಷ್ಟರಲ್ಲೇ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಸುದ್ದಿ ಎಲ್ಲೆಡೆ ಹರಿದಾಡುತ್ತಿತ್ತು. ಕೆಲವು ಅಭ್ಯರ್ಥಿಗಳು, ಗೃಹ ಸಚಿವ ಹಾಗೂ ಮುಖ್ಯಮಂತ್ರಿಗೆ ದೂರು ನೀಡಿದ್ದರು. ಅಕ್ರಮ ಬಯಲಾಗಬಹುದೆಂದು ಹೆದರಿದ್ದ ಎಡಿಜಿಪಿ, ₹ 2.50 ಕೋಟಿ ಪಡೆಯಲು ನಿರಾಕರಿಸಿದ್ದರು.'

'ಎಡಿಜಿಪಿ ಬೇಡವೆಂದ ಹಣವನ್ನು ತಮ್ಮ ಬಳಿ ಇಟ್ಟುಕೊಳ್ಳಲು ಹೆದರಿದ್ದ ಶಾಂತಕುಮಾರ್, ಅದೇ ಹಣವನ್ನು ನೇಮಕಾತಿ ವಿಭಾಗದ ಎಫ್‌ಡಿಎ ಹರ್ಷನಿಗೆ ನೀಡಿದ್ದರು. ಆತ, ಹಣವನ್ನು ಎಫ್‌ಡಿಎ ಶ್ರೀನಿವಾಸ್‌ಗೆ ಕೊಟ್ಟಿದ್ದ' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

'ಅಕ್ರಮದ ತನಿಖೆ ಕೈಗೊಂಡಾಗ, ಶ್ರೀನಿವಾಸ್ ಮನೆ ಮೇಲೆ ದಾಳಿ ಮಾಡಿ ಸ್ವಲ್ಪ ಹಣ ಜಪ್ತಿ ಮಾಡಲಾಯಿತು. ಈತನ ಸ್ನೇಹಿತರು ಸಹ ಹಣ ತಂದುಕೊಟ್ಟರು. ಒಟ್ಟು ₹ 2.50 ಕೋಟಿ ಜಪ್ತಿಯಾಯಿತು' ಎಂಬ ಸಂಗತಿಯನ್ನೂ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

ಕಡಲ ಕಿನಾರೆಯಲ್ಲಿ ಅತ್ಯಾಚಾರ: ಬಂಧನ



ಮುನಾರ್ಖ್ ಅಹಮದ್

ಮಂಗಳೂರು: ಗೆಳೆಯನ ಜೊತೆ ವಿಹಾರಕ್ಕೆ ಬಂದಿದ್ದ ಯುವತಿ ಮೇಲೆ ಸುರತ್ಕಲ್‌ನ ಎನ್‌ಐಟಿಕೆ ಸಮೀಪದ ಕಡಲ ಕಿನಾರೆಯಲ್ಲಿ ಯುವಕನೊಬ್ಬ ಅತ್ಯಾಚಾರ ನಡೆಸಿದ್ದಾಗಿ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜುಲೈ 27ರ ಮಧ್ಯಾಹ್ನ ಕೃತ್ಯ ನಡೆದಿದೆ. ಯುವತಿಯ ದೂರು ಆಧರಿಸಿ ಪೊಲೀಸರು ಆರೋಪಿ ಮುನಾರ್ಖ್ ಅಹಮದ್ (30)ನನ್ನು ಬಂಧಿಸಿ, ಕೋರ್ಟ್‌ಗೆ ಹಾಜರುಪಡಿಸಿದ್ದಾರೆ. ಆರೋಪಿ ಲಾರಿಯ ಚಾಲಕನಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಯುವತಿ ಮೇಲೆ ಎಸಗಿದ ಲೈಂಗಿಕ ದೌರ್ಜನ್ಯದ ವಿಡಿಯೊವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದ ಆರೋಪಿ, ಅದೇ ದಿನ ಸಂಜೆ ಕರೆ ಮಾಡಿ ಕಿರುಕುಳ ನೀಡಿದ್ದ. ನಗ್ನವಾಗಿ ವಿಡಿಯೊ ಕರೆ ಮಾಡಬೇಕು. ಇಲ್ಲದಿದ್ದರೆ, ವಿಡಿಯೊವನ್ನು ಜಾಲತಾಣಗಳಲ್ಲಿ ಹಂಚಿಕೊಳ್ಳುವುದಾಗಿ ಬೆದರಿಕೆ ಒಡ್ಡಿದ್ದ' ಎಂದು ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಹೇಳಿದರು.

'ಆರೋಪಿಯು ಹೀಗೇ ಬೇರೆ ಯುವತಿಯರಿಗೂ ಕಿರುಕುಳ ನೀಡಿರುವ ಸಾಧ್ಯತೆ ಇದೆ. ಹೆಚ್ಚಿನ ವಿಚಾರಣೆ ನಡೆದಿದ್ದು ಆತನಿಂದ ಮೊಬೈಲ್‌ಗಳನ್ನೂ ವಶಕ್ಕೆ ಪಡೆದಿದ್ದೇವೆ' ಎಂದು ತಿಳಿಸಿದ್ದಾರೆ.

ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳ: ಸಿ.ಎಂ ಬೊಮ್ಮಾಯಿ

ಕೊಪ್ಪಳ: 'ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳ. ಸಾವಿರಾರು ವರ್ಷಗಳಿಂದ ಇದು ಜನಜನಿತ. ಜನರ ನಂಬಿಕೆಗಿಂತ ಬೇರೆ ಪುರಾವೆ ಬೇಕಿಲ್ಲ. ಆಂಜನೇಯ ಜನಿಸಿದ್ದು ಅಂಜನಾದ್ರಿಯಲ್ಲೇ ಎಂಬುದನ್ನು ಸಾವಿರ ಸಲ ಬೇಕಾದರೂ ಹೇಳುವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಹೇಳಿದರು.

ಅಂಜನಾದ್ರಿಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಾಲ್ಮೀಕಿ ರಾಮಾಯಣ ಮತ್ತು ಹಲವು ಪುರಾಣಗಳಲ್ಲಿ ಅಂಜನಾದ್ರಿ ಬೆಟ್ಟ ಕಿಷ್ಕಿಂದೆಯ ಉಲ್ಲೇಖವಿದೆ' ಎಂದರು.

'ಹನುಮ ಜನಿಸಿದ ಕ್ಷೇತ್ರದ ಬಗ್ಗೆ ಹಲವು ರಾಜ್ಯಗಳು ವಾದ ಮಂಡಿಸುತ್ತಿವೆ. ಆದರೆ, ದೇಶದ ಮೂಲೆಮೂಲೆಗಳಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ. ಇದನ್ನು ಪದೇ ಪದೇ ಚರ್ಚಿಸುವ ಅಗತ್ಯವೂ ಇಲ್ಲ' ಎಂದರು.

'ಅಂಜನಾದ್ರಿಗೆ ಬರಲು ಯಾತ್ರಿಕರಿಗೆ ಸಂಪರ್ಕ ರಸ್ತೆ, ವಸತಿ ವ್ಯವಸ್ಥೆ, ಯಾತ್ರಿ ನಿವಾಸ, ಆಸ್ಪತ್ರೆ, ಪಾರ್ಕಿಂಗ್, ಮಾರುಕಟ್ಟೆ ಹೀಗೆ ಮೂಲಸೌಲಭ್ಯ ಕಲ್ಪಿಸಲು ₹100 ಕೋಟಿ ಒದಗಿಸಲಾಗಿದೆ. ಬೆಟ್ಟಕ್ಕೆ ರೋಪ್ ವೇ ನಿರ್ಮಿಸಲಾಗುವುದು. ಮೈಸೂರು, ಹಂಪಿ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಅಂತರರಾಷ್ಟ್ರೀಯ ಪ್ರವಾಸೋದ್ಯಮ ತಾಣಗಳಾಗಿ ಅಭಿವೃದ್ಧಿಪಡಿಸಲಾಗುವುದು' ಎಂದರು.

'ಅಂಜನಾದ್ರಿ ಕ್ಷೇತ್ರದ ಅಭಿವೃದ್ಧಿಗೆ ಅಧಿಕಾರಿಗಳು ಸಮಯ ವ್ಯರ್ಥ ಮಾಡದೇ ಎರಡು ತಿಂಗಳಲ್ಲಿ ಕಾಮಗಾರಿ ಆರಂಭಿಸಿ, ಎಂಟು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಕಲ್ಲು ಒಡೆಯುವವರ ತೊಂದರೆ ನಿವಾರಿಸುವ ಭರವಸೆ

'ಕಲ್ಲು ಗಣಿಗಾರಿಕೆ ಕಾಯ್ದೆಗೆ ತಿದ್ದುಪಡಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಹಾಲಿ ಕಾಯ್ದೆಯಿಂದಾಗಿ ಭೋವಿ ಸಮಾಜದವರು ಕಲ್ಲು ಒಡೆಯುವ ಕುಲ ಕಸುಬು ಮುಂದುವರಿಸುವುದು ಕಷ್ಟವಾಗಿದೆ. ಮುಂದಿನ ಅಧಿವೇಶನದಲ್ಲಿ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ, ಕೈಯಿಂದ ಕಲ್ಲು ಒಡೆಯುವವರಿಗೆ ವಿಶೇಷ ರಿಯಾಯಿತಿ ಕಲ್ಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಭರವಸೆ ನೀಡಿದರು.

ಸಿದ್ಧರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠ ಇಲ್ಲಿನ ಶಿವಯೋಗಾಶ್ರಮದಲ್ಲಿ ಹಮ್ಮಿಕೊಂಡಿದ್ದ ಶಿವಯೋಗಿ ಸಿದ್ಧರಾಮೇಶ್ವರರ 60ನೇ ರಥೋತ್ಸವ, ಸಿದ್ಧರಾಮೇಶ್ವರ ಸ್ವಾಮೀಜಿ 20ನೇ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭೋವಿ ಸಮಾಜದ ಕುಲಕಸುಬಿನಿಂದಲೇ ಸಮಾಜ, ದೇಶ ಕಟ್ಟಲು ಸಾಧ್ಯವಾಗಿದೆ. ಕಲ್ಲು ಒಡೆಯದೆ ಮಂದಿರ ನಿರ್ಮಿಸಲು, ದೇವರ ಮೂರ್ತಿ ಕೆತ್ತಲು, ರಸ್ತೆ ನಿರ್ಮಿಸಲು, ಅಣೆಕಟ್ಟು ಕಟ್ಟಲು ಸಾಧ್ಯವಿಲ್ಲ. ಕಲ್ಲು ಒಡೆಯುವವರಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿರುವುದು ನನ್ನ ಗಮನಕ್ಕೂ ಬಂದಿದೆ. ನನ್ನ ಅಧಿಕಾರದ ಅವಧಿಯಲ್ಲೇ ಸಮಸ್ಯೆಗಳನ್ನು ಬಗೆಹರಿಸುತ್ತೇನೆ' ಎಂದು ಅವರು ಅಭಯ ನೀಡಿದರು.

'ಭೋವಿ ಅಭಿವೃದ್ಧಿ ನಿಗಮದಲ್ಲಿ ಸಮಾಜಕ್ಕೆ ತೊಂದರೆ ನೀಡುತ್ತಿದ್ದ ಅಧಿಕಾರಿಗಳನ್ನು ಬದಲಾಯಿಸಿದ್ದೇನೆ. ಇನ್ನೆರಡು ದಿನಗಳಲ್ಲಿ ಈ ನಿಗಮಕ್ಕೆ ಅಧ್ಯಕ್ಷರನ್ನು ನೇಮಿಸಲಾಗುವುದು' ಎಂದು ತಿಳಿಸಿದರು.

'ಭೋವಿ ನಿಗಮದಲ್ಲಿರುವ ಭ್ರಷ್ಟ ಅಧಿಕಾರಿಗಳು ಜನರಿಗೆ ಸೌಲಭ್ಯ ತಲುಪಿಸಲು ಬಿಡುತ್ತಿಲ್ಲ. ಕಲ್ಲು ಒಡೆಯುವವರಿಗೆ ಕಿರುಕುಳ ನೀಡುತ್ತಿದ್ದಾರೆ. ಸಭೆ ಕರೆದು ನಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು' ಎಂದು ಶಾಸಕ ಅರವಿಂದ ಲಿಂಬಾವಳಿ ಮನವಿ ಮಾಡಿದರು.

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಸಾನ್ನಿಧ್ಯ ವಹಿಸಿದ್ದರು.



ದಾವಣಗೆರೆಯ ಜಯದೇವ ವೃತ್ತದಲ್ಲಿ ಸೋಮವಾರ ಭೋವಿ ಗುರುಪೀಠದ ಶಿವಯೋಗಿ ಸಿದ್ಧರಾಮೇಶ್ವರ ದೇವರ 60ನೇ ರಥ ವಜ್ರಮಹೋತ್ಸವ ಕಾರ್ಯಕ್ರಮದಲ್ಲಿ ಕಲಾವಿದರು ಜಾನಪದ ನೃತ್ಯ ಪ್ರದರ್ಶಿಸಿದರು

–ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಡಿ.16ರಿಂದ ಆಳ್ವಾಸ್ ನುಡಿಸಿರಿ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಕನ್ನಡ ನಾಡು- ನುಡಿ- ಸಂಸ್ಕೃತಿಯ ರಾಷ್ಟ್ರೀಯ ಸಮ್ಮೇಳನ 'ಆಳ್ವಾಸ್ ನುಡಿಸಿರಿ'ಯು ಡಿಸೆಂಬರ್ 16ರಿಂದ 18ರ ವರೆಗೆ ಇಲ್ಲಿಯ ಆಳ್ವಾಸ್ ವಿದ್ಯಾಗಿರಿಯ ಆವರಣದಲ್ಲಿ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಡಿಕೆಶಿ ಪ್ರಕರಣ: ಸಿಬಿಐಗೆ ನೋಟಿಸ್

ಬೆಂಗಳೂರು: ಆದಾಯ ಮೀರಿದ ಆಸ್ತಿ ಗಳಿಕೆ ಆರೋಪದಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಕೋರಿದ ಪ್ರಕರಣದಲ್ಲಿ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ನನ್ನ ವಿರುದ್ಧ ಸಿಬಿಐ ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಬಿ.ವಿ.ಆಚಾರ್ಯ ಮತ್ತು ಸಿ.ಎಚ್. ಜಾಧವ್,



'ಅರ್ಜಿದಾರರ ವಿರುದ್ಧ 2020ರ ಅಕ್ಟೋಬರ್ 3ರಂದು ಭ್ರಷ್ಟಾಚಾರ ನಿಗ್ರಹ ತಡೆ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ ದಾಖಲಿಸಲಾಗಿರುವ ಎಫ್‌ಐಆರ್ ಕಾನೂನು ಬಾಹಿರವಾಗಿದೆ' ಎಂದು ಬಲವಾಗಿ ಆಕ್ಷೇಪಿಸಿದರು.

'ಅರ್ಜಿದಾರರು ಕೃಷಿ ಕುಟುಂಬದವರಾಗಿದ್ದು, 1989ರಿಂದ ವಿಧಾನಸಭೆ ಸದಸ್ಯನಾಗಿ ಒಟ್ಟು ಏಳು ಬಾರಿ ಆಯ್ಕೆಯಾದ ಸಾರ್ವಜನಿಕ ಸೇವಕರಾಗಿದ್ದಾರೆ. ಈ ಪ್ರಕರಣದಲ್ಲಿ ಅವರ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ನಲ್ಲಿ ಕುಟುಂಬದ ಸದಸ್ಯರ ಹೆಸರನ್ನೂ ಸೇರ್ಪಡೆ ಮಾಡಿರುವುದು ತಪ್ಪು' ಎಂದರು.

'ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣಗಳಲ್ಲಿ ಅನುಸರಿಸಬೇಕಾದ ನಿಯಮಗಳು ಮತ್ತು ಎಫ್‌ಐಆರ್ ದಾಖಲಿಸುವ ಮುನ್ನ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಕಲಂ 17 'ಎ' ಅನುಸಾರ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದಿಲ್ಲ. ಪರಿಶೀಲನಾ ಅವಧಿಯಲ್ಲಿನ (ಚೆಕ್ ಪೀರಿಯಡ್) ಅರ್ಜಿದಾರರ ಆದಾಯ, ಆಸ್ತಿ ಮತ್ತು ವೆಚ್ಚದ ಹೇಳಿಕೆಯ ವಿವರಗಳನ್ನೂ ನಮೂದಿಸಿಲ್ಲ ಎಂದರು.

ಸಿಇಟಿ ಅವಾಂತರ: 4ರಂದು ಧರಣಿ

ಬೆಂಗಳೂರು: ಸಿಇಟಿ ಪರೀಕ್ಷೆ ಬರೆದ ಪುನರಾವರ್ತಿತ ಅಭ್ಯರ್ಥಿಗಳು, ಹಿಂದಿನ ವರ್ಷ ತಾವು ತೇರ್ಗಡೆಯಾಗಿದ್ದ ಪಿಯು ಅಂಕಗಳನ್ನೂ ಪರಿಗಣಿಸಿ ರ್‍ಯಾಂಕ್ ಪಟ್ಟಿ ಪ್ರಕಟಿಸುವಂತೆ ಆಗ್ರಹಿಸಿ ಆ.4ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿದ್ಯಾರ್ಥಿಗಳ ಭವಿಷ್ಯದ ಜತೆಗೆ ಚೆಲ್ಲಾಟವಾಡುತ್ತಿದೆ. 2021ನೇ ಸಾಲಿನಲ್ಲಿ ಸುಮಾರು 23 ಸಾವಿರ ಅಭ್ಯರ್ಥಿಗಳು ಸಿಇಟಿ ಫಲಿತಾಂಶಗಳನ್ನು ತಿರಸ್ಕರಿಸಿದ್ದಾರೆ. ಈ ವರ್ಷ ಮತ್ತೆ ಪರೀಕ್ಷೆ ತೆಗೆದುಕೊಂಡಿದ್ದಾರೆ. ಆದರೆ, ಕೆಇಎ 2021ರಲ್ಲಿ ಜಾರಿಯಲ್ಲಿದ್ದ ನಿಯಮಗಳನ್ನು ಅನುಸರಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಪ್ರಾಧಿಕಾರದ ಕಚೇರಿಗೆ ಪೋಷಕರೊಂದಿಗೆ ಸೋಮವಾರವೂ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದರು.

ಅಧಿಸೂಚನೆ ಹೊರಡಿಸಿದಾಗ ಕೆಇಎಯಿಂದ ಯಾವುದೇ ಸೂಚನೆ ಬಂದಿಲ್ಲ. ಮೊದಲೇ ತಿಳಿಸಿದ್ದರೆ ದ್ವಿತೀಯ ಪಿಯು ಫಲಿತಾಂಶವನ್ನೂ ತಿರಸ್ಕರಿಸುತ್ತಿದ್ದೆವು. ಸುಮ್ಮನೆ ಒಂದು ವರ್ಷ ವ್ಯರ್ಥ ಮಾಡಿಕೊಂಡಿದ್ದೇವೆ. ನ್ಯಾಯ ದೊರೆಯದಿದ್ದರೆ ಕೋರ್ಟ್ ಮೊರೆ ಹೋಗಲು ಸಿದ್ಧ ಎಂದು ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹಲವರು ಮಾಹಿತಿ ನೀಡಿದರು.

ದಾಖಲೆ ಪರಿಶೀಲನೆ ಮುಂದೂಡಿಕೆ: ಆ.5ರಿಂದ ಆರಂಭವಾಗಬೇಕಿದ್ದ ಸಿಇಟಿ 2022ರ ದಾಖಲೆ ಪರಿಶೀಲನಾ ಕಾರ್ಯವನ್ನು ಕೆಇಎ ಮುಂದೂಡಿದೆ. ಮುಂದಿನ ದಿನಾಂಕ ಶೀಘ್ರ ಪ್ರಕಟಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಳೆ: ಕೊಡಗಿನಲ್ಲಿ ಮಣ್ಣು ಕುಸಿತ

ಪ್ರಜಾವಾಣಿ ವಾರ್ತೆ

ಮೈಸೂರು/ಹುಬ್ಬಳ್ಳಿ/ಚಿತ್ರದುರ್ಗ: ರಾಜ್ಯದ ಮೈಸೂರು ಭಾಗದ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದೆ. ಕೊಡಗಿನಲ್ಲಿ ಭಾನುವಾರ ರಾತ್ರಿ ಸುರಿದ ಮಳೆಗೆ ಹಲವೆಡೆ ಮಣ್ಣು ಕುಸಿದಿದ್ದು, ಮರಗಳು ಉರುಳಿವೆ. ಚಿತ್ರದುರ್ಗ, ದಾವಣಗೆರೆ ಭಾಗದಲ್ಲಿ ಸುರಿದ ಮಳೆಗೆ ರೆ, ಕಟ್ಟೆ, ಚೆಕ್‌ಡ್ಯಾಂ ಸೇರಿ ಇತರ ಜಲಮೂಲಗಳು ಭರ್ತಿಯಾಗಿವೆ.

ಕೊಡಗು ಜಿಲ್ಲೆಯ ಭಾಗಮಂಡಲ ಮತ್ತು ಕರಿಕೆ ಭಾಗದ 11 ಕಡೆ ಮಣ್ಣು ರಸ್ತೆಗೆ ಕುಸಿದಿದೆ. ಭಾಗಮಂಡಲ– ಕರಿಕೆ ರಸ್ತೆಯಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ಹೋಗಲಾಗದೆ ಪರದಾಡಿದರು.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಹೋಬಳಿಯ ಪಿ.ನೇರಲಕೆರೆ, ಲಾಯದ ಕೊಪ್ಪಲು, ಪಿ.ಚಿಟ್ಟನಹಳ್ಳಿಯಲ್ಲಿ ಸುಮಾರು 250 ತೆಂಗಿನ ಮರಗಳು ನೆಲಕ್ಕುರುಳಿದ್ದು, ಹಲವು ಮನೆಗಳಿಗೆ ಹಾನಿಯಾಗಿದೆ.

ಪಿ.ನೇರಲಕೆರೆ ಮತ್ತು ಪಿ.ಚಿಟ್ಟನಹಳ್ಳಿ ವ್ಯಾಪ್ತಿಯಲ್ಲಿ ಸುಮಾರು 30 ಎಕರೆಯಲ್ಲಿ ಬೆಳೆದಿದ್ದ ಟೊಮೆಟೊ ಸೇರಿದಂತೆ ಹಲವು ತರಕಾರಿ ಬೆಳೆಗಳು ಜಲಾವೃತಗೊಂಡಿವೆ. ಬಿಂಡಿಗನವಿಲೆ ಹೋಬಳಿಯ ಹೊನ್ನಾವರ ಕೆರೆ, ಕಲ್ಕೆರೆ, ಬಿಂಡಿಗನವಿಲೆ ಕೆರೆ ತುಂಬಿ ಹರಿಯುತ್ತಿವೆ

ಹುಬ್ಬಳ್ಳಿ ವರದಿ: ಉತ್ತರ ಕನ್ನಡದ ಹಳಿಯಾಳ, ಉಳಿದಂತೆ, ಯಲ್ಲಾಪುರ, ದಾಂಡೇಲಿ, ಮುಂಡಗೋಡ, ಶಿರಸಿ, ಸಿದ್ದಾಪುರ, ಭಟ್ಕಳ, ಹೊನ್ನಾವರ ಹಾಗೂ ಕುಮಟಾದಲ್ಲಿ ಮಳೆಯಾಗಿದೆ.

ಹೊಸಪೇಟೆ, ಹಾವೇರಿ ಜಿಲ್ಲೆಯ ಹಾನಗಲ್‌ನಲ್ಲಿ ಜಿಟಿಜಿಟಿ ಮಳೆಯಾಗಿದೆ. ಬೆಳಗಾವಿ ನಗರ, ತಾಲ್ಲೂಕು, ಖಾನಾಪುರ, ಚಿಕ್ಕೋಡಿ ಹಾಗೂ ಸವದತ್ತಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಾಧಾರಣ ಮಳೆ ಸುರಿಯಿತು.

ಚಿತ್ರದುರ್ಗ ವರದಿ: ಜಿಲ್ಲೆಯ ವಿವಿಧೆಡೆ ಭಾನುವಾರ ರಾತ್ರಿ ಉತ್ತಮ ಮಳೆಯಾಗಿದೆ. ಹಿರಿಯೂರು ತಾಲ್ಲೂಕಿನ ಧರ್ಮಪುರ, ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆ ಹಾಗೂ ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ ಭಾಗದಲ್ಲಿ ಸುರಿದ ಮಳೆಗೆ ಕೆರೆ, ಕಟ್ಟೆ, ಚೆಕ್‌ಡ್ಯಾಂ ತುಂಬಿವೆ.

ಕೇರಳದಲ್ಲಿ ಆರು ಮಂದಿ ಸಾವು: ಕೇರಳದಲ್ಲಿ ವರ್ಷಧಾರೆ ಮುಂದುವರಿದಿದ್ದು, ಕಾರೊಂದು ನಿಯಂತ್ರಣ ತಪ್ಪಿ ಹೊಳೆಯಲ್ಲಿ ಬಿದ್ದಿದ್ದರಿಂದ ಸೋಮವಾರ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದಾರೆ. ಈವರೆಗೂ ಆರು ಜನ ಅಸುನೀಗಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	23,081	23,081
ಹಾರಂಗಿ	2,859	2,858.02	2,520	2,520
ಕಬಿನಿ	2,284	2,283.51	7,703	5,000
ಹೇಮಾವತಿ	2,922	2,922	4,787	4,787
ಲಿಂಗನಮಕ್ಕಿ	1,819	1,798	5,632	5,443
ಸೂಪಾ (ಮೀ)	564	541.87	2,425	268
ಮಾಣಿ	595	584	900	-
ತುಂಗಭದ್ರಾ	1,633	1,632.49	62,277	39,547
ಮಲಪ್ರಭಾ	2079.50	2,069.60	1,609	394
ಘಟಪ್ರಭಾ	2,175	2,158.08	3,623	113
ಭದ್ರಾ	186	184	5,621	4,718
ಆಲಮಟ್ಟಿ (ಮೀ)	519.60	518.62	27,328	18,451
ನಾರಾಯಣಪುರ (ಮೀ)	492.25	491.92	20,000	11,770

* ನೆಲಮಟ್ಟದಿಂದ

ಕುಸಿದ ಗುಡ್ಡ: 6 ವರ್ಷದ ಬಾಲಕಿ ಸಾವು

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಸೋಮವಾರ ಸುರಿದ ಧಾರಾಕಾರ ಮಳೆಯಿಂದಾಗಿ ದರ್ಪಣತೀರ್ಥ ನದಿಯು ತುಂಬಿ ಹರಿದಿದ್ದು, ಕುಕ್ಕೆಯ ಆದಿಸುಬ್ರಹ್ಮಣ್ಯ ದೇವಳದ ಒಳಗೆ ನೀರು ತುಂಬಿಕೊಂಡಿದೆ.

ಕುಮಾರಧಾರಾ ನದಿಯ ಪಕ್ಕದ ಸ್ನಾನಘಟ್ಟದ ಸಮೀಪದ ಮನೆಯೊಂದರ ಮೇಲೆ ಗುಡ್ಡ ಕುಸಿದಿದ್ದು, ಮನೆಯಲ್ಲಿದ್ದ 6 ವರ್ಷದ ಬಾಲಕಿ ಮೃತಪಟ್ಟಿದ್ದು, ಇನ್ನೊಂದು ಮಗುವಿನ ರಕ್ಷಣೆಗೆ ಯತ್ನ ನಡೆದಿದೆ.

ಭಕ್ತರಿಗೆ ಸಲಹೆ: ಭಕ್ತರು ಕುಕ್ಕೆ ದೇಗುಲಕ್ಕೆ ಎರಡು ದಿನ ಭೇಟಿ ನೀಡುವುದು ಬೇಡ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ.ಕೋರಿದ್ದಾರೆ.

ಕುಕ್ಕೆ ದೇವಳದ ಸಮೀಪ ಇರುವ ದರ್ಪಣತೀರ್ಥ ನದಿಯ ಸ್ನಾನ ಘಟ್ಟ, ರುದ್ರಪಾದ ಸೇತುವೆ ಜಲಾವೃತವಾಗಿವೆ. ದರ್ಪಣ ತೀರ್ಥ ನದಿಯ ತಟದ 12ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ. ಸುಬ್ರಹ್ಮಣ್ಯ- ಪುತ್ತೂರು- ಮಂಜೇಶ್ವರ ಅಂತರರಾಜ್ಯ ಸಂಪರ್ಕ ರಸ್ತೆಯ ಸೇತುವೆ ಮುಳುಗಡೆಯಾಗುವ ಸಾಧ್ಯತೆ ಇದೆ. ಕಲ್ಮಕಾರಿನ ಕಡಮಕಲ್ಲು ಎಸ್ಟೇಟ್ ಮೇಲ್ಭಾಗದಲ್ಲಿ ಭೂಕುಸಿತ ಸಂಭವಿಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

ಸಿದ್ದರಾಮಯ್ಯ-75 'ಅಮೃತ ಮಹೋತ್ಸವ' ನಾಳೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದಾವಣಗೆರೆಯಲ್ಲಿ ಬುಧವಾರ (ಆಗಸ್ಟ್ 3) ನಡೆಯಲಿರುವ ಸಿದ್ದರಾಮಯ್ಯ–75 'ಅಮೃತ ಮಹೋತ್ಸವ' ಸಂಭ್ರಮಕ್ಕೆ ಅಮೃತ ಮಹೋತ್ಸವ ಸಮಿತಿ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಈ ಕಾರ್ಯಕ್ರಮಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಜನಸಾಗರ ಹರಿದು ಬರಬಹುದೆಂಬ ನಿರೀಕ್ಷೆ ಸಮಿತಿಯದ್ದಾಗಿದೆ.

ಸಮಾವೇಶದ ನೆಪದಲ್ಲಿ ಸಿದ್ದರಾಮಯ್ಯ ಅವರ ಆಡಳಿತ ಅವಧಿಯ ಜನಪರ ಯೋಜನೆಗಳನ್ನು ನೆನಪಿಸುತ್ತಲೇ, ಕೇಂದ್ರ– ರಾಜ್ಯ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸಲು ಸಿದ್ಧತೆ ನಡೆದಿದೆ. ಕಾರ್ಯಕ್ರಮದ ಅಂತಿಮ ರೂಪರೇಷೆಗಳ ಕುರಿತು ಸಿದ್ದರಾಮಯ್ಯ ಅವರ ನಿವಾಸದಲ್ಲಿ ಸಮಿತಿ ಪದಾಧಿಕಾರಿಗಳಾದ ಆರ್.ವಿ. ದೇಶಪಾಂಡೆ, ಬಸವರಾಜ ರಾಯರಡ್ಡಿ, ಈಶ್ವರ ಖಂಡ್ರೆ, ಎಚ್.ಎಂ. ರೇವಣ್ಣ, ಬಿ.ಎಲ್. ಶಂಕರ್, ವಿ.ಆರ್. ಸುದರ್ಶನ್, ಅಜಯ್ ಸಿಂಗ್ ಮತ್ತಿತರರು ಚರ್ಚೆ ನಡೆಸಿದರು.

ಸಿದ್ದರಾಮಯ್ಯ ಅವರು ಮಂಗಳವಾರ ಮಧ್ಯಾಹ್ನವೇ ಹುಬ್ಬಳ್ಳಿಗೆ ತೆರಳಲಿದ್ದು, ರಾತ್ರಿ 8 ಗಂಟೆಗೆ ಎಐಸಿಸಿ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರ ಎಂಟು ವರ್ಷಗಳ ಆಡಳಿತದಲ್ಲಿನ ವೈಫಲ್ಯಗಳ ಕುರಿತು ಕಾಂಗ್ರೆಸ್ ಇತ್ತೀಚೆಗೆ ಬಿಡುಗಡೆ ಮಾಡಿದ್ದ 'ವರುಷ ಎಂಟು ಅವಾಂತರ ನೂರೆಂಟು' ಕಿರು ಹೊತ್ತಿಗೆಯನ್ನು ಮರುಮುದ್ರಿಸಿ ಅಮೃತ ಮಹೋತ್ಸವ ಹಂಚಲು ಸಮಿತಿ ಮುಂದಾಗಿದೆ. ಹೀಗಾಗಿ, ಎರಡು ಲಕ್ಷಕ್ಕೂ ಹೆಚ್ಚು ಪ್ರತಿಗಳನ್ನು ಮರುಮುದ್ರಿಸಲಾಗಿದೆ' ಎಂದು ಸಮಿತಿಯ ಮೂಲಗಳು ತಿಳಿಸಿವೆ.

10 ಲಕ್ಷ ಜನರು ಸೇರುವ ನಿರೀಕ್ಷೆ

ದಾವಣಗೆರೆ: ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಕಾರ್ಯಕ್ರಮಕ್ಕೆ ನಗರ ಹೊರವಲಯದ ಕುಂದವಾಡದ ಬಳಿ ಶಾಮನೂರು ಪ್ಯಾಲೇಸ್ ಮೈದಾನದಲ್ಲಿ ಭರದ ಸಿದ್ಧತೆ ನಡೆದಿದೆ. ಅಂದಾಜು 10 ಲಕ್ಷ ಜನ ಬರುವ ನಿರೀಕ್ಷೆ ಇದೆ.

6 ಲಕ್ಷ ಮಂದಿಗೆ ಊಟದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಿದ್ದರಾಮಯ್ಯ ಅವರ ಜನ್ಮದಿನಕ್ಕೆ ಶುಭಕೋರುವ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿವೆ.

3ರಂದು ಬೆಳಿಗ್ಗೆ 10ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ಮಧ್ಯಾಹ್ನ 12ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಇತರೆ ಮುಖಂಡರು ಪಾಲ್ಗೊಳ್ಳಲಿದ್ದಾರೆ.

250 ಎಕರೆ ಪ್ರದೇಶದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪಕ್ಕದ ಸೇವಾ ರಸ್ತೆಯಲ್ಲೂ ವಾಹನಗಳ ನಿಲುಗಡೆಗೆ ಅವಕಾಶ ಇದೆ. ಕಾರ್ಯಕ್ರಮ ಹಿನ್ನೆಲೆಯಲ್ಲಿ ಆಗಲೇ ದಾವಣಗೆರೆ, ಹರಿಹರದ ವಸತಿಗೃಹಗಳು ಬಹುತೇಕ ಭರ್ತಿಯಾಗಿವೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮ್ಮೇಳನ ಆರಂಭ

'ದ್ವೇಷ ಬಿತ್ತಿದವರು ಹೊರಗೆ; ಹೋರಾಟಗಾರರು ಜೈಲಿಗೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜನಪರ ಹಕ್ಕುಗಳ ಹೋರಾಟಗಾರರನ್ನು ಜೈಲಿಗಟ್ಟಿದೆ. ಆದರೆ, ಕೋಮುಭಾವನೆ ಕೆರಳಿಸಿ ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ತರುವವರನ್ನು ಮುಕ್ತವಾಗಿ ಓಡಾಡಲು ಬಿಟ್ಟಿದೆ' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಆರೋಪಿಸಿದರು.

ನಗರದ ಹೊರವಲಯದ ಖಣದಾಳದಲ್ಲಿ ಸೋಮವಾರ ಜನವಾದಿ ಮಹಿಳಾ ಸಂಘಟನೆಯ ಮೂರು ದಿನಗಳ 11ನೇ ರಾಜ್ಯ ಸಮ್ಮೇಳನ ಉದ್ಘಾಟಿಸಿದ ಅವರು, 'ಕೋಮು ದ್ವೇಷದ ಹೇಳಿಕೆ ನೀಡಿರುವ ಬಿಜೆಪಿಯ ಕಪಿಲ್ ಮಿಶ್ರಾ, ಅನುರಾಗ್ ಠಾಕೂರ್ ವಿರುದ್ಧ ಈವರೆಗೆ ಯಾಕೆ ಕ್ರಮ ಕೈಗೊಳ್ಳಲಾಗಿಲ್ಲ' ಎಂದು ಪ್ರಶ್ನಿಸಿದರು.

'ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ಬಂಡವಾಳಶಾಹಿಗಳ ಪರವಾದ ನೀತಿಗಳನ್ನು ತರುವುದರ ವಿರುದ್ಧ ಜನವಾದಿ ಮಹಿಳಾ ಸಂಘಟನೆ ರಾಷ್ಟ್ರಮಟ್ಟದಲ್ಲಿ ಸಹಿ ಸಂಗ್ರಹ ಅಭಿಯಾನ ಕೈಗೊಂಡಿದೆ. ಇಲ್ಲಿಯವರೆಗೆ 30 ಲಕ್ಷ ಸಹಿ ಸಂಗ್ರಹಿಸಿ, ರಾಷ್ಟ್ರಪತಿಗೆ ಕಳುಹಿಸಲಾಗಿದೆ. ಆಗಸ್ಟ್ 15ರವರೆಗೆ ಈ ಅಭಿಯಾನ ಮುಂದುವರೆಯಲಿದೆ' ಎಂದರು.

ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷೆ ಯು.ವಾಸುಕಿ ಅವರು, 'ಕೊರೊನಾ ವೇಳೆ ಬಡವರಿಗೆ ಆಸರೆಯಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ₹ 25 ಸಾವಿರ ಕೋಟಿ ಕಡಿತಗೊಳಿಸಿದೆ. ಇದು ಜನ ವಿರೋಧಿ ಕ್ರಮ. ಮುಂದಿನ ವರ್ಷದ ಬಜೆಟ್‌ನಲ್ಲಿ ಸಮರ್ಪಕವಾಗಿ ಹಣ ನೀಡಬೇಕು' ಎಂದರು.

ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ದೇವಿ, ಉಪಾಧ್ಯಕ್ಷೆ ಕೆ.ನೀಲಾ, ಪ್ರಧಾನ ಕಾರ್ಯದರ್ಶಿ ಗೌರಮ್ಮ, ಸ್ವಾಗತ ಸಮಿತಿ ಅಧ್ಯಕ್ಷೆ ಡಾ. ಕನೀಜ್ ಫಾತಿಮಾ ಇದ್ದರು. ವಿವಿಧ ಜಿಲ್ಲೆಗಳಿಂದ 350ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 11ನೇ ರಾಜ್ಯ ಸಮ್ಮೇಳನದಲ್ಲಿ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಮಾತನಾಡಿದರು. ಯು. ವಾಸುಕಿ, ಕನೀಜ್ ಫಾತಿಮಾ, ಗೌರಮ್ಮ ದೇವಿ ಇದ್ದರು

ನಾಗರ ಪಂಚಮಿ: ಲೌಕಿಕ ಅಲೌಕಿಕಗಳ ಸಂಭ್ರಮ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ನಾಗರ ಪಂಚಮಿ

ಆಷಾಢಮಾಸ ಕಳೆದು ಶ್ರಾವಣ ಬಂದಿತು ಎಂದರೆ ಹಬ್ಬಗಳ ಸಾಲು ಆರಂಭವಾಯಿತು ಎಂದು ಅರ್ಥ. ಹೊರಗೆ ಪ್ರಕೃತಿಯೂ ಸಂಭ್ರಮದಲ್ಲಿರುತ್ತದೆ; ನಮ್ಮ ಒಳಗಿನ ಭಾವಪ್ರಕೃತಿಯೂ ಸಂಭ್ರಮಕ್ಕೆ ಸಜ್ಜುಗೊಳ್ಳುತ್ತದೆ.

ನಮ್ಮ ಹಬ್ಬಗಳಿಗೂ ನಮ್ಮ ಕೌಟುಂಬಿಕ ಮೌಲ್ಯಗಳಿಗೂ ನೇರ ನಂಟಿರುವುದು ಸ್ಪಷ್ಟ. ಶ್ರಾವಣಮಾಸದ ಆರಂಭದ ಹಿಂದಿನ ದಿನ, ಎಂದರೆ ಅಮಾವಾಸ್ಯೆಯ ದಿನ 'ಭೀಮೇಶ್ವರವ್ರತ'ವನ್ನು ಆಚರಿಸಿರುತ್ತೇವೆ. ಈ ವ್ರತದ ಉದ್ದೇಶವೇ ದಾಂಪತ್ಯದ ಆದರ್ಶವನ್ನು ಎತ್ತಿಹಿಡಿಯುವುದು. ಈ ವ್ರತದ ಬಳಿಕ ಬರುವ ಮುಖ್ಯ ಪರ್ವವೇ ನಾಗರ ಪಂಚಮಿ. ಭೀಮನ ಅಮಾವಾಸ್ಯೆ ಗಂಡ–ಹೆಂಡತಿಯರ ಪ್ರೇಮಕ್ಕೆ ಸಂಕೇತವಾದರೆ, ನಾಗರ ಪಂಚಮಿ ಸಹೋದರ–ಸಹೋದರಿಯರ ಕಾಳಜಿಗೆ ಸಂಕೇತವಾಗುತ್ತದೆ.

'ನಾಗರ ಪಂಚಮಿ ನಾಡಿಗೆ ದೊಡ್ಡದು, ನಾರಿಯಲ್ಲರೂ ನಲಿವರು' – ಎಂಬ ಮಾತೊಂದು ಪ್ರಸಿದ್ಧವಾಗಿದೆ. ನಾರಿಯರ ನಲಿವಿಗೂ ನಾಗರ ಪಂಚಮಿಗೂ ಏನು ಸಂಬಂಧ – ಎಂಬುದು ವಿಚಾರಾರ್ಹ. ನಾಗರ ಪಂಚಮಿಯಂದು ನಾಗದೇವತೆಯನ್ನು ಪೂಜಿಸುವುದು ವಾಡಿಕೆ.



ನಮ್ಮ ಊರುಗಳಲ್ಲಿರುವ ಹುತ್ತಗಳಿಗೆ ಹೆಣ್ಣುಮಕ್ಕಳು ಪೂಜೆ ಮಾಡುವುದು, ಹಾಲನ್ನು ತನಿ ಎರೆಯವುದು ಉಂಟು. ನಾಗಕಲ್ಲುಗಳಿಗೂ ಹೀಗೆ ಪೂಜಿಸಿ, ತನಿ ಎರೆಯಲಾಗುತ್ತದೆ. ತನಿ ಎರೆದ ಹಾಲನ್ನು ಹೆಣ್ಣುಮಕ್ಕಳು ಅವರ ಅಣ್ಣತಮ್ಮಂದಿರ ಬೆನ್ನಿಗೆ ಎರೆಯುತ್ತಾರೆ. ಇದರ ತಾತ್ಪರ್ಯ: ಒಡಹುಟ್ಟಿದವರು ತಂಪಾಗಿರಲಿ ಎಂಬ ಆಶಯ. ತವರುಮನೆ ಚೆನ್ನಾಗಿದ್ದರೆ ಹೆಣ್ಣುಮಕ್ಕಳಿಗೆ ಅದೇ ಸಂಭ್ರಮ; ಈ ಸಂಭ್ರಮವು ಸಹೋದರರ ಕ್ಷೇಮ–ಕಾಳಜಿಗಳ ಹಾರೈಕೆಯಲ್ಲಿ ಧ್ವನಿತವಾಗಿದೆ. ಕುಟುಂಬಗಳು ಚೆನ್ನಾಗಿದ್ದರೆ ಸಮಾಜ ಚೆನ್ನಾಗಿರುತ್ತದೆ. ಸಮಾಜ ಚೆನ್ನಾಗಿರಬೇಕಾದರೆ ವೈಯಕ್ತಿಕವಾಗಿ ನಾವೆಲ್ಲರೂ ಪರಸ್ಪರ ಸ್ನೇಹ–ಪ್ರೀತಿ–ಕಾಳಜಿಗಳನ್ನು ಮೈಗೂಡಿಸಿಕೊಳ್ಳಬೇಕು; ಮಾತ್ರವಲ್ಲ, ಅವನ್ನು ನಮ್ಮ ಆತ್ಮೀಯರೊಂದಿಗೂ ಬಂಧುಗಳೊಂದಿಗೂ ಹಂಚಬೇಕು ಎಂಬ ಉದಾತ್ತ ನಿಲುವನ್ನು ನಮ್ಮ ಎಲ್ಲ ಹಬ್ಬಗಳ ಆಚರಣೆಯ ಕೇಂದ್ರವಸ್ತುವಾಗಿರುವುದು ಮನನೀಯ.

ನಾಗರ ಪಂಚಮಿಯನ್ನು ನಮ್ಮ ನಾಡಿನ ಒಂದೊಂದು ಭಾಗದಲ್ಲೂ ಒಂದೊಂದು ವಿಶಿಷ್ಟ ರೀತಿಯಲ್ಲಿ ಆಚರಿಸಲಾಗುತ್ತದೆ. ಕೆಲವರು ಮನೆಯನ್ನು ಸ್ವಚ್ಛಗೊಳಿಸುವ ಹಬ್ಬವನ್ನಾಗಿ ಆಚರಿಸಿ, ನಮ್ಮ ಜೀವನವ ಕೊಳೆಯೂ ಹೀಗೆ ತೊಲಗಲಿ ಎಂದು ಬಯಸುತ್ತಾರೆ; ಮತ್ತೆ ಕೆಲವರು ವಿವಿಧ ರೀತಿಯ ಖಾದ್ಯಗಳನ್ನು ತಯಾರಿಸಿ ಆಪ್ತರೊಂದಿಗೆ ಸವಿದು, ನೋವು–ನಲಿವುಗಳನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳುವುದರಿಂದ ಬದುಕು ಹಗುರವಾಗುತ್ತದೆ ಎಂದು ಸಂಭ್ರಮಿಸುತ್ತಾರೆ; ಇನ್ನು ಹಲವರು ಜೋಕಾಲಿಯಲ್ಲಿ ಆಟವಾಡಿ, ಜೀವನವೂ ಹೀಗೆ ತೂಗುಯ್ಯಾಲೆಯಂತಿರುವಾಗ, ಏಳು–ಬೀಳುಗಳಿಗೆ ಅಂಜದಿರೋಣ ಎಂದು ಸಂಕಲ್ಪ ತೊಡುತ್ತಾರೆ.

ನಾಗರ ಪಂಚಮಿಯಲ್ಲಿ ಇನ್ನೊಂದು ಆಯಾಮವನ್ನೂ ಕಾಣಬಹುದು. ನಾಗದೇವತೆ ಎಂಬುದು ಸಂತಾನಕ್ಕೂ ಸಂಕೇತ; ಸಾಧನೆಗೂ ಸಂಕೇತ. ಸಂತಾನದ ನಿರಂತರತೆಯನ್ನು ನಾಗಾರಾಧನೆಯಲ್ಲಿ ಕಾಣುತ್ತೇವೆ. ಇದು ಲೌಕಿಕವಾದ ಸಿದ್ಧಿ, ಸಂತೋಷಕ್ಕೆ ಸೂಚಕ. ನಾಗ ಎನ್ನುವುದು ಕುಂಡಲಿನೀಸ್ವರೂಪದಲ್ಲಿ ನಮ್ಮ ಆಧ್ಯಾತ್ಮಿಕ ಸಾಧನೆಯನ್ನು ಪ್ರತಿನಿಧಿಸುತ್ತದೆ. ಇದು ಅಲೌಕಿಕವಾದ ಸಿದ್ಧಿ, ಆನಂದಕ್ಕೆ ಸೂಚಕ. ಹೀಗೆ ಒಂದೇ ಪ್ರತೀಕವನ್ನು ನಮ್ಮ ಪರಂಪರೆಯಲ್ಲಿ ಹಲವು ಸ್ತರಗಳಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವಿದೆ.

ಮಂಗಳವಾರ, ಆಗಸ್ಟ್ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 213 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಾಗರ ಪಂಚಮಿ ಶುಭಾಶಯ

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹53,100 (ಬೆಂಗಳೂರು)	₹59,600 (ಬೆಂಗಳೂರು)	79.06 ▲

ಕ್ಷೇಮ ಕುಶಲ
ನಮ್ಮ ಕೂದಲಿನ ಬಣ್ಣ, ರಚನೆ, ಉದುರುವಿಕೆ, ಬೆಳೆಯುವಿಕೆ, ಒರಟುತನ, ಜಿಗುಟುತನ ಮುಂತಾದ ಸ್ವಭಾವಗಳು ನಮಗೆ ಹುಟ್ಟಿನಿಂದ ಬರುವ ಬಳುವಳಿ. ಕೂದಲು ನಮ್ಮ ಅನಾರೋಗ್ಯಕ್ಕೂ ಸೂಚಕ.



ನಮ್ಮದು ರಾಷ್ಟ್ರೀಯ ಪಕ್ಷ; ಭೇದಭಾವದ ಪ್ರಶ್ನೆ ಉದ್ಭವಿಸದು-ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ನಮ್ಮದು ರಾಷ್ಟ್ರೀಯ ಪಕ್ಷ. ರಾಷ್ಟ್ರೀಯತೆಯ ಉದ್ದೇಶದ ಈ ಸರ್ಕಾರ ಯಾರಲ್ಲೂ ಭೇದಭಾವ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಯಾರನ್ನೂ ಕಡೆಗಣಿಸಿಲ್ಲ ಎಂದು ಪರೋಕ್ಷವಾಗಿ ಹೇಳಿದರು.

ಶಿವಯೋಗಿ ಸಿದ್ದರಾಮೇಶ್ವರ ರಥೋತ್ಸವದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಸೋಮವಾರ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಈ ಹಿಂದೆ ಆಡಳಿತ ನಡೆಸಿರುವ ಪಕ್ಷಗಳು ಏನೆಲ್ಲಾ ಸಾಧನೆ ಮಾಡಿವೆ ಎಂಬ ಬಗ್ಗೆ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ' ಎಂದು ಹೇಳಿದರು. ಆ ಮೂಲಕ 'ಕೋಮು ಸಾಮರಸ್ಯ ಕಾಪಾಡುವ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ನೀಡಿದ್ದ ಸಲಹೆಗೆ ಅವರು ತಿರುಗೇಟು ನೀಡಿದರು.

'ಕರಾವಳಿಯಲ್ಲಿ ನಡೆದಿರುವ ಹತ್ಯೆ ಪ್ರಕರಣಗಳ ತನಿಖೆಗೆ ನಾವು ಸೂಕ್ತ ಕ್ರಮ ಕೈಗೊಂಡಿರುವುದರಿಂದ ಜನರಲ್ಲಿ ವಿಶ್ವಾಸ ಮೂಡಿದೆ. ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರು ನಡೆಸುತ್ತಿರುವ ಪ್ರತಿಭಟನೆ ತಹಬದಿಗೆ ಬಂದಿದೆ. ಪೊಲೀಸರು ಖಂಡಿತವಾಗಿಯೂ ಹತ್ಯೆ ಪ್ರಕರಣಗಳ ಎಲ್ಲ ಆರೋಪಿಗಳನ್ನು ಬಂಧಿಸಲಿದ್ದಾರೆ. ಈ ಹಿಂದಿನ ಪ್ರಕರಣಗಳಲ್ಲೂ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ. ಪ್ರಸ್ತುತ ಪ್ರಕರಣದಲ್ಲೂ ಆರೋಪಿಗಳು ಪರಾರಿಯಾಗಲು ಬಿಡುವುದಿಲ್ಲ' ಎಂದು ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

'ಗೃಹ ಸಚಿವರ ನಿವಾಸಕ್ಕೆ ಭದ್ರತೆ ಸಮಸ್ಯೆಯಿಲ್ಲ. ಪ್ರತಿಭಟನಾಕಾರರು ಬಂದಾಗ ಭದ್ರತೆಗೆ ನಿಯೋಜಿಸಿದ್ದ ಸಿಬ್ಬಂದಿ ಸ್ಥಳದಲ್ಲಿರಲಿಲ್ಲ. ಅವರಿಗೆ ತಾಕೀತು ಮಾಡಿ ವ್ಯವಸ್ಥೆ ಸರಿಪಡಿಸಲಾಗಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು.

ಹಿಂದುತ್ವದ ಆಧಾರದಲ್ಲಿಯೇ ಆಡಳಿತ: ಸುನಿಲ್

ಉಡುಪಿ: 'ರಾಜ್ಯದಲ್ಲಿ ಹಿಂದುತ್ವವನ್ನು ಆಧಾರವಾಗಿಟ್ಟುಕೊಂಡೇ ಸರ್ಕಾರ ನಡೆಸುತ್ತಿದ್ದೇವೆ. ಸರ್ಕಾರ ಅಥವಾ ಹಿಂದುತ್ವದ ಪ್ರಶ್ನೆ ಬಂದಾಗ ಸರ್ಕಾರ ಬದಿಗಿಟ್ಟು ಹಿಂದುತ್ವವನ್ನೇ ಆಯ್ಕೆ ಮಾಡಿಕೊಳ್ಳುತ್ತೇವೆ' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ಸೋಮವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಸಣ್ಣ ಪ್ರತಿರೋಧ, ಆಕ್ರೋಶ ಅಥವಾ ತೀವ್ರತೆಗೆ ಮಣಿದು ರಾಷ್ಟ್ರೀಯತೆಯಿಂದ ವಿಮುಖವಾಗುವ ಪ್ರಶ್ನೆಯೇ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ರಾಷ್ಟ್ರೀಯತೆಯ ವಿಚಾರವನ್ನು ಮತ್ತಷ್ಟು ಮುಂದಕ್ಕೆ ಒಯ್ಯುತ್ತೇವೆ. ಜಿಹಾದಿಗಳ ಕುತಂತ್ರ, ಇಸ್ಲಾಮೀಕರಣದ ವೈಭವೀಕರಣ ಹಾಗೂ ಮತೀಯ ಶಕ್ತಿಗಳ ಕಾರ್ಯಸೂಚಿಗಳನ್ನು ಸಮಾಜದ ಮುಂದಿಡುತ್ತೇವೆ' ಎಂದು ಅವರು ಹೇಳಿದರು.

'ಶ್ಯಾಮಪ್ರಸಾದ್ ಮುಖರ್ಜಿ ಅವರು ಅಧಿಕಾರ ತ್ಯಜಿಸಿಯೇ ಜನಸಂಘ ಹಾಗೂ ಬಿಜೆಪಿ ಆರಂಭಿಸಿದರು. ಹಿಂದುತ್ವದ ಕಾರಣದಿಂದಲೇ ನಾವು ಗೋಹತ್ಯೆ ಹಾಗೂ ಮತಾಂತರ ನಿಷೇಧ ಕಾನೂನು ತಂದಿದ್ದೇವೆ' ಎಂದರು.

ಸರ್ಕಾರದಿಂದಲೇ ಅರಿಸಿನ– ಕುಂಕುಮ, ಬಳೆ



ಬೆಂಗಳೂರು: ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ಅಡಿಯಲ್ಲಿರುವ ಎಲ್ಲ ದೇವಸ್ಥಾನಗಳಲ್ಲಿ ಈ ಬಾರಿ ವರಮಹಾಲಕ್ಷ್ಮಿ ಹಬ್ಬದ ದಿನ (ಆಗಸ್ಟ್ 5) ವಿಶೇಷ ಪೂಜೆ ನೆರವೇರಿಸಿ, ದೇವಾಲಯಗಳಿಗೆ ಬರುವ ಮಹಿಳೆಯರಿಗೆ ಅರಿಸಿನ-ಕುಂಕುಮ ಮತ್ತು ಹಸಿರು ಬಳೆ ವಿತರಿಸುವಂತೆ ಸುತ್ತೋಲೆ ಹೊರಡಿಸಲಾಗಿದೆ.

'ವರಮಹಾಲಕ್ಷ್ಮಿ, ಸ್ವರ್ಣಗೌರಿ ಮತ್ತು ನವರಾತ್ರಿ ಹಬ್ಬದ ದಿನಗಳಲ್ಲಿ ಸ್ತ್ರೀ ದೇವತೆಯನ್ನು ಆರಾಧಿಸಲಾಗುತ್ತದೆ. ವರಮಹಾಲಕ್ಷ್ಮಿ ಹಬ್ಬದಂದು ಮಹಿಳೆಯರು ಮನೆಯಲ್ಲಿ ಪೂಜೆ ನೆರವೇರಿಸಿ, ದೇವಾಲಯಗಳಿಗೆ ಭೇಟಿ ನೀಡುವ ಸಂಪ್ರದಾಯವಿದೆ. ಸಂಪ್ರದಾಯಕ್ಕೆ ಮತ್ತಷ್ಟು ಇಂಬು ನೀಡಲು ಮಹಿಳೆಯರಿಗೆ ವಿಶೇಷವಾಗಿ ಮಂಗಳದ್ರವ್ಯ ಮತ್ತು ಹಸಿರು ಬಳೆ ನೀಡುವ ಮೂಲಕ ಗೌರವಿಸಬೇಕು ಎಂದು ಇತ್ತೀಚೆಗೆ ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ತೀರ್ಮಾನಿಸಲಾಗಿತ್ತು' ಎಂದು ಮುಜರಾಯಿ ಸಚಿವರಾದ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ದೂರಸಂಪರ್ಕ ತರಂಗಾಂತರಗಳ ಬಹುದೊಡ್ಡ ಹರಾಜು ಪ್ರಕ್ರಿಯೆ

5ಜಿ: ಜಿಯೊದಿಂದ ಅತಿ ಹೆಚ್ಚಿನ ಬಿಡ್

ನವದೆಹಲಿ (ಪಿಟಿಐ): ದೂರಸಂಪರ್ಕ ತರಂಗಾಂತರಗಳ ಅತಿ ದೊಡ್ಡ ಹರಾಜು ಪ್ರಕ್ರಿಯೆಯಲ್ಲಿ 5ಜಿ ತರಂಗಾಂತರಗಳಿಗೆ ಒಟ್ಟು ₹ 1.50 ಲಕ್ಷ ಕೋಟಿ ಮೌಲ್ಯದ ಬಿಡ್‌ಗಳು ಸಲ್ಲಿಕೆಯಾಗಿವೆ.

ಮುಕೇಶ್ ಅಂಬಾನಿ ಮಾಲೀಕತ್ವದ ರಿಲಯನ್ಸ್ ಜಿಯೊ ಕಂಪನಿಯು ಸರಿಸುಮಾರು ಶೇಕಡ 50ರಷ್ಟು ತರಂಗಾಂತರಗಳಿಗೆ ಬಿಡ್ ಸಲ್ಲಿಸಿದೆ. ಜಿಯೊ ಸಲ್ಲಿಸಿರುವ ಬಿಡ್ ಮೊತ್ತ ₹ 88,078 ಕೋಟಿ.

ದೇಶದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿರುವ ಗೌತಮ್ ಅದಾನಿ ಮಾಲೀಕತ್ವದ ಕಂಪನಿಯು ಒಟ್ಟು ₹ 212 ಕೋಟಿ ಮೌಲ್ಯದ ತರಂಗಾಂತರಗಳಿಗೆ ಬಿಡ್ ಸಲ್ಲಿಸಿದೆ. ಅದಾನಿ ಅವರ ಕಂಪನಿಯು ಪಡೆಯಲಿರುವ ತರಂಗಾಂತರಗಳು ಸಾರ್ವಜನಿಕ ನೆಟ್‌ವರ್ಕ್ ಸ್ಥಾಪಿಸಲು ಬಳಕೆ ಆಗುವುದಿಲ್ಲ.

ಸುನೀಲ್ ಭಾರ್ತಿ ಮಿತ್ತಲ್ ಮಾಲೀಕತ್ವದ ಭಾರ್ತಿ ಏರ್‌ಟೆಲ್ ಕಂಪನಿಯು ಒಟ್ಟು ₹ 43,084 ಕೋಟಿ ಮೌಲ್ಯದ ಬಿಡ್ ಸಲ್ಲಿಸಿದೆ. ವೊಡಾಫೋನ್ ಐಡಿಯಾ ಕಂಪನಿಯು ₹ 18,799 ಕೋಟಿ ಮೌಲ್ಯದ ಬಿಡ್ ಸಲ್ಲಿಸಿದೆ.

5ಜಿ ಸೇವೆ ಶುರುವಾದ ನಂತರ...

- ಬಳಕೆದಾರರು ಜಾಸ್ತಿ ಇರುವ ಪ್ರದೇಶದಲ್ಲಿಯೂ ದೊಡ್ಡ ಕಡತಗಳನ್ನು (ಉದಾಹರಣೆಗೆ, ಉತ್ತಮ ದೃಶ್ಯ ಗುಣಮಟ್ಟದ ಸಿನಿಮಾಗಳನ್ನು) ಕೆಲವೇ ಸೆಕೆಂಡ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು
- 4ಜಿ ಸೇವೆಗಳಲ್ಲಿ ಲಭ್ಯವಾಗುವುದಕ್ಕಿಂತ ಹತ್ತು ಪಟ್ಟು ಹೆಚ್ಚು ವೇಗದ ಇಂಟರ್ನೆಟ್ ಸಂಪರ್ಕ ಲಭ್ಯವಾಗಲಿದೆ
- ಇಂಟರ್ನೆಟ್ ಮೂಲಕ ಸಂಪರ್ಕಿತವಾಗಿರುವ ಡಿಜಿಟಲ್ ಸಾಧನಗಳು ದತ್ತಾಂಶಗಳನ್ನು ತಕ್ಷಣದಲ್ಲಿ ಹಂಚಿಕೊಳ್ಳಲು ಸಾಧ್ಯವಾಗಲಿದೆ
- ಟೆಲಿ ಮೆಡಿಸಿನ್, ಚಾಲಕರಹಿತ ಕಾರು, ಡ್ರೋನ್ ಆಧರಿತ ಕೃಷಿ ನಿಗಾ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆ ಆಗಬಹುದು
- ಇಂಟರ್ನೆಟ್ ಆಫ್ ಥಿಂಗ್ಸ್‌ನಂತಹ (ಐಒಟಿ) ಉದಯೋನ್ಮುಖ ತಂತ್ರಜ್ಞಾನಗಳಿಗೆ 5ಜಿ ಸೇವೆಗಳು ಬೆನ್ನೆಲುಬಾಗಿ ನಿಲ್ಲುವ ನಿರೀಕ್ಷೆಯಿದೆ



ಹರಾಜಿನ ಮೂಲಕ ಮಾರಾಟಕ್ಕೆ ಇದ್ದ ತರಂಗಾಂತರಗಳ ಪೈಕಿ ಶೇಕಡ 71ರಷ್ಟು ಮಾರಾಟವಾಗಿವೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಸಲ್ಲಿಕೆಯಾಗಿರುವ ಒಟ್ಟು ಬಿಡ್ ಮೊತ್ತದಲ್ಲಿ ಕೇಂದ್ರ ಸರ್ಕಾರಕ್ಕೆ ಮೊದಲ ವರ್ಷದಲ್ಲಿ ₹ 13,365 ಕೋಟಿ ಸಿಗಲಿದೆ.

2010ರಲ್ಲಿ ನಡೆದ 3ಜಿ ತರಂಗಾಂತರಗಳ ಹರಾಜಿನ ಮೂಲಕ ಒಟ್ಟು ₹ 50,968 ಕೋಟಿ ಸಂಗ್ರಹಿಸಲಾಗಿತ್ತು.

ರಿಲಯನ್ಸ್ ಜಿಯೊ ಕಂಪನಿಯು ಐದು ಬ್ಯಾಂಡ್‌ಗಳಲ್ಲಿನ ತರಂಗಾಂತರಗಳಿಗೆ ಬಿಡ್ ಸಲ್ಲಿಸಿದೆ. ಭಾರಿ ಬೇಡಿಕೆಯ 700 ಮೆಗಾ ಹರ್ಟ್ಜ್ ತರಂಗಾಂತರವನ್ನು ಜಿಯೊ ಖರೀದಿಸಿದೆ. ಈ ತರಂಗಾಂತರ ಬಳಸಿ ಒಂದು ಟವರ್‌ನಿಂದ 6ರಿಂದ 10 ಕಿ.ಮೀ. ದೂರದವರೆಗೆ ಸಂಪರ್ಕ ಒದಗಿಸಬಹುದು. ದೇಶದ ಅಷ್ಟೂ ದೂರಸಂಪರ್ಕ ವೃತ್ತಗಳಲ್ಲಿ (ಒಟ್ಟು 22 ವೃತ್ತಗಳು) ಈ ತರಂಗಾಂತರವನ್ನು ಜಿಯೊ ಖರೀದಿಸಿದೆ.

ಅದಾನಿ ಸಮೂಹವು ಖಾಸಗಿ ನೆಟ್‌ವರ್ಕ್ ಸ್ಥಾಪನೆಗೆ ಅಗತ್ಯವಿರುವ ತರಂಗಾಂತರಗಳನ್ನು ಗುಜರಾತ್, ಮುಂಬೈ, ಕರ್ನಾಟಕ, ತಮಿಳುನಾಡು, ರಾಜಸ್ಥಾನ ಮತ್ತು ಆಂಧ್ರಪ್ರದೇಶ ದೂರಸಂಪರ್ಕ ವೃತ್ತಗಳಲ್ಲಿ ಪಡೆದುಕೊಂಡಿದೆ.

ಏರ್‌ಟೆಲ್ ಕಂಪನಿಯು 700 ಮೆಗಾ ಹರ್ಟ್ಜ್ ತರಂಗಾಂತರವನ್ನು ಖರೀದಿಸಿಲ್ಲ. 'ಹರಾಜಿನ ಮೂಲಕ ಖರೀದಿಸಿರುವ ತರಂಗಾಂತರಗಳು ದೇಶದ ಅಷ್ಟೂ ದೂರಸಂಪರ್ಕ ವೃತ್ತಗಳಲ್ಲಿ ಸೇವೆ ಆರಂಭಿಸಲು ಸಾಕು. ಇನ್ನು 2–3 ವರ್ಷಗಳಲ್ಲಿ ಒಳ್ಳೆಯ 5ಜಿ ಸಂಪರ್ಕ ಸಾಧ್ಯವಾಗಲಿದೆ' ಎಂದು ವೈಷ್ಣವ್ ಹೇಳಿದ್ದಾರೆ.

5ಜಿ ತರಂಗಾಂತರಗಳ ಹಂಚಿಕೆಯು ಇದೇ 10ರೊಳಗೆ ಪೂರ್ಣಗೊಳ್ಳಲಿದ್ದು, ಸೇವೆಗಳು ಅಕ್ಟೋಬರ್‌ನಿಂದ ಶುರುವಾಗುವ ಸಾಧ್ಯತೆ ಇದೆ. ಕರೆ ಗುಣಮಟ್ಟ ಕೂಡ ಸುಧಾರಣೆ ಕಾಣುವ ನಿರೀಕ್ಷೆ ಇದೆ.

ಅಂಕಿ–ಅಂಶ

₹ 4.3 ಲಕ್ಷ ಕೋಟಿ
ಈ ಬಾರಿ ಹರಾಜಿಗೆ ಇರಿಸಿದ್ದ ತರಂಗಾಂತರಗಳ ಮೌಲ್ಯ

₹ 1.50 ಲಕ್ಷ ಕೋಟಿ
ತರಂಗಾಂತರಗಳಿಗೆ ಸಲ್ಲಿಕೆಯಾಗಿರುವ ಬಿಡ್‌ಗಳ ಒಟ್ಟು ಮೌಲ್ಯ

> ಭಾರತವು 5ಜಿ ಯುಗಕ್ಕೆ ಕಾಲಿರಿಸುವ ಪ್ರಕ್ರಿಯೆಗೆ ನಾಯಕತ್ವ ನೀಡಲು ಜಿಯೊ ಸಜ್ಜಾಗಿದೆ. ನಾವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ದೇಶದಾದ್ಯಂತ 5ಜಿ ಸೇವೆ ಆರಂಭಿಸುವ ಮೂಲಕ ಆಚರಿಸಲಿದ್ದೇವೆ
>
> **ಆಕಾಶ್ ಅಂಬಾನಿ**
> ಅಧ್ಯಕ್ಷ, ಜಿಯೊ ಇನ್ಫೊಕಾಮ್

ಅಚಿಂತ ಶಿವಲಿಗೆ ಸ್ವರ್ಣ ಸಂಭ್ರಮ

ಬರ್ಮಿಂಗ್‌ಹ್ಯಾಮ್: ಕಾಮನ್‌ವೆಲ್ತ್ ಕ್ರೀಡಾಕೂಟದ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತಕ್ಕೆ ಮತ್ತೊಂದು ಚಿನ್ನದ ಪದಕ ಒಲಿಯಿತು. ಪುರುಷರ 73 ಕೆ.ಜಿ. ವಿಭಾಗದಲ್ಲಿ ಅಚಿಂತ ಶಿವಲಿ ಚಿನ್ನದ ಪದಕ ಜಯಿಸಿದರು. ಇದುವರೆಗೆ ಭಾರತಕ್ಕೆ ಐದು ಪದಕಗಳು ವೇಟ್‌ಲಿಫ್ಟಿಂಗ್ ವಿಭಾಗದಿಂದಲೇ ಬಂದಿವೆ.



ಸುಶೀಲಾದೇವಿ — ಬೆಳ್ಳಿ
ಜುಡೊ: ಮಹಿಳೆಯರ 48 ಕೆ.ಜಿ ವಿಭಾಗ



ಪದಕ ಜಯದತ್ತ..
ಲಾನ್‌ಬಾಲ್: ಭಾರತ ಮಹಿಳೆಯರ ತಂಡವು ಫೈನಲ್ ಪ್ರವೇಶಿಸಿತು

ಅಚಿಂತ ಶಿವಲಿ — ಚಿನ್ನ

ವಿಭಾಗ	73 ಕೆ.ಜಿ
ಎತ್ತಿದ ಭಾರ	313 ಕೆ.ಜಿ (ಸ್ನ್ಯಾಚ್ 143 ಕೆ.ಜಿ+ಕ್ಲೀನ್ ಅ್ಯಂಡ್ ಜರ್ಕ್ + 170ಕೆ.ಜಿ)
ವಯಸ್ಸು	20

ವಿವರ ಪುಟ–12

ವಿಜಯಕುಮಾರ್ ಯಾದವ್ — ಕಂಚು
ಪುರುಷರ ಜುಡೊ ಸ್ಪರ್ಧೆಯ 60 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಜಯಿಸಿದರು



ಪಾದಕ್ಕೆ ನಮನ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ ಕೆಳಗೆ ಸೋಮವಾರ ಪೂಜೆ ಸಲ್ಲಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಂಜನೇಯನ ಪಾದುಕೆಗಳಿಗೆ ನಮಿಸಿದರು
ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಸುಬ್ರಹ್ಮಣ್ಯ: ಮಣ್ಣಿನಡಿ ಸಿಲುಕಿ ಇಬ್ಬರು ಬಾಲಕಿಯರು ಸಾವು

ಸುಬ್ರಹ್ಮಣ್ಯ: ಸೋಮವಾರ ಸುರಿದ ಧಾರಾಕಾರ ಮಳೆಗೆ ಕುಮಾರಧಾರ ಸ್ನಾನ ಘಟ್ಟ ಸಮೀಪದ ಪರ್ವತಮುಖಿಯಲ್ಲಿ ಮನೆ ಮೇಲೆ ಗುಡ್ಡ ಕುಸಿದು ಇಬ್ಬರು ಬಾಲಕಿಯರು ಮಣ್ಣಿನಡಿ ಸಿಲುಕಿ ಮೃತಪಟ್ಟಿದ್ದಾರೆ.

ಬಾಲಕಿಯರ ಮೃತದೇಹವನ್ನು ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ರಾತ್ರಿ ಮಣ್ಣಿನಿಂದ ಹೊರತೆಗೆಯಲಾಯಿತು.

ಮೃತ ಬಾಲಕಿಯರನ್ನು ಶ್ರುತಿ (11) ಹಾಗೂ ಜ್ಞಾನಶ್ರೀ (6) ಎಂದು ಗುರುತಿಸಲಾಗಿದೆ.

ಬಾಲಕಿಯರು ಸ್ಥಳೀಯ ವರ್ತಕ ಕುಸುಮಾಧರ– ರೂಪಶ್ರೀ ದಂಪತಿಯ ಮಕ್ಕಳು.

5A ಪುಟ ನೋಡಿ

ಬೆಲೆ ಏರಿಕೆ: ಲೋಕಸಭೆ ಚರ್ಚೆಯಲ್ಲಿ ವಿಪಕ್ಷ ಕಳವಳ

'ಅಡುಗೆಮನೆ ಲಾಕ್‌ಡೌನ್ ಸನ್ನಿಹಿತ'

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ನೀತಿಗಳೇ ಬೆಲೆ ಏರಿಕೆಗೆ ಕಾರಣ. ಸರ್ಕಾರವು ಸಾಮಾನ್ಯ ಜನರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ತಪ್ಪುಗಳನ್ನು ಸರಿಪಡಿಸಿಕೊಳ್ಳದೇ ಇದ್ದರೆ ಹೆಚ್ಚಿನವರ ಮನೆಯ ಅಡುಗೆ ಕೋಣೆಗಳು 'ಲಾಕ್‌ಡೌನ್' ಘೋಷಿಸಬೇಕಾಗುತ್ತದೆ ಎಂದು ವಿರೋಧ ಪಕ್ಷಗಳು ಹೇಳಿವೆ. ಬೆಲೆ ಏರಿಕೆ ಕುರಿತು ಲೋಕಸಭೆಯಲ್ಲಿ ಸೋಮವಾರ ನಡೆದ ಚರ್ಚೆಯಲ್ಲಿ ಭಾಗವಹಿಸಿ ವಿರೋಧ ಪಕ್ಷಗಳ ಸದಸ್ಯರು ಮಾತನಾಡಿದರು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಚರ್ಚೆಗೆ ಪ್ರತಿಕ್ರಿಯೆ ನೀಡಿ, 'ಭಾರತದ ಅರ್ಥ ವ್ಯವಸ್ಥೆಯ ನೆಲೆಗಟ್ಟು ಗಟ್ಟಿಯಾಗಿದೆ. ಹಾಗಾಗಿ, ಆರ್ಥಿಕ ಪ್ರಗತಿ ಸ್ಥಗಿತ ಅಥವಾ ಆರ್ಥಿಕ ಹಿಂಜರಿಕೆಯ ಅಪಾಯ ಇಲ್ಲ' ಎಂದು ಪ್ರತಿಪಾದಿಸಿದರು. ನಿರ್ಮಲಾ ಅವರ ಪ್ರತಿಕ್ರಿಯೆಯು ತೃಪ್ತಿಕರವಾಗಿಲ್ಲ ಎಂದ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ನಡೆಸಿದರು.

ಸರ್ಕಾರದ ನಿರ್ಧಾರಗಳಿಂದಾಗಿ ದೇಶದ 25 ಕೋಟಿ ಮನೆಗಳು ಸಂಕಷ್ಟಕ್ಕೆ ಒಳಗಾಗಿವೆ. ಶ್ರೀಮಂತರು ಮತ್ತು ಬಡವರ ನಡುವಣ ಅಂತರ ಹೆಚ್ಚಾಗಿದೆ ಎಂದು ಬೆಲೆ ಏರಿಕೆ ಕುರಿತ ಚರ್ಚೆಯನ್ನು ಆರಂಭಿಸಿ ಕಾಂಗ್ರೆಸ್‌ನ ಮನೀಶ್ ತಿವಾರಿ ಅವರು ಹೇಳಿದರು.

ಉಳಿತಾಯ, ಹೂಡಿಕೆ, ಉತ್ಪಾದನೆ, ಬಳಕೆ ಮತ್ತು ಉದ್ಯೋಗ ಅರ್ಥ ವ್ಯವಸ್ಥೆಯ ಐದು ಸ್ತಂಭಗಳು. ಆದರೆ ಸರ್ಕಾರದ ತಪ್ಪು ನೀತಿಗಳು ಈ ಎಲ್ಲವನ್ನೂ ಶಿಥಿಲಗೊಳಿಸಿವೆ. ಯುಪಿಎ ಸರ್ಕಾರದ ಅವಧಿಯಲ್ಲಿ 27 ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲೆತ್ತಲಾಗಿತ್ತು. 2021ರಲ್ಲಿ ಪ್ರಕಟವಾದ ವರದಿಯ ಪ್ರಕಾರ, 23 ಕೋಟಿ ಜನರು ಬಡತನ ರೇಖೆಯಿಂದ ಕೆಳಗೆ ಜಾರಿದ್ದಾರೆ ಎಂದು ಅವರು ಹೇಳಿದರು.

ದೇಶದ ಈಗಿನ ಆರ್ಥಿಕ ಸ್ಥಿತಿಗೆ ಕೋವಿಡ್–19 ಸಾಂಕ್ರಾಮಿಕವು ಕಾರಣವಾಗಿರಬಹುದು. ಆದರೆ, ಸಾಂಕ್ರಾಮಿಕವು ಕಾಣಿಸಿಕೊಳ್ಳುವ ಹೊತ್ತಿಗಾಗಲೇ, ನೋಟು ರದ್ದತಿಯ ಕಾರಣದಿಂದಾಗಿ ದೇಶದ ಆರ್ಥಿಕತೆಯು ದುರ್ಬಲವಾಗಿತ್ತು ಎಂದು ಅವರು ಅಭಿಪ್ರಾಯಪಟ್ಟರು.

ಅಗತ್ಯ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿ ಎಂದು ಟಿಎಂಸಿಯ ಕಾಕೋಲಿ ಘೋಷ್ ದಸ್ತಿದಾರ್ ಒತ್ತಾಯಿಸಿದರು.

10ನೇ ಪುಟ ನೋಡಿ

ಸದನದಲ್ಲಿ ಹಸಿ ಬದನೆಕಾಯಿ ಕಚ್ಚಿದ ಸಂಸದೆ

ಟಿಎಂಸಿ ಸಂಸದೆ ಕಾಕೋಲಿ ಘೋಷ್ ದಸ್ತೀದಾರ್ ಅವರು ಬೆಲೆ ಏರಿಕೆ ಕುರಿತು ಲೋಕಸಭೆಯಲ್ಲಿ ಮಾತನಾಡುವ ವೇಳೆ ಹಸಿ ಬದನೆಕಾಯಿಯನ್ನು ಕಚ್ಚಿ ಗಮನ ಸೆಳೆದರು. ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆಯಿಂದ ಅಡುಗೆ ದುಬಾರಿಯಾಗುತ್ತಿದೆ ಎಂಬುದನ್ನು ಅವರು ಹಸಿ ಬದನೆಕಾಯಿ ತಿನ್ನುವ ಮೂಲಕ ಹೇಳಿದರು.

'ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಕಳೆದ ನಾಲ್ಕು ತಿಂಗಳಲ್ಲಿ ನಾಲ್ಕು ಬಾರಿ ಹೆಚ್ಚಿಸಲಾಗಿದೆ. ಸಿಲಿಂಡರ್ ದರವು ₹600ರಿಂದ ₹1,100ಕ್ಕೆ ಹೆಚ್ಚಳವಾಗಿದೆ. ನಾವು ಹಸಿ ತರಕಾರಿಗಳನ್ನು ತಿನ್ನಬೇಕು ಎಂದು ಸರ್ಕಾರ ಬಯಸುತ್ತಿದೆಯೇ? ಬೆಲೆ ಏರಿಕೆಯಿಂದ ಬಡವರ ಬದುಕು ದುಸ್ತರವಾಗಿದ್ದು, ತಕ್ಷಣವೇ ದರ ಇಳಿಸಬೇಕು' ಎಂದು ಅವರು ಒತ್ತಾಯಿಸಿದರು.

ದೆಹಲಿಯಲ್ಲಿ ಮತ್ತೊಂದು ಮಂಕಿಪಾಕ್ಸ್ ಪ್ರಕರಣ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ನೆಲೆಸಿರುವ ನೈಜಿರಿಯಾದ ಪ್ರಜೆಗೆ ಮಂಕಿಪಾಕ್ಸ್ ಸೋಂಕು ಇರುವುದು ಪರೀಕ್ಷೆಯಲ್ಲಿ ದೃಢಪಟ್ಟಿದೆ. ಈ ವ್ಯಕ್ತಿಗೆ ವಿದೇಶ ಪ್ರಯಾಣದ ಹಿನ್ನೆಲೆ ಇರಲಿಲ್ಲ. ವಾರದ ಹಿಂದೆ ಪಶ್ಚಿಮ ದೆಹಲಿಯ ವ್ಯಕ್ತಿಯೊಬ್ಬರಲ್ಲಿ ಸೋಂಕು ಕಾಣಿಸಿತ್ತು.

ಕೇರಳದಲ್ಲಿ ಮೃತಪಟ್ಟ 22 ವರ್ಷದ ಯುವಕನಲ್ಲಿ ಮಂಕಿಪಾಕ್ಸ್ ಸೋಂಕು ಇರುವುದು ಪ್ರಯೋಗಾಲಯದ ಪರೀಕ್ಷೆಯಲ್ಲಿ ಖಚಿತವಾಗಿದೆ. ದೇಶದಲ್ಲಿ ಈವರೆಗೆ ಆರು ಪ್ರಕರಣಗಳು ವರದಿಯಾಗಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಧ್ಯಪ್ರದೇಶ: ಆಸ್ಪತ್ರೆಯಲ್ಲಿ ಅಗ್ನಿ ಅವಘಡ- 8 ಮಂದಿ ಸಾವು

ಜಬಲ್‌ಪುರ (ಪಿಟಿಐ): ಮಧ್ಯಪ್ರದೇಶದ ದಮೋಹ ನಾಕಾ ಬಳಿಯ ನ್ಯೂ ಲೈಫ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೋಮವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಎಂಟು ಮಂದಿ ಮೃತಪಟ್ಟಿದ್ದು, ಐವರು ಗಾಯಗೊಂಡಿದ್ದಾರೆ.

'ಅವಘಡದಲ್ಲಿ ನಾಲ್ವರು ರೋಗಿಗಳು, ರೋಗಿಯ ಆರೈಕೆಗಾಗಿ ಇದ್ದ ಒಬ್ಬರು ಹಾಗೂ ಮೂವರು ಸಿಬ್ಬಂದಿ ಅಸುನೀಗಿದ್ದಾರೆ. ಗಾಯಗೊಂಡಿರುವ ಐವರ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಅವರನ್ನು ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಜಿಲ್ಲಾಧಿಕಾರಿ ಟಿ.ಇಳಯರಾಜ ತಿಳಿಸಿದ್ದಾರೆ.

'ಮೂರು ಅಂತಸ್ತಿನ ಕಟ್ಟಡದಲ್ಲಿರುವ ಆಸ್ಪತ್ರೆಯು 30 ಹಾಸಿಗೆ ಸಾಮರ್ಥ್ಯ ಹೊಂದಿದೆ. ಬೆಂಕಿ ಕಾಣಿಸಿಕೊಂಡಾಗ ಆಸ್ಪತ್ರೆಯಲ್ಲಿ 20 ರಿಂದ 25 ಮಂದಿ ಇದ್ದರು. ಎನ್‌ಡಿಆರ್‌ಎಫ್ ಸಿಬ್ಬಂದಿ ಅವರನ್ನೆಲ್ಲಾ ಸುರಕ್ಷಿತವಾಗಿ ಹೊರಗೆ ಕರೆತಂದಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ. 'ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ್ ಬಹುಗುಣ ಹೇಳಿದ್ದಾರೆ.

'ನೆಲಮಹಡಿಯಲ್ಲಿ ಕಾಣಿಸಿಕೊಂಡ ಬೆಂಕಿ ನೋಡು ನೋಡುತ್ತಲೇ ಇಡೀ ಕಟ್ಟಡವನ್ನು ವ್ಯಾಪಿಸಿತು. ಬೆಂಕಿಯ ಜ್ವಾಲೆ ಕಂಡೊಡನೆ ಆಸ್ಪತ್ರೆಯಲ್ಲಿದ್ದವರೆಲ್ಲಾ ಜೋರಾಗಿ ಕಿರುಚುತ್ತಾ ಹೊರಗೆ ಓಡಿಬರಲು ಪ್ರಯತ್ನಿಸಿದರು. ಆಸ್ಪತ್ರೆಗೆ ಒಂದೇ ನಿರ್ಗಮನ ದ್ವಾರ ಇದ್ದಿದ್ದರಿಂದ ಕೆಲವರು ಕಟ್ಟಡದೊಳಗೆ ಸಿಲುಕಿ ಜೀವ ಕಳೆದುಕೊಳ್ಳಬೇಕಾಯಿತು' ಎಂದು ಸ್ಥಳೀಯರೊಬ್ಬರು ತಿಳಿಸಿದ್ದಾರೆ.

₹5 ಲಕ್ಷ ಪರಿಹಾರ: ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಘಟನೆಯಲ್ಲಿ ಮೃತಪಟ್ಟವರ ಕುಟುಂಬದವರಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಗಾಯಗೊಂಡವರಿಗೆ ತಲಾ ₹50 ಸಾವಿರ ನೆರವು ಪ್ರಕಟಿಸಿದ್ದಾರೆ.

'ಇದು ಅತ್ಯಂತ ನೋವಿನ ಸಂಗತಿ. ಘಟನೆ ಕುರಿತು ತನಿಖೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಮುಖ್ಯಮಂತ್ರಿ ಚೌಹಾಣ್ ಟ್ವೀಟ್ ಮಾಡಿದ್ದಾರೆ.



ಆಸ್ಪತ್ರೆ ಕಟ್ಟಡ ಹೊತ್ತಿ ಉರಿಯುತ್ತಿರುವುದು –ಪಿಟಿಐ ಚಿತ್ರ

ಆರೋಪಿಗಳ ಸುಳಿವು ಸಿಕ್ಕಿದೆ: ಎಡಿಜಿಪಿ ಅಲೋಕ್ ಕುಮಾರ್

ಫಾಝಿಲ್ ಹತ್ಯೆ ಹಿಂದೆ ರೌಡಿ ಸುಹಾಸ್ ಶೆಟ್ಟಿ ತಂಡ?

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್‌ನಲ್ಲಿ ಗುರುವಾರ ರಾತ್ರಿ ನಡೆದ ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಹತ್ಯೆ ಹಿಂದೆ ರೌಡಿಶೀಟರ್ ಸುಹಾಸ್ ಶೆಟ್ಟಿ ತಂಡದ ಕೈವಾಡ ಇರುವ ಬಗ್ಗೆ ಖಚಿತ ಸುಳಿವು ದೊರಕಿದೆ. ಈ ತಂಡದ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

'ಹಿಂದೆ ಬಜ್ಪೆ ಸೇರಿದಂತೆ ಎರಡು ಕಡೆ ನಡೆದ ಕೊಲೆ ಪ್ರಕರಣಗಳಲ್ಲಿ ಈ ತಂಡ ಭಾಗಿಯಾದ ಆರೋಪ ಇದೆ' ಎಂದು ಈ ಮೂಲಗಳು ಹೇಳಿವೆ.

'ಫಾಝಿಲ್ ಹತ್ಯೆಗೆ ಬಳಸಿದ ಕಾರನ್ನು ಬಾಡಿಗೆಗೆ ನೀಡಿದ್ದ ಅರೋಪಿ ಅಜಿತ್ ಕ್ರಾಸ್ತ ಎಂಬುವರನ್ನು ಭಾನುವಾರ ಬಂಧಿಸಲಾಗಿದೆ. ಬಂಧಿತ ಆರೋಪಿ ನೀಡಿದ ಸುಳಿವು ಆಧರಿಸಿ ಸುಹಾಸ್ ಶೆಟ್ಟಿ ತಂಡದ ಸದಸ್ಯರನ್ನು ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿವೆ.

'ಫಾಝಿಲ್ ಹತ್ಯೆ ಪ್ರಕರಣದ ಆರೋಪಿಗಳನ್ನು ಸದ್ಯದಲ್ಲೆ ಬಂಧಿಸುತ್ತೇವೆ' ಎಂದು ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಸೂದ್ ಹತ್ಯೆ ಹಿಂದೆ ಕೋಮು ಆಯಾಮ ಇಲ್ಲ' ಎಂದು ಡಿಜಿಪಿ ಪ್ರವೀಣ್ ಸೂದ್ ಹೇಳಿದರು.

'ಗಾಂಜಾ ಕಾರಣ': 'ಸುಳ್ಯದ ಮಸೂದ್ ಹತ್ಯೆ ಹಿಂದೆ ವೈಯಕ್ತಿಕ ಗಾಂಜಾ ಕಾರಣ ಇದೆ' ಎಂದು ಈ ಕ್ಷೇತ್ರದ ಶಾಸಕರೂ ಆಗಿರುವ ಸಚಿವ ಎಸ್.ಅಂಗಾರ ಹೇಳಿದ್ದಾರೆ.

ಪ್ರವೀಣ್ ನೆಟ್ಟಾರು ಹತ್ಯೆ: ಮೂವರು ವಶಕ್ಕೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಸಂಬಂಧ ಇಲ್ಲಿನ ನಾಗರಬಾವಿ ಬಳಿಯ ಹೋಟೆಲ್ ಹಾಗೂ ಬೇಕರಿಯಲ್ಲಿ ಕೆಲಸ ಮಾಡಿಕೊಂಡಿದ್ದ ಮೂವರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದಾರೆ.

ಸೈಯದ್ ಇರ್ಫಾನ್, ಅಲ್ತಾಫ್ ಹುಸೇನ್ ಎಂದು ಇಬ್ಬರನ್ನು ಗುರುತಿಸಲಾಗಿದೆ. ಮತ್ತೊಬ್ಬನ ಹೆಸರು ತಿಳಿದುಬಂದಿಲ್ಲ. ಮೂವರನ್ನೂ ತನಿಖಾಧಿಕಾರಿಗಳು ಮಂಗಳೂರಿಗೆ ಕರೆದೊಯ್ದಿದ್ದಾರೆ. ಮೊಬೈಲ್ ಲೊಕೇಷನ್ ಆಧರಿಸಿ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸುಳ್ಯ ವರದಿ: ಪ್ರವೀಣ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬೆಂಗಳೂರಿನಲ್ಲಿ ವಶಕ್ಕೆ ಪಡೆದಿದ್ದಾರೆ. 'ಖಚಿತ ಮಾಹಿತಿ ಆಧರಿಸಿ ಬೆಂಗಳೂರಿನ ಕೆ.ಜೆ. ಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ವಶಕ್ಕೆ ಆತನ ಪಡೆದು ಜಿಲ್ಲೆಗೆ ಕರೆ ತರಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೃತ್ಯದಲ್ಲಿ ಭಾಗಿಯಾದವರ ಸುಳಿವು ಸಿಕ್ಕಿದೆ. ಪೊಲೀಸರ ತಂಡಗಳು ಬೇರೆ ಬೇರೆ ಕಡೆ ಶೋಧ ಕಾರ್ಯದಲ್ಲಿ ತೊಡಗಿವೆ. ಶೀಘ್ರದಲ್ಲೇ ಉಳಿದ ಆರೋಪಿಗಳನ್ನು ಬಂಧಿಸುತ್ತೇವೆ' ಎಂದು ಅಲೋಕ್ ಕುಮಾರ್ ತಿಳಿಸಿದರು.

'ಮಸೂದ್, ಫಾಝಿಲ್ ಮನೆಗೂ ಭೇಟಿ ನೀಡುವೆ'

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಲೆಯಾದ ಮಸೂದ್ ಮತ್ತು ಫಾಝಿಲ್ ಅವರ ಮನೆಗಳಿಗೂ ಮುಂದಿನ ದಿನಗಳಲ್ಲಿ ಭೇಟಿ ನೀಡುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಕೊಲೆಯಾಗಿರುವ ಮೂವರ ಪೈಕಿ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಮನೆಗೆ ಮಾತ್ರ ಭೇಟಿ ನೀಡಿರುವುದಕ್ಕೆ ವ್ಯಕ್ತವಾಗುತ್ತಿರುವ ಟೀಕೆಗಳ ಕುರಿತು ಪ್ರತಿಕ್ರಿಯಿಸಿದರು.

'ಹಂತಕರ ಬಂಧನಕ್ಕೆ ಗಡುವು'

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಮೂರು ಕೊಲೆ ಪ್ರಕರಣಗಳ ನೈಜ ಆರೋಪಿಗಳನ್ನು ಆಗಸ್ಟ್ 5ರೊಳಗೆ ಬಂಧಿಸದಿದ್ದರೆ, ಪಕ್ಷದ ಕಾರ್ಯಕರ್ತರು, ವಿವಿಧ ಸಂಘಟನೆಗಳ ಸದಸ್ಯರನ್ನು ಸೇರಿಸಿ ಮಂಗಳೂರಿನಲ್ಲಿ ಧರಣಿ ನಡೆಸಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಸಿದರು. ಮಸೂದ್, ಪ್ರವೀಣ್ ನೆಟ್ಟಾರು, ಫಾಝಿಲ್ ಮನೆಗೆ ಸೋಮವಾರ ಭೇಟಿ ಕೊಟ್ಟು, ತಲಾ ₹ 5 ಲಕ್ಷ ನೆರವು ನೀಡಿದರು.

ಕೇರಳ 'ಕುಟುಂಬಶ್ರೀ' ಮಾದರಿ ಸಬಲೀಕರಣ

ಬೆಂಗಳೂರು: ಕೇರಳದ ಕುಟುಂಬಶ್ರೀ ಯೋಜನೆ ಮಾದರಿಯಲ್ಲೇ ರಾಜ್ಯದಲ್ಲಿ ಕೋಳಿ ಉತ್ಪಾದನೆ, ಮಾರುಕಟ್ಟೆ ಮತ್ತು ಮಾರಾಟವನ್ನು ಮಹಿಳಾ ಸ್ವಸಹಾಯ ಸಂಘಗಳಿಗೆ ವಹಿಸಲು ಆದೇಶಿಸಬೇಕು ಎಂದು ಕೋರಿ ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಪತ್ರ ಬರೆದಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಶು ಸಂಗೋಪನಾ ಸಚಿವರಿಗೆ ಪತ್ರ ಬರೆದಿರುವ ಅವರು, ರಾಜ್ಯದಲ್ಲಿ 2 ಲಕ್ಷ ಸ್ವಸಹಾಯ ಸಂಘಗಳಿದ್ದು, 30 ಲಕ್ಷ ಮಹಿಳೆಯರು ತೊಡಗಿಸಿಕೊಂಡಿದ್ದಾರೆ.

ರಾಜ್ಯದ ಅಂಗನವಾಡಿ, ಮತ್ತು ಸರ್ಕಾರಿ ಶಾಲೆಗಳ ಮಕ್ಕಳಿಗೆ ಕೋಳಿ ಮೊಟ್ಟೆ ವಿತರಣೆ ಕಾರ್ಯವನ್ನೂ ಮಹಿಳಾ ಸ್ವಸಹಾಯ ಸಂಘಗಳಿಗೆ ವಹಿಸಬೇಕು. ಅದಕ್ಕಾಗಿ ಕೌಶಲಾಭಿವೃದ್ಧಿ ನಿಗಮದ ನೆರವು ಕೊಡಲು ಸಿದ್ಧ ಎಂದಿದ್ದಾರೆ.



ಒಡಂಬಡಿಕೆ ಪತ್ರವನ್ನು ಜಯದೇವ ಹದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಅವರಿಗೆ ಹಸ್ತಾಂತರಿಸಿದರು. ಡಾ.ಕೆ.ಎಸ್.ರವೀಂದ್ರನಾಥ್, ಬಿಎಂಟಿಸಿ ನಿರ್ದೇಶಕಿ(ಭದ್ರತೆ ಮತ್ತು ಜಾಗೃತಿ) ಜಿ.ರಾಧಿಕಾ, ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ ರಾಧಾ ಎಲ್.ಗುಂಡಳ್ಳಿ ಇದ್ದರು

ಹೃದಯ ತಪಾಸಣೆಗೆ ಒಡಂಬಡಿಕೆ

ಬೆಂಗಳೂರು: ಬಿಎಂಟಿಸಿ ನೌಕರರ ಹೃದಯರೋಗಗಳ ಉಚಿತ ತಪಾಸಣೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಜತೆ ಬಿಎಂಟಿಸಿ ಒಡಂಬಡಿಕೆ ಮಾಡಿಕೊಂಡಿದೆ.

45 ವರ್ಷ ಮೇಲ್ಪಟ್ಟ ನೌಕರರು ಮತ್ತು ಅಧಿಕಾರಿಗಳು ಹೃದಯ ಸಂಬಂಧಿ 10 ರೀತಿಯ ಪರೀಕ್ಷೆ ಮಾಡಿಸಬಹುದಾಗಿದೆ. 45 ವರ್ಷ ಮೇಲ್ಪಟ್ಟ 10,744 ಸಿಬ್ಬಂದಿ ಸಂಸ್ಥೆಯಲ್ಲಿದ್ದು, ಅವರಿಗೆ ಅನುಕೂಲ ಆಗಲಿದೆ. ಇದಕ್ಕಾಗಿ ಜಯದೇವ ಸಂಸ್ಥೆಗೆ ₹1.30 ಕೋಟಿ ಭರಿಸಲಾಗುತ್ತಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ: ದೊರೆಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಗುಣಮಟ್ಟದ ಶಿಕ್ಷಣ ಸೇವೆ ಸಿಗುವಂತೆ ಮಾಡಲು ನನ್ನ ಎಲ್ಲ ಅನುಭವವನ್ನು ಬಳಸಿಕೊಳ್ಳುತ್ತೇನೆ' ಎಂದು ಸರ್ಕಾರಕ್ಕೆ ಶಿಕ್ಷಣ ಸುಧಾರಣೆಯ ಸಲಹೆಗಾರ ಆಗಿರುವ ಪ್ರೊ. ಎಂ.ಆರ್. ದೊರೆಸ್ವಾಮಿ ಅವರು ಹೇಳಿದರು.

ವಿಧಾನಸೌಧದಲ್ಲಿ ಕಚೇರಿ ಉದ್ಘಾಟನೆ ಸಮಾರಂಭದಲ್ಲಿ ಅವರು ಸೋಮವಾರ ಮಾತನಾಡಿದರು.

'ಸರ್ಕಾರಿ ಶಾಲೆಗಳ ಪುನಶ್ಚೇತನ, ಶಿಕ್ಷಕರಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಕಾರ್ಯಾಗಾರ ಮತ್ತು ಶಿಕ್ಷಣದ ವಿಶೇಷ ನೀತಿಗಳ ಅನುಷ್ಠಾನಕ್ಕೆ ಬೇಕಾದ ಸಂಪನ್ಮೂಲಗಳ ಕ್ರೋಡೀಕರಣ ಮಾಡಲಾಗುತ್ತದೆ. ಇದಕ್ಕಾಗಿ ಕಾರ್ಪೊರೇಟ್ ಮತ್ತು ಉದ್ಯಮಿಗಳ ಸಹಯೋಗದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು' ಎಂದರು.



ವಿಧಾನಸೌಧದಲ್ಲಿ ಕಚೇರಿ ಉದ್ಘಾಟನೆ ಸಮಾರಂಭದಲ್ಲಿ ಬಸವನಗುಡಿ ರಾಮಕೃಷ್ಣ ಆಶ್ರಮದ ಅಧ್ಯಕ್ಷ ನಿತ್ಯಸ್ಥಾನಂದ ಸ್ವಾಮೀಜಿ ಸೋಮವಾರ ಮಾತನಾಡಿದರು. ಪ್ರೊ. ಎಂ.ಆರ್. ದೊರೆಸ್ವಾಮಿ ಇದ್ದರು.


ಬಸವನಗುಡಿ ರಾಮಕೃಷ್ಣ ಆಶ್ರಮದ ಅಧ್ಯಕ್ಷ ನಿತ್ಯಸ್ಥಾನಂದ ಸ್ವಾಮೀಜಿ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ. ಸಿದ್ದಪ್ಪ, ವಿಟಿಯು ವಿಶ್ರಾಂತ ಕುಲಪತಿ ಪ್ರೊ. ಎಚ್.ಪಿ. ಖಿಂಚ, ಪಿಇಎಸ್ ವಿವಿ ಕುಲಪತಿ ಡಾ. ಜೆ. ಸೂರ್ಯಪ್ರಸಾದ್, ಆರ್ ಜಿಯುಎಚ್‌ಎಸ್ ವಿಶ್ರಾಂತ ಕುಲಪತಿ ಪ್ರೊ. ಸಚ್ಚಿದಾನಂದಮೂರ್ತಿ ಹಾಜರಿದ್ದರು.

ಸುದ್ದಿ 2 ನಿಮಿಷ

ಚಿಂಚನಸೂರ ನಾಮಪತ್ರ ಸಲ್ಲಿಕೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ ಒಂದು ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಬಾಬುರಾವ್ ಚಿಂಚನಸೂರ ಸೋಮವಾರ ನಾಮಪತ್ರ ಸಲ್ಲಿಸಿದರು.

ಈ ಚುನಾವಣೆಯ ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರಿಗೆ ಎರಡು ಪ್ರತಿಗಳಲ್ಲಿ ಚಿಂಚನಸೂರ ನಾಮಪತ್ರಗಳನ್ನು ಸಲ್ಲಿಸಿದರು. ಮೊದಲ ಪ್ರತಿ ಸಲ್ಲಿಸುವಾಗ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದ ಉಮೇಶ್ ಜಾಧವ್, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಜತೆಗಿದ್ದರು. ಎರಡನೇ ಪ್ರತಿ ಸಲ್ಲಿಸುವಾಗ ಶಾಸಕರಾದ ದತ್ತಾತ್ರೇಯ ಪಾಟೀಲ ರೇವೂರ, ರಾಜಕುಮಾರ ಪಾಟೀಲ ಮತ್ತು ಶರಣು ಸಲಗರ ಇದ್ದರು.



₹ 10 ಕೋಟಿ ಆಸ್ತಿ ಘೋಷಣೆ: ತಮ್ಮ ಕುಟುಂಬದ ಬಳಿ ಒಟ್ಟು ₹ 10 ಕೋಟಿ ಮೌಲ್ಯದ ಆಸ್ತಿ ಇದೆ ಎಂದು ಚಿಂಚನಸೂರ ನಾಮಪತ್ರದ ಜತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ. ಚಿಂಚನಸೂರ ಬಳಿ ಮೂರು ಕಾರುಗಳು ಸೇರಿದಂತೆ ₹ 80.94 ಲಕ್ಷದ ಚರಾಸ್ತಿ, ಬೆಂಗಳೂರು, ಕಲಬುರಗಿ, ಬೀದರ್, ಯಾದಗಿರಿ ಮತ್ತಿತರ ಸ್ಥಳಗಳಲ್ಲಿ ₹ 7.81 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. ಅವರ ಪತ್ನಿ ₹ 1.40 ಕೋಟಿ ಮೌಲ್ಯದ ಚರಾಸ್ತಿ ಹೊಂದಿದ್ದಾರೆ. ಚಿಂಚನಸೂರ ವಿವಿಧ ಬ್ಯಾಂಕ್‌ಗಳಲ್ಲಿ ₹ 61.19 ಲಕ್ಷ ಸಾಲ ಹೊಂದಿದ್ದಾರೆ ಎಂಬ ಮಾಹಿತಿ ಪ್ರಮಾಣಪತ್ರದಲ್ಲಿದೆ.

ಎಎಪಿ: ಪ್ರಚಾರ ಸಮಿತಿ ರಚನೆ

ಬೆಂಗಳೂರು: ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ(ಎಎಪಿ) ಎಲ್ಲಾ ವಾರ್ಡ್‌ಗಳಲ್ಲೂ ಸ್ಪರ್ಧಿಸಲು ನಿರ್ಧರಿಸಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ತಿಳಿಸಿದರು.

'ಬಿಬಿಎಂಪಿ ಚುನಾವಣೆ ಯಾವ ಕ್ಷಣದಲ್ಲಾದರೂ ಘೋಷಣೆಯಾಗಬಹುದು. ಆದ್ದರಿಂದ ಎಎಪಿ ಭಾಸ್ಕರ್ ರಾವ್ ಅವರ ನೇತೃತ್ವದಲ್ಲಿ ಪ್ರಚಾರ ಸಮಿತಿ ರಚಿಸಲಾಗಿದೆ. ಸಮಿತಿಯಲ್ಲಿ 'ಮುಖ್ಯಮಂತ್ರಿ' ಚಂದ್ರು, ಕೆ.ಮಥಾಯಿ, ಮೋಹನ ದಾಸರಿ, ಲಕ್ಷ್ಮಿಕಾಂತ್ ರಾವ್ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಎಎಪಿ ರಾಜ್ಯ ಘಟಕದ ಉಪಾಧ್ಯಕ್ಷ ಮತ್ತು ಬಿಬಿಎಂಪಿ ಚುನಾವಣೆ ಪ್ರಚಾರ ಸಮಿತಿ ಅಧ್ಯಕ್ಷ ಭಾಸ್ಕರ್ ರಾವ್ ಮಾತನಾಡಿ, 'ಜನರು ಪಾವತಿಸುವ ತೆರಿಗೆ ಸಾರ್ವಜನಿಕರ ಅಭಿವೃದ್ಧಿಗೆ ಬಳಸಬೇಕೇ ಹೊರತು ರಾಜಕಾರಣಿಗಳ ಏಳ್ಗೆಗೆ ಅಲ್ಲ. ಎಎಪಿ ಅಧಿಕಾರಕ್ಕೆ ಬಂದರೆ ಬೆಂಗಳೂರಿನಲ್ಲಿ ಸುಸಜ್ಜಿತ ಶಾಲೆ, ಆಸ್ಪತ್ರೆ ಉತ್ತಮ ರಸ್ತೆ, ನೀರಿನ ವ್ಯವಸ್ಥೆ ಕಲ್ಪಿಸಿ ಜನಪರ ಪ್ರಾಮಾಣಿಕ ಆಡಳಿತ ನೀಡುತ್ತೇವೆ' ಎಂದು ಭರವಸೆ ನೀಡಿದರು. 'ಮುಖ್ಯಮಂತ್ರಿ' ಚಂದ್ರು, ಕೆ.ಮಥಾಯಿ, ಮೋಹನ ದಾಸರಿ, ಲಕ್ಷ್ಮಿಕಾಂತ ರಾವ್ ಇದ್ದರು.

ಅಕ್ರಮ ಗಣಿಗಾರಿಕೆ: ರಾಜ್ಯದಲ್ಲಿ ₹78.78 ಕೋಟಿ ದಂಡ

ನವದೆಹಲಿ: ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆ ಹಾಗೂ ಖನಿಜಗಳ ಕಳ್ಳಸಾಗಣೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ₹78.78 ಕೋಟಿ ದಂಡ ವಸೂಲಿ ಮಾಡಲಾಗಿದೆ ಎಂದು ಕೇಂದ್ರ ಗಣಿ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 'ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ 2019–20ರಲ್ಲಿ 4,935 ಪ್ರಕರಣಗಳು, 2020–21ರಲ್ಲಿ 5,584 ಹಾಗೂ 2021–22ರಲ್ಲಿ ಡಿಸೆಂಬರ್ ಅಂತ್ಯದ ವರೆಗೆ 4,365 ಪ್ರಕರಣಗಳು ವರದಿಯಾಗಿವೆ. ಈ ಪೈಕಿ, 2,412 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿವೆ. ನ್ಯಾಯಾಲಯಗಳಲ್ಲಿ 1,280 ಪ್ರಕರಣಗಳು ಇವೆ. 658 ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಬಿಬಿಎಂಪಿ ಚುನಾವಣೆಗೆ ಬಿಜೆಪಿಯಿಂದ ಸಿದ್ಧತೆ

ಸಂಸದರು, ಪರಿಷತ್ ಸದಸ್ಯರಿಗೂ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಚುನಾವಣೆಯಲ್ಲಿ ಗೆಲುವು ಸಾಧಿಸಿ, ಅಧಿಕಾರದ ಗದ್ದುಗೆ ಹಿಡಿಯಲು ತಮ್ಮ ಪಕ್ಷದ ಶಾಸಕರಿಲ್ಲದ ಕ್ಷೇತ್ರಗಳಿಗೆ ಸಂಸದರು ಮತ್ತು ವಿಧಾನ ಪರಿಷತ್ ಸದಸ್ಯರಿಗೂ ಚುನಾವಣಾ ಉಸ್ತುವಾರಿ ನೀಡಲು ಬಿಜೆಪಿ ನಿರ್ಧರಿಸಿದೆ.

ಪಾಲಿಕೆ ಚುನಾವಣೆಗೆ ವಾರ್ಡ್‌ವಾರು ಮೀಸಲಾತಿ ಪ್ರಕಟಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿರುವುದರಿಂದ ಬಿಜೆಪಿ ಚುನಾವಣಾ ಸಿದ್ಧತೆಯನ್ನು ಚುರುಕುಗೊಳಿಸಿದೆ. ಪಕ್ಷದ ರಾಜ್ಯ ಘಟಕದ ಕಚೇರಿಯಲ್ಲಿ ಬೆಂಗಳೂರು ನಗರವನ್ನು ಪ್ರತಿನಿಧಿಸುವ ಸಚಿವರು, ಶಾಸಕರು, ಸಂಸದರು ಮತ್ತು ವಿಧಾನ ಪರಿಷತ್ ಸದಸ್ಯರ ಜತೆ ಸೋಮವಾರ ಸಭೆ ನಡೆಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಚುನಾವಣಾ ಸಿದ್ಧತೆ ಕುರಿತು ಚರ್ಚಿಸಿದರು.

ಸಚಿವರಾದ ಆರ್. ಅಶೋಕ, ವಿ. ಸೋಮಣ್ಣ, ಅಶ್ವತ್ಥನಾರಾಯಣ, ಸಂಸದರಾದ ಡಿ.ವಿ. ಸದಾನಂದ ಗೌಡ, ಪಿ.ಸಿ. ಮೋಹನ್ ಮತ್ತು ತೇಜಸ್ವಿ ಸೂರ್ಯ ಸಭೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಮಹಾನಗರ ವ್ಯಾಪ್ತಿಯ ಮೂರು ಘಟಕಗಳ ಪದಾಧಿಕಾರಿಗಳೂ ಸಭೆಯಲ್ಲಿದ್ದರು. ಎರಡು ಗಂಟೆಗಳಿಗೂ ಹೆಚ್ಚು ಕಾಲ ಚರ್ಚೆ ನಡೆಯಿತು.



ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಸಚಿವ ಅಶ್ವತ್ಥನಾರಾಯಣ ಅವರು ಮಾತನಾಡಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವ ಆರ್.ಅಶೋಕ, 'ಬಿಬಿಎಂಪಿ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ. ಇದಕ್ಕಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಹಲವು ಸೂಚನೆಗಳನ್ನು ನೀಡಿದ್ದಾರೆ. ಈ ಚುನಾವಣೆಯನ್ನೂ ಯುದ್ಧೋಪಾದಿಯಲ್ಲಿ ನಮ್ಮ ಪಕ್ಷ ಎದುರಿಸಲಿದೆ' ಎಂದರು.

ಶಾಸಕರಿಗೆ ಆಯಾ ಕ್ಷೇತ್ರಗಳ ಸಂಪೂರ್ಣ ಉಸ್ತುವಾರಿ ಇರಲಿದೆ. ಬಿಜೆಪಿ ಶಾಸಕರಿಲ್ಲದ ಕ್ಷೇತ್ರಗಳಿಗೆ ಪಕ್ಷದ ಸಂಸದರು ಮತ್ತು ವಿಧಾನ ಪರಿಷತ್ ಸದಸ್ಯರನ್ನು ಉಸ್ತುವಾರಿಗಳನ್ನಾಗಿ ನೇಮಿಸಲಾಗುವುದು. ಹೊಣೆಗಾರಿಕೆ ವಹಿಸಿದ ಕ್ಷೇತ್ರಗಳಲ್ಲಿ ಹೆಚ್ಚಿನ ಸ್ಥಾನ ಗೆಲ್ಲಿಸಿಕೊಂಡು ಬರುವ ಹೊಣೆಯನ್ನು ನೀಡಲಾಗುವುದು ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮೀಸಲಾತಿ ನಿಗದಿ ಸಂಬಂಧ ಅಧಿಕಾರಿಗಳು ಪ್ರಕ್ರಿಯೆ ಆರಂಭಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಯವರು ಸೂಕ್ತ ತೀರ್ಮಾನ ಕೈಗೊಳ್ಳುವರು. ಅದರ ಜತೆಯಲ್ಲೇ ಪಕ್ಷವೂ ಚುನಾವಣಾ ತಯಾರಿ ಆರಂಭಿಸಿದೆ. ಆಪ್, ಎಸ್‌ಡಿಪಿಐ, ಕೆಆರ್‌ಎಸ್ ಪಕ್ಷಗಳನ್ನು ಬಿಜೆಪಿ ಸುಲಭವಾಗಿ ಎದುರಿಸಲಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿಗೆ ಹೆಚ್ಚಿನ ಕೆಲಸ ಮಾಡಲಾಗಿದೆ. ಅದನ್ನು ಪರಿಗಣಿಸಿ ಜನರು ಬೆಂಬಲ ನೀಡುತ್ತಾರೆ ಎಂದು ಹೇಳಿದರು.

'ಎನ್‌ಡಿಆರ್‌ಎಫ್ ಪರಿಹಾರ ಹೆಚ್ಚಳಕ್ಕೆ ಮನವಿ'

ಬೆಂಗಳೂರು: ಅತಿವೃಷ್ಟಿ, ಪ್ರವಾಹ ಸೇರಿದಂತೆ ನೈಸರ್ಗಿಕ ವಿಕೋಪಗಳಿಂದ ಸಂಭವಿಸುವ ಹಾನಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮೂಲಕ ನೀಡುವ ಪರಿಹಾರದ ಮೊತ್ತವನ್ನು ಮೂರು ಪಟ್ಟು ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ವಿಕೋಪಗಳ ಸಂದರ್ಭದಲ್ಲಿ ಎನ್‌ಡಿಆರ್‌ಎಫ್ ಮೂಲಕ ನೀಡುವ ಪರಿಹಾರ ಅತ್ಯಲ್ಪ ಪ್ರಮಾಣದಲ್ಲಿದೆ. ಅದನ್ನು ಹೆಚ್ಚಿಸುವಂತೆ ಮನವಿ ಮಾಡಲು ದೆಹಲಿಗೆ ತೆರಳಿ, ಕೇಂದ್ರ ಗೃಹ, ಹಣಕಾಸು ಮತ್ತು ಕೃಷಿ ಸಚಿವರನ್ನು ಭೇಟಿಮಾಡಲಾಗುವುದು' ಎಂದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ, ಬೆಳೆ ಹಾನಿ ಪ್ರಕರಣಗಳಲ್ಲಿ ಮಳೆಯಾಶ್ರಿತ ಜಮೀನುಗಳಿಗೆ ಪ್ರತಿ ಹೆಕ್ಟೇರ್‌ಗೆ ₹ 6,800, ನೀರಾವರಿ ಜಮೀನಿಗೆ ಪ್ರತಿ ಹೆಕ್ಟೇರ್‌ಗೆ ₹ 13,500 ಮತ್ತು ಬಹುವಾರ್ಷಿಕ ಬೆಳೆಗಳಿಗೆ ಹೆಕ್ಟೇರ್‌ಗೆ ₹ 18,000 ಪರಿಹಾರ ನೀಡಲಾಗುತ್ತಿದೆ. ಅದಕ್ಕೆ ರಾಜ್ಯ ಸರ್ಕಾರ ಅನುಕ್ರಮವಾಗಿ ₹ 6,800, ₹ 11,500 ಮತ್ತು ₹ 10,000 ಸೇರಿಸಿ ವಿತರಿಸುತ್ತಿದೆ. ಪ್ರಾಣಹಾನಿಗೆ ₹ 4 ಲಕ್ಷ ಹಾಗೂ ಮನೆ ಕುಸಿತಕ್ಕೆ ₹ 95,100 ಮಾತ್ರ ಪರಿಹಾರ ಇದೆ ಎಂದು ಹೇಳಿದರು.

ಪ್ರಾಣ ಹಾನಿ ಪ್ರಕರಣಗಳಲ್ಲಿ ₹1 ಲಕ್ಷ ಹಾಗೂ ಮನೆ ಕುಸಿತ ಪ್ರಕರಣಗಳಲ್ಲಿ ₹ 4.04 ಲಕ್ಷವನ್ನು ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ನೀಡುತ್ತಿದೆ. ಎನ್‌ಡಿಆರ್‌ಎಫ್ ಪರಿಹಾರದ ಮೊತ್ತವನ್ನು ಮೂರು ಪಟ್ಟು ಹೆಚ್ಚಿಸಿದರೆ ಸರ್ಕಾರಕ್ಕೆ ಅನುಕೂಲವಾಗುತ್ತದೆ ಎಂದರು.

ರಾಜ್ಯದಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದ 101 ಗ್ರಾಮಗಳ 11,602 ಜನರಿಗೆ ತೊಂದರೆಯಾಗಿದೆ. 479 ಮನೆಗಳು ಸಂಪೂರ್ಣವಾಗಿ ಕುಸಿದುಬಿದ್ದಿದ್ದು, 1,982 ಮನೆಗಳು ಭಾಗಶಃ ಹಾನಿಗೊಂಡಿವೆ ಎಂದರು.

ನಗರದಲ್ಲಿ ಇಂದು

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ, ಸಿದ್ಧಾಂತ ಶಿಖಾಮಣಿ-ವಚನ ಪ್ರವಚನ ಕಾರ್ಯಕ್ರಮ: ಸಂಜೆ: ಜಯಶ್ರೀ ಮತ್ತು ಮಂಜುನಾಥ, 152/90 ವರ್ಷ ನಿಲಯ, 17ನೇ ಮುಖ್ಯ ರಸ್ತೆ ವಿಜಯನಗರ

'ಪ್ರೊ. ಕಿ.ರಂ. ನಾಗರಾಜ್ ಮತ್ತು ಡಾ. ಡಿ.ಆರ್. ನಾಗರಾಜ್: ಸಾಹಿತ್ಯ ಅನುಸಂಧಾನ' ವಿಚಾರಸಂಕಿರಣ: ಅಧ್ಯಕ್ಷತೆ: ಟಿ.ನಾರಾಯಣಪ್ಪ, ಸಂಚಾಲಕರು: ರೇಖಾ ಕೌಶಿಕ್.ಪಿ.ಆರ್. ವೆಂಕಟೇಶ್‌ಮೂರ್ತಿ, ಆಯೋಜನೆ ಮತ್ತು ಸ್ಥಳ: ಬಿ.ಇ.ಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು, ಜಯನಗರ, ಬೆಳಿಗ್ಗೆ 10




ಹಂ.ಪ. ನಾಗರಾಜಯ್ಯ

ಜೈನ್‌ಧರ್ಮ: ಅಹಿಂಸೆಯ ಪರಿಕಲ್ಪನೆಗಳು ರಾಷ್ಟ್ರ ಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಹಂ.ಪ.ನಾಗರಾಜಯ್ಯ, ಅಧ್ಯಕ್ಷತೆ: ಸ.ಚಿ.ರಮೇಶ, ತಾರಿಹಳ್ಳಿ ಹನುಮಂತಪ್ಪ, ವೂಡೇ.ಪಿ. ಕೃಷ್ಣ, ಸಮಿವುಲ್ಲಾಖಾನ್, ಆಯೋಜನೆ: ಜೈನ ಸಾಹಿತ್ಯ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ, ಸ್ಥಳ: ಶೇಷಾದ್ರಿಪುರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಶೇಷಾದ್ರಿಪುರ, ಬೆಳಿಗ್ಗೆ 10

ವಚನ ಶ್ರಾವಣ: ಗಾಯನ: ಎಸ್. ಪಿನಾಕಪಾಣಿ, ಉಪನ್ಯಾಸ: ಪ್ರಭು ಇಸುವನಹಳ್ಳಿ, ಅಧ್ಯಕ್ಷತೆ: ಮಹೇಶ್ ಸುಂಕದಕಟ್ಟೆ, ಆಯೋಜನೆ: ವಚನ ಜ್ಯೋತಿಬಳಗ, ಸ್ಥಳ: ಪ್ರೆಸಿಡೆನ್ಸಿ ಪಬ್ಲಿಕ್ ಸ್ಕೂಲ್, ಅನ್ನಪೂರ್ಣೇಶ್ವರಿನಗರ, ರಾಘವೇಂದ್ರ ಲೇಔಟ್, ತಿಗಳರಪಾಳ್ಯ, ಬೆಳಿಗ್ಗೆ 10

ಡಿ.ಎಸ್. ವೀರಯ್ಯ ಅವರ ಸಾಹಿತ್ಯಮುಖಿ, ಸಮಾಜಮುಖಿ ಸಂಪುಟಗಳ ಬಿಡುಗಡೆ: ಸಾನ್ನಿಧ್ಯ: ಶಿವಮೂರ್ತಿ ಮುರುಘಾ ಶರಣರು, ಅಧ್ಯಕ್ಷತೆ: ಬಿ.ಎಸ್. ಯಡಿಯೂರಪ್ಪ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಬಿಡುಗಡೆ: ಚಂದ್ರಶೇಖರ ಕಂಬಾರ, ಬಿ.ಎಲ್. ಸಂತೋಷ್, ಮಲ್ಲೇಪುರಂ.ಜಿ. ವೆಂಕಟೇಶ್, ಆಯೋಜನೆ: ಡಿ.ಎಸ್.ವಿ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4

ಗಿರೀಶ್ ಕಾರ್ನಾಡ್ ನೆನಪಿನ ನಾಟಕೋತ್ಸವ: ಉದ್ಘಾಟನೆ: ನಾರಾಯಣ ಘಟ್ಟ ನಾ.ಹೊ., ಅಧ್ಯಕ್ಷತೆ: ಬಿ.ವಿ. ರಾಜಾರಾಮ್, ಅತಿಥಿಗಳು: ಎಸ್. ಎಚ್. ಶಿವರುದ್ರಪ್ಪ, ಎಂ.ಪ್ರಕಾಶ್‌ಮೂರ್ತಿ, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4.30



ಗಿರೀಶ್ ಕಾರ್ನಾಡ್

ಪ್ರಧಾನಿ ನೀಡಿರುವ 40 ತಿಂಗಳ ಗಡುವಿನೊಳಗೆ ಯೋಜನೆ ಅನುಷ್ಠಾನ ಅನುಮಾನ • ಟೆಂಡರ್ ಪೂರ್ಣಗೊಂಡರೂ ನೀಡದ ಕಾರ್ಯಾದೇಶ

ಉಪನಗರ ರೈಲು: ಕಾಮಗಾರಿಗೆ ಇನ್ನೂ ಮೀನಮೇಷ

• ವಿಜಯಕುಮಾರ್ ಎಸ್.ಕೆ.


ಬೆಂಗಳೂರು: ಉಪನಗರ ರೈಲು ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರೇ ಅಡಿಗಲ್ಲು ಹಾಕಿದರೂ ಕಾಮಗಾರಿ ಆರಂಭಿಸಲು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ-ರೈಡ್) ಇನ್ನೂ ಮೀನಮೇಷ ಎಣಿಸುತ್ತಿದೆ. ಬೈಯಪ್ಪನಹಳ್ಳಿ-ಚಿಕ್ಕಬಾಣಾವರ (ಮಲ್ಲಿಗೆ ಕಾರಿಡಾರ್) ನಡುವಿನ 25 ಕಿಲೋ ಮೀಟರ್ ಮಾರ್ಗದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದರೂ, ಗುತ್ತಿಗೆ ಪಡೆದಿರುವ ಕಂಪನಿಗೆ ಇನ್ನೂ ಕಾರ್ಯಾದೇಶ ನೀಡಿಲ್ಲ.

ಜೂನ್ 20ರಂದು ಬೆಂಗಳೂರಿಗೆ ಭೇಟಿ ನೀಡಿದ್ದ ಪ್ರಧಾನಿ, ಉಪನಗರ ರೈಲು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ‘40 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಯೋಜನೆಗೆ ಈಗ ಚಾಲನೆ ನೀಡಲಾಗುತ್ತಿದ್ದು, 40 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು’ ಎಂದು ಘೋಷಣೆ ಮಾಡಿದ್ದರು.

ಈ ಭರವಸೆ ನೀಡಿ 42 ದಿನಗಳು ಕಳೆದಿದ್ದರೂ, ಕಾಮಗಾರಿ ಆರಂಭವಾಗಿಲ್ಲ. ಆರಂಭವಾಗುವ ಲಕ್ಷಣಗಳೂ ಕಾಣಿಸುತ್ತಿಲ್ಲ. ನಾಲ್ಕು ಕಾರಿಡಾರ್‌ಗಳ ಪೈಕಿ ಬೈಯಪ್ಪನಹಳ್ಳಿ-ಯಶವಂತಪುರ-ಚಿಕ್ಕಬಾಣಾವರ ಮಾರ್ಗದ ಕಾಮಗಾರಿಗೆ ಮಾತ್ರ ಟೆಂಡರ್ ಪ್ರಕ್ರಿಯೆ ನಡೆದಿದೆ. ಮಾರ್ಚ್‌ನಲ್ಲೇ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದ್ದು, ಎಲ್ ಆ್ಯಂಡ್ ಟಿ ಕಂಪನಿಯು ಸಿವಿಲ್ ಕಾಮಗಾರಿಯ ಗುತ್ತಿಗೆ ಪಡೆದುಕೊಂಡಿದೆ.

2020ರ ಅ. 21: ಯೋಜನೆಗೆ ಅನುಮೋದನೆ ದೊರೆತ ದಿನಾಂಕ

ಬೈಯಪ್ಪನಹಳ್ಳಿ-ಚಿಕ್ಕಬಾಣಾವರ ಮಾರ್ಗದ ಸಿವಿಲ್ ಕಾಮಗಾರಿಗೆ ಇನ್ನೂ ಕಾರ್ಯಾದೇಶ ನೀಡಿಲ್ಲ. ಕಾರ್ಯಾದೇಶ ನೀಡಲು ಯಾವುದೇ ತೊಡಕುಗಳಿಲ್ಲ, ಸಾಮಾನ್ಯ ಪ್ರಕ್ರಿಯೆಗಳು ನಡೆಯುತ್ತಿದ್ದು, ಶೀಘ್ರವೇ ನೀಡಲಾಗುವುದು.
–ಅಮಿತ್ ಗರ್ಗ್, ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ



₹15,767 ಕೋಟಿ	20:20:60	148.17 ಕಿ.ಮೀ.	55.40 ಕಿ.ಮೀ.	57
ಯೋಜನೆಯ ಒಟ್ಟು ಮೊತ್ತ	ಕೇಂದ್ರ, ರಾಜ್ಯ ಮತ್ತು ಬಾಹ್ಯ ಹಣಕಾಸು ಸಂಸ್ಥೆಗಳು ಭರಿಸುವ ಹಣಕಾಸಿನ ಪಾಲು	ಉಪನಗರ ರೈಲು ಮಾರ್ಗದ ಒಟ್ಟು ಉದ್ದ	ಎತ್ತರಿಸಿದ (ಎಲಿವೇಟೆಡ್) ಮಾರ್ಗದ ಉದ್ದ	ಈ ಯೋಜನೆಯಡಿ ನಿರ್ಮಾಣವಾಗುವ ನಿಲ್ದಾಣಗಳು

ಆದರೆ, ಈ ಕಂಪನಿಗೆ ಕೆ-ರೈಡ್ ಇನ್ನೂ ಕಾರ್ಯಾದೇಶ ನೀಡಿಲ್ಲ.

‘ಯಾವುದೇ ತೊಡಕುಗಳಿಲ್ಲ. ನಿಗದಿತ ಅವಧಿಯಲ್ಲೇ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದು ಕೆ-ರೈಡ್ ಅಧಿಕಾರಿಗಳು ಎರಡು ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ. ಈ ಯೋಜನೆಗೆ 2020ರ ಅಕ್ಟೋಬರ್ 21ರಂದು ಅನುಮೋದನೆ ದೊರೆತಿದ್ದು, 2190 ದಿನಗಳಲ್ಲಿ (73 ತಿಂಗಳು) ಕಾಮಗಾರಿ ಪೂರ್ಣಗೊಳಿಸಬೇಕು ಎಂಬ ಗಡುವನ್ನು ಕೇಂದ್ರ ಸರ್ಕಾರ ನೀಡಿತ್ತು. ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿಯನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡು 1095 ದಿನಗಳಲ್ಲಿ(ಮೂರು ವರ್ಷ) ಪೂರ್ಣಗೊಳಿಸಬೇಕು ಎಂದು ತಿಳಿಸಿತ್ತು. ಈಗ ಪ್ರಧಾನಿ ನರೇಂದ್ರ ಮೋದಿ ಅವರು ಇಡೀ ಯೋಜನೆಯನ್ನು ಇನ್ನು 40 ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ.

ಯೋಜನೆಗೆ ಅನುಮೋದನೆ ದೊರೆತು 656 ದಿನಗಳು ಕಳೆದಿವೆ. ಸಿವಿಲ್ ಕಾಮಗಾರಿ ಆರಂಭವೇ ಆಗಿಲ್ಲ. ಆದರೂ ಕಾಮಗಾರಿ ಪೂರ್ಣಗೊಳಿಸಲು ಹೇಗೆ ಸಾಧ್ಯ ಎಂಬುದು ಈ ಯೋಜನೆ ಬಗ್ಗೆ ಕನಸು ಹೊತ್ತಿರುವ ರೈಲ್ವೆ ಹೋರಾಟಗಾರರ ಪ್ರಶ್ನೆ.

ನಗರಕ್ಕೆ ಪ್ರತ್ಯೇಕವಾಗಿ ರೈಲು ಸೇವೆ ಆರಂಭಿಸುವ ಬಗ್ಗೆ ರೈಲ್ವೆ ಇಲಾಖೆ 1983ರಲ್ಲೇ ಪ್ರಸ್ತಾವ ಸಿದ್ಧಪಡಿಸಿತ್ತು. 2010ರಲ್ಲಿ ಪ್ರಜಾ ಸಂಘಟನೆಗಳ ಒತ್ತಾಸೆಯಿಂದ ಈ ಕೂಗು ತೀವ್ರಗೊಂಡಿತು. 2019ರ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಯನ್ನು ಉಲ್ಲೇಖಿಸಲಾಯಿತು. 2020ರ ಅ. 21ರಂದು ರೈಲ್ವೆ ಮಂಡಳಿಯಿಂದ ಇದಕ್ಕೆ ಅನುಮೋದನೆಯೂ ದೊರೆಯಿತು.

ಯೋಜನೆ ಅನುಷ್ಠಾನದ ಹೊಣೆ ಹೊತ್ತಿರುವ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ-ರೈಡ್) ಈ ಯೋಜನೆಯನ್ನು ನಾಲ್ಕು ಕಾರಿಡಾರ್‌ಗಳನ್ನಾಗಿ ವಿಂಗಡಿಸಿದೆ.

ಬೈಯಪ್ಪನಹಳ್ಳಿ-ಚನ್ನಸಂದ್ರ ನಡುವೆ ಜೋಡಿ ಮಾರ್ಗಕ್ಕೆ ಟೆಂಡರ್ ಕರೆದು ಗುತ್ತಿಗೆದಾರರನ್ನು ಅಂತಿಮಗೊಳಿಸಲಾಗಿದೆ. ಉಳಿದಂತೆ ಮೂರು ಕಾರಿಡಾರ್‌ಗಳ ಟೆಂಡರ್ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ. ಉರುಳುತ್ತಿರುವ ದಿನಗಳನ್ನು ಎಣಿಸುವ ಕೆಲಸ ಬಿಟ್ಟರೆ ಕೆ-ರೈಡ್ ಬೇರೆ ಏನನ್ನೂ ಮಾಡುತ್ತಿಲ್ಲ. ಕೆ-ರೈಡ್‌ಗೆ ಚುರುಕು ಮುಟ್ಟಿಸಬೇಕಾದ ರಾಜ್ಯ ಸರ್ಕಾರ ಮತ್ತು ಜನಪ್ರತಿನಿಧಿಗಳು ಮೌನ ವಹಿಸಿದ್ದಾರೆ ಎಂದು ರೈಲ್ವೆ ಹೋರಾಟಗಾರರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಜನಪ್ರತಿನಿಧಿಗಳ ನಿದ್ರೆ



ರಾಜಕುಮಾರ್ ದುಗಾರ್

‘ಉಪನಗರ ರೈಲು ಯೋಜನೆ ಅನುಷ್ಠಾನ ವಿಳಂಬಕ್ಕೆ ರಾಜಕಾರಣಿಗಳ ನಿರ್ಲಕ್ಷ್ಯವೇ ಕಾರಣ’ ಎಂದು ರೈಲ್ವೆ ಹೋರಾಟಗಾರ ರಾಜಕುಮಾರ್ ದುಗಾರ್ ಆರೋಪಿಸಿದರು.

‘ಕೆ-ರೈಡ್ ದೂಷಿಸಿ ಪ್ರಯೋಜನವಿಲ್ಲ. ಯೋಜನೆಗೆ ಅನುಮೋದನೆ ಸಿಕ್ಕಾಗ ಪ್ರಚಾರ ಪಡೆದುಕೊಳ್ಳಲು ಪೈಪೋಟಿ ನಡೆಸುತ್ತಿದ್ದ ಬೆಂಗಳೂರಿನ ಸಂಸದರು ಈಗ ಸುಮ್ಮನಾಗಿದ್ದಾರೆ. ರಾಜಕಾರಣಿಗಳ ಈ ರೀತಿಯ ನಿದ್ರೆಯಿಂದ ಉಪನಗರ ರೈಲು ಯೋಜನೆ ಅನುಷ್ಠಾನ ವಿಳಂಬವಾಗುತ್ತಿದೆ’ ಎಂದು ಹೇಳಿದರು.

ಅನುಮೋದನೆ ದೊರೆತು 656 ದಿನಗಳೇ ಆಗಿವೆ. ಪ್ರಧಾನಿಯವರು ಶಂಕುಸ್ಥಾಪನೆ ನೆರವೇರಿಸಿ 42 ದಿನಗಳು ಕಳೆದಿವೆ. ಆದರೂ, ಸಿವಿಲ್ ಕಾಮಗಾರಿ ಆರಂಭವಾಗಿಲ್ಲ. ಬೆಂಗಳೂರು ಮತ್ತು ಸುತ್ತಮುತ್ತಲ ಊರುಗಳ ಸುಮಾರು 2 ಕೋಟಿ ಜನರಿಗೆ ಅನುಕೂಲ ಆಗುವ ಯೋಜನೆ ಇದು. ಈ ವಿಷಯದಲ್ಲಿ ಜನಪ್ರತಿನಿಧಿಗಳು ಇಷ್ಟು ನಿರ್ಲಕ್ಷ್ಯ ವಹಿಸಿರುವುದು ಬೇಸರದ ಸಂಗತಿ ಎಂದರು.

‘ಉಪನಗರ ರೈಲು ಯೋಜನೆಗೆ ಅನುಮೋದನೆ ದೊರೆತ ಎಂಟು ತಿಂಗಳ ನಂತರ ವಿಮಾನ ನಿಲ್ದಾಣ ಮಾರ್ಗದ ಮೆಟ್ರೊ ರೈಲು ಯೋಜನೆಗೆ ಅನುಮೋದನೆ ಸಿಕ್ಕಿದೆ. ಮೆಟ್ರೊ ರೈಲು ಯೋಜನೆ ಕಾಮಗಾರಿ ವೇಗವಾಗಿ ನಡೆಯುತ್ತಿದೆ. ಅದೇ ರೀತಿ ಉಪನಗರ ರೈಲು ಯೋಜನೆ ಅನುಷ್ಠಾನ ಆಗಬಾರದೇಕೆ’ ಎಂದು ಪ್ರಶ್ನಿಸಿದರು.

ಭಾರಿ ಮಳೆ, ಹೊಳೆಯಂತಾದ ರಸ್ತೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಸೋಮವಾರ ರಾತ್ರಿ ಉತ್ತಮ ಮಳೆ ಸುರಿಯಿತು. ಹಲವೆಡೆ ರಸ್ತೆಗಳು ಹೊಳೆಯಂತೆ ಕಂಗೊಳಿಸಿದವು. ರಾತ್ರಿ 12 ಗಂಟೆಯಾದರೂ ಮಳೆ ನಿಂತಿರಲಿಲ್ಲ.

ಕುಮಾರಸ್ವಾಮಿ ಲೇಔಟ್, ಫೈಯಜಾಬಾದ್ ಹಾಗೂ ಯಲಚೇನಹಳ್ಳಿ ಭಾಗದ ತಗ್ಗುಪ್ರದೇಶದ ಮನೆಗಳಿಗೆ ನೀರು ನುಗ್ಗಿ ಮತ್ತೆ ಅವಾಂತರ ಸೃಷ್ಟಿಯಾಯಿತು.

ಶನಿವಾರ ರಾತ್ರಿ ಸುರಿದ ಮಳೆಯಲ್ಲೂ ಇಂತಹದ್ದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಲವು ಬಡಾವಣೆಗಳಲ್ಲಿ ವಿದ್ಯುತ್ ಸಹ ಕಡಿತಗೊಂಡು ಜನರು ಸಂಕಷ್ಟ ಎದುರಿಸಿದರು.

ಮೆಜೆಸ್ಟಿಕ್, ಕಬ್ಬನ್ ಪಾರ್ಕ್, ವಿಧಾನಸೌಧ, ಎಂ.ಜಿ.ರಸ್ತೆ, ಶಿವಾಜಿನಗರ, ವಸಂತ ನಗರ, ಬಸವೇಶ್ವರ ನಗರ, ರಾಜಾಜಿನಗರ, ಪೀಣ್ಯ, ಜಾಲಹಳ್ಳಿ, ಕೆಂಗೇರಿ, ರಾಜಾಜಿನಗರ, ರಾಜರಾಜೇಶ್ವರಿ ನಗರ, ಮಲ್ಲೇಶ್ವರ, ಜೆ.ಪಿ. ನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ಉತ್ತಮ ಮಳೆ ಸುರಿಯಿತು.

ಇಬ್ಬರಿಗೆ ಗಾಯ: ಜೆಸಿ ನಗರದ ದೂರದರ್ಶನ ಕೇಂದ್ರದ ಬಳಿ ಮಳೆಯಿಂದ ಆಟೊ ಪಲ್ಟಿಯಾಗಿ ಇಬ್ಬರು ಗಾಯಗೊಂಡಿದ್ದಾರೆ.

ಬಳ್ಳಾರಿ ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನಗಳು ಮುಂದೆ ಸಾಗಲು ಸಾಧ್ಯವಾಗಲಿಲ್ಲ. ರಾತ್ರಿ ಪಾಳಿ ಮುಗಿಸಿ ಮನೆಗೆ ತೆರಳುವವರು ಪರದಾಟ ನಡೆಸಿದರು.

ಮೈಸೂರು ರಸ್ತೆಯ ಸ್ಯಾಟಲೈಟ್ ಸಮೀಪದ ಕಾಲುವೆಗಳಲ್ಲಿ ಅಪಾರ ಪ್ರಮಾಣದ ನೀರು ಹರಿಯಿತು. ಗಾಳಿ ಆಂಜನೇಯ ದೇವಸ್ಥಾನ ಸಮೀಪದ ರಸ್ತೆಯಲ್ಲೂ ಮಳೆಯ ನೀರು ಸಂಗ್ರಹಗೊಂಡಿತ್ತು.

ಕಳೆದ ಮೂರು ದಿನಗಳಿಂದ ನಗರದಲ್ಲಿ ಸಂಜೆ ವೇಳೆ ಮಳೆ ಸುರಿಯುತ್ತಿದೆ. ಬೆಂಗಳೂರು ನಗರ ಹಾಗೂ ಸುತ್ತಮುತ್ತ ಇನ್ನೂ ಎರಡು ದಿನ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ನಗರದಲ್ಲಿ ಸೋಮವಾರ ರಾತ್ರಿ ಸುರಿದ ಮಳೆಗೆ ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದ ಬಳಿ ರಸ್ತೆಯಲ್ಲೇ ನೀರು ಹರಿದು ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್



ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಸೋಮವಾರ ಮಳೆಗೆ ಕೊಡೆ ಹಿಡಿದು ಸಾಗಿದ ಯುವತಿಯರು
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.



ಫಲಪುಷ್ಪ ಪ್ರದರ್ಶನಕ್ಕೆ ಭರದಿಂದ ಸಾಗಿದ ಸಿದ್ಧತೆ –ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.



ಪುಷ್ಪಗಳನ್ನು ಜೋಡಿಸುತ್ತಿರುವ ಕಲಾವಿದರು

ಡಾ.ರಾಜ್, ಪುನೀತ್ ರಾಜ್‌ಕುಮಾರ್ ಪರಿಕಲ್ಪನೆಯ ವಿಶೇಷ ಫಲಪುಷ್ಪ ಪ್ರದರ್ಶನಕ್ಕೆ ತಯಾರಿ

ಲಾಲ್‌ಬಾಗ್: ಪುಷ್ಪಪ್ರಿಯರ ಸೆಳೆಯಲು ಸಿದ್ಧತೆ

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ಸಿಲಿಕಾನ್ ಸಿಟಿ’ಯಲ್ಲಿನ ಪ್ರೇಮಿಗಳ ನೆಚ್ಚಿನ ತಾಣ, ವಾಯುವಿಹಾರಿಗಳ ಸ್ವರ್ಗ ಲಾಲ್‌ಬಾಗ್ ಈ ವರ್ಷದ ಫಲಪುಷ್ಪ ಪ್ರದರ್ಶನಕ್ಕೆ ಅಣಿಯಾಗುತ್ತಿದೆ. ನಾಡಿನ ಪುಷ್ಪಪ್ರಿಯರನ್ನು ಸೆಳೆಯಲು ಕಾರ್ಮಿಕರು ಶ್ರಮಿಸುತ್ತಿದ್ದಾರೆ.

ಕನ್ನಡ ಚಿತ್ರರಂಗಕ್ಕೆ ಅಮೂಲ್ಯ ಕೊಡುಗೆ ನೀಡಿರುವ ನಟರಾದ ದಿವಂಗತ ಡಾ.ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಅವರಿಗೆ ಈ ವರ್ಷ ಪುಷ್ಪ ಗೌರವ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ.

ಮಳೆಯಿಂದ ಲಾಲ್‌ಬಾಗ್ ಹಸಿರಾಗಿದ್ದು, ಸಹಜವಾಗಿಯೇ ತನ್ನ ಸೌಂದರ್ಯ ಹೆಚ್ಚಿಸಿಕೊಂಡಿದೆ. ಕೋವಿಡ್ ಸಾಂಕ್ರಾಮಿಕದ ಬಳಿಕ ಜನಜೀವನ ಸಹಜ ಸ್ಥಿತಿಗೆ ಮರಳಿರುವ ಈ ಹೊತ್ತಿನಲ್ಲಿ 10 ದಿನಗಳ ಕಾಲ ಪುಷ್ಪರಾಶಿಯ ದರ್ಶನಕ್ಕೆ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಇದೇ 5ರಿಂದ 15ರ ತನಕ ಲಾಲ್‌ಬಾಗ್‌ನಲ್ಲಿ ಪುಷ್ಪ ವೈಭವ ಮನೆ ಮಾಡಿರಲಿದೆ.



ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನಕ್ಕೆ ಗಾಜನೂರಿನಲ್ಲಿರುವ ಡಾ.ರಾಜ್‌ಕುಮಾರ್ ಅವರ ಪೂರ್ವಜರ ಮನೆಯ ಪ್ರತಿಕೃತಿಯನ್ನು ಸಿದ್ಧಗೊಳಿಸುತ್ತಿರುವ ಕಲಾವಿದರು

ತೋಟಗಾರಿಕೆ ಇಲಾಖೆ, ಮೈಸೂರು ಉದ್ಯಾನ ಕಲಾ ಸಂಘವು ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ 212ನೇ ಫಲಪುಷ್ಪ ಪ್ರದರ್ಶನ ಇದಾಗಿದೆ. ಲಾಲ್‌ಬಾಗ್ ಉದ್ಯಾನದ ಗಾಜಿನ ಮನೆಯಲ್ಲಿ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್‌ರ ಹೂವಿನ ಪ್ರತಿಕೃತಿ ರೂಪಿಸಲಾಗುತ್ತಿದೆ.

ಗಾಜನೂರಿನಲ್ಲಿರುವ ರಾಜ್‌ಕುಮಾರ್ ಅವರ ಪೂರ್ವಜರ ಮನೆ, ಮೈಸೂರಿನ ಶಕ್ತಿಧಾಮದ ಮಾದರಿಗಳು ಪುಷ್ಪಗಳಲ್ಲಿ ಅರಳಲಿವೆ. ಕಬ್ಬನ್ ಪಾರ್ಕ್, ಊಟಿಯ ಖಾಸಗಿ ಸಸ್ಯತೋಟಗಳು ಸೇರಿ ವಿದೇಶದಿಂದ ಬರುವ ಬಗೆಬಗೆಯ ತರಹೇವಾರಿ ಆಲಂಕಾರಿಕ ಪುಷ್ಪ ಬಳಸಲಾಗುವುದು ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದರು



ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷಗಳಿಂದ ಫಲಪುಷ್ಪ ಪ್ರದರ್ಶನ ನಡೆದಿರಲಿಲ್ಲ. ಈ ಬಾರಿ ಫಲಪುಷ್ಪ ಪ್ರದರ್ಶನಕ್ಕೆ ಸುಮಾರು 10-12 ಲಕ್ಷ ಜನ ಬರುವ ನಿರೀಕ್ಷೆ ಇದೆ
ಡಾ. ಎಂ ಜಗದೀಶ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ

ಸುಮಾರು ₹ 30 ಲಕ್ಷ ವೆಚ್ಚದಲ್ಲಿ ಬೇಡರ ಕಣ್ಣಪ್ಪ ಪರಿಕಲ್ಪನೆಯ ‘ವರ್ಟಿಕಲ್ ವಾಲ್’ ಮಾಡಿ, ಮೆಗಾ ಕ್ಯಾಮೆರಾ ಸ್ಥಾಪಿಸಲಾಗುತ್ತಿದೆ ಎಂದು ‘ಭಾಗ್ಯಲಕ್ಷ್ಮಿ ವರ್ಟಿಕಲ್ ವಾಲ್’ನ ಟೆಕ್ನಿಕಲ್ ಮುಖ್ಯಸ್ಥ ಶಿವರಾಮ ರೆಡ್ಡಿ ಮಾಹಿತಿ ನೀಡಿದರು.

ಗಾಜಿನ ಮನೆ ಆವರಣದಲ್ಲಿ ಪುನೀತ್ ರಾಜ್‌ಕುಮಾರ್, ರಾಜ್ ಕುಮಾರ್, ರಾಘವೇಂದ್ರ ಸ್ವಾಮಿ, ಬೇಡರ ಕಣ್ಣಪ್ಪ, ರಣಧೀರ ಕಂಠೀರವ ಎಲ್ಲರ ವಿಶೇಷ ಪ್ರತಿಮೆ ಸ್ಥಾಪಿಸಿ ಪುಷ್ಪಾಲಂಕಾರ ಮಾಡಲು ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದು ‘ಸ್ನೀಲ್ ಫ್ಲವರ್ಸ್’ನ ವ್ಯವಸ್ಥಾಪಕ ಸತ್ಯ ಅಗರ್‌ವಾಲ್ ತಿಳಿಸಿದರು.

ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ

ರಜೆ ದಿನಗಳಲ್ಲಿ ₹ 100 ಮತ್ತು ಇತರೆ ದಿನಗಳಲ್ಲಿ ₹80, ಮಕ್ಕಳಿಗೆ ₹ 30 ಪ್ರವೇಶ ಶುಲ್ಕ ನಿಗದಿ ಪಡಿಸಲಾಗಿದೆ. 1-10ನೇ ತರಗತಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಎಂ ಜಗದೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

₹ 25 ಲಕ್ಷ ಮೌಲ್ಯದ ರಕ್ತಚಂದನ ವಶ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬೊಮ್ಮಸಂದ್ರದ ಬಳಿ ರಕ್ತಚಂದನ ಸಾಗಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಆನೇಕಲ್ ಉಪ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಸರ್ಜಾಪುರದ ಬಷೀರ್ ಅಹಮದ್, ಅಡಿಗಾರಕಲ್ಲಹಳ್ಳಿಯ ನಿಜಾಮ್ ಮತ್ತು ತೋಷಿದ್ ಬಂಧಿತರು.

ಆರೋಪಿಗಳಿಂದ ₹ 25 ಲಕ್ಷ ಬೆಲೆ ಬಾಳುವ 750 ಕೆ.ಜಿಯಷ್ಟು ರಕ್ತಚಂದನ ವಶಪಡಿಸಿಕೊಂಡಿದ್ದಾರೆ. ಆರೋಪಿಗಳು ಸರಕು ಸಾಗಣೆ ವಾಹನದಲ್ಲಿ ರಕ್ತಚಂದನ ಸಾಗಾಟ ಮಾಡುತ್ತಿದ್ದರು.

ಖಚಿತ ಮಾಹಿತಿ ಮೇರೆಗೆ ಡಿವೈಎಸ್‌ಪಿ ಮಲ್ಲೇಶ್ ನೇತೃತ್ವದ ಪೊಲೀಸರ ತಂಡ ದಾಳಿ ನಡೆಸಿದೆ. ಸರ್ಕಲ್ ಇನ್‌ಸ್ಪೆಕ್ಟರ್ ಜಗದೀಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪತ್ನಿಗೆ ಥಳಿಸಿ ಆತ್ಮಹತ್ಯೆಗೆ ಶರಣಾದ ಪತಿ

ಆನೇಕಲ್: ಪತ್ನಿಗೆ ರಾಡಿನಿಂದ ಹೊಡೆದ ಪರಿಣಾಮ ಗಾಯಗೊಂಡಿದ್ದ ಆಕೆ ಆಸ್ಪತ್ರೆಗೆ ದಾಖಲಾದ ಬಳಿಕ ತಲೆಮರೆಸಿಕೊಂಡಿದ್ದ ಪತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಬನ್ನೇರುಘಟ್ಟ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಸುರೇಶ್ (48) ಮೃತಪಟ್ಟವರು. ಸುರೇಶ್ ಮತ್ತು ಶಾಲಿನಿ ದಂಪತಿ ಕೊಡಗಿನವರಾಗಿದ್ದು ಬನ್ನೇರುಘಟ್ಟ ಠಾಣೆ ವ್ಯಾಪ್ತಿಯ ಮೈಲಸಂದ್ರ ದಿಣ್ಣೆಯಲ್ಲಿ ವಾಸವಾಗಿದ್ದರು. ಹೆಂಡತಿ ಮಾಡಿದ ಕಬಾಬ್ ರುಚಿ ಇಲ್ಲವೆಂದು ಜಗಳ ತೆಗೆದು ಹೆಂಡತಿಗೆ ರಾಡಿನಿಂದ ಹೊಡೆದಿದ್ದರು ಎಂದು ಆಕೆ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಪ್ರಕರಣ ದಾಖಲಾದ ನಂತರ ಸುರೇಶ್ ಕಣ್ಮರೆಯಾಗಿದ್ದ ಎನ್ನಲಾಗಿದೆ. ಬನ್ನೇರುಘಟ್ಟ ಸಮೀಪ ಮರಕ್ಕೆ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಅವರ ಶವ ಪತ್ತೆಯಾಗಿದೆ.

ಬಿಡಿಎಗೆ ಸುಪ್ರೀಂ ಕೋರ್ಟ್ ನಿರ್ದೇಶನ

ಕಾರಂತ ಬಡಾವಣೆ: 355 ಕಟ್ಟಡಗಳ ಸಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಶ್ರೀರಾಮಚಂದ್ರ ಮಿಷನ್ ಆಶ್ರಮದ ವಲಯ ಕೇಂದ್ರದ ಐದು ಎಕರೆ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಭೂಸ್ವಾಧೀನ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಜತೆಗೆ, ನಿವೃತ್ತ ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಸಮಿತಿಯ 18ನೇ ವರದಿಯಲ್ಲಿ ಉಲ್ಲೇಖಿಸಲಾಗಿರುವ 355 ಕಟ್ಟಡಗಳನ್ನು ಸಕ್ರಮಗೊಳಿಸುವಂತೆ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಈ ಕೇಂದ್ರದಲ್ಲಿ ಧ್ಯಾನ, ವಿಜ್ಞಾನ ಶಿಬಿರಗಳು, ಆರೋಗ್ಯ ಶಿಬಿರಗಳು ಹಾಗೂ ವಿಚಾರ ಸಂಕಿರಣಗಳು, ಮಕ್ಕಳ ಕಾರ್ಯಕ್ರಮ, ಯೋಗ ಶಿಬಿರಗಳು, ವೈದ್ಯಕೀಯ ಶಿಬಿರಗಳು, ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಜತೆಗೆ, 2.5 ಲಕ್ಷ ಗಿಡಗಳನ್ನು ವಿತರಿಸಲಾಗಿದೆ ಎಂದು ಕೇಂದ್ರದ ಪ್ರಮುಖರು ಚಂದ್ರಶೇಖರ್ ಸಮಿತಿಗೆ ಮಾಹಿತಿ ನೀಡಿದ್ದರು. ಈ ಕೇಂದ್ರದ ಜಾಗವನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಬಹುದು ಎಂದು ಸಮಿತಿ ಹೇಳಿತ್ತು. ಅದರ ಆಧಾರದಲ್ಲಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.



ಶಿವರಾಮ ಕಾರಂತ ಬಡಾವಣೆಯನ್ನು 650 ಎಕರೆ ಜಾಗದಲ್ಲಿ ನಿರ್ಮಿಸಲು 2008ರಲ್ಲಿ ಪ್ರಸ್ತಾವನೆ ಸಿದ್ಧಪಡಿಸಲಾಗಿತ್ತು. ಉದ್ದೇಶಿತ ಬಡಾವಣೆ ನಿರ್ಮಾಣಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಒಂದಿಂಚೂ ಜಾಗವನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಬಾರದು ಎಂದು ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ 2018ರ ಆಗಸ್ಟ್ 3ರಂದು ನಿರ್ದೇಶನ ನೀಡಿತ್ತು. ಬಡಾವಣೆ ನಿರ್ಮಾಣಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಹಲವಾರು ಮಂದಿ ಮನೆಗಳನ್ನು ಕಟ್ಟಿಕೊಂಡಿದ್ದರು. 2018ರಲ್ಲಿ ನೀಡಿದ ಆದೇಶದ ಪಾಲನಾ ವರದಿಯನ್ನು ಕೋರ್ಟ್ ಪರಿಶೀಲಿಸುತ್ತಿದೆ.

ನ್ಯಾಯಮೂರ್ತಿ ಚಂದ್ರಶೇಖರ್ ಸಮಿತಿಯ ಪರವಾಗಿ ವಕೀಲ ಸಂಜಯ್ ಎಂ. ನುಲಿ ಅವರು 18ನೇ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. ಈ ವರದಿಯನ್ನು ಪರಿಶೀಲಿಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಹಾಗೂ ಸಂಜೀವ್ ಖನ್ನಾ ಅವರನ್ನು ಒಳಗೊಂಡ ಪೀಠ, ‘ಭೂಮಿಯನ್ನು ಈಗ ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆಯೋ ಆ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು’ ಎಂದು ಸ್ಪಷ್ಟಪಡಿಸಿದೆ.

‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದ ಬಳಿಕವಷ್ಟೇ ಕಟ್ಟಡಗಳ ನವೀಕರಣ ಹಾಗೂ ಹೊಸ ಕಟ್ಟಡಗಳ ನಿರ್ಮಾಣ ಮಾಡಬಹುದು’ ಎಂದೂ ಪೀಠವು ಸೂಚಿಸಿದೆ.

ಷರತ್ತಿಗೆ ಒಳಪಟ್ಟು 355 ಕಟ್ಟಡಗಳ ಜಾಗವನ್ನು ಸ್ವಾಧೀನಪಡಿಸಿಕೊಳ್ಳದಂತೆ ಪ್ರಾಧಿಕಾರಕ್ಕೆ ಕೋರ್ಟ್ ಸೂಚಿಸಿದೆ. ಆದರೆ, ಮುಂದಿನ ದಿನಗಳಲ್ಲಿ ಅಭಿವೃದ್ಧಿ ಶುಲ್ಕ ವಿಧಿಸಬಹುದು ಎಂದೂ ಪೀಠ ಹೇಳಿದೆ.

ವರದಿಯ ಪ್ರತಿಯನ್ನು ದಾಖಲೆಯ ಉದ್ದೇಶಕ್ಕಾಗಿ ಬಿಡಿಎ ಆಯುಕ್ತರಿಗೆ ಹಸ್ತಾಂತರಿಸುವಂತೆ ಸಮಿತಿಗೆ ನ್ಯಾಯಾಲಯ ಸೂಚಿಸಿದೆ.

ಸಂಬಂಧಪಟ್ಟ ಅರ್ಜಿದಾರರಿಗೆ ನ್ಯಾಯಮೂರ್ತಿ ಚಂದ್ರಶೇಖರ್ ಸಮಿತಿಯ ಮೇಲ್ವಿಚಾರಣೆಯಲ್ಲಿ ಬಿಡಿಎ ಆಯುಕ್ತರು ಪಾರದರ್ಶಕ ರೀತಿಯಲ್ಲಿ ನಾಲ್ಕು ವಾರದೊಳಗೆ ಸಕ್ರಮ ಪ್ರಮಾಣಪತ್ರಗಳನ್ನು ನೀಡಬೇಕು ಎಂದೂ ನ್ಯಾಯಾಲಯ ನಿರ್ದೇಶನ ನೀಡಿದೆ.

ಬಡಾವಣೆಯೊಳಗೆ ಸಂಪರ್ಕಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಹಾಗೂ ಬಡಾವಣೆಯೊಳಗಿನ ಅಧಿಸೂಚಿತವಲ್ಲದ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಬಹುದು ಎಂದು ನ್ಯಾಯಾಲಯ ಹೇಳಿದೆ.

ಸಿಎಸ್ ಕಚೇರಿಯಿಂದಲೇ ನಕಲಿ ನೇಮಕಾತಿ ಆದೇಶ


ಬೆಂಗಳೂರು: ಉಪ ತಹಶೀಲ್ದಾರ್ ಹುದ್ದೆಯ ನಕಲಿ ನೇಮಕಾತಿ ಆದೇಶ ಪತ್ರವನ್ನು ಮುಖ್ಯ ಕಾರ್ಯದರ್ಶಿ ಕಚೇರಿಯಿಂದಲೇ ಕಿಡಿಗೇಡಿಗಳು ತಯಾರಿಸಿರುವ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರಕರಣದ ತನಿಖೆ ನಡೆಸಿ, ಸಿಎಸ್ ಹೆಸರು ದುರ್ಬಳಕೆ ಮಾಡಿಕೊಂಡವರ ವಿರುದ್ಧ ಕ್ರಮಕ್ಕೆ ಕೋರಿ ಹೆಚ್ಚುವರಿ ಕಾರ್ಯದರ್ಶಿ ಎಚ್.ಎಂ.ಸುದರ್ಶನ ದೂರು ನೀಡಿದ್ದಾರೆ.

‘ಅಕ್ಷಯ ಬಾಹುಬಲಿ ಲಕ್ಕನಗೌಡ ಎಂಬುವವರನ್ನು ಉಪ ತಹಶೀಲ್ದಾರ್ ಹುದ್ದೆಗೆ ಆಯ್ಕೆ ಮಾಡಿ ಆದೇಶ ಹೊರಡಿಸಲಾಗಿದೆ. ಉಪ ತಹಶೀಲ್ದಾರ್ ಹುದ್ದೆಯು ಪೂರ್ಣ ಪ್ರಮಾಣದ ಮುಂಬಡ್ತಿ ಹುದ್ದೆಯಾಗಿದ್ದು, ಯಾವುದೇ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶ ಇಲ್ಲ. ಸರ್ಕಾರಿ ಹುದ್ದೆಗಳನ್ನು ಕೊಡಿಸುವ ಆಮಿಷವೊಡ್ಡಿ ಮೋಸ ಎಸಗಿದವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಕೋರಲಾಗಿದೆ.

ಹೊಸ ಸಂಸತ್ ಭವನದಲ್ಲಿ ಹಂಪಿ ಸ್ಮಾರಕದ 3ಡಿ ಚಿತ್ರಗಳು

ಹೊಸಪೇಟೆ (ವಿಜಯನಗರ): ನವದೆಹಲಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಸಂಸತ್ ಭವನ ‘ಸೆಂಟ್ರಲ್ ವಿಸ್ತಾ’ದ ವಸ್ತು ಸಂಗ್ರಹಾಲಯದಲ್ಲಿ ವಿಶ್ವಪ್ರಸಿದ್ಧ ಹಂಪಿ ಸ್ಮಾರಕದ ಚಿತ್ರಗಳು ಕಂಗೊಳಿಸಲಿವೆ.



ಹಂಪಿಯ ಮಹಾನವಮಿ ದಿಬ್ಬ

ಸೆಂಟ್ರಲ್ ವಿಸ್ತಾ ಅವೆನ್ಯೂ ಪುನರ್ ಅಭಿವೃದ್ಧಿ ಯೋಜನೆಯಡಿ ತ್ರಿಕೋನಾಕಾರದ ನೂತನ ಸಂಸತ್ ಭವನ, ವಿಜಯ ಚೌಕ್‌ನಿಂದ ಇಂಡಿಯಾ ಗೇಟ್ ವರೆಗಿನ 3 ಕಿ.ಮೀ ಉದ್ದದ ರಾಜಪಥ ಅಭಿವೃದ್ಧಿ, ಪ್ರಧಾನಿ ನೂತನ ನಿವಾಸ, ಕಚೇರಿ ಹಾಗೂ ಉಪರಾಷ್ಟ್ರಪತಿಗಳ ನೂತನ ಕಚೇರಿ ಸಂಕೀರ್ಣ ನಿರ್ಮಿಸಲಾಗುತ್ತಿದೆ. ಅದೇ ರೀತಿ ಅತ್ಯಾಧುನಿಕ ವಸ್ತು ಸಂಗ್ರಹಾಲಯ ಅಭಿವೃದ್ಧಿ ಪಡಿಸಲಾಗುತ್ತಿದೆ. ದೇಶದ ಇತಿಹಾಸ, ಸಾಂಸ್ಕೃತಿಕ ಹಿರಿಮೆಯನ್ನು ಪ್ರತಿನಿಧಿಸುವ ದೇಶದ ಪ್ರಮುಖ ಸ್ಮಾರಕಗಳು, ಕಟ್ಟಡಗಳ 3ಡಿ ಛಾಯಾಚಿತ್ರಗಳನ್ನು ಅಲ್ಲಿ ಅಳವಡಿಸಲು ತೀರ್ಮಾನಿಸಲಾಗಿದೆ. ಅದರಲ್ಲಿ ಹಂಪಿ ಸ್ಮಾರಕಗಳಿಗೂ ಪ್ರಾಮುಖ್ಯತೆ ಸಿಕ್ಕಿರುವುದು ವಿಶೇಷ.

ಹಂಪಿಯ ಮಹಾನವಮಿ ದಿಬ್ಬ, ರಾಜ ಪ್ರಾಂಗಣ, ರಾಜ ಸಭಾಂಗಣ, ಗುಪ್ತ ಮಾರ್ಗ, ತುರ್ತಾ ಕಾಲುವೆಯ ಚಿತ್ರಗಳು ಹಾಗೂ ಅವುಗಳ ಫೈಬರ್ ಪ್ರತಿಕೃತಿ ತಯಾರಿಸಿ, ವಸ್ತು ಸಂಗ್ರಹಾಲಯದಲ್ಲಿ ಇಡಲು ತೀರ್ಮಾನಿಸಲಾಗಿದೆ ಎಂದು ರಾಷ್ಟ್ರೀಯ ಸಂಗ್ರಹಾಲಯ ಸಂಸ್ಥೆಯ (ಎನ್.ಎಂ.ಐ.) ಸಹಾಯಕ ಸಂಶೋಧಕರಾದ ಸೋನಿ ಸಚ್‌ದೇವ್ ತಿಳಿಸಿದ್ದಾರೆ.

ಮನುಕುಲದ ಮಾತುಗಾರ



ಎಪ್ಪತ್ತೈದರ ಏರು ವಯಸ್ಸಿನಲ್ಲೂ ಇಪ್ಪತ್ತೈದರ ಉತ್ಸಾಹ, ಉಮೇದಿನಲ್ಲಿರುವ ಸಿದ್ದರಾಮಯ್ಯ ಕರ್ನಾಟಕ ಕಂಡ ಅಪರೂಪದ ರಾಜಕಾರಣಿ. ಮಾತಿಗೆ ನಿಂತರೆ ಸಮುದ್ರದ ಭೋರ್ಗರೆತ, ಶೋತೃಗಳ ಮನದಾಳವನ್ನು ಕೆಣಕಿ, ಅವರಲ್ಲಿ ಹೊಸ ಚೈತನ್ಯ ಚಿಮ್ಮಿಸಬಲ್ಲ ವಾಗ್ಪಟು. ಸಣ್ಣದೊಂದು ಚೀಟಿಯೂ ಇಲ್ಲದೇ ಅಂಕಿಅಂಶಗಳನ್ನು ಕರಾರುವಾಕ್ಕಾಗಿ ಸಭಿಕರ ಮುಂದೆ ಇಟ್ಟು, ಸತ್ಯದ ಒಳಗನ್ನು ಅವರು ತೆರೆದಿಡುವ ಪರಿ ವಿಭಿನ್ನ. ಹಾಗಾಗಿಯೇ ಸಿದ್ದರಾಮಯ್ಯ ಮಾತಿಗೆ ನಿಂತರೆ ಅಲ್ಲಿ ಮಾತುಕೇಳಲು ನಿಶ್ಯಬ್ಧ; ವಾಗ್ಝರಿ ನದಿಯ ಏರಿಳಿತ ಕೊಡುವ ನಿನಾದದಂತೆ ಹರಿಯತೊಡಗಿದಾಗ ಆಗಸವೇ ಅಬ್ಬರಿಸುವಷ್ಟು ಕರತಾಡನ; ಜೈಕಾರದ ಮಹಾಪೂರ. ಇದು ಸಿದ್ದರಾಮಯ್ಯನವರು ಸಿದ್ಧಿಸಿಕೊಂಡ ಅಪೂರ್ವ ಕಲೆಯೂ ಹೌದು.

ಸಿದ್ದರಾಮಯ್ಯನವರ ಮಾತಿನಲ್ಲಿ ವಿಷ ಇರುವುದಿಲ್ಲ; ವಿಷಯ ಇರುತ್ತದೆ. ಸತ್ಯದ ಕಹಿ ಇರುತ್ತದೆ. ಅಪ್ರಿಯವಾದರೂ ಪರವಾಗಿಲ್ಲ; ಸತ್ಯವನ್ನೇ ಹೇಳುತ್ತೇನೆ ಎಂದು ನಂಬಿಕೊಂಡವರು ಸಿದ್ದರಾಮಯ್ಯ. ಹಾಗಾಗಿ, ಅನೇಕರಿಗೆ ಸಿದ್ದರಾಮಯ್ಯನವರನ್ನು ಕಂಡರಾಗದು. ಏಕೆಂದರೆ ಅವರು ಸತ್ಯವನ್ನೇ ಹೇಳುತ್ತಾರೆ. ನಿಷ್ಠುರವಾದಿ–ಲೋಕವಿರೋಧಿ ಎಂಬ ಮಾತು ಅವರಿಗೆ ಸಲ್ಲುತ್ತದೆ. ಹಾಗಾಗಿಯೇ, ಬಿಜೆಪಿಯವರು, ಜೆಡಿಎಸ್‌ನವರು, ಸಾಮಾಜಿಕ ಜಾಲತಾಣಿಗರು ಯಾವಾಗಲೂ ಸಿದ್ದರಾಮಯ್ಯನವರ ಮೇಲೆಯೇ ಬಿದ್ದು ಅವರನ್ನು ಕೆಣಕಿ, ಕಾಲೆಳೆಯುತ್ತಲೇ ಇರುತ್ತಾರೆ. ಹಾಗಿದ್ದರೂ ಸಿದ್ದರಾಮಯ್ಯನವರು ತಮ್ಮ ನಡೆಯನ್ನು ಬದಲಾಯಿಸಿಕೊಳ್ಳಲೇ ಇಲ್ಲ. ‘ನ್ಯಾಯ ನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ; ಶರಣನಾರಿಗೂ ಅಂಜುವನಲ್ಲ’ ಎಂಬ ಮಾತು ಸಿದ್ದರಾಮಯ್ಯ ಅವರಿಗೆ ಅನ್ವರ್ಥವಾಗುತ್ತದೆ.

ಮಾತೆಂದರೆ ಮಾತು

ಬಹುತೇಕ ರಾಜಕಾರಣಿಗಳು ಮಾತಿನಲ್ಲಿ ನಿಸ್ಸೀಮರು. ಆದರೆ, ಬೃಹತ್ ವೇದಿಕೆಯೆದುರು ಸೇರಿರುವ ಸಾವಿರಾರು ಜನರನ್ನು ತಮ್ಮ ಮಾತಿನ ಸೂಜಿಗಲ್ಲಿನಿಂದ ಸೆಳೆದು, ಮೋಡಿ ಮಾಡಬಲ್ಲವರು ವಿರಳ. ಅಡ್ಡಪಂಚೆ, ತುಸು ಉದ್ದ ನಿಲುವಂಗಿ, ಮೇಲೊಂದು ಶಲ್ಯದ ಸಾಧಾರಣ ದಿರಿಸು ತೊಡುವ ಸಿದ್ದರಾಮಯ್ಯ, ರೈತನ ಮಗನಂತೆ ಪಕ್ಕಾ ನಾಟಿಶೈಲಿಯವರು. ಮೊದಮೊದಲು ಟವೆಲ್ ಅನ್ನು ಹೆಗಲ ಮೇಲೆ ಹಾಕಿಕೊಳ್ಳುತ್ತಿದ್ದರು. ಮುಖ್ಯಮಂತ್ರಿಯಾದ ಬಳಿಕ ಹೋದಲ್ಲೆಲ್ಲ ಹಾರ–ತುರಾಯಿ ಹಾಕಲು ಜನ ಮುಗಿ ಬಿದ್ದಾಗ ಎಡ ಹೆಗಲ ಮೇಲೆ ಹಾಕಿಕೊಳ್ಳುತ್ತಿದ್ದ ಟವೆಲ್ ಪ್ರತಿಬಾರಿ ಹಾರ ಹಾಕಿದಾಲೂ ಕೆಳಗೆ ಬೀಳುತ್ತಿತ್ತು. ಅದನ್ನು, ತೆಗೆದು ಮತ್ತೆ ಹಾಕಿಕೊಳ್ಳುವಷ್ಟರಲ್ಲಿ ಮತ್ತೊಂದು ಹಾರ ಬೀಳುತ್ತಿತ್ತು. ಆ ಕಾರಣಕ್ಕೆ ಎರಡೂ ಬದಿ ಇಳಿಬೀಳುವಂತೆ ಶಲ್ಯ ಹಾಕಲು ಅವರು ಆರಂಭಿಸಿದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ವಿದೇಶಕ್ಕೆ ಹೋದಾಗ ಬಿಟ್ಟರೆ ಸೂಟು–ಬೂಟು ಜಾಯಮಾನಕ್ಕೆ ಒಗ್ಗದ ಸಿದ್ದರಾಮಯ್ಯ, ತಮ್ಮ ಹಳ್ಳಿ ಶೈಲಿಯಲ್ಲೇ ಮಾತಿಗೆ ಶುರುವಿಟ್ಟುಕೊಳ್ಳುತ್ತಾರೆ. ಸಾವಿರಾರು ಜನ ಸೇರಿದಾಗ ಅವರು ಮಾತನಾಡುವ ಶೈಲಿಗೂ ವಿಧಾನಸಭೆ ಅಥವಾ ಸಭಾಂಗಣದೊಳಗಿನ ಆಯ್ದ ಸಭಿಕರಿರುವ ಕಾರ್ಯಕ್ರಮದಲ್ಲಿ ಮಾತನಾಡುವ ಅವರ ಶೈಲಿಗೂ ಸಾಕಷ್ಟು ವ್ಯತ್ಯಾಸವಿರುತ್ತದೆ. ಸಭಿಕರ ಭಾವನೆಗೆ ತಕ್ಕಂತೆ, ಅವರದೇ ಭಾಷೆಯಲ್ಲಿ ಮಾತನಾಡುವುದು ಸಿದ್ದರಾಮಯ್ಯನವರ ವೈಶಿಷ್ಟ್ಯ. ಎದುರಿನವರನ್ನು ಒಪ್ಪಿಸುವ ಶೈಲಿ ಅವರಿಗೆ ಕರಗತ.

ಕನ್ನಡದಲ್ಲಿ ಇಂತಹ ಒಪ್ಪಿಸುವ ಶೈಲಿ ಭಾಷಣಕ್ಕೆ ಕೆಲವರಷ್ಟೇ ಹೆಸರು ವಾಸಿ. ಹಿರಿಯ ವಿದ್ವಾಂಸರಾದ ಹಾ.ಮಾ. ನಾಯಕರು, ರೈತ ಸಂಘದ ಸಂಸ್ಥಾಪಕರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಹಾಗೂ ಲೇಖಕರಾದ ಯು.ಆರ್. ಅನಂತಮೂರ್ತಿಯವರಿಗೆ ಇಂತಹ ಅಪೂರ್ವವಾದ ಭಾಷಣ ಕಲೆ ಇತ್ತು. ರಾಜಕೀಯ ನೇತಾರ ಎಸ್.ಬಂಗಾರಪ್ಪನವರು ಈ ಮಾತುಗಾರಿಕೆಯನ್ನು ರೂಢಿಸಿಕೊಂಡಿದ್ದರು. ಪ್ರೊ.ಎಂಡಿಎನ್ ಒಡನಾಟದಿಂದಲೇ ರಾಜಕೀಯಕ್ಕೆ ಬಂದ ಸಿದ್ದರಾಮಯ್ಯನವರು ಈಗ ನಮ್ಮ ಜತೆಗಿರುವ ಇಂತಹ ಮಾತುಗಾರಿಕೆಯ ಕಲೆಯನ್ನು ದಕ್ಕಿಸಿಕೊಂಡ ವಾಗ್ಮಿ.

ಇಡೀ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರನ್ನು ಎದುರು ಹಾಕಿಕೊಂಡು ಏರಿದ ಧ್ವನಿಯಲ್ಲಿ ಮಾತನಾಡುತ್ತಿರುವವರು ಎಐಸಿಸಿ ನಾಯಕ ರಾಹುಲ್ ಗಾಂಧಿಯವರು ಮತ್ತು ಸಿದ್ದರಾಮಯ್ಯ ಮಾತ್ರ. ಬಿಜೆಪಿಯ ಮಾತೃಸಂಸ್ಥೆಯು ದೇಶಪ್ರೇಮದ ಹೆಸರಿನಲ್ಲಿ ಹರಡುತ್ತಿರುವ ಕೋಮುವಿಷ ಹೇಗೆ ದೇಶಕ್ಕೆ, ದೇಶಿಗರ ಭವಿಷ್ಯಕ್ಕೆ ಮಾರಕವಾದದು ಎಂಬುದನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಸರಳ, ಆಕರ್ಷಕ ಮಾತುಗಳಲ್ಲಿ ವಿವರಿಸುವುದು ಸಿದ್ದರಾಮಯ್ಯನವರಿಗೆ ಮಾತ್ರ ಸಾಧ್ಯವೇನೋ. ದೇಶ ಸಾಗುತ್ತಿರುವ ಆತಂಕಕಾರಿ ನಡೆಗಳನ್ನು ಯುವಕರಿಗೆ, ಮಧ್ಯಮ ವರ್ಗದವರಿಗೆ, ಹಿಂದುಳಿದವರು, ದಲಿತರಿಗೆ ಮುಟ್ಟಿಸುತ್ತಾ, ಸಮಾಜವನ್ನು ಸದಾ ಎಚ್ಚರದಲ್ಲಿರುವಂತೆ ಮಾಡುತ್ತಿರುವ ಸಿದ್ದರಾಮಯ್ಯ ಅವರು ಈ ಹೊತ್ತಿನಲ್ಲಿ ‘ಮನುಕುಲದ ಮಾತುಗಾರ’ನಂತೆ ಕಾಣುತ್ತಾರೆ.



ರಾಜಕೀಯ, ಆರ್ಥಿಕತೆ, ಸಾಮಾಜಿಕ ಶ್ರೇಣೀಕರಣ, ಜಾತಿ ವ್ಯವಸ್ಥೆ, ಆರೆಸ್ಸೆಸ್ ಪ್ರತಿಪಾದಿಸುವ ಹಿಟ್ಲರ್‌ನ ಸರ್ವಾಧಿಕಾರಿ ಧೋರಣೆಯ ಬಗ್ಗೆ ಸಿದ್ದರಾಮಯ್ಯನವರಿಗೆ ಇರುವಷ್ಟು ಸ್ಪಷ್ಟತೆ ಬೇರಾರಿಗೂ ಇಲ್ಲ. ಈ ರೀತಿಯ ಮಾತುಗಳನ್ನಾಡುತ್ತಿರುವ ತಮ್ಮ ಮೇಲೆ ಎಂತಹವರೇ ತಿರುಗಿಬಿದ್ದರೂ, ಸ್ವಪಕ್ಷದವರೇ ಕಿಡಿನುಡಿಯನ್ನಾಡುತ್ತಿದ್ದರೂ ಸಿದ್ದರಾಮಯ್ಯ ಹಿಂದೇಟು ಹಾಕಿದವರಲ್ಲ. ಅವರ ನರನಾಡಿಯಲ್ಲೂ ಜನಪರವಾದ ಚಿಂತನೆಗಳು ಹಾಸುಹೊಕ್ಕಾಗಿರುವುದೇ ಇದಕ್ಕೆ ಕಾರಣ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಎದುರು ಹಾಕಿಕೊಂಡು ರಾಜಕಾರಣ ಮಾಡುವುದು, ಅದನ್ನು ದೀರ್ಘಕಾಲ ಮುಂದುವರಿಸುವುದು ಸಾಮಾನ್ಯರಿಗೆ ಸಾಧ್ಯವಾಗುವುದಲ್ಲ. ಅಧಿಕಾರಲ್ಲಿದ್ದಾಗಲೂ ಇಲ್ಲದಿದ್ದಾಗಲೂ ಅವರದ್ದು ಒಂದೇ ಬಗೆ. ನಾಡಿನ ಬಗೆಗೆ, ನಾಡಿಗರ ಬಗೆ, ದೇಶದ ಬಗೆಗೆ, ದೇಶಿಗರ ಬಗೆಗೆ ಅವರಿಗಿರುವ ಕಳಕಳಿಯ ದ್ಯೋತಕ. ಹೀಗೆ ಸತ್ಯವನ್ನು ಹೇಳಬೇಕಾದರೆ ಅದರ ಪಾಲನೆಯನ್ನು ಮಾಡಬೇಕು; ಜತೆಗೆ ಆತ್ಮಶುದ್ಧಿ ಹಾಗೂ ಪ್ರಾಮಾಣಿಕತೆ ಇರಬೇಕು. ಅದನ್ನು ಕಾಪಿಟ್ಟುಕೊಂಡಿರುವುದರಿಂದಲೇ ಸಿದ್ದರಾಮಯ್ಯ ಹೀಗೆ ಸತ್ಯವನ್ನು ನುಡಿಯಬಲ್ಲರು; ನುಡಿಸಬಲ್ಲರು.

ಹಗೆಯಿಲ್ಲದ ವ್ಯಕ್ತಿತ್ವ

ವಿಧಾನಸಭೆಯಲ್ಲಿ ಅವರು ವಿರೋಧ ಪಕ್ಷದಲ್ಲಿರಲಿ, ಆಡಳಿತ ಪಕ್ಷದಲ್ಲಿರಲಿ ಮಾತಿಗೆ ನಿಂತರೆ ಸದನ ಸ್ತಬ್ಧ. ಅವರ ಮಾತನ್ನು ಕಿವಿಗೊಟ್ಟು ಕೇಳಲು, ಅದನ್ನು ಆನಂದಿಸಲು ಇಡೀ ಸದನವೇ ತುದಿಗಾಲಿನಲ್ಲಿ ಕಾದು ಕುಳಿತಿರುತ್ತದೆ. ಸಿ.ಟಿ.ರವಿ, ವಿ. ಸುನಿಲ್ ಕುಮಾರ್ ಅಂತಹವರು ಮಧ್ಯೆ ಎದ್ದು ನಿಂತರೂ ಸಿದ್ದರಾಮಯ್ಯ ಗದರುವುದಿಲ್ಲ. ‘ಏಯ್ ರವಿ, ನೀನು ಏನು ಹೇಳುತ್ತೀಯಾ ಎಂದು ಗೊತ್ತಿದೆ. ನಿನಗೆ ಮುಂದೆ ಭವಿಷ್ಯವಿದೆ; ಕುತ್ಕೋ’ ಎಂದು ಹಿತವಾಗಿ ಹೇಳಿ ತಮ್ಮ ಮಾತನ್ನು ಮುಂದುವರಿಸುವ ಛಾತಿ ಅವರದ್ದು. ಎದುರಿಗೆ ಕೆ.ಎಸ್. ಈಶ್ವರಪ್ಪ ಮಾತಿಗೆ ನಿಂತರೆ ಅವರ ಸ್ಥೈರಣೆ ತಪ್ಪುತ್ತದೆ. ಆದರೆ, ಅಲ್ಲಿಯೂ ಕೂಡ ಘನತೆ ಮೀರಿದ ಮಾತುಗಳು ಹೊರಬೀಳುವುದಿಲ್ಲ. ರಾಜಕೀಯವಾಗಿ ಅವರು ಟೀಕಿಸುವ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್ ಹೀಗೆ ಯಾರೊಬ್ಬರ ಬಗ್ಗೆಯೂ ಅವರು ಕಹಿ ಮಾತುಗಳನ್ನು ಆಡಿದವರಲ್ಲ. ರಾಜಕೀಯ ನೆಲೆಯೊಳಗೆ, ಅಧಿಕಾರದ ಲೋಪಗಳನ್ನು, ರಾಜಕೀಯ ನಿಲುವುಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ಟೀಕಿಸುವುದಕ್ಕಷ್ಟೇ ಅವರು ಸೀಮಿತ. ಏಕೆಂದರೆ ಅವರೊಳಗೆ ಹಗೆಯಲ್ಲ; ಸತ್ಯ ನುಡಿಯುವ ಹಂಬಲವಷ್ಟೇ. ಹೀಗಾಗಿಯೇ, ಸಿದ್ದರಾಮಯ್ಯನವರನ್ನು ರಾಜಕೀಯವಾಗಿ ಟೀಕಿಸುವವರು ಅವರ ವ್ಯಕ್ತಿತ್ವವನ್ನು ಮೆಚ್ಚುವುದುಂಟು. ಇದು, ಸಿದ್ದರಾಮಯ್ಯನವರ ವ್ಯಕ್ತಿತ್ವಕ್ಕೆ ಸಂದ ಗೌರವ. ❖



‘ಹುಂಡಿ’ಯಿಂದ ಸಿಎಂ ಬಂಡಿವರೆಗೆ



ಮುಖ್ಯಾಂಶಗಳು

- ಸಿದ್ದರಾಮಯ್ಯ ಜನನ: ಆಗಸ್ಟ್ **12, 1948**
- ಜನನ ಸ್ಥಳ: ವರುಣಾ ಹೋಬಳಿಯ ಸಿದ್ದರಾಮನ ಹುಂಡಿ
- ರಾಜಕೀಯಕ್ಕೆ ಪ್ರವೇಶ : **1978**
- ವಿಧಾನಸಭೆಗೆ ಮೊದಲ ಬಾರಿ ಪ್ರವೇಶ: **1983**
- ಬಜೆಟ್ ಮಂಡನೆ: **13**
- ಉಪಮುಖ್ಯಮಂತ್ರಿ: **1996**
- ಉಪಮುಖ್ಯಮಂತ್ರಿ: **2004**
- ವಿರೋಧ ಪಕ್ಷದ ನಾಯಕ: **2009**
- ಮುಖ್ಯಮಂತ್ರಿ: **2013**
- ವಿರೋಧಪಕ್ಷದ ನಾಯಕ: **2019**



ಮೈಸೂರು ಜಿಲ್ಲೆಯ ಸಣ್ಣ ಹಳ್ಳಿ ಸಿದ್ದರಾಮನ ಹುಂಡಿಯಿಂದ ವಿಧಾನಸೌಧದ ಶಕ್ತಿಕೇಂದ್ರದ ಮೂರನೇ ಮಹಡಿಯವರೆಗೆ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಸಾಗಿ ಬಂದ ಪರಿ ಅನನ್ಯವಾದುದು. ಅವರ ಜೀವನಗಾಥೆ ಎಂದರೆ ಸ್ವಂತ ಪರಿಶ್ರಮದಿಂದ ಯಶಸ್ಸಿನ ಎತ್ತರಕ್ಕೆ ಏರಿದ ಈ ನಾಡಿನ ಸಾಮಾನ್ಯ ಮನುಷ್ಯರ ಬದುಕಿನ ಕಥೆ. ಹುಟ್ಟು ಹೋರಾಟಗಾರರಾಗಿರುವ ಅವರು ಸಾಗಿ ಬಂದ ಹಾದಿ, ಅವರ ಸಾಧನೆ ಅಸಂಖ್ಯ ಜನರಿಗೆ ಸ್ಫೂರ್ತಿ ತುಂಬುವಂತಹುದು.

ಸಿದ್ದರಾಮಯ್ಯ ಅವರದ್ದು ಸಾಮಾನ್ಯ ರೈತ ಕುಟುಂಬ. ಹಳ್ಳಿಗಾಡಿನ ಬದುಕಿನ ಎಲ್ಲ ಅಡೆತಡೆಗಳನ್ನು ಸವಾಲಾಗಿ ಸ್ವೀಕರಿಸಿ ಮೆಟ್ಟಿನಿಂತು ಸಿದ್ದರಾಮಯ್ಯ ಸಾಧನೆಯ ಶಿಖರ ಏರಿದರು.

ಅಂದಿನ ಕಾಲದಲ್ಲಿ ಎಸ್ಎಸ್ಎಲ್‌ಸಿ ಪಾಸು ಮಾಡುವುದೇ ಕಷ್ಟವಾಗಿತ್ತು. ಅಂತಹ ಪರಿಸ್ಥಿತಿಯಲ್ಲೂ ಸಿದ್ದರಾಮಯ್ಯ ಅವರು ಛಲ ಬಿಡದೆ ಪದವಿ ಪಡೆದರು. ಅವರ ಕುಟುಂಬದಲ್ಲಿ ಪದವಿ ಶಿಕ್ಷಣ ಪಡೆದ ಮೊದಲಿಗರು ಸಿದ್ದರಾಮಯ್ಯನವರು. ಶಾಲಾ– ಕಾಲೇಜು ದಿನಗಳಲ್ಲೇ ಉತ್ತಮ ಭಾಷಣಕಾರರಾಗಿ ಹೊರಹೊಮ್ಮುವ ಮೂಲಕ ಸಿದ್ದರಾಮಯ್ಯ ಅವರು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಅವರು ಬಾಲ್ಯದ ದಿನಗಳನ್ನು ಕಳೆದದ್ದು ಸ್ವಗ್ರಾಮ ಸಿದ್ದರಾಮನ ಹುಂಡಿಯಲ್ಲೇ. ಮನೆಯಲ್ಲಿನ ಸಂಕಷ್ಟದ ಪರಿಸ್ಥಿತಿಯ ಕಾರಣದಿಂದಾಗಿ ಆರಂಭದ ದಿನಗಳಲ್ಲಿ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ನಿಲ್ಲಿಸಬೇಕಾದ ಪರಿಸ್ಥಿತಿ ಬಂದಿತ್ತು. ಶಾಲೆ ಬಿಟ್ಟು ದನ ಮೇಯಿಸುವ ಕಾಯಕದಲ್ಲಿ ತೊಡಗಿದರು. ಆದರೆ, ಬಾಲಕ ಸಿದ್ದರಾಮಯ್ಯ ಅವರಲ್ಲಿನ ಪ್ರತಿಭೆಯನ್ನು ಗಮನಿಸಿದ ಗ್ರಾಮದ ಶಾಲೆಯ ಶಿಕ್ಷಕರು ನೇರವಾಗಿ 4ನೇ ತರಗತಿಗೆ ಪ್ರವೇಶ ಕೊಟ್ಟರು. ಬಾಲಕ ಆಗಿದ್ದಾಗ ತಾವು ದನ ಮೇಯಿಸಲು ಹೋಗುತ್ತಿದ್ದ ಸಂದರ್ಭವನ್ನು ಸಿದ್ದರಾಮಯ್ಯ ಅವರು ಹತ್ತಾರು ಬಾರಿ ನೆನಪು ಮಾಡಿಕೊಂಡಿದ್ದುಂಟು.

ಪ್ರಾಥಮಿಕ ಶಿಕ್ಷಣದ ಬಳಿಕ ಸಿದ್ದರಾಮಯ್ಯ ಅವರು ಮುಖ ಮಾಡಿದ್ದು ಮೈಸೂರಿಗೆ. ಕಾಲೇಜು ಶಿಕ್ಷಣಕ್ಕಾಗಿ ಯುವರಾಜ ಕಾಲೇಜಿನಲ್ಲಿ ಪ್ರವೇಶ ಪಡೆದ ಸಿದ್ದರಾಮಯ್ಯ ಅವರು ಅಲ್ಲಿಯೇ ಬಿಎಸ್ಸಿ ಪದವಿ ಪಡೆದರು. ‘ನಾನು ಡಾಕ್ಟರ್ ಆಗಬೇಕು ಎಂಬುದು ಅಪ್ಪನ ಯೋಚನೆಯಾಗಿತ್ತು’ ಎಂದು ಸಿದ್ದರಾಮಯ್ಯ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾರೆ. ಅಪ್ಪನ ಆಸೆಯ ಹೊರತಾಗಿಯೂ ಸಿದ್ದರಾಮಯ್ಯ ಶಾರದಾ ವಿಲಾಸ ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು. ನಂತರ ಕೆಲಕಾಲ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ಇದಾದ ನಂತರ ವಕೀಲ ವೃತ್ತಿ ಆರಂಭಿಸಿದರು. ಶೋಷಿತ ಸಮುದಾಯಗಳ ಪರ ಅವರ ಮನ ಸದಾ ಮಿಡಿಯುತ್ತಿತ್ತು. ಹೀಗಾಗಿ ಸಿದ್ದರಾಮಯ್ಯ ಅವರು ಸಮಾಜವಾದಿ ಚಿಂತಕ ರಾಮ ಮನೋಹರ ಲೋಹಿಯಾ ಅವರ ಪ್ರಭಾವಕ್ಕೆ ಒಳಗಾದರು.

ವಿದ್ಯಾರ್ಥಿ ಆಗಿದ್ದಾಗ ಮೈಸೂರಿನಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ಪಡೆದುಕೊಂಡಿದ್ದ ಸಿದ್ದರಾಮಯ್ಯ ಅವರು ಕಷ್ಟದ ದಿನಗಳನ್ನು ಎದುರಿಸಿದ ಕಾಲವದು. ಅಂದಿನ ಆ ಅನುಭವವೇ ಮುಖ್ಯಮಂತ್ರಿಯಾಗಿ ಬಡವರ ಪರವಾದ ಹಲವಾರು ಯೋಜನೆಗಳನ್ನು ಜಾರಿಗೆ ತರಲು ಸಹಕಾರಿ ಆಯಿತು. ‘ಬಡವರ ಕಷ್ಟ ಏನು ಎಂಬುದು ನನಗೆ ಗೊತ್ತು. ಅದನ್ನು ಸ್ವಂತ ಅನುಭವಿಸಿದವನು ನಾನು. ಆದ್ದರಿಂದಲೇ ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ ಮತ್ತಿತರ ಯೋಜನೆಗಳನ್ನು ಜಾರಿಗೆ ತಂದೆ’ ಎಂದು ಎಂದು ಸಿದ್ದರಾಮಯ್ಯ ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಪ್ರೊ.ಪಿ.ಎಂ ಚಿಕ್ಕಬೋರಯ್ಯ ಅವರ ಬಳಿ ವಕೀಲ ವೃತ್ತಿಯನ್ನು ಅಭ್ಯಾಸ ಮಾಡುತ್ತಿದ್ದ ಸಿದ್ದರಾಮಯ್ಯ ಅವರು ಕ್ರಮೇಣ ಸಾರ್ವಜನಿಕ ಜೀವನಕ್ಕೆ ತೆರೆದುಕೊಂಡರು. ನಾಯಕತ್ವದ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡರು. ಶೋಷಿತ ವರ್ಗಗಳ ಕಷ್ಟಕಾರ್ಪಣ್ಯಗಳಿಗಾಗಿ ಸದಾ ಮಿಡಿಯುತ್ತಿದ್ದ ಸಿದ್ದರಾಮಯ್ಯ ಅವರಲ್ಲಿ ಸಾಮಾಜಿಕ ನ್ಯಾಯದ ಆಶಯ ಸೈದ್ಧಾಂತಿಕವಾಗಿ ಸ್ಪಷ್ಟಗೊಳ್ಳಲು ಕಾರಣವಾದುದು ರಾಮಮನೋಹರ ಲೋಹಿಯಾ ಚಿಂತನೆ. ಇದಕ್ಕಾಗಿ ಅವರು ವಕೀಲ ವೃತ್ತಿಯನ್ನು ಬಿಟ್ಟು ರಾಜಕಾರಣಕ್ಕೆ ಧುಮುಕಿದರು.

■ ರಾಜಕಾರಣಕ್ಕೆ ಪ್ರವೇಶ

ಸಿದ್ದರಾಮಯ್ಯ ಅವರು ರಾಜಕೀಯದಲ್ಲಿ ಒಂದೊಂದೇ ಹೆಜ್ಜೆ ಇಡುತ್ತಾ ಮುಂದೆ ಸಾಗಿದರು. 1978ರಲ್ಲಿ ರಾಜಕಾರಣದಲ್ಲಿ ಪ್ರವೇಶ ಮಾಡಿದ ಸಿದ್ದರಾಮಯ್ಯ ಅವರು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾದರು. ಜೊತೆ ಜೊತೆಗೆ ರೈತ ಚಳವಳಿಯತ್ತ ಆಕರ್ಷಿತರಾದರು. ಹೀಗಾಗಿ ಅವರಿಗೆ ಪ್ರೊ.ಎಂ.ಡಿ. ನಂಜುಂಡ ಸ್ವಾಮಿ ಅವರ ಒಡನಾಟ ಲಭಿಸಿತು.

1980ರಲ್ಲಿ ಸಿದ್ದರಾಮಯ್ಯ ಅವರು ಮೊದಲಬಾರಿ ಮೈಸೂರು ಲೋಕಸಭೆ ಕ್ಷೇತ್ರದಿಂದ ಚುನಾವಣಾ ಅಖಾಡಕ್ಕೆ ಇಳಿದರು. ಆದರೆ, ಗೆಲುವು ಲಭಿಸಲಿಲ್ಲ. ಆದರೆ. ಹುಟ್ಟು ಛಲಗಾರ ಆ ಸೋಲಿನಿಂದ ಹಿಮ್ಮೆಟ್ಟಲಿಲ್ಲ. ಮೊದಲ ಸೋಲನ್ನೇ ಗೆಲುವಿನ ಸೋಪಾನ ಮಾಡಿಕೊಂಡ ಸಿದ್ದರಾಮಯ್ಯನವರು 1983ರ ವಿಧಾನಸಭೆ ಚುನಾವಣೆಯಲ್ಲಿ ಲೋಕದಳದ ಅಭ್ಯರ್ಥಿಯಾಗಿ ಚಾಮುಂಡೇಶ್ವರಿ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿದರು. ತಕ್ಕಡಿ ಗುರುತಿನೊಂದಿಗೆ ಕಣಕ್ಕಿಳಿದಿದ್ದ ಸಿದ್ದರಾಮಯ್ಯನವರು ಇಂದಿರಾ ಕಾಂಗ್ರೆಸ್‌ನ ಡಿ. ಜಯದೇವರಾಜ ಅರಸು ಅವರನ್ನು ಸೋಲಿಸಿ ಮೊದಲ ಬಾರಿ ವಿಧಾನಸಭೆಗೆ ಪ್ರವೇಶಿಸಿದರು.. ಇದರಲ್ಲಿ ಮೈಸೂರು ತಾಲ್ಲೂಕಿನ ಮುಖಂಡರಾಗಿದ್ದ ಕೆಂಪವೀರಯ್ಯ ಅವರ ಪಾತ್ರ ಪ್ರಮುಖವಾಗಿತ್ತು.



ಸಿದ್ದರಾಮಯ್ಯ ಅವರು ವಿಧಾನಸಭೆಗೆ ಪ್ರವೇಶ ಪಡೆದಾಗ ರಾಮಕೃಷ್ಣ ಹೆಗಡೆ ಅವರ ನೇತೃತ್ವದ ಸರ್ಕಾರ ಇತ್ತು. ಸರ್ಕಾರ ರಚನೆಗೆ ಹೆಗಡೆ ಅವರು ಪಕ್ಷೇತರರು ಹಾಗೂ ಬಿಜೆಪಿ ಸದಸ್ಯರ ಬೆಂಬಲ ಪಡೆದಿದ್ದರು. ಸಿದ್ದರಾಮಯ್ಯ ಅವರೂ ಸಹ ಸರ್ಕಾರಕ್ಕೆ ಬೆಂಬಲ ನೀಡಿದ್ದರು. ಹೀಗಾಗಿ ಅವರಿಗೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಸ್ಥಾನ ನೀಡಲಾಯಿತು.

■ ಮೊದಲ ಬಾರಿಗೆ ಸಚಿವ ಸ್ಥಾನ

1985ರಲ್ಲಿ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆದಾಗ ಸಿದ್ದರಾಮಯ್ಯ ಅವರು ಜನತಾಪಕ್ಷದಿಂದ ಸ್ಪರ್ಧಿಸಿ ಎರಡನೇ ಬಾರಿ ಚುನಾಯಿತರಾದರು. ಬಳಿಕ ಪಶು ಸಂಗೋಪನೆ, ರೇಷ್ಮೆ ಸಚಿವರಾದರು. ಎಸ್.ಆರ್ ಬೊಮ್ಮಾಯಿ ಅವರ ಮಂತ್ರಿಮಂಡಲದಲ್ಲಿ ಸಾರಿಗೆ ಸಚಿವರಾಗಿಯೂ ಕಾರ್ಯನಿರ್ವಹಿಸಿದರು. 1989ರಲ್ಲಿ ಜನತಾಪಕ್ಷ ಇಬ್ಭಾಗವಾಗಿ ಜನತಾದಳ ಮತ್ತು ಸಮಾಜವಾದಿ ಜನತಾಪಕ್ಷ ಅಸ್ತಿತ್ವಕ್ಕೆ ಬಂತು. ಸಿದ್ದರಾಮಯ್ಯ ಅವರು ಆಗ ಜನತಾದಳದೊಂದಿಗೆ ಗುರುತಿಸಿಕೊಂಡರು. ಆ ಪಕ್ಷದ ಅಭ್ಯರ್ಥಿಯಾಗಿ ವಿಧಾನಸಭೆ ಚುನಾವಣೆಯಲ್ಲಿ ಪರಾಭವ ಹೊಂದಿದರು. 1991ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋಲು ಕಂಡರು.

ಎದೆಗುಂದದ ಅವರು 1994ರ ವಿಧಾನಸಭೆ ಚುನಾವಣೆಯಲ್ಲಿ ಜನತಾದಳದ ಉಮೇದುದಾರರಾಗಿ ಸ್ಪರ್ಧಿಸಿ ಮೂರನೆ ಬಾರಿ ವಿಧಾನಸಭೆ ಪ್ರವೇಶಿಸಿದರು. ಎಚ್.ಡಿ. ದೇವೇಗೌಡರ ಸಚಿವ ಸಂಪುಟದಲ್ಲಿ ಹಣಕಾಸು ಮಂತ್ರಿಗಳಾದರು. ಅವರು ಮೊಟ್ಟ ಮೊದಲ ಬಾರಿಗೆ ಬಜೆಟ್ ಮಂಡಿಸಲು ಸಿದ್ಧತೆ ನಡೆಸುತ್ತಿದ್ದಾಗ ‘ಕುರಿ ಕಾಯವವನಿಗೇನು ಗೊತ್ತು ಹಣಕಾಸು?’ ಎಂದು ಹೀಯಾಳಿಸಿದ್ದುಂಟು. ಈ ಅಪಮಾನದಿಂದ ಅವರು ಕುಗ್ಗಲಿಲ್ಲ, ಬದಲಿಗೆ ಈ ಸವಾಲನ್ನು ಸ್ವೀಕರಿಸಿದರು. ಅದರ ಫಲವಾಗಿಯೇ ಮುಂದಿನ 13 ಬಜೆಟ್‌ಗಳನ್ನು ಮಂಡಿಸಿ ಆರ್ಥಿಕತಜ್ಞರಿಂದಲೂ ಸೈ ಎನಿಸಿಕೊಂಡರು. ದೇವೇಗೌಡರು 1996ರಲ್ಲಿ ಪ್ರಧಾನಿಯಾದಾಗ ಜೆ.ಎಚ್. ಪಟೇಲರ ಮಂತ್ರಿಮಂಡಲದಲ್ಲಿ ಸಿದ್ದರಾಮಯ್ಯ ಅವರು ಉಪ ಮುಖ್ಯಮಂತ್ರಿಗಳಾದರು.

ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೆ ಏರಿದರೂ ಸಿದ್ದರಾಮಯ್ಯನವರು ಆಂತರ್ಯದಲ್ಲಿ ಅದೇ ಸಿದ್ದರಾಮನಹುಂಡಿಯ ಸಿದ್ದರಾಮಯ್ಯನವರೇ ಆಗಿದ್ದಾರೆ. ವೀರಗಾಸೆ ಕುಣಿತ ಎಂದರೆ ಈಗಲೂ ಸಿದ್ದರಾಮಯ್ಯ ಅವರಿಗೆ ಬಲು ಇಷ್ಟ, ಗ್ರಾಮದಲ್ಲಿ ನಡೆಯುವ ಉತ್ಸವಕ್ಕೆ ಪ್ರತಿವರ್ಷ ಭೇಟಿ ನೀಡುವ ಶ್ರೀ ಸಿದ್ದರಾಮಯ್ಯ ಅವರು ಗ್ರಾಮಸ್ಥರೊಂದಿಗೆ ಸೇರಿ ಹೆಜ್ಜೆ ಹಾಕುತ್ತಾರೆ.



ಮೈಸೂರು ತಾಲ್ಲೂಕಿನ ಸ್ವಗ್ರಾಮ ಸಿದ್ದರಾಮನಹುಂಡಿಯ ಜಾತ್ರೆಯಲ್ಲಿ ಸಿದ್ದರಾಮಯ್ಯ ವೀರ ಕುಣಿತ

1999ರಲ್ಲಿ ಜನತಾದಳ ಮತ್ತೆ ಹೋಳಾಯಿತು. ಆಗ ಸಿದ್ದರಾಮಯ್ಯ ಅವರು ಜಾತ್ಯತೀತ ಜನತಾದಳದೊಂದಿಗೆ ಗುರುತಿಸಿಕೊಂಡರು. ಆದರೆ, ಆ ಪಕ್ಷದ ಅಭ್ಯರ್ಥಿಯಾಗಿ ವಿಧಾನಸಭೆ ಚುನಾವಣೆಯಲ್ಲಿ ಪರಾಭವ ಹೊಂದಿದರು. 2004ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಸಿದ್ದರಾಮಯ್ಯ ಅವರು ಕಾಂಗ್ರೆಸ್ - ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾದರು.

■ ಅಹಿಂದ ಚಳವಳಿ

ಬದಲಾದ ರಾಜಕೀಯ ಸಂದರ್ಭದಲ್ಲಿ ಅನಿವಾರ್ಯವಾಗಿ ಸಿದ್ದರಾಮಯ್ಯನವರು ಜೆಡಿಎಸ್ ಪಕ್ಷದಿಂದ ದೂರವಾಗಬೇಕಾಯಿತು. ಎರಡು ಬಾರಿ ಮನೆಹೊಸ್ತಿಲಿನ ವರೆಗೆ ಬಂದಿದ್ದ ಮುಖ್ಯಮಂತ್ರಿ ಸ್ಥಾನ ಕಾಣದ ಕೈಗಳ ಆಟದಿಂದಾಗಿ ತಪ್ಪಿಹೋದಾಗ ಬೇಸತ್ತ ಸಿದ್ದರಾಮಯ್ಯ ಅವರು ಜೆಡಿಎಸ್ ಪಕ್ಷವನ್ನೇ ತೊರೆಯಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. 2006ರಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಿದ್ದರಾಮಯ್ಯ ಅವರು ಜೆಡಿಎಸ್‌ನಿಂದ ಹೊರ ಬಂದರು. ಅಹಿಂದ ಚಳವಳಿ ಹುಟ್ಟು ಹಾಕಿದರು.

ಸಿದ್ದರಾಮಯ್ಯ ಅವರು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ 2006ರ ಜುಲೈ 22ರಂದು ಎಐಸಿಸಿ ಅಧ್ಯಕ್ಷೆ ಸೋನಿಯಾಗಾಂಧಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು. ಈ ಬೆಳವಣಿಗೆ ಸಿದ್ದರಾಮಯ್ಯ ಅವರ ರಾಜಕೀಯ ಜೀವನಕ್ಕೆ ಮತ್ತೊಂದು ತಿರುವು ನೀಡಿತು. ಬಳಿಕ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಮರುಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ರೋಚಕ ಗೆಲುವು ಸಾಧಿಸಿದರು.

2008ರಲ್ಲಿ ವಿಧಾನಸಭೆ ಕ್ಷೇತ್ರಗಳ ಮರುವಿಂಗಡಣೆ ಆಯಿತು. ಆಗ ವರುಣಾ ಕ್ಷೇತ್ರ ಹೊಸದಾಗಿ ರಚನೆ ಆಯಿತು. ಆ ಕ್ಷೇತ್ರದಿಂದ ಶ್ರೀ ಸಿದ್ದರಾಮಯ್ಯ ಅವರು ವಿಧಾನಸಭೆ ಪ್ರವೇಶಿಸಿದರು. ಬಳಿಕ ಅವರು ವಿಧಾನಸಭೆ ಪ್ರತಿಪಕ್ಷ ನಾಯಕರಾದರು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಬಳ್ಳಾರಿಯ ಗಣಿಧಣಿಗಳ ವಿರುದ್ಧ ರಣಕಹಳೆ ಮೊಳಗಿಸಿ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಪಾದಯಾತ್ರೆ ನಡೆಸಿ ರಾಜ್ಯ ರಾಜಕೀಯದಲ್ಲಿ ಹೊಸಸಂಚಲವನ್ನೇ ಉಂಟುಮಾಡಿದರು.

■ ಭರವಸೆ ಈಡೇರಿಸಿದ ಮಹಾನಾಯಕ

2013ರ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಗೆಲುವಿಗೆ ಮಾತ್ರ ಶ್ರಮಿಸದೆ ಇಡೀ ರಾಜ್ಯಸುತ್ತಿ ಕಾಂಗ್ರೆಸ್ ಪರ ಪ್ರಚಾರ ಮಾಡಿ ಪಕ್ಷದ ಭಾರೀ ಗೆಲುವಿಗೆ ಕಾರಣರಾದರು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿದ್ದರಾಮಯ್ಯ ಅವರು ಆಗಲೇ ‘ನುಡಿದಂತೆ ನಡೆಯಬೇಕು’ ಎಂಬ ಸಂಕಲ್ಪವನ್ನು ಮಾಡಿಬಿಟ್ಟಿದ್ದರು. ಚುನಾವಣಾ ಕಾಲದಲ್ಲಿ ಪಕ್ಷ ಪ್ರಕಟಿಸುವ ಪ್ರಣಾಳಿಕೆ ಕೇವಲ ಕಾಗದಗಳ ಕಂತೆಯಾಗಿ ಕಳೆದುಹೋಗಲು ಬಿಡಬಾರದು, ಅದು ಅಧಿಕಾರದ ದಿನಗಳಲ್ಲಿ ಸರ್ಕಾರಕ್ಕೆ ಮಾರ್ಗದರ್ಶಿಯಾಗಬೇಕು ಎಂದು ಅವರು ನಿರ್ಧರಿಸಿದ್ದರು. ಅದರ ಫಲವಾಗಿಯೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರುಗಳಿಗೆಯಲ್ಲಿಯೇ ಅನ್ನಭಾಗ್ಯ ಸೇರಿದಂತೆ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಿದರು.

ಕಾಂಗ್ರೆಸ್ ಪಕ್ಷ 2013ರ ಚುನಾವಣಾ ಪ್ರಣಾಳಿಕೆಯಲ್ಲಿ 165 ಭರವಸೆಗಳನ್ನು ನೀಡಿತ್ತು. ಸಿದ್ದರಾಮಯ್ಯ ಅವರು ಮೊದಲ ಬಜೆಟ್‌ನಲ್ಲೇ 60 ಭರವಸೆಗಳನ್ನು ಈಡೇರಿಸಿದರು. ಎರಡನೇ ಬಜೆಟ್‌ನಲ್ಲಿ 30 ಭರವಸೆಗಳನ್ನು ಈಡೇರಿಸಿದರು. ಐದು ವರ್ಷಗಳಲ್ಲಿ 156 ಭರವಸೆಗಳನ್ನು ಈಡೇರಿಸಿದರು. ಬಜೆಟ್‌ನಲ್ಲಿ ಘೋಷಿಸಿದ ಬಹುತೇಕ ಭರವಸೆಗಳನ್ನು ಈಡೇರಿಸಿದ ಮೊದಲ ಮುಖ್ಯಮಂತ್ರಿ ಎನ್ನಬಹುದು.

2018ರಲ್ಲಿ ಕಾಂಗ್ರೆಸ್– ಜೆಡಿಎಸ್ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂತು. ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಬಿಜೆಪಿಯ ಆಪರೇಷನ್ ಕಮಲದಿಂದಾಗಿ ಆ ಸರ್ಕಾರ 14 ತಿಂಗಳಲ್ಲಿ ಪತನ ಹೊಂದಿತು. ಪ್ರಸ್ತುತ ವಿರೋಧ ಪಕ್ಷದ ನಾಯಕ ಹಾಗೂ ಶಾಸಕಾಂಗ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ❖



ನಾಡಿಗೆ ಗುರಿಕಾರ–ಪ್ರಗತಿಗೆ ಹರಿಕಾರ



ನಾಡಿನ ಬಗ್ಗೆ ದೂರದೃಷ್ಟಿಯುಳ್ಳ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಸ್ಪಷ್ಟ ಗುರಿಯೊಂದಿಗೆ ಪ್ರಗತಿದಾಯಕ ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುವ ಕೈಗಾರಿಕೆ, ಮೂಲಸೌಕರ್ಯ, ನೀರಾವರಿ, ಇಂಧನ ಕ್ಷೇತ್ರಗಳಿಗೆ ಸಿದ್ದರಾಮಯ್ಯ ಆದ್ಯತೆ ನೀಡಿದ್ದರು. ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಈ ಕ್ಷೇತ್ರಗಳಿಗೆ ₹140 ಸಾವಿರ ಕೋಟಿಗೂ ಅಧಿಕ ಹಣವನ್ನು ಒದಗಿಸಿದ್ದರು. ಈ ಮೂಲಕ ಪ್ರಗತಿಗೆ ಹರಿಕಾರರು ಸಿದ್ದರಾಮಯ್ಯ.

ರಾಜ್ಯದ ಪ್ರಗತಿಗೆ ಮುಖ್ಯವಾದದ್ದು ನೀರಾವರಿ. ನಂತರ ಇಂಧನ, ಮೂಲಸೌಕರ್ಯ. ಇವುಗಳು ನಿರೀಕ್ಷಿತ ಮಟ್ಟದಲ್ಲಿದ್ದರೆ ಯಾವುದೇ ರೀತಿಯ ಕೈಗಾರಿಕೆಗಳ ಸ್ಥಾಪನೆ ಕಷ್ಟವಾಗದು ಎಂಬುದನ್ನು ಅರಿತಿದ್ದ ಸಿದ್ದರಾಮಯ್ಯ ಅವರು, ತಮ್ಮ ಅಧಿಕಾರಾವಧಿಯಲ್ಲಿ ಈ ಕ್ಷೇತ್ರಗಳಿಗೆ ಅತಿಹೆಚ್ಚಿನ ಮಹತ್ವ ನೀಡಿ ಪ್ರಗತಿಯ ಪಥದಲ್ಲಿ ಸಾಗಿಸಿದ್ದರು. ಹೀಗಾಗಿಯೇ ರಾಷ್ಟ್ರ ಮಟ್ಟದಲ್ಲಿ ಬಂಡವಾಳವನ್ನು ಆಕರ್ಷಿಸುವಲ್ಲಿ ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿತ್ತು. ಇದನ್ನು ಕೇಂದ್ರ ಸರ್ಕಾರವೇ ತನ್ನ ವರದಿಯೇ ಇದನ್ನು ಸ್ಪಷ್ಟಪಡಿಸಿತ್ತು. ಅಷ್ಟೇ ಅಲ್ಲ, ಬಂಡವಾಳ ಹೂಡಿಕೆಯಲ್ಲೂ ರಾಜ್ಯ, ದೇಶದಲ್ಲಿ 11ನೇ ಸ್ಥಾನ ಪಡೆದಿತ್ತು. ಇದೆಲ್ಲದರ ಒಟ್ಟು ಫಲವೇ ಸುಮಾರು 13.5 ಲಕ್ಷ ಜನರಿಗೆ ಉದ್ಯೋಗಾವಕಾಶ ಸಿಕ್ಕಿದ್ದು.

ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್ ಯೋಜನೆಯಡಿ ತುಮಕೂರಿನ ವಸಂತ ನರಸಾಪುರದಲ್ಲಿ 9,629 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ತುಮಕೂರು ಕೈಗಾರಿಕಾ ನೋಡ್ ಅನ್ನು ಸ್ಥಾಪಿಸಿದ ಸಿದ್ದರಾಮಯ್ಯ ಸರ್ಕಾರ ಮೂಲಸೌಕರ್ಯಕ್ಕೂ ಹೆಚ್ಚಿನ ಒತ್ತು ನೀಡಿತ್ತು. ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ತುಮಕೂರಿನ ವಸಂತ ನರಸಾಪುರ ಕೈಗಾರಿಕಾ ಪ್ರದೇಶದ 540 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಮೆಷಿನ್ ಟೂಲ್ ಪಾರ್ಕ್ ಅನ್ನು ₹425 ಕೋಟಿ ವೆಚ್ಚದಲ್ಲಿ ಸ್ಥಾಪಿಸಿ ಕೈಗಾರಿಕೆಗಳಿಗೆ ಉತ್ತೇಜನ ನೀಡಿದೆ.

ರೈತರಿಗೆ ಅತ್ಯಗತ್ಯವಾದ ನೀರಾವರಿ ಕ್ಷೇತ್ರಕ್ಕೆ ಭರವಸೆ ಹಾಗೂ ನಿರೀಕ್ಷೆಗೂ ಮೀರಿ ಅನುದಾನ ನೀಡಿ ಅನ್ನದಾತರಿಗೆ ನೀರಿನ ಸಾಮರ್ಥ್ಯ ಕಲ್ಪಿಸಿದ ಕೀರ್ತಿ ಸಿದ್ದರಾಮಯ್ಯ ಅವರದ್ದು. ಪ್ರತಿ ವರ್ಷ ನೀರಾವರಿಗೆ ₹10 ಸಾವಿರ ಕೋಟಿ ನೀಡುತ್ತೇವೆ ಎಂಬ ಭರವಸೆಗಿಂತ ಹೆಚ್ಚಾಗಿ, ಐದು ವರ್ಷಗಳಲ್ಲಿ ₹58,393 ಕೋಟಿ ನೀರಾವರಿಗೆ ನೀಡಿದರು. ಸ್ಥಗಿತಗೊಂಡಿದ್ದ ಹಾಗೂ ಹಲವು ಹೊಸ ಯೋಜನೆಗಳು ಈ ಅನುದಾನದಿಂದ ಅನುಷ್ಠಾನವಾಗಲು ಸಾಧ್ಯವಾಯಿತು. ಕೃಷ್ಣ ಮೇಲ್ದಂಡೆ ಹಂತ 3ದ ಕಾಮಗಾರಿಗಳಲ್ಲಿ ಸುಮಾರು 1.46 ಲಕ್ಷ ಎಕರೆಗೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗಳಿಗೆ ₹3,716 ಕೋಟಿ ನೀಡಿ, ಆ ಕಾಮಗಾರಿಗಳ ಅನುಷ್ಠಾನವೂ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲೇ ಆಯಿತು. ಅಲ್ಲದೆ, ಎತ್ತಿನಹೊಳೆ ಯೋಜನೆಯಡಿ 527 ಕೆರೆ, ಭದ್ರಾ ಮೇಲ್ದಂಡೆ ಯೋಜನೆಯಡಿ 367 ಕೆರೆ ಸೇರಿ 2,672 ಕೆರೆಗಳನ್ನು ತುಂಬುಸಲು 14 ಯೋಜನೆಗಳಿಗೆ ₹8,891 ಕೋಟಿ ನೀಡಿ, ಜನರಿಗೆ ಕುಡಿಯುವ ನೀರು ಸೇರಿದಂತೆ ಕೃಷಿ, ಜಾನುವಾರುಗಳಿಗೆ ನೀರು ದೊರಕಿಸುವ ಜೊತೆಗೆ ಬೃಹತ್ ಮಟ್ಟದಲ್ಲಿ ಅಂತರ್ಜಲ ವೃದ್ಧಿಗೂ ನೆರವಾದವರು ಸಿದ್ದರಾಮಯ್ಯ. ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ಹರಿವನ್ನು ಸಂರಕ್ಷಿಸಲು ಮತ್ತು ಸಂಗ್ರಹಿಸಲು 'ಪಶ್ಚಿಮ ವಾಹಿನಿ' ಯೋಜನೆಯಡಿ ₹200 ಕೋಟಿಯಲ್ಲಿ 53 ಕಿಂಡಿ ಅಣೆಕಟ್ಟುಗಳ ನಿರ್ಮಾಣ ಮಾಡಲಾಗಿದೆ.

ಇಂಧನ ಕ್ಷೇತ್ರದ ಕಾಮಗಾರಿಗಳು ಹಾಗೂ ಸಾಮರ್ಥ್ಯ ವೃದ್ಧಿಗೆ ಹೆಚ್ಚಿನ ಆಸಕ್ತಿ ವಹಿಸಿದ್ದು ಸಿದ್ದರಾಮಯ್ಯ. ಇದರಿಂದ ಕೃಷಿಯಿಂದ ಹಿಡಿದು ಯಾವುದೇ ರೀತಿಯ ಕೈಗಾರಿಕೆಗೆ ಮೂಲ ಸೌಲಭ್ಯ ಸಿಕ್ಕಂತಾಗುತ್ತದೆ. ದೂರದ ಊರಿನಲ್ಲಿರುವ ಮನೆ ಎಣ್ಣೆ ದೀಪದಿಂದ ಸೋಲಾರ್ ದೀಪದಲ್ಲಿ ಬೆಳಗಿದಂತಾಗುತ್ತದೆ. ಪಂಪ್‌ಸೆಟ್‌ಗಳಿಂದ ನೀರು ಹರಿದು ಬೆಳೆ ಬಂಗಾರವಾಗುತ್ತದೆ. ಇದೆಲ್ಲವನ್ನು ಬಲ್ಲ ಸಿದ್ದರಾಮಯ್ಯ ಅವರು ಈ ನಿಟ್ಟನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಉಪಕೇಂದ್ರಗಳ ಸ್ಥಾಪನೆ ಜೊತೆಗೆ 3826 ಸರ್ಕ್ಯೂಟ್ ಕಿ.ಮೀ.ಗಳ ಪ್ರಸರಣ ಮಾರ್ಗ ರಚನೆಯಿಂದ ಪ್ರಸರಣ ಜಾಲದ ಸಾಮರ್ಥ್ಯ ಹೆಚ್ಚಿಸಿದರು. 82,229 ಕೊಳವೆ ಬಾವಿ, 47,293 ಕುಡಿಯುವ ನೀರಿನ ಘಟಕಗಳನ್ನು ಸಹ ವಿದ್ಯುದೀಕರಣಗೊಳಿಸಲಾಯಿತು. ನೀರಾವರಿ ಪಂಪ್ ಸೆಟ್, ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡಲು ₹35,100 ಕೋಟಿ ಸಹಾಯಧನ ಒದಗಿಸಲಾಯಿತು. ಸಕ್ರಮಗೊಳಿಸಿದ 3,14,463 ನೀರಾವರಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಕಲ್ಪಿಸಲಾಯಿತು. ನಿರಂತರ ಜ್ಯೋತಿ ಯೋಜನೆಯಡಿ 2,131 ವಿದ್ಯುತ್ ಮಾರ್ಗಗಳನ್ನು ಬೇರ್ಪಡಿಸುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಯಿತು. ಸೌರಶಕ್ತಿ ಯೋಜನೆಯಡಿ 1,161 ಸೌರ ಚಾಲಿತ ನೀರಾವರಿ ಪಂಪ್ ಸೆಟ್ ಗಳನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ. ಸೂರ್ಯ ರೈತ ಯೋಜನೆಯಡಿ ಪ್ರಾಯೋಗಿಕವಾಗಿ 97.89 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಹೊಸ ಬೆಳಕು ಯೋಜನೆಯಡಿ 1.84 ಕೋಟಿ ಎಲ್.ಇ.ಡಿ ಬಲ್ಬುಗಳನ್ನು, 2.39 ಲಕ್ಷ ಟ್ಯೂಬ್ ಲೈಟ್ ಗಳನ್ನು ಮತ್ತು 22 ಸಾವಿರ ಇಂಧನ ದಕ್ಷತೆಯುಳ್ಳ ಫ್ಯಾನ್‌ಗಳನ್ನು ಗ್ರಾಹಕರಿಗೆ ವಿತರಿಸಲಾಯಿತು.

ಇದೆಲ್ಲ ಸಿದ್ದರಾಮಯ್ಯ ಅವರ ಸಮಗ್ರ ಅಭಿವೃದ್ಧಿಯತ್ತ ದೂರದೃಷ್ಟಿಯ ಒಂದು ಭಾಗವಷ್ಟೇ. ಗುರಿ ಸ್ಪಷ್ಟವಾಗಿದ್ದರೆ ಪ್ರಗತಿಯ ದಾರಿ ಸುಲಭ ಎಂಬ ಮಾತನ್ನು ಅನುಷ್ಠಾನಗೊಳಿಸುವಲ್ಲಿ ಸಿದ್ದರಾಮಯ್ಯ ಅವರ ಯೋಜನೆಗಳು ಎಂದಿಗೂ ದಾರಿದೀಪ.

❖

ಭ್ರಷ್ಟಾಚಾರಕ್ಕೆ ಮೂಗುದಾರ

ಸಿದ್ದರಾಮಯ್ಯ ಅವರ 5 ವರ್ಷಗಳ ಅಧಿಕಾರ ಅವಧಿಯಲ್ಲಿ ಭ್ರಷ್ಟಾಚಾರಕ್ಕೆ ಮೂಗುದಾರ ಹಾಕಿದ್ದರು. ಆಡಳಿತದ ಒಳ–ಹೊರವುಗಳನ್ನು ಅರಿತಿರುವ ಸಿದ್ದರಾಮಯ್ಯ ಅವರಿಗೆ ಎಲ್ಲಿ, ಯಾವ ಸಂದರ್ಭದಲ್ಲಿ, ಹೇಗೆ, ಯಾವ ರೀತಿ ಹಿಡಿತ ಸಾಧಿಸಬೇಕು ಎಂಬುದು ಕರಗತ. ಹೀಗಾಗಿ, ಭ್ರಷ್ಟಾಚಾರ ಇವರ ಅಧಿಕಾರ ಅವಧಿಯಲ್ಲಿ ನೇಪಥ್ಯಕ್ಕೆ ಸರಿದಿತ್ತು. ಕಾಮಗಾರಿಗಳ ಅನುಷ್ಠಾನದಲ್ಲೇ ಅತಿಯಾಗಿ ಕಾಡುವ ಭ್ರಷ್ಟಾಚಾರವನ್ನು ಮೊದಲೇ ನಿಯಂತ್ರಿಸಿ, ಅಧಿಕಾರಿಗಳು ಹಾಗೂ ಹಣಕಾಸು ಇಲಾಖೆ ಮಟ್ಟದಲ್ಲಿ ಇದಕ್ಕೆ ಮೂಗುದಾರ ಹಾಕಿದ್ದರು. ಮುಖ್ಯಮಂತ್ರಿಯಾಗುವ ಮುನ್ನ 8 ಬಜೆಟ್‌ಗಳನ್ನು ನೀಡಿದ್ದ ಸಿದ್ದರಾಮಯ್ಯ ಅವರಿಗೆ ಹಣಕಾಸು ಇಲಾಖೆಯ ಪ್ರತಿಯೊಂದು ನಿಯಮಗಳೂ ಹಸ್ತರೇಖೆಯಂತಿವೆ. ಹೀಗಾಗಿ ಎಲ್ಲವನ್ನೂ ನಿಯಂತ್ರಿಸಿ, ರಾಜ್ಯದ ಪ್ರಗತಿಗಷ್ಟೇ ಲಗಾಮನ್ನು ಸಡಿಲಬಿಟ್ಟು ಭ್ರಷ್ಟಾಚಾರ ರಹಿತ ಸರ್ಕಾರ ಎಂಬ ಹೆಗ್ಗಳಿಕೆಗೆ ಸಿದ್ದರಾಮಯ್ಯ ಅವರ ಸರ್ಕಾರ ಪಾತ್ರವಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಮುಖ್ಯಾಂಶಗಳು

- ಕೇಂದ್ರ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆ ಪ್ರಕಾರ, 2016ರ ಜನವರಿಯಿಂದ ಡಿಸೆಂಬರ್ ಅವಧಿಯಲ್ಲಿ ₹1,54,173 ಕೋಟಿ ಬಂಡವಾಳ ಆಕರ್ಷಿಸಿ, ಕರ್ನಾಟಕವು ದೇಶದಲ್ಲೇ ಮೊದಲ ಸ್ಥಾನದಲ್ಲಿತ್ತು. ಬಂಡವಾಳ ಹೂಡಿಕೆ ಉದ್ದೇಶದಲ್ಲಿ ರಾಷ್ಟ್ರದಲ್ಲಿ ಕರ್ನಾಟಕವು 2013ರಲ್ಲಿ ಹನ್ನೊಂದನೇ ಸ್ಥಾನದಲ್ಲಿತ್ತು.
- ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ 5 ವರ್ಷಗಳ ಅವಧಿಯಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 9,349 ಮೆಗಾವಾಟ್ ವೃದ್ಧಿ. ಸೌರ ನೀತಿಯನ್ನು ರಾಜ್ಯದಲ್ಲಿ ಜಾರಿ. ವಿಶ್ವದಲ್ಲಿಯೇ ದೊಡ್ಡದೆನಿಸಿರುವ 2,000 ಮೆ.ವ್ಯಾ.ಗಳ 'ಸೌರ ವಿದ್ಯುತ್ ಪಾರ್ಕ್' ಪಾವಗಡದಲ್ಲಿ ನಿರ್ಮಾಣ. ವಿದ್ಯುತ್ ಸಂಪರ್ಕ ಕಡಿತಕ್ಕೊಳಗಾಗಿದ್ದ ಸುಮಾರು 20 ಲಕ್ಷ ಫಲಾನುಭವಿಗಳ ಬಾಕಿ ಶುಲ್ಕ ₹268 ಕೋಟಿ ಮನ್ನಾ. ಮನೆಗಳಲ್ಲಿ ಬೆಳಕಾದ 'ಭಾಗ್ಯಜ್ಯೋತಿ'.
- ₹2,404 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿ ಪ್ರಥಮ ಬಾರಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೋಲಾರ, ಬೆಂಗಳೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 253 ಕೆರೆಗಳಿಗೆ ತುಂಬಿಸಿ ದೇಶದ ಗಮನ ಸೆಳೆದ ಯೋಜನೆ. ಕೆರೆ ಸಂಜೀವಿನಿ ಯೋಜನೆಯಡಿ ₹105 ಕೋಟಿ ವೆಚ್ಚದಲ್ಲಿ 1428 ಕೆರೆಗಳ ಹೂಳೆತ್ತುವ ಕಾಮಗಾರಿ.
- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರ ಕಾಮಗಾರಿಗೆ ₹51,149 ಕೋಟಿಗೆ ಅನುಮೋದನೆ. ಈ ಯೋಜನೆಯಡಿ ಒಟ್ಟಾರೆ ಸುಮಾರು 1.46 ಲಕ್ಷ ಎಕರೆ ನೀರಾವರಿ ಸಾಮರ್ಥ್ಯ. ಯೋಜನೆಗಳಾದ ಮುಳವಾಡ, ಕೊಪ್ಪಳ, ಮಲ್ಲಾಬಾದ್, ರಾಂಪುರ, ಚಿಮ್ಮಲಗಿ, ಇಂಡಿ ಏತ ನೀರಾವರಿ. ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ.
- ಕಾವೇರಿ ಕೊಳ್ಳದಲ್ಲಿ 22 ಅಣೆಕಟ್ಟು ನಾಲೆಗಳಡಿ ಒಟ್ಟು 1522.46 ಕಿಮೀ. ಉದ್ದಕ್ಕೆ ಕಾಂಕ್ರೀಟ್ ಲೈನಿಂಗ್‌ಗೆ ₹1634 ಕೋಟಿ. ತುಂಗಭದ್ರಾ, ಭದ್ರಾ, ಮಲಪ್ರಭಾ, ಬೆಣ್ಣೆತೊರಾ, ಅಮರ್ಜಾ, ಕಾರಂಜಾ, ಕೆಳದಂಡೆ ಮತ್ತು ಮೇಲ್ದಂಡೆ ಮುಲ್ಲಾಮಾರಿ ಹಾಗೂ ಗಂಡೋರಿ ಯೋಜನೆಗಳ ನಾಲಾ ಆಧುನೀಕರಣ ಕಾಮಗಾರಿ



ಕರ್ನಾಟಕದ ಪ್ರಗತಿಗೆ ಭರಪೂರ ಅನುದಾನ

ಜಲಸಂಪನ್ಮೂಲ ಇಲಾಖೆ ₹64,523 ಕೋಟಿ				
2013-14	2014-15	2015-16	2016-17	2017-18
9,812	11,349	12,956	14,477	15,929
ಸಣ್ಣ ನೀರಾವರಿ ₹7,335 ಕೋಟಿ				
2013-14	2014-15	2015-16	2016-17	2017-18
1,146	1,347	1,253	1,490,2099	
ಇಂಧನ ಇಲಾಖೆ ₹61,609 ಕೋಟಿ				
2013-14	2014-15	2015-16	2016-17	2017-18
10,312	11,693	12,878	12,632	14,094
ವಾಣಿಜ್ಯ ಮತ್ತು ಕೈಗಾರಿಕೆ ₹7,035 ಕೋಟಿ				
2013-14	2014-15	2015-16	2016-17	2017-18
885	975	1,111	1,814	2250
ಮೂಲಸೌಲಭ್ಯ ಅಭಿವೃದ್ಧಿ ₹3,489 ಕೋಟಿ				
2013-14	2014-15	2015-16	2016-17	2017-18
649	637	633	780	790

'ಭಾಗ್ಯ'ಗಳ ಭಾಗ್ಯವಿಧಾತ!

ಹಸಿದವರಿಗೆ ಅನ್ನ ಕೊಟ್ಟ 'ಅನ್ನಭಾಗ್ಯ', ಶಾಲಾ ಮಕ್ಕಳಿಗೆ ಮಮಕಾರ ಕೊಟ್ಟ 'ಕ್ಷೀರ ಭಾಗ್ಯ', ಅವಿವಾಹಿತ, ವಿಚ್ಛೇದನ ಪಡೆದ ಮಹಿಳೆಯರಿಗೆ 'ಮನಸ್ವಿನಿ', ಲೈಂಗಿಕ ಅಲ್ಪಸಂಖ್ಯಾತರ ನೆರವಿಗೆ 'ಮೈತ್ರಿ', ಹಿಂದುಳಿದ ಪರಿಶಿಷ್ಟ ಜಾತಿ ಪಂಗಡದ ವಿದ್ಯಾರ್ಥಿಗಳಿಗೆ ದಾರಿದೀಪವಾದ 'ವಿದ್ಯಾ ಸಿರಿ', ಕೃಷಿಕರ ಮೊಗದಲ್ಲಿ ಮಂದಹಾಸ ಮೂಡಿಸಿದ ಕೃಷಿ ಭಾಗ್ಯ... ಹೀಗೆ ಸರಣಿ 'ಭಾಗ್ಯ'ಗಳ ಸರದಾರ ಸಿದ್ದರಾಮಯ್ಯ. ಆ ಕಾರಣಕ್ಕೆ ನಾಡಿನಾದ್ಯಂತ ಅವರು ಜನನಾಯಕ, ಜನಾನುರಾಗಿ.

2013ರಲ್ಲಿ ಜನಾದೇಶ ಪಡೆದು ಆಡಳಿತ ಚುಕ್ಕಾಣಿ ಹಿಡಿದ ಅವರ ಸರ್ಕಾರ ಐದು ವರ್ಷಗಳ ಅವಧಿಯಲ್ಲಿ ನೀಡಿದ್ದ 165 ಭರವಸೆಗಳ ಪೈಕಿ 158 ಭರವಸೆಗಳಿಗೆ ಕಾರ್ಯಕ್ರಮ ರೂಪಿಸಿದೆ. ಹೆಚ್ಚುವರಿಯಾಗಿ ಇಂದಿರಾ ಕ್ಯಾಂಟೀನ್, ಮಾತೃಪೂರ್ಣ, ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಭಾಗ್ಯ, ಪಶು ಭಾಗ್ಯ, ಕೃಷಿ ಇ– ಮಾರುಕಟ್ಟೆ, ಕೃಷಿ ಯಂತ್ರಧಾರೆ, ರೈತ ಬೆಳಕು, ಸರ್ಕಾರಿ ಟೆಂಡರ್ ಗುತ್ತಿಗೆಯಲ್ಲಿ ಎಸ್‌ಸಿ, ಎಸ್‌ಟಿ ಪಂಗಡಗಳಿಗೆ ಮೀಸಲಾತಿ, ಹರೀಶ್ ಸಾಂತ್ವನ ಹೀಗೆ ಹೆಚ್ಚುವರಿಯಾಗಿ ಹಲವು ಹೊಸ ಯೋಜನೆಗಳನ್ನು ಜಾರಿಗೆ ತಂದಿದೆ.

■ 'ಅನ್ನಭಾಗ್ಯ'

ಅಧಿಕಾರ ವಹಿಸಿಕೊಂಡ ದಿನವೇ ಸಿದ್ದರಾಮಯ್ಯ ಘೋಷಿಸಿದ ಯೋಜನೆ ಅನ್ನಭಾಗ್ಯ. ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಒಂದು ರೂಪಾಯಿಗೆ 1 ಕಿಲೋ ಅಕ್ಕಿ ನೀಡುವ ಯೋಜನೆಯಿದು. 2015ರ ಮೇ 1ರಿಂದ ಇದರಲ್ಲಿ ಬದಲಾವಣೆ ಮಾಡಿ ಪ್ರತಿ ಕುಟುಂಬ ಸದಸ್ಯನಿಗೆ 5 ಕಿಲೋ ಅಕ್ಕಿಯನ್ನು ಉಚಿತವಾಗಿ ನೀಡಲಾಯಿತು. ಇದರ ಜೊತೆ ರಿಯಾಯಿತಿ ದರದಲ್ಲಿ ಉಪ್ಪು ಮತ್ತು ತಾಳೆ ಎಣ್ಣೆಯನ್ನು ವಿತರಣೆ ಮಾಡಲಾಗುತ್ತಿದೆ.

■ ಮೊಬೈಲ್ ಒನ್

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ನಾಲ್ಕು ಸಾವಿರ ಸರ್ಕಾರಿ ಹಾಗೂ ಖಾಸಗಿ ಸೇವೆಗಳನ್ನು ಪಡೆಯಬಹುದಾದ ವಿವಿಧೋದ್ದೇಶ 'ಮೊಬೈಲ್ ಒನ್' (ಕರ್ನಾಟಕ ಒನ್) ಸೇವೆಯನ್ನು ದೇಶದಲ್ಲೇ ಮೊದಲ ಬಾರಿಗೆ ಸಿದ್ದರಾಮಯ್ಯ ಸರ್ಕಾರ ರಾಜ್ಯದಲ್ಲಿ ಪರಿಚಯಿಸಿತು. ರಾಷ್ಟ್ರಪತಿಯಾಗಿದ್ದ ಪ್ರಣಬ್ ಮುಖರ್ಜಿ ಅವರು ಈ ಸೇವೆಯನ್ನು ಲೋಕಾರ್ಪಣೆ ಮಾಡಿದರು. ಮೊಬೈಲ್ ಆಡಳಿತದತ್ತ ಗಮನಹರಿಸುವ ನಿಟ್ಟನಲ್ಲಿ ಕರ್ನಾಟಕ ಮಹತ್ವದ ಹೆಜ್ಜೆ ಇದಾಗಿದೆ. 30 ಲಕ್ಷ ಮಂದಿ ಇದನ್ನು ಬಳಕೆ ಮಾಡುತ್ತಿದ್ದರು.

■ ಶಾದಿಭಾಗ್ಯ



ಮುಸ್ಲಿಂ, ಕ್ರೈಸ್ತ, ಜೈನ ಸೇರಿದಂತೆ ಅಲ್ಪಸಂಖ್ಯಾತ ಸಮುದಾಯದ ಬಡ ಕುಟುಂಬಗಳ ಹೆಣ್ಣುಮಕ್ಕಳ ಮದುವೆಗೆ ₹ 50 ಸಾವಿರ ನೆರವು ನೀಡುವ ಯೋಜನೆ 'ಶಾದಿಭಾಗ್ಯ' (ಬಿದಾಯಿ). ಈ ಯೋಜನೆಯನ್ನು ಎಲ್ಲ ವರ್ಗದವರಿಗೂ ವಿಸ್ತರಣೆ ಮಾಡಬೇಕು ಎಂಬ ಬೇಡಿಕೆಯನ್ನು ಸರ್ಕಾರದ ಮುಂದಿಡಲಾಯಿತು. ಆರ್ಥಿಕ ಲಭ್ಯತೆ ನೋಡಿಕೊಂಡು ಎಲ್ಲ ವರ್ಗಗಳ ಬಡ ಮಹಿಳೆಯರಿಗೆ ಯೋಜನೆ ವಿಸ್ತರಣೆಗೆ ಮಾಡಲು ಪರಿಶೀಲನೆ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು.

■ ಕ್ಷೀರ ಭಾಗ್ಯ

ಶಾಲಾ ಮಕ್ಕಳಿಗಾಗಿ ಸಿದ್ದರಾಮಯ್ಯ ಕ್ಷೀರಭಾಗ್ಯ ಯೋಜನೆ ಜಾರಿಗೆ ತಂದರು. ಯೋಜನೆಯಡಿ 64 ಸಾವಿರ ಅಂಗನವಾಡಿ, 51 ಸಾವಿರ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಒಟ್ಟು 1 ಕೋಟಿಗೂ ಹೆಚ್ಚು ಮಕ್ಕಳಿಗೆ ವಾರದಲ್ಲಿ ಮೂರು ದಿನ ಹಾಲು ವಿತರಣೆ ಮಾಡಲಾಯಿತು.

■ ಮನಸ್ವಿನಿ, ಮೈತ್ರಿ

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗೆ ಆರ್ಥಿಕ ಭದ್ರತೆ ಒದಗಿಸಲು ಮನಸ್ವಿನಿ ಯೋಜನೆ ಜಾರಿ ಮಾಡಿದೆ. ಈ ಯೋಜನೆಯಡಿ ಅವಿವಾಹಿತ ಹಾಗೂ ವಿಚ್ಛೇದನ ಪಡೆದಿರುವ ಮಹಿಳೆಯರಿಗೆ ಪ್ರತಿ ತಿಂಗಳು ₹ 500 ಮಾಸಾಶನ ನೀಡಲಾಗುತ್ತದೆ. 65 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರು ರಾಷ್ಟ್ರೀಯ ವೃದ್ಧಾಪ್ಯ ಯೋಜನೆಯಡಿ ಪ್ರಯೋಜನ ಪಡೆಯಬಹುದು. ಲೈಂಗಿಕ ಅಲ್ಪಸಂಖ್ಯಾತರ ಬದುಕಿಗೆ ಆಸರೆ ಕಲ್ಪಿಸಲು ₹ 500 ಮಾಸಾಶನ ನೀಡುವ 'ಮೈತ್ರಿ' ಯೋಜನೆಯನ್ನು ಕೂಡಾ ಸಿದ್ದರಾಮಯ್ಯ ಸರ್ಕಾರ ಜಾರಿಗೆ ತಂದಿತು.

■ 'ನಮ್ಮ ಗ್ರಾಮ ನಮ್ಮ ರಸ್ತೆ'

ಗ್ರಾಮೀಣ ಭಾಗದ ರಸ್ತೆಗಳಿಗೆ ಕಾಯಕಲ್ಪ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯ ಮೊದಲ ಹಂತದಲ್ಲಿ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 20 ಕಿ.ಮೀ. ಯಂತೆ ಒಟ್ಟು 3,714 ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಮಾಡುವ ಕಾಮಗಾರಿಗೆ ಚಾಲನೆ ನೀಡಲಾಗಿತ್‌ಲು

■ ಬೈಕ್ ಆಂಬ್ಯುಲೆನ್ಸ್

ಸಂಚಾರ ದಟ್ಟಣೆ ಹೆಚ್ಚಿರುವ ಬೆಂಗಳೂರಿನಂಥ ನಗರದಲ್ಲಿ ಅಪಘಾತ ಸಂಭವಿಸಿದರೆ ತಕ್ಷಣ ಪ್ರಥಮ ಚಿಕಿತ್ಸೆ ನೀಡಲು ಸಿದ್ದರಾಮಯ್ಯ ಸರ್ಕಾರ ಬೈಕ್ ಅಂಬ್ಯುಲೆನ್ಸ್ ಪರಿಚಯಿಸಿದೆ. ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಕಲಬುರಗಿ, ಬೆಳಗಾವಿ, ಹುಬ್ಬಳ್ಳಿ-ಧಾರವಾಡದಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಆರಂಭಿಸಲಾಗಿತ್ತು.

■ ಸೂರ್ಯ ರೈತ

ರೈತರು ಸೋಲಾರ್ ವಿದ್ಯುತ್ ಉತ್ಪಾದನೆ ಮಾಡಿ, ಅದನ್ನು ಸರ್ಕಾರಕ್ಕೆ ಮಾರಾಟ ಮಾಡುವ 'ಸೂರ್ಯ ರೈತ' ಯೋಜನೆಯನ್ನು ಸರ್ಕಾರ ಜಾರಿಗೆ ತಂದಿತು. ರಾಜ್ಯದಲ್ಲಿ ಸೌರಶಕ್ತಿ ಬಳಕೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಸರ್ಕಾರ ಇದನ್ನು ಜಾರಿಗೊಳಿಸಿತು. ರೈತರು ಉತ್ಪಾದನೆಯಾಗುವ ವಿದ್ಯುತ್‌ನಲ್ಲಿ ತಮ್ಮ ಕೃಷಿ ಚಟುವಟಿಕೆಗೆ ಅಗತ್ಯವಾದಷ್ಟು ಬಳಕೆ ಮಾಡಿಕೊಂಡು ಹೆಚ್ಚುವರಿ ವಿದ್ಯುತ್ ಅನ್ನು ಸರ್ಕಾರಕ್ಕೆ ಮಾರಾಟ ಮಾಡಬಹುದಾಗಿದೆ.

■ ಕೃಷಿ ಭಾಗ್ಯ ಯೋಜನೆ

ಮಳೆಯಾಶ್ರಿತ ಪ್ರದೇಶದ ರೈತರ ಜೀವನೋಪಾಯ ಉತ್ತಮಪಡಿಸಲು 'ಕೃಷಿ ಭಾಗ್ಯ' ಯೋಜನೆಯನ್ನು ಜಾರಿಗೆ ತರಲಾಗಿದೆ. ಒಂದು ಕೋಟಿಗೂ ಹೆಚ್ಚು ರೈತರು ಸರ್ಕಾರದ ವಿವಿಧ ಯೋಜನೆಗಳಿಂದ ಪ್ರಯೋಜನ ಪಡೆದುಕೊಂಡಿದ್ದಾರೆ. ಈ ಯೋಜನೆಯಡಿ ರೈತರಿಗೆ 1.89 ಲಕ್ಷ ಕೃಷಿ ಹೊಂಡಗಳನ್ನು 3,546 ಪಾಲಿಹೌಸ್‌ಗಳನ್ನು ₹ 1877.47 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಯೋಜನೆಯನ್ನು ಎಲ್ಲ ತಾಲ್ಲೂಕುಗಳಿಗೆ ವಿಸ್ತರಿಸಲು ₹ 600 ಕೋಟಿ ನೀಡಿದೆ. 5.88 ಲಕ್ಷ ರೈತರ 6.27 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ಸೂಕ್ಷ್ಮ ನೀರಾವರಿ ಯೋಜನೆಗೆ ₹ 1, 258 ಕೋಟಿ ವೆಚ್ಚ ಮಾಡಲಾಗಿದೆ. ಸ್ವಾಭಾವಿಕ ಸಂಪನ್ಮೂಲ ಮಣ್ಣು ಮತ್ತು ನೀರಿನ ಸಂರಕ್ಷಣೆಯೊಂದಿಗೆ ಕೃಷಿ ಉತ್ಪಾದಕತೆ ಮತ್ತು ರೈತರು ಹಾಗೂ ಕೃಷಿ ಕಾರ್ಮಿಕರ ಆದಾಯ ಮಟ್ಟ ಹೆಚ್ಚಿಸುವುದು ಕೃಷಿ ಭಾಗ್ಯ ಯೋಜನೆಯ ಪ್ರಮುಖ ಉದ್ದೇಶ.

■ ವಿದ್ಯಾಸಿರಿ

ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸಲು ಹಾಸ್ಟೆಲ್ ಸೌಲಭ್ಯ ಇಲ್ಲದವರಿಗೆ ಸಿದ್ದರಾಮಯ್ಯ ಸರ್ಕಾರ ಆರಂಭಿಸಿ ಯೋಜನೆ– ವಿದ್ಯಾಸಿರಿ. ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ದೊರೆಯದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಊಟ ಮತ್ತು ವಸತಿಗಾಗಿ ವಾರ್ಷಿಕ ₹ 15,000 ನೆರವು ನೀಡಲಾಗುತ್ತದೆ. ಪ್ರತಿ ತಿಂಗಳಿಗೆ ₹ 1,500 ದಂತೆ ಹತ್ತು ತಿಂಗಳಿಗೆ ₹ 15,000 ಆರ್ಥಿಕ ನೆರವನ್ನು ಫಲಾನುಭವಿಗಳಿಗೆ ಸರ್ಕಾರದಿಂದ ನೀಡಲಾಗಿದೆ. ❖



ಜೆ.ಮಂಜುನಾಥ್ ಜಾಮೀನು: ತೀರ್ಪು ಕಾಯ್ದಿರಿಸಿದ ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಂದಾಯ ವ್ಯಾಜ್ಯವೊಂದರಲ್ಲಿ ಪಕ್ಷಪಾತಿ ತೀರ್ಪು ನೀಡುವ ಉದ್ದೇಶದಿಂದ ₹ 5 ಲಕ್ಷ ಲಂಚ ಪಡೆದಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ಜೆ. ಮಂಜುನಾಥ್ ಅವರ ಜಾಮೀನು ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಈ ಕುರಿತಂತೆ ಜೆ.ಮಂಜುನಾಥ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ತೀರ್ಪು ಕಾಯ್ದಿರಿಸಿರುವುದಾಗಿ ತಿಳಿಸಿತು.

ಪ್ರಕರಣವೇನು?: ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವವರಿಂದ ಮಂಜುನಾಥ್ ₹ 5 ಲಕ್ಷ ಲಂಚ ಪಡೆದಿದ್ದಾರೆ ಎಂಬ ಆರೋಪದಡಿ ಎಸಿಬಿ ದೂರು ದಾಖಲಿಸಿಕೊಂಡಿದೆ. ಪ್ರಕರಣದಲ್ಲಿ ಮಂಜುನಾಥ್ ಅವರನ್ನು ಮೂರನೇ ಆರೋಪಿಯನ್ನಾಗಿ ಮಾಡಲಾಗಿದೆ. ಸೇವೆಯಿಂದ ಅಮಾನತುಗೊಂಡಿರುವ ಮಂಜುನಾಥ್ ಅವರನ್ನು ಎಸಿಬಿ ಕಳೆದ ತಿಂಗಳ 4ರಂದು ಬಂಧಿಸಲಾಗಿತ್ತು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಹೈಕೋರ್ಟ್‌ನಲ್ಲಿ ಶಾಸಕ ಗೌರಿಶಂಕರ್ ಪರ ವಕೀಲರ ಪ್ರತಿಪಾದನೆ

'ಒನ್ ರುಪಿ ಚಾರಿಟಿ ಟ್ರಸ್ಟ್‌ನಿಂದ ವಿಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ 2018ರ ವಿಧಾನಸಭಾ ಚುನಾವಣೆಗೂ ಮುನ್ನ ಸ್ಥಳೀಯ ಹದಿನಾರು ಸಾವಿರ ಮಕ್ಕಳಿಗೆ ಗುಂಪು ಆರೋಗ್ಯ ವಿಮೆ ಮಾಡಿಸಿದ್ದು ಕಮ್ಮಗೊಂಡನಹಳ್ಳಿ ಮಾರುತಿ ಸೇವಾ ಸಮಿತಿ ಅಲ್ಲ. ಬದಲಿಗೆ ಇದರ ರೂವಾರಿ ಒನ್ ರುಪಿ ಚಾರಿಟಿ ಟ್ರಸ್ಟ್' ಎಂದು ಜೆಡಿಎಸ್ ಅಭ್ಯರ್ಥಿಯಾಗಿ ಗೆದ್ದ ಶಾಸಕ ಗೌರಿಶಂಕರ್ ಪರ ವಕೀಲರು ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.



'ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ಸಿ. ಗೌರಿಶಂಕರ್ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಪರಾಜಿತ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.

ವಿಚಾರಣೆ ವೇಳೆ ಪ್ರಕರಣದ ಪ್ರತಿವಾದಿಯೂ ಆದ ಡಿ.ಸಿ. ಗೌರಿಶಂಕರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಶೋಕ ಹಾರನಹಳ್ಳಿ, 'ತುಮಕೂರು ತಾಲ್ಲೂಕಿನ ಹಳ್ಳಿಗಳ ಆರರಿಂದ ಹದಿನಾರು ವರ್ಷದ ಒಳಗಿನ ಸುಮಾರು 16,386 ರಷ್ಟು ವಿದ್ಯಾರ್ಥಿಗಳಿಗೆ ಒನ್ ರುಪಿ ಚಾರಿಟಿ ಟ್ರಸ್ಟ್ ಆರೋಗ್ಯ ವಿಮೆ ವಿತರಿಸಿದೆ. ದಿ ನ್ಯೂ ಇನ್ಶೂರೆನ್ಸ್ ಇಂಡಿಯಾ ಕಂಪನಿಯು ಈ ಗುಂಪು ಆರೋಗ್ಯ ವಿಮೆ ಮಾಡಿಸಿದ್ದು, ಒಟ್ಟು ಪ್ರೀಮಿಯಂ ಮೊತ್ತ 6.57 ಲಕ್ಷ ಪಾವತಿ ಮಾಡಿದೆ' ಎಂದರು.

'ಕಮ್ಮಗೊಂಡನಹಳ್ಳಿ ಮಾರುತಿ ಸೇವಾ ಸಮಿತಿ ಟ್ರಸ್ಟ್ ಮತ್ತು ಒನ್ ರುಪಿ ಚಾರಿಟಿ ಟ್ರಸ್ಟ್ ಪ್ರತ್ಯೇಕವಾದವುಗಳು. ಅಷ್ಟಕ್ಕೂ ಕಮ್ಮಗೊಂಡನಹಳ್ಳಿ ಮಾರುತಿ ಸೇವಾ ಸಮಿತಿ ಟ್ರಸ್ಟ್ ಅಡಿಯಲ್ಲೇ ವಿಮೆ ಮಾಡಿಸಲಾಗಿದೆ ಎಂದರೂ, ಗೌರಿಶಂಕರ್ 2007ರಲ್ಲೇ ತಮ್ಮ ಕುಟುಂಬದಿಂದ ಕಾನೂನುಬದ್ಧವಾಗಿ ಪ್ರತ್ಯೇಕಗೊಂಡಿರುವ ಕಾರಣ ಅವರು ಕಮ್ಮಗೊಂಡನಹಳ್ಳಿ ಸೇವಾ ಟ್ರಸ್ಟ್ ಪದಾಧಿಕಾರಿ ಎಂದು ಪರಿಗಣಿಸಬೇಕಿಲ್ಲ' ಎಂದರು.

'ಅರ್ಜಿದಾರರು ಆರೋಪಿಸಿರುವಂತೆ ಹೆಲ್ತ್ ಇನ್ಶೂರೆನ್ಸ್ ಬಾಂಡ್‌ಗಳನ್ನು ನೀಡಿಲ್ಲ ಮತ್ತು ಇನ್ಶೂರೆನ್ಸ್ ಕಂಪನಿಯಲ್ಲಿ ಸಾಫ್ಟ್‌ವೇರ್ ಅಪ್‌ಡೇಟ್ ಆಗದೆ, ತಾಂತ್ರಿಕ ದೋಷಗಳ ಕಾರಣ ಉಂಟಾಗಿದ್ದರಿಂದ ಇ-ಕಾರ್ಡ್‌ಗಳನ್ನು ವಿತರಣೆ ಮಾಡಿಲ್ಲ' ಎಂದರು.

ಈ ವಾದಾಂಶಗಳಿಗೆ ಸಂಬಂಧಿಸಿದಂತೆ ಅಶೋಕ ಹಾರನಹಳ್ಳಿ ಅವರು, ದಿ ನ್ಯೂ ಇಂಡಿಯಾ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್‌ನ ಹಿರಿಯ ವಿಭಾಗೀಯ ಅಧಿಕಾರಿ ದೇವೇಂದ್ರ ಪ್ರಸಾದ್ ಮತ್ತು ಒನ್ ರುಪಿ ಚಾರಿಟಿ ಟ್ರಸ್ಟ್‌ನ ಟ್ರಸ್ಟಿಯಾದ ಕಿಶೋರ್ ವರದಾಚಾರ್ ತನಿಖಾಧಿಕಾರಿಗೆ ನೀಡಿರುವ ಹೇಳಿಕೆಗಳನ್ನು ನ್ಯಾಯಪೀಠಕ್ಕೆ ಅರುಹಿದರು. ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಲಾಗಿದೆ. ಗೌರಿಶಂಕರ್ ಪರ ಆರ್.ಹೇಮಂತ ರಾಜ್ ವಕಾಲತ್ತು ವಹಿಸಿದ್ದಾರೆ.

ಜೈಲಿನಲ್ಲಿ ಶ್ರೀಲಂಕಾ ಪ್ರಜೆಗಳು: ಕೇಂದ್ರಕ್ಕೆ ನೋಟಿಸ್

ಬೆಂಗಳೂರು: ಶ್ರೀಲಂಕಾದ 38 ಪ್ರಜೆಗಳನ್ನು ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಇರಿಸಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ್ ಶೆಟ್ಟಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕೇಂದ್ರ ಗೃಹ ಸಚಿವಾಲಯ, ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ರಾಜ್ಯ ಗೃಹ ಇಲಾಖೆ, ಮಂಗಳೂರು ದಕ್ಷಿಣ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಏನಿದು ಅರ್ಜಿ?: ಬೆಂಗಳೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಇತ್ತೀಚೆಗೆ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ ವೇಳೆ ಎಫ್‌ಐಆರ್ ದಾಖಲಿಸಿದ 25 ಮಂದಿ ಸೇರಿ 38 ಶ್ರೀಲಂಕಾ ಪ್ರಜೆಗಳನ್ನು ಅಕ್ರಮವಾಗಿ ಜೈಲಿನಲ್ಲಿಟ್ಟಿರುವ ಸಂಗತಿ ಬೆಳಕಿಗೆ ಬಂದಿತ್ತು.

'ಶ್ರೀಲಂಕಾದ ಈ ಪ್ರಜೆಗಳನ್ನು ಜೈಲಿನಲ್ಲಿಟ್ಟಿರುವುದು ಕಾನೂನುಬಾಹಿರ. ಇದು ವಿಶೇಷ ಕೋರ್ಟ್‌ನ ಆದೇಶ ಮತ್ತು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ. ತಕ್ಷಣವೇ ಇವರನ್ನೆಲ್ಲಾ ಜೈಲಿನಿಂದ ಬಂಧನ ಕೇಂದ್ರಕ್ಕೆ (ಡಿಟೆನ್ಶನ್ ಸೆಂಟರ್) ಸ್ಥಳಾಂತರಿಸಲು ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ. ಮಂಗಳೂರಿನ 'ಸೀಪೋರ್ಟ್ ಗೆಸ್ಟ್ ಹೌಸ್'ನಲ್ಲಿ 25 ಶ್ರೀಲಂಕಾ ಪ್ರಜೆಗಳು ಪಾಸ್‌ಪೋರ್ಟ್ ಹಾಗೂ ಸೂಕ್ತ ದಾಖಲೆಗಳಿಲ್ಲದೆ ಅನೇಕ ದಿನಗಳಿಂದ ವಾಸವಾಗಿದ್ದಾರೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಮಂಗಳೂರು ದಕ್ಷಿಣ ಪೊಲೀಸರು 2021ರ ಜೂನ್ 10ರಂದು ಇವರೆಲ್ಲರ ವಿರುದ್ಧ ಐಪಿಸಿಯ ವಿವಿಧ ಕಲಂಗಳು ಹಾಗೂ ಪಾಸ್‌ಪೋರ್ಟ್ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದರು.

ಕಟ್ಟುನಿಟ್ಟಿನ ಕ್ರಮಕ್ಕೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಫ್ರೀಡಂ ಪಾರ್ಕ್ (ಸ್ವಾತಂತ್ರ್ಯ ಉದ್ಯಾನ) ಹೊರತುಪಡಿಸಿ ನಗರದ ಯಾವುದೇ ಭಾಗದಲ್ಲೂ ರಾಜಕೀಯ ಅಥವಾ ರಾಜಕಿಯೇತರ ಸಂಘಟನೆಗಳು ಮೆರವಣಿಗೆ, ಪ್ರತಿಭಟನೆ, ಬಹಿರಂಗ ಸಭೆ ನಡೆಸಲು ಅನುಮತಿ ನೀಡದಂತೆ ನ್ಯಾಯಾಲಯ ಹೊರಡಿಸಿರುವ ಆದೇಶ ಮತ್ತು ಈ ಸಂಬಂಧದ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹೆಚ್ಚುವರಿ ವಕೀಲ ವಿಜಯಕುಮಾರ್ ಎ.ಪಾಟೀಲ್, 'ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ 27 ಎಫ್‌ಐಆರ್ ದಾಖಲಿಸಲಾಗಿದೆ' ಎಂದು ವಿವರಿಸಿ, ದಾಖಲೆ ಸಲ್ಲಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, '2021ರಲ್ಲಿ ಅನುಷ್ಠಾನಗೊಳಿಸಿರುವ ಪ್ರತಿಭಟನೆಗಳು, ಪ್ರದರ್ಶನಗಳು ಮತ್ತು ಪ್ರತಿಭಟನಾ ಮೆರವಣಿಗೆಗಳ (ಬೆಂಗಳೂರು ನಗರ) ಪರವಾನಗಿ ಮತ್ತು ನಿಯಂತ್ರಣ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಸುದ್ದಿ 2 ನಿಮಿಷ

ನಟ ಚಂದನ್ ಮೇಲೆ ಹೈದರಾಬಾದ್‌ನಲ್ಲಿ ಹಲ್ಲೆ

ಬೆಂಗಳೂರು: ಕಿರುತೆರೆ ನಟ, ಬಿಗ್‌ಬಾಸ್ ಸ್ಪರ್ಧಿ ಚಂದನ್ ಕುಮಾರ್ ಅವರ ಮೇಲೆ ಹೈದರಾಬಾದ್‌ನಲ್ಲಿ ಧಾರಾವಾಹಿ ಚಿತ್ರೀಕರಣದ ವೇಳೆ ಹಲ್ಲೆ ನಡೆದಿದೆ.

'ಶ್ರೀಮತಿ ಶ್ರೀನಿವಾಸ್' ಹೆಸರಿನ ತೆಲುಗು ಧಾರಾವಾಹಿ ಸೆಟ್‌ನಲ್ಲಿ ಭಾನುವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಈ ಘಟನೆಯ ವಿಡಿಯೊ ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಘಟನೆಗೆ ಸಂಬಂಧಿಸಿದಂತೆ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಚಂದನ್, ಘಟನೆಯ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿ ತೆಲುಗು ಧಾರಾವಾಹಿ ನಿರ್ದೇಶನ ವಿಭಾಗ ಸಂಘವು ಬಹಿರಂಗವಾಗಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.



'ಅಮ್ಮನಿಗೆ ಹೃದಯ ಸಂಬಂಧಿ ಕಾಯಿಲೆ ಇದ್ದ ಕಾರಣ ಆಸ್ಪತ್ರೆಗೆ ದಾಖಲಾಗಿದ್ದರು. ಅದೇ ಯೋಚನೆಯಲ್ಲಿ ಬೆಂಗಳೂರಿನಿಂದ ಹೈದರಾಬಾದ್ ತೆರಳಿ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದೆ. ತಾಯಿಯ ಆರೋಗ್ಯದ ಬಗ್ಗೆ ಚಿಂತೆ ಹಾಗೂ ಪ್ರಯಾಣದಿಂದ ಆಯಾಸಗೊಂಡಿದ್ದ ಕಾರಣ ವಿಶ್ರಾಂತಿ ಪಡೆಯಲು ತೆರಳಿದ್ದೆ. ಸಹಾಯಕ ನಿರ್ದೇಶಕ ಆಗಾಗ ಬಂದು ಕರೆಯುತ್ತಿದ್ದ. ವಿಶ್ರಾಂತಿ ಪಡೆದು ಬರುತ್ತೇನೆ ಎಂದು ಹೇಳಿದ್ದೆ. 'ಎಬ್ಬಿಸೋ ಅವನನ್ನು' ಎಂದು ನನ್ನ ಸಹಾಯಕರಿಗೆ ಗಟ್ಟಿಯಾಗಿ ಹೇಳಿದ. ಇದನ್ನು ಪ್ರಶ್ನಿಸಿ, ಸಲಿಗೆಯಿಂದ ನಾನು ಅವನನ್ನು ಕೊಂಚ ತಳ್ಳಿದೆ. ಇದನ್ನೇ ಹಲ್ಲೆ ಎಂದು ಆತ ನಿರ್ದೇಶಕರ ಬಳಿ ಹೋಗಿ ದೂರು ಹೇಳಿದ. ಇದರ ಬಳಿಕ ಗುಂಪು ಕಟ್ಟಿಕೊಂಡು ಬಂದು ನನ್ನನ್ನು ಎಲ್ಲರೂ ಸುತ್ತುವರಿದು ಹಲ್ಲೆ ಮಾಡಲು ಬಂದರು. ನಾನು ಇದನ್ನು ಮುಂದುವರಿಸಲು ಇಚ್ಛಿಸುವುದಿಲ್ಲ. ಯಾವ ದೂರೂ ನೀಡುವುದಿಲ್ಲ. ಆದರೆ ಅವರು ಕ್ಷಮೆ ಕೋರಬೇಕು' ಎಂದರು.

ಅಕ್ರಮ ಸಂಬಂಧದ ಅನುಮಾನ: ವ್ಯಕ್ತಿಯ ಕೊಲೆ

ಬೆಂಗಳೂರು: ಸುಬ್ರಹ್ಮಣ್ಯ ನಗರದ ಶ್ರೀನಿವಾಸ್ (32) ಹಾಗೂ ಸಂತೋಷ ಅಲಿಯಾಸ್ ಚುಂಟಿ ಮಧ್ಯೆ ನಡೆದ ಗಲಾಟೆಯಲ್ಲಿ ಮರದ ರೀಪಿನಿಂದ ಥಳಿತಕ್ಕೆ ಒಳಗಾದ ಶ್ರೀನಿವಾಸ್ ಮೃತಪಟ್ಟಿದ್ದಾರೆ. ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದಿವಾಕರ್ ಟೀ ಸ್ಟಾಲ್‌ನಲ್ಲಿ ಟೀ ಕುಡಿಯುತ್ತಿದ್ದ ವೇಳೆ ಶ್ರೀನಿವಾಸ್‌ಗೆ ಚುಂಟಿ ರೀಪಿನಿಂದ ಹೊಡೆದಿದ್ದ. ಬಳಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ' ಎಂದು ಸಾಕು ತಾಯಿ ಮಾರಿ ದೂರು ನೀಡಿದ್ದಾರೆ.

'ಶ್ರೀನಿವಾಸ್ ಅವರು ಚುಂಟಿ ಪತ್ನಿಯೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದರು. ಅಕ್ರಮ ಸಂಬಂಧದ ಅಪಾರ್ಥ ಕಲ್ಪಿಸಿಕೊಂಡು ಚುಂಟಿ ಗಲಾಟೆ ನಡೆಸಿ, ಆಗಾಗ್ಗೆ ಕೊಲೆಯ ಬೆದರಿಕೆ ಹಾಕುತ್ತಿದ್ದ. ಈ ಗಲಾಟೆಯು ಭಾನುವಾರ ವಿಕೋಪಕ್ಕೆ ತಿರುಗಿ ಕೊಲೆ ಮಾಡಲಾಗಿದೆ' ಎಂದು ದೂರು ನೀಡಲಾಗಿದೆ.



ಸನ್ಮಾನ ಬಿಬಿಎಂಪಿಯಿಂದ ವಯೋನಿವೃತ್ತಿ ಹೊಂದಿದ 23 ನೌಕರರನ್ನು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಿವೇಕಾನಂದ ಸಭಾಂಗಣದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಸನ್ಮಾನಿಸಿ ಬೀಳ್ಕೊಡಲಾಯಿತು

'ಭಾರತದ ಕಂಪನಿಯಿಂದ 'ಕಿಕ್ ಬ್ಯಾಕ್' ಪಡೆದಿದ್ದ ಪಾಕ್ ಮಾಜಿ ಪ್ರಧಾನಿ'

ಲಾಹೋರ್ (ಪಿಟಿಐ): 'ಪಾಕಿಸ್ತಾನದ ಮಾಜಿ ಪ್ರಧಾನಿ ಶಾಹಿದ್ ಖಾಕನ್ ಅಬ್ಬಾಸಿ ಅವರು ಭಾರತದ ಕಂಪನಿಯೊಂದರಿಂದ 'ಕಿಕ್ ಬ್ಯಾಕ್' ಪಡೆದಿದ್ದರು' ಎಂದು ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಮುಖಂಡ ಶಹಬಾಜ್ ಗಿಲ್ ಆರೋಪಿಸಿದ್ದಾರೆ.

'ಶಾಹಿದ್ ಅವರು ನವಾಜ್ ಷರೀಫ್ ಸಂಪುಟದಲ್ಲಿ ಪೆಟ್ರೋಲಿಯಂ ಸಚಿವರಾಗಿದ್ದರು. ಆಗ ಭಾರತದ ಕಂಪನಿಯೊಂದರಿಂದ ₹4.63 ಕೋಟಿ ಲಂಚ ಪಡೆದಿದ್ದರು ಎಂದು ಗಿಲ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ದೂರಿದ್ದಾರೆ' ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

'ಒಟ್ಟು ಮೂರು ಹಂತಗಳಲ್ಲಿ (2016ರ ಡಿಸೆಂಬರ್ ಹಾಗೂ 2017ರ ಜನವರಿ) ಅಬ್ಬಾಸಿ ಅವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಲಾಗಿದೆ. ಅದಕ್ಕೆ ಸಂಬಂಧಿಸಿದ ರಶೀದಿಗಳು ತಮ್ಮ ಬಳಿ ಇವೆ ಎಂದೂ ಗಿಲ್ ಹೇಳಿದ್ದಾರೆ. ಆದರೆ ಕಂಪನಿಯ ಹೆಸರನ್ನು ಅವರು ಬಹಿರಂಗಪಡಿಸಿಲ್ಲ' ಎಂದೂ ಪತ್ರಿಕೆ ವರದಿಯಲ್ಲಿ ಉಲ್ಲೇಖಿಸಿದೆ.

'ಗಿಲ್ ಅವರು ನನ್ನ ಮೇಲೆ ಸುಮ್ಮನೆ ಆರೋಪ ಮಾಡುವ ಬದಲು ಸೂಕ್ತ ದಾಖಲೆಗಳ ಸಹಿತ ದೂರು ನೀಡಲಿ' ಎಂದು ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಪಕ್ಷದ ಹಿರಿಯ ಉಪಾಧ್ಯಕ್ಷರೂ ಆಗಿರುವ ಅಬ್ಬಾಸಿ ಹೇಳಿದ್ದಾರೆ.

ಅಬ್ಬಾಸಿ ಅವರು 2017 ಆಗಸ್ಟ್‌ನಿಂದ 2018 ಮೇ ವರೆಗೆ ಪಾಕಿಸ್ತಾನದ ಪ್ರಧಾನಿಯಾಗಿದ್ದರು.



ಶೇಷಾದ್ರಿಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಫ್ಲೆಕ್ಸ್ ತಯಾರಿಕೆ ಘಟಕಗಳ ಮೇಲೆ ದಾಳಿ ನಡೆಸಿ, ಪ್ಲಾಸ್ಟಿಕ್ ಸಾಮಗ್ರಿಗಳನ್ನು ಬಿಬಿಎಂಪಿ ಅಧಿಕಾರಿಗಳು ವಶಪಡಿಸಿಕೊಂಡರು

ಫ್ಲೆಕ್ಸ್ ತಯಾರಿಕೆ ಘಟಕಗಳ ಮೇಲೆ ದಾಳಿ

ಬೆಂಗಳೂರು: ಬಿಬಿಎಂಪಿ ಪಶ್ಚಿಮ ವಲಯ ವ್ಯಾಪ್ತಿಯ ಗಾಂಧಿನಗರ ವಾರ್ಡ್ ವಾಪ್ತಿಯ ಶೇಷಾದ್ರಿಪುರ ಪೊಲೀಸ್ ಠಾಣೆ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಮೂರು ಫ್ಲೆಕ್ಸ್/ಬ್ಯಾನರ್ ತಯಾರಿಕಾ ಘಟಕಗಳ ಮೇಲೆ ದಾಳಿ ನಡೆಸಿ 12 ಪ್ಲಾಸ್ಟಿಕ್ ರೋಲ್‌ಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸಾರ್ವಜನಿಕರ ಸ್ಥಳಗಳಲ್ಲಿ ಫ್ಲೆಕ್ಸ್, ಬ್ಯಾನರ್ಸ್, ಪೋಸ್ಟರ್ಸ್ ಹಾಕುವುದನ್ನು ನಿಷೇಧಿಸಲಾಗಿದೆ. ಹೀಗಾಗಿ ಅವುಗಳನ್ನು ತೆರವುಗೊಳಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೂಲದಲ್ಲೇ ಅದನ್ನು ತಡೆಯುವ ಉದ್ದೇಶದಿಂದ ಪಶ್ಚಿಮ ವಲಯ ಆಯುಕ್ತ ಡಾ. ದೀಪಕ್, ಮಾಹಿತಿ ತಂತ್ರಜ್ಞಾನ ನಿರ್ದೇಶಕ ಸೂರ್ಯ ಸೇನ್ ನೇತೃತ್ವದಲ್ಲಿ ತಯಾರಿಕಾ ಘಟಕಗಳ ಮೇಲೆ ದಾಳಿ ನಡೆಸಲಾಗಿದೆ.

ಶೇಷಾದ್ರಿಪುರ ಪೊಲೀಸ್ ಠಾಣೆಯ ಸುಬೇದಾರ್ ಛತ್ರಂ ರಸ್ತೆಯಲ್ಲಿರುವ ಸಿ.ಎಂ.ರಾಮ್ ಆರ್ಟ್ಸ್‌ನಿಂದ 9 ರೋಲ್, ಮುರುಗನ್ ಆರ್ಟ್ಸ್‌ನ ಎರಡು ಯುನಿಟ್‌ಗಳಲ್ಲಿ ಮೂರು ರೋಲ್ ಸೇರಿ ಫ್ಲೆಕ್ಸ್, ಬ್ಯಾನರ್ ಘಟಕಗಳಿಂದ ರೋಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಮಹಜರ್ ಮಾಡಿಕೊಂಡು ಮಾರ್ಷಲ್‌ಗಳ ಗಸ್ತು ವಾಹನದಲ್ಲಿ ಜಂಟಿ ಆಯುಕ್ತರ ಕಚೇರಿಗೆ ತಂದು ನಿಯಂತ್ರಣ ಕೊಠಡಿಯ ಸಿಬ್ಬಂದಿಗೆ ಒಪ್ಪಿಸಲಾಗಿದೆ. ಇನ್ನು ಮುಂದೆ ಫ್ಲೆಕ್ಸ್, ಬ್ಯಾನರ್, ಪೋಸ್ಟರ್‌ಗಳನ್ನು ಮುದ್ರಿಸದಂತೆ ಘಟಕದ ಮಾಲೀಕರಿಗೆ ಖಡಕ್ ಸೂಚನೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪಶ್ಚಿಮ ವಲಯ ಜಂಟಿ ಆಯುಕ್ತ ಶ್ರೀನಿವಾಸ್, ಕಾರ್ಯಪಾಲಕ ಎಂಜಿನಿಯರ್, ಆರೋಗ್ಯ ವೈದ್ಯಾಧಿಕಾರಿ ಇದ್ದರು.

ಇ.ಡಿ ವಿಚಾರಣೆಗೆ ಹಾಜರಾದ ಕೆಜಿಎಫ್ ಬಾಬು ಪತ್ನಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಹಾಗೂ ಉದ್ಯಮಿ ಯೂಸುಫ್ ಶರೀಫ್ (ಕೆಜಿಎಫ್ ಬಾಬು) ಪತ್ನಿಯು ಜಾರಿ ನಿರ್ದೇಶನಾಲಯದ (ಇ.ಡಿ.) ವಿಚಾರಣೆಗೆ ಸೋಮವಾರ ಹಾಜರಾದರು. ಅವರನ್ನು ಸುಮಾರು ಏಳು ಗಂಟೆಗಳ ಕಾಲ ವಿಚಾರಣೆ ನಡೆಸಲಾಯಿತು.

ಬಾಬು ಆಸ್ತಿ ಮೂಲವನ್ನು ಪತ್ತೆ ಹಚ್ಚುವ ಉದ್ದೇಶದಿಂದ ವಿಚಾರಣೆಗೆ ಹಾಜರಾಗುವಂತೆ ಶಾಜಿಯಾ ತರನ್ನುಮ್ ಅವರಿಗೆ ಇ.ಡಿ. ಅಧಿಕಾರಿಗಳು ನೋಟಿಸ್ ನೀಡಿದ್ದರು. ಪತಿಯ ಜತೆಗೆ ಶಾಜಿಯಾ ವಿಚಾರಣೆಗೆ ಹಾಜರಾದರು. ಕೆ.ಜಿ.ಎಫ್ ಬಾಬು ಅವರನ್ನು ಜೂನ್ ತಿಂಗಳಲ್ಲಿ ಎರಡು ದಿನ ವಿಚಾರಣೆ ನಡೆಸಲಾಗಿತ್ತು.

ಹಣಕಾಸಿನ ವ್ಯವಹಾರದ ಕುರಿತು ಶರೀಫ್ ಅವರು ಎರಡು ಪುಟಗಳ ಕೈಬರಹದ ದಾಖಲೆಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸಿದ್ದರು. ಹಣಕಾಸಿನ ವ್ಯವಹಾರದ ದಾಖಲೆಗಳನ್ನು ಸಲ್ಲಿಸಬೇಕು ಹಾಗೂ ಅಗತ್ಯ ಬಿದ್ದರೆ ಮತ್ತೊಮ್ಮೆ ವಿಚಾರಣೆ ನಡೆಸಲು ಶೀಘ್ರದಲ್ಲೇ ನೋಟಿಸ್ ನೀಡಲಾಗುವುದು ಎಂಬುದಾಗಿ ಶರೀಫ್ ಅವರಿಗೆ ತಿಳಿಸಲಾಗಿದೆ ಎಂದು ಇ.ಡಿ. ಮೂಲಗಳು ತಿಳಿಸಿವೆ.

ಈ ಹಿಂದೆ ಕೆಜಿಎಫ್ ಬಾಬು ನೀಡಿದ ಹೇಳಿಕೆಗೂ ಪತ್ನಿ ನೀಡಿದ ಹೇಳಿಕೆಗೂ ತಾಳೆ ಆಗಲಿಲ್ಲ. ಸುಳ್ಳು ಮಾಹಿತಿ ನೀಡಿದರೆ ತಿಹಾರ್ ಜೈಲಿಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬುದಾಗಿ ಅಧಿಕಾರಿಗಳು ದಂಪತಿಗೆ ಎಚ್ಚರಿಸಿದರು ಎಂದು ಮೂಲಗಳು ಹೇಳಿವೆ.

ಕೆಜಿಎಫ್ ಬಾಬು ಹಾಗೂ ಕುಟುಂಬ ಸದಸ್ಯರ ಮನೆಗಳ ಮೇಲೆ ಇ.ಡಿ. ಅಧಿಕಾರಿಗಳು ಮೇ ತಿಂಗಳಲ್ಲಿ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ರಿಯಲ್ ಎಸ್ಟೇಟ್ ಉದ್ಯಮಿಯಾದ ಶರೀಫ್, 2021ರ ಡಿಸೆಂಬರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬೆಂಗಳೂರು ನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ₹1,744 ಕೋಟಿ ಆಸ್ತಿ ಹೊಂದಿದ್ದೇನೆ ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ತಿಳಿಸಿದ್ದರು.

ಸೌಂದರ್ಯ ಸೆಂಟ್ರಲ್ ಸ್ಕೂಲ್‌ಗೆ ಶೇ 100 ಫಲಿತಾಂಶ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸೌಂದರ್ಯ ಸೆಂಟ್ರಲ್ ಸ್ಕೂಲ್‌ನ 10ನೇ ತರಗತಿ ವಿದ್ಯಾರ್ಥಿಗಳು ಸಿಬಿಎಸ್‌ಇ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿದ್ದಾರೆ.

ವಿದ್ಯಾರ್ಥಿಗಳಾದ ತೃಪ್ತಿ ಆರ್. ಶೇ 97.4, ಡಿ.ಕೆ. ಹಿತಾ ಶೇ 97.4, ಆರ್. ನಿದ್ಯಾ ಶೇ. 96.2, ಪವನ್ ಆರ್. ಉಡುಪ ಶೇ 94.8, ಎಂ. ಸುಕೃತ ಶೇ. 94, ಸ್ನೇಹ ಶ್ರೀಕಾಂತ್ ಜೀವನ್ ಶೇ 94, ಸ್ವಾತಿ ಆ.ರ್ ಭಾರದ್ವಾಜ್ ಶೇ 93.8, ಮೋಹಿತ್ ಜೆ. ಕಾರ್ಕಿರ ಶೇ 93.4, ಎಚ್. ಗುರುಪ್ರೀತ್ ಶೇ 93.2, ಹರೀಶ್ ಶೇ 92.4, ಎಲ್. ಮಾನ್ವಿ ಶೇ 92.4, ಎಂ.ಅಕ್ಷಯ್ ಶೇ 91.8, ಆರ್. ನಿಹಾಲ್ ಶೇ 91.6, ವಸುಂದರ ಶೇ 91.6, ಕ. ಅರ್ಜುನ್ ಶೇ 91.2, ಟಿ.ಆರ್. ಹರ್ಷಿತ ಶೇ 90.6, ಪಾಲ್ಚಿನ್ ಬಿ. ಜೈನ್ 90.6 ಅಂಕಗಳಿಸಿದ್ದಾರೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.


ಹರ್ಷಿತ ಟಿ ಆರ್


ಗುರುಪ್ರೀತ್ ಎಚ್


ಪಾಲ್ಚಿನ್ ಬಿ ಜೈನ್


ನಿದ್ಯಾ ಆರ್


ಸುಕೃತ ಎಂ


ಸ್ವಾತಿ ಆರ್ ಭಾರದ್ವಾಜ್


ಹಿತಾ ಡಿಕೆ


ಪವನ್ ಆರ್ ಉಡುಪ


ಸ್ನೇಹ ಶ್ರೀಕಾಂತ್ ಜೀವನ್


ಮೋಹಿತ್ ಜೆ ಕಾರ್ಕಿರ


ತೃಪ್ತಿ ಆರ್.


ಮಾನ್ವಿ ಎಲ್


ನಿಹಾಲ್ ಆರ್


ಅರ್ಜುನ್ ಕೆ


ಹರೀಶ್


ಎಂ. ಅಕ್ಷಯ್


ವಸುಂದರ ಸಿವಿಎನ್‌ಆರ್

ಎಂ.ಬಿ.ಪಾಟೀಲ ಮನೆಯಲ್ಲಿ ಕಳವು: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಅವರ ನಿವಾಸದಲ್ಲಿ ನಡೆದಿದ್ದ ಕಳವು ಪ್ರಕರಣದ ಆರೋಪಿಯನ್ನು ಪೊಲೀಸರು ಒಡಿಶಾದಲ್ಲಿ ಬಂಧಿಸಿ, ನಗರಕ್ಕೆ ಕರೆತಂದಿದ್ದಾರೆ.

ಎಂ.ಬಿ.ಪಾಟೀಲ ಅವರ ಮನೆಯಲ್ಲಿ ಲಾಂಡ್ರಿ ಕೆಲಸ ಮಾಡುತ್ತಿದ್ದ ಜಯಂತ್ ದಾಸ್ ಬಂಧಿತ ಆರೋಪಿ.

ಆರೋಪಿಯನ್ನು ಐದು ದಿನಗಳ ಕಾಲ ವಶಕ್ಕೆ ಪಡೆದಿರುವ ಸದಾಶಿವನಗರದ ಪೊಲೀಸರು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ.


ಜಯಂತ್

'ಐದು ವರ್ಷಗಳಿಂದ ಶಾಸಕರ ಮನೆಯಲ್ಲಿ ಆರೋಪಿ ಕೆಲಸಕ್ಕಿದ್ದ. ಆತನ ಮೇಲೆಯೇ ಅನುಮಾನ ವ್ಯಕ್ತಪಡಿಸಿ ದೂರು ನೀಡಲಾಗಿತ್ತು. ಆರೋಪಿಯನ್ನು ಬಂಧಿಸಲಾಗಿದೆ. ಈ ಪ್ರಕರಣದಲ್ಲಿ ಇನ್ನೂ ಯಾರ್‍ಯಾರ ಕೈವಾಡವಿದೆ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಆರೋಪಿಯಿಂದ ₹ 70 ಸಾವಿರ ನಗದು, ₹ 50 ಸಾವಿರ ಮೌಲ್ಯದ ವಾಚ್, ₹ 10 ಸಾವಿರ ಮೌಲ್ಯದ ಮೊಬೈಲ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಒಂದೂವರೆ ತಿಂಗಳ ಹಿಂದೆ ಮನೆಯ ಮಲಗುವ ಕೋಣೆಯಲ್ಲಿದ್ದ ವಿವಿಧ ಕಂಪನಿಯ ಆರು ವಾಚ್‌ಗಳು, ನೋಕಿಯಾ ಮೊಬೈಲ್ ಹಾಗೂ ವಿದೇಶಿ ಕರೆನ್ಸಿ ಕಳವು ಮಾಡಲಾಗಿತ್ತು. ಮನೆಯಲ್ಲಿದ್ದ ಕೆಲಸಗಾರರನ್ನು ವಿಚಾರಿಸಿದ್ದೆವು. ದೂರು ನೀಡುವುದಾಗಿ ಹೇಳಿದಾಗ ಜಯಂತ್ ದಾಸ್ ಮರುದಿನದಿಂದ ಕೆಲಸಕ್ಕೇ ಬಂದಿಲ್ಲ' ಎಂದು ಮನೆಯಲ್ಲಿ ಅಡುಗೆ ಕೆಲಸಕ್ಕಿದ್ದ ಸಿದ್ದು ಎಂಬುವವರು ಜೂನ್ 30ರಂದು ದೂರು ನೀಡಿದ್ದರು.

ಬಜರಂಗ ದಳ ಮುಖಂಡನ ಮನೆಗೆ ನುಗ್ಗಿದವರ ಬಂಧನ

ಕಾಪು (ಪಡುಬಿದ್ರಿ): ಬಜರಂಗ ದಳದ ಕಾಪು ಪ್ರಖಂಡ ಸಂಚಾಲಕ ಸುಧೀರ್ ಸೋನು ಅವರ ಮನೆಗೆ ಅಕ್ರಮ ಪ್ರವೇಶ ಮಾಡಿದ ಆರೋಪದಡಿ ಶಿರ್ವ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಆಸಿಫ್ ಮತ್ತು ಸೊಹೈಬ್ ಬಂಧಿತರು. ಇಬ್ಬರನ್ನೂ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಹೇರೂರು ಕಲ್ಲುಗುಡ್ಡೆ ನಿವಾಸಿ ಸುಧೀರ್ ಅವರು ತಮ್ಮ ಮನೆಗೆ ಯುವಕರಿಬ್ಬರು ನುಗ್ಗಿದ್ದರು ಎಂದು ದೂರು ನೀಡಿದ್ದರು.

ಚಿತ್ರಾವಳಿ



ಬೆಂಗಳೂರಿನ ಎಸ್‌ಜೆ ಪಾಳ್ಯದ ಕ್ರಿಸ್ಟ್ ಶಾಲೆಯಲ್ಲಿ ಪರಿಸರ ಸಂರಕ್ಷಣೆ ಅಂಗವಾಗಿ ನಡೆದ ವಾಕಥಾನ್‌ನಲ್ಲಿ ಶಾಲೆಯ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಲೆ ಮತ್ತು ಸಾಂಸ್ಕೃತಿಕ ವೇದಿಕೆ ಉದ್ಘಾಟನಾ ಸಮಾರಂಭದಲ್ಲಿ ನೃತ್ಯ ಗುರು ವಿದ್ಯಾ ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು. ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್, ಎಚ್.ಎನ್. ಸುರೇಶ್, ಪ್ರವೀಣ್ ಗೋಡ್ಕಿಂಡಿ, ಅಶೋಕ್ ಹಾರನಹಳ್ಳಿ ಇದ್ದರು.

ಸಂಕ್ಷಿಪ್ತ ಸುದ್ದಿ

'ಡೇಟಿಂಗ್ ಆ್ಯಪ್' ಬಳಸಿ ಸುಲಿಗೆ

ಬೆಂಗಳೂರು: 'ಡೇಟಿಂಗ್ ಆ್ಯಪ್' ಬಳಸಿ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಶ್ರೀಮಂತ ವ್ಯಕ್ತಿಗಳ ಸುಲಿಗೆ ಮಾಡುತ್ತಿದ್ದ ಸನ್ಮಾನ್ ಖಾನ್, ಮೊಹಮ್ಮದ್ ಇಸ್ಮಾಯಿಲ್ ಹಾಗೂ ಸಮೀರ್ ಪಾಷಾ ಎಂಬ ಮೂವರು ಆರೋಪಿಗಳನ್ನು ಸದಾಶಿವನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಇತ್ತೀಚೆಗೆ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರನ್ನು ಆ್ಯಪ್ ಮೂಲಕ ಸಂಪರ್ಕಿಸಿದ್ದ ತಂಡವು ಕಾರಿನಲ್ಲಿ ಅರಮನೆ ಮೈದಾನಕ್ಕೆ ಕರೆದೊಯ್ದು ಲ್ಯಾಪ್‌ಟಾಪ್, ಹಣ ಹಾಗೂ ಚಿನ್ನಾಭರಣ ಸುಲಿಗೆ ಮಾಡಿ ಪರಾರಿಯಾಗಿತ್ತು.

ಎಂಜಿನಿಯರ್ ನೀಡಿದ್ದ ದೂರು ಹಾಗೂ ಸುಳಿವು ಆಧರಿಸಿ ತಂಡವನ್ನು ಪೊಲೀಸರು ಪತ್ತೆಹಚ್ಚಿದ್ದಾರೆ.

ದ್ವಿಚಕ್ರ ವಾಹನ ಸವಾರರ ದರೋಡೆಗೆ ಸಂಚು: ಐವರ ಬಂಧನ

ಬೆಂಗಳೂರು: ಮಾರಕಾಸ್ತ್ರ ತೋರಿಸಿ ದ್ವಿಚಕ್ರ ವಾಹನ ಸವಾರರ ಸುಲಿಗೆ ಮಾಡುತ್ತಿದ್ದ ಐವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಎ.ಎಂ.ನವಾಜ್, ಜಮೀರ್ ಷಾಷಾ, ಯಾಸೀನ್ ಖಾನ್, ಅಫ್ರೋಜ್ ಖಾನ್ ಹಾಗೂ ಅಮೀರ್ ಉದ್ದೀನ್ ಬಂಧಿತರು.

'ಸಂಪಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ರಾಚೇನಹಳ್ಳಿ ಮುಖ್ಯರಸ್ತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ ಒಂಟಿಯಾಗಿ ಬರುವ ಪಾದಚಾರಿಗಳು ಹಾಗೂ ದಿಚಕ್ರ ವಾಹನ ಸವಾರರ ಸುಲಿಗೆಗೆ ಆರೋಪಿಗಳು ಮಾರಕಾಸ್ತ್ರಗಳ ಜತೆಗೆ ಹೊಂಚು ಹಾಕುತ್ತಿದ್ದ ವೇಳೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಹಣ ಮೊಬೈಲ್, ಚಿನ್ನಾಭರಣ ದೋಚಲು ಆರೋಪಿಗಳು ಸಂಚು ರೂಪಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ರಸ್ತೆಯಲ್ಲಿ ಸುಲಿಗೆ: ಇಬ್ಬರ ಬಂಧನ

ಬೆಂಗಳೂರು: ಆನ್‌ಲೈನ್ ಜೂಜಿಗಾಗಿ ಸುಲಿಗೆಯ ಕೃತ್ಯ ನಡೆಸುತ್ತಿದ್ದ ಮೈಸೂರಿನ ಜಮೀಲ್ ಖಾನ್ ಹಾಗೂ ಜುನಾಯಿದ್ ಎಂಬ ಇಬ್ಬರು ಆರೋಪಿಗಳನ್ನು ಬಸವನಗುಡಿ ಪೊಲೀಸರು ಬಂಧಿಸಿದ್ದಾರೆ.

ನಗರದ ವಿವಿಧ ರಸ್ತೆಗಳಲ್ಲಿ ಇಬ್ಬರೂ ಸುಲಿಗೆ ನಡೆಸುತ್ತಿದ್ದರು. ವಾಹನ ತಾಕಿತು ಎಂಬ ನೆಪದಲ್ಲಿ ಜಗಳಕ್ಕೆ ಇಳಿದಿದ್ದ ಆರೋಪಿಗಳು, ಸಾವಿರಾರು ರೂಪಾಯಿ ಸುಲಿಗೆ ಮಾಡುತ್ತಿದ್ದರು. ಬಸವನಗುಡಿ ಭಾಗದಲ್ಲಿ ಈ ರೀತಿಯಲ್ಲೇ ₹40 ಸಾವಿರ ಸುಲಿಗೆಗೆ ಮುಂದಾಗಿದ್ದ ವೇಳೆ ಪೊಲೀಸರು ಬಂಧಿಸಿದ್ದಾರೆ.

ಪೊಲೀಸ್ ಅಧಿಕಾರಿಗೆ ₹ 5 ಲಕ್ಷ ದಂಡ

ಬೆಂಗಳೂರು: ವಾರಂಟ್ ಜಾರಿಯಾಗಿದ್ದ ವ್ಯಕ್ತಿಯನ್ನು ಬಿಟ್ಟು ಮತ್ತೊಬ್ಬ ವ್ಯಕ್ತಿಯನ್ನು ಬಂಧಿಸಿದ ಪೊಲೀಸ್ ಅಧಿಕಾರಿಯು ₹ 5 ಲಕ್ಷ ಪರಿಹಾರ ನೀಡುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ನಿವಾಸಿ ಎನ್. ನಿಂಗರಾಜು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ತಪ್ಪು ಎಸಗಿರುವ ಪೊಲೀಸ್ ಅಧಿಕಾರಿಯ ವೇತನದಿಂದ ₹ 5 ಲಕ್ಷ ವಸೂಲು ಮಾಡಬೇಕು ಮತ್ತು ಅದನ್ನು ಅರ್ಜಿದಾರರಿಗೆ ಪರಿಹಾರ ರೂಪದಲ್ಲಿ ನೀಡಬೇಕು' ಎಂದು ನ್ಯಾಯಪೀಠ ತಿಳಿಸಿದೆ.



ಸುಬ್ರಹ್ಮಣ್ಯ ಸಮೀಪದ ಪರ್ವತಮುಖಿಯಲ್ಲಿ ಗುಡ್ಡ ಕುಸಿದು ಮಣ್ಣಿನಡಿ ಸಿಲುಕಿದ್ದ ಬಾಲಕಿಯರ ಮೃತದೇಹವನ್ನು ಸೋಮವಾರ ರಾತ್ರಿ ಜೆಸಿಬಿ ಬಳಸಿ ಹೊರತೆಗೆಯಲಾಯಿತು.

ಸುಬ್ರಹ್ಮಣ್ಯ: ಮಣ್ಣಿನಡಿ ಸಿಲುಕಿ ಇಬ್ಬರು ಬಾಲಕಿಯರು ಸಾವು

ಒಂದನೇ ಪುಟದಿಂದ...

ಸೋಮವಾರ ರಾತ್ರಿ 7.30ರ ಸುಮಾರಿಗೆ ಗುಡ್ಡ ಕುಸಿತ ಉಂಟಾಗಿದೆ. ಈ ವೇಳೆ ಕುಸುಮಾಧರ ಅವರ ಪತ್ನಿ ರೂಪಶ್ರೀ, ನಾಲ್ಕು ತಿಂಗಳ ಮಗುವನ್ನು ಹಿಡಿದುಕೊಂಡು ಮನೆಯಿಂದ ಹೊರಗೆ ಓಡಿದ್ದರು. ಅವರ ಇನ್ನಿಬ್ಬರು ಮಕ್ಕಳಾದ ಶ್ರುತಿ ಹಾಗೂ ಜ್ಞಾನಶ್ರೀ ಮನೆಯಿಂದ ಹೊರಗೆ ಓಡಿ ಬರುವಷ್ಟರಲ್ಲಿ ಗುಡ್ಡ ಕುಸಿದಿತ್ತು. ಮಕ್ಕಳಿಬ್ಬರು ಮಣ್ಣಿನಡಿ ಸಿಲುಕಿದ್ದರು.

ಈ ಪ್ರದೇಶ ಜಲಾವೃತಗೊಂಡು ಪಂಜ– ಸುಬ್ರಹ್ಮಣ್ಯ ರಸ್ತೆಯ ಸಂಪರ್ಕ ಕಡಿತಗೊಂಡಿದ್ದರಿಂದ ತಕ್ಷಣ ರಕ್ಷಣಾ ಕಾರ್ಯಾಚರಣೆ ಸಾಧ್ಯವಾಗಿರಲಿಲ್ಲ. ನೀರಿನ ಹರಿವು ಕಡಿಮೆಯಾದ ಬಳಿಕ ಜೆಸಿಬಿ ತರಿಸಿ ಮಣ್ಣನ್ನು ಸರಿಸುವಷ್ಟರಲ್ಲಿ ಮಕ್ಕಳಿಬ್ಬರ ಪ್ರಾಣಪಕ್ಷಿ ಹಾರಿ ಹೋಗಿತ್ತು.

ಶ್ರುತಿ ಸುಬ್ರಹ್ಮಣ್ಯದ ಸರ್ಕಾರಿ ಶಾಲೆಯಲ್ಲಿ ಐದನೇ ತರಗತಿಯಲ್ಲಿ ಹಾಗೂ ಜ್ಞಾನಶ್ರೀ ಕುಮಾರಸ್ವಾಮಿ ಶಾಲೆಯಲ್ಲಿ ಒಂದನೇ ತರಗತಿಯಲ್ಲಿ ಕಲಿಯುತ್ತಿದ್ದಳು. ಮಕ್ಕಳಿಬ್ಬರು ಶಾಲೆಯಿಂದ ಮನೆಗೆ ಮರಳಿದ ಬಳಿಕ ಆಟವಾಡಿಕೊಂಡಿದ್ದರು.

ಕುಸುಮಾಧರ ಅವರು ಸರ್ಕಾರಿ ಆಸ್ಪತ್ರೆ ಬಳಿ ಅಂಗಡಿಯನ್ನು ಹೊಂದಿದ್ದಾರೆ. ಮನೆ ಗುಡ್ಡದ ಪಕ್ಕದಲ್ಲೇ ಇದೆ. ಮತ್ತೊಂದು ಮನೆಯನ್ನು ಕಟ್ಟುವ ಸಲುವಾಗಿ ಅವರು ಗುಡ್ಡದ ತಳಭಾಗವನ್ನು ಅಗೆಸಿದ್ದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

'ಅಕ್ರಮ–ಸಕ್ರಮ ಜಾರಿಗೆ ಪ್ರಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಕಟ್ಟಡಗಳನ್ನು ಹೊರಗಿಟ್ಟು ವಸತಿ ಕಟ್ಟಡಗಳಿಗೆ ಸೀಮಿತವಾಗಿ ಅಕ್ರಮ-ಸಕ್ರಮ ಯೋಜನೆಯನ್ನು ಜಾರಿಗೊಳಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

'ನಕ್ಷೆ ಉಲ್ಲಂಘಿಸಿ ಹಾಗೂ ಅನುಮೋದನೆ ಇಲ್ಲದ ಬಡಾವಣೆಗಳಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ದಂಡ ವಿಧಿಸಿ ಸಕ್ರಮಗೊಳಿಸಲು ರೂಪಿಸಿದ್ದ ಕಾಯ್ದೆಯನ್ನು ಪ್ರಶ್ನಿಸಿರುವ ಅರ್ಜಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಉಳಿದಿದೆ. ವಾಣಿಜ್ಯ ಕಟ್ಟಡಗಳನ್ನು ಸಕ್ರಮಗೊಳಿಸುವುದಿಲ್ಲ ಎಂಬ ಪ್ರಮಾಣಪತ್ರ ಸಲ್ಲಿಸಿ ಯೋಜನೆ ಅನುಷ್ಠಾನಕ್ಕೆ ಅನುಮತಿ ಪಡೆಯಲು ಪ್ರಯತ್ನ ಮಾಡಲಾಗುವುದು' ಎಂದು ಅವರು ಹೇಳಿದರು.

ನ್ಯಾಯಾಲಯ ಒಪ್ಪಿಗೆ ನೀಡಿದರೆ ತ್ವರಿತವಾಗಿ ಅರ್ಜಿಗಳನ್ನು ಆಹ್ವಾನಿಸಲಾಗುವುದು. ಸರ್ಕಾರಿ ಜಮೀನಿನಲ್ಲಿ ನಿರ್ಮಿಸಿರುವ 2,000 ಚದರ ಅಡಿಗಳವರೆಗಿನ ವಿಸ್ತೀರ್ಣದ ಮನೆಗಳನ್ನೂ ಸಕ್ರಮಗೊಳಿಸಲಾಗುವುದು. ಈ ಯೋಜನೆ ಜಾರಿಯಾದರೆ ಸರ್ಕಾರಕ್ಕೆ ₹ 20,000 ಕೋಟಿ ವರಮಾನ ಸಂಗ್ರಹವಾಗಲಿದೆ ಎಂದು ತಿಳಿಸಿದರು.

ಪಿಯು ಪೂರಕ ಪರೀಕ್ಷೆಗೆ ಅರ್ಜಿ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆಯ ಮರು ಮೌಲ್ಯಮಾಪನ ಹಾಗೂ ಮರು ಎಣಿಕೆಗೆ ಅರ್ಜಿ ಸಲ್ಲಿಸಿದ್ದು, ಅನುತ್ತೀರ್ಣರಾದ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಆ.4ರವರೆಗೆ ಅವಕಾಶ ನೀಡಲಾಗಿದೆ.

ಉತ್ತರ ಪತ್ರಿಕೆಗಳ ಮರು ಮೌಲ್ಯ ಮಾಪನ ಫಲಿತಾಂಶವನ್ನು ಜುಲೈ 31ರಂದು ಪ್ರಕಟ ಸಲಾಗಿತ್ತು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಪರೀಕ್ಷಾ ವಿಭಾಗದ ನಿರ್ದೇಶಕರು ತಿಳಿಸಿದ್ದಾರೆ.

'ನುಡಿ ಸ್ವರಾಜ್ಯ 75' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: '75ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ (ಅಭಾಸಾಪ) ವತಿಯಿಂದ ರಾಜ್ಯದಾದ್ಯಂತ 'ನುಡಿ ಸ್ವರಾಜ್ಯ -75' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದೇ 20ರವರೆಗೆ ನಡೆಯಲಿರುವ ಈ ಅಭಿಯಾನವನ್ನು ಪರಿಷತ್‌ನ ಎಲ್ಲ ತಾಲ್ಲೂಕು ಮತ್ತು ಜಿಲ್ಲಾ ಸಮಿತಿಗಳು ಮುನ್ನಡೆಸಲಿವೆ' ಎಂದು ಅಭಾಸಾಪದ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ ತಿಳಿಸಿದ್ದಾರೆ.

ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕುಟುಂಬದವರನ್ನು ಗುರುತಿಸಿ, ಅವರ ಮನೆಗೆ ಭೇಟಿ ಕೊಟ್ಟು ಅವರು ಮಾಡಿದ ಸೇವೆಯನ್ನು ಸ್ಮರಿಸುವುದು ಅಭಿಯಾನದ ಉದ್ದೇಶ. ಅಲ್ಲದೆ, ತಾಲ್ಲೂಕು, ಜಿಲ್ಲೆಯ ಮೂವರು ಸಾಹಿತಿಗಳು 'ನಮ್ಮ ಜಿಲ್ಲೆ/ತಾಲ್ಲೂಕಿನ ಸ್ವಾತಂತ್ರ್ಯ ಕಲಿಗಳು' ಎನ್ನುವ ವಿಷಯದ ಮೇಲೆ ಕಾರ್ಯಕ್ರಮದಲ್ಲಿ ಪ್ರಬಂಧ ಮಂಡಿಸಲಿದ್ದಾರೆ.

'ಸಾಹಿತಿಗಳು, ಸ್ವಾತಂತ್ರ್ಯ ಕಲಿಗಳು ಹಾಗೂ ಸಾರ್ವಜನಿಕರು ಹೀಗೆ ಎಲ್ಲರ ಭಾಗವಹಿಸುವಿಕೆಯೊಂದಿಗೆ 75ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸ್ಮರಣೀಯವಾಗಿಸಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15–03–2013

Website : www.kimskoppal.karnataka.gov.in

email :directorkimskoppal@gmail.com

Office : 08539 225522. Office : 08539-225523

ಸಂ.ಕಿಮ್ಸ್/ಕೊಪ್ಪಳ/ಟೆಂಡರ್/41/2022–23 ದಿನಾಂಕ:28/07/2022

ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜಿಲ್ಲಾ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಇಂಜೆಕ್ಷನ್ಸ್, ಟ್ಯಾಬ್ಲೇಟ್, ಸಿರಪ್ ಮತ್ತು ಇತರೆ ಔಷಧ ಸಾಮಾಗ್ರಿಗಳನ್ನು 02 ವರ್ಷದ ಅವಧಿಗೆ ದರ ಗುತ್ತಿಗೆ ಆಧಾರದ ಮೇಲೆ ಖರೀದಿಸಲು ಕೆಟಿಪಿಪಿ ಕಾಯ್ದೆ 1999–2000 ರ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

1. ಟೆಂಡರ್‌ನ್ನು ದಿನಾಂಕ : 01/08/2022, ಸಾಯಂಕಾಲ 5.30 ಗಂಟೆಯಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07/08/2022 ಸಾಯಂಕಾಲ 5.30 ರವರೆಗೆ. 3. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16/08/2022 ಸಾಯಂಕಾಲ 5.30 ರವರೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18/08/2022 ಬೆಳಿಗ್ಗೆ 11.30. 5. ಟೆಂಡರ್ ಅಂದಾಜು ಮೊತ್ತ. ರೂ. 123.92 ಲಕ್ಷಗಳು. 5. ಇ.ಎಂ.ಡಿ – 2.5% ಟೆಂಡರ್ ಮೊತ್ತಕ್ಕೆ

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http//www.kimskoppal.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/268/ಎಂಸಿಎ/2022–23

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಇ–ಮೇಲ್: dcfrural@gmail.com ದೂರವಾಣಿ: 080–29787088

ಸಂಖ್ಯೆ:ಎ2/ಉಅಸಂ(ಬೆಂಗ್ರಾ)/ಬಿಯುಡಿ/ಕಾಂಪೌಂಡ್–ಗೋಡೆ/ಸಿಆರ್–31/2022–23

ದಿನಾಂಕ: 22.07.2022

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2021–22 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ ವ್ಯಾಪ್ತಿಯ ದೇವನಹಳ್ಳಿ ವಲಯದ ಯರ್ತಿಗಾನಹಳ್ಳಿ ಅರಣ್ಯ ಪ್ರದೇಶದಲ್ಲಿ **"2406-01-101-2-82-Demarcation And Protection Of Forest-139 Major Works"** ಯೋಜನೆಯಡಿ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲು ಅರ್ಹ ಗುತ್ತಿಗೆದಾರರಿಂದ ಪ್ರತಿಯೊಂದು ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇ–ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 16.08.2022 ಸಂಜೆ 4.00 ಗಂಟೆ,** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 17.08.2022 ಸಂಜೆ 4.00 ಗಂಟೆ** ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ 19.08.2022 ರಂದು ಸಂಜೆ 4.00 ಗಂಟೆಗೆ** ನಿಗದಿಪಡಿಸಲಾಗಿರುತ್ತದೆ.

ಒಂದು ವೇಳೆ ಸದರಿ ದಿನಾಂಕ ಟೆಂಡರ್‌ನಲ್ಲಿ ಗುತ್ತಿಗೆದಾರರು ಯಾರೂ ಭಾಗವಹಿಸದೇ ಇದ್ದಲ್ಲಿ ಇದನ್ನೇ ಮರು ಟೆಂಡರ್ ಎಂದು ತಿಳಿದು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಸಲ್ಲಿಸಲು ಕೊನೆಯ **ದಿನಾಂಕ 29.08.2022** ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 30.08.2022** ಹಾಗೂ ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ 31.08.2022 ರಂದು** ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಗೆ ಖುದ್ದಾಗಿ ಭೇಟಿ ಮಾಡಿ ಅಥವಾ ದೂರವಾಣಿ ಸಂಖ್ಯೆ 080–29787088ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು.

ವಾಸಾಸಂಇ/ಉನಿ-ಸಿ.ಪಿ/1484/ಎಂಸಿಎ/2022-23

ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು

ಬೆಳಗುಂಬ ರಸ್ತೆ, ತುಮಕೂರು–572103. ಫ್ಯಾಕ್ಸ್ : 0816–2255761 ದೂರವಾಣಿ : 2272280 email: tudatmk@yahoo.co.in Website: tuda.co.in

ಸಂಖ್ಯೆ ಟಿಯುಡಿಎ/ಯೋಶಾ/ಭೂ.ಉ.ಬ/14/2022–23 ದಿನಾಂಕ: 26.07.2022

ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಜಮೀನು ತುಮಕೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ (ಪರಿಷ್ಕೃತ–II) – 2031 ರಂತೆ ಉದ್ಯಾನವನ ಮತ್ತು ಬಯಲು ಜಾಗೆ ವಲಯಕ್ಕೆ ಕಾಯ್ದಿರಿಸಲ್ಪಟ್ಟಿದೆ. ಅರ್ಜಿದಾರರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(2) ರಿಂದ 69(4) ರನ್ವಯ ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಕೋರಿರುತ್ತಾರೆ.

ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(3) ರಂತೆ ವಸತಿ ಉದ್ದೇಶಕ್ಕೆ ಭೂ ಉಪಯೋಗವನ್ನು ನಿಗಧಿಪಡಿಸಲು ಈ ಪ್ರಕಟಣೆಯನ್ನು ನೀಡಲಾಗಿದೆ. ಸದರಿ ಪ್ರಸ್ತಾವನೆಗೆ ಸಾರ್ವಜನಿಕರಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರಿಗೆ ಲಿಖಿತವಾಗಿ ಸಲ್ಲಿಸಬಹುದೆಂದು ತಿಳಿಯಪಡಿಸಿದೆ. ನಿಗದಿತ ಅವಧಿಯ ನಂತರ ಸಲ್ಲಿಸುವ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾಯೋಜನೆ ಯಂತೆ ಭೂ ಉಪಯೋಗ	ಕೋರಿರುವ ಭೂ ಉಪಯೋಗ
1	ಬಾಬು ಉ ಬಾಜಿಸಾಬ್ ಬಿನ್ ಮೊಹಮ್ಮದ್ ಮಹಬೂಬ್	ತುಮಕೂರು	ಗೂಳೂರು	ಗೂಳೂರು	108/4	1ಎ–00ಗು	ಉದ್ಯಾನವನ ಮತ್ತು ಬಯಲು ಜಾಗೆ	ವಸತಿ

ಈ ಮೇಲ್ಕಂಡ ಪ್ರಕಟಣೆಯಲ್ಲಿ ತಿಳಿಸಿರುವ ಸ.ನಂ.ಗಳ ಜಮೀನುಗಳಿಗೆ ಯಾವುದಾದರೂ ಇಲಾಖೆ/ಪ್ರಾಧಿಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈಗೊಂಡಿದ್ದಲ್ಲಿ ನಿಗಧಿತ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ಮಾಹಿತಿಯನ್ನು ಸಲ್ಲಿಸುವುದು. ತಪ್ಪಿದಲ್ಲಿ ಈ ಜಮೀನುಗಳು ಯಾವುದೇ ಭೂಸ್ವಾಧೀನಕ್ಕೆ ಒಳಪಟ್ಟಿರುವುದಿಲ್ಲ ಎಂದು ತಿಳಿದು, ಅರ್ಜಿದಾರರ ಕೋರಿಕೆಯನ್ನು ಪರಿಗಣಿಸಲಾಗುವುದು.

ಸಹಿ/– ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

DIPR/TUM/373/MCA/2022-23

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105

ಪೋ.ನಂ 08472–278634/256944, Email:eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2022–23/916 ದಿನಾಂಕ : 29–07–2022

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : ಚಿಂಚೋಳಿ–04 (Indent No 34548 call-3, 43251, 43250, 43256 call-2) Aland -01 (43068 call-2), 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : 51,24,346/-, ಗರಿಷ್ಠ 67,29,026/-, 3) ಲೆಕ್ಕ ಶಿರ್ಷಿಕೆ: JJM 2022-23, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **01–08–2022 ರಿಂದ 11–08–2022,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **11–08–2022 ಸಾಯಂಕಾಲ 4:00 ಗಂಟೆವರೆಗೆ,** 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: **12–08–2022 ಸಾಯಂಕಾಲ 4.01 ಗಂಟೆಗೆವೆರೆಗೆ,** 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ: **16–08–2022 ಬೆ. 11.00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/456/ಎಂ.ಸಿ.&ಎ/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿ0ಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮ)

ಅಧೀಕ್ಷಕ ಇಂಜನೀಯರರ ಕಚೇರಿ, ಕೃಭಾಜನಿ(ನಿ) ಮು.ಏ.ನೀ. ವೃತ್ತ, ಬಸವನ ಬಾಗೇವಾಡಿ ಕ್ಯಾಂಪ್:ಆಲಮಟ್ಟಿ.

ಸಂ. ಕೃಭಾಜನಿನಿ/ಮುಏನೀವೃಆ/ಸಇಂ–4/ನೀಸಸ/2022–23/754 ದಿನಾಂಕ:29/07/2022

ಪತ್ರಿಕಾ ಪ್ರಕಟಣೆ

ವಿಷಯ: ಮುಳವಾಡ ಏತ ನೀರಾವರಿ ವೃತ್ತದಡಿ ಬರುವ ಕಾಲುವೆ ಜಾಲಕ್ಕೆ 2022–23 ರ ಮುಂಗಾರು ಹಂಗಾಮಿಗೆ ಕಾಲುವೆ ಜಾಲಕ್ಕೆ ನೀರು ಹರಿಸುವದನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ: ದಿನಾಂಕ: 26.07.2022 ರಂದು ಜರುಗಿದ 2022–23 ನೇ ಸಾಲಿನ ಮುಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ನಡುವಳಿಗಳು ಹಾಗೂ ಪತ್ರಿಕಾ ವರದಿಗಳು ದಿನಾಂಕ: 27.7.2022.

ಕೃಷ್ಣಾ ಮೇಲ್ದಂಡೆ ಯೋಜನೆಯ ಮುಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ದಿ: 26–07–2022 ರಂದು ಸನ್ಮಾನ್ಯ ಸನ್ಮಾನ್ಯ ಶ್ರೀ ಸಿ. ಸಿ. ಪಾಟೀಲ, ಲೋಕೋಪಯೋಗಿ ಸಚಿವರು ಮತ್ತು ಬಾಗಲಕೋಟ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಧ್ಯಕ್ಷರು, ಕೃಷ್ಣಾ ಮೇಲ್ದಂಡೆ ಯೋಜನೆ ನೀರಾವರಿ ಸಲಹಾ ಸಮಿತಿ ಇವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಮುಂಗಾರು ಹಂಗಾಮಿಗೆ ಅವಶ್ಯವಿರುವ 67 ಟಿ.ಎಂ.ಸಿ. ಹಾಗೂ ಇತರ ಬಳಕೆಗೆ ಅವಶ್ಯವಿರುವ 13 ಟಿ.ಎಂ.ಸಿ. ಒಟ್ಟಾರೆ 80 ಟಿ.ಎಂ.ಸಿ. ಕ್ಕಿಂತ ಹೆಚ್ಚಿನ ನೀರನ್ನು ಸಂಗ್ರಹಣೆ ಅಂದರೆ 100.312 ಟಿ.ಎಂ.ಸಿ. ಮಾಡಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಮುಂಗಾರು ಹಂಗಾಮಿಗೆ ಕಾಲುವೆ ಜಾಲಕ್ಕೆ ನೀರು ಪೂರೈಸುವದನ್ನು ಪ್ರಾರಂಭಿಸುವ ಕುರಿತು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು.

ಉಲ್ಲೇಖಿತ ಪತ್ರದ ನಿರ್ಣಯದಂತೆ ಮುಳವಾಡ ಏತ ನೀರಾವರಿ ವೃತ್ತ, ಬ.ಬಾಗೇವಾಡಿ ಕ್ಯಾಂಪ್: ಆಲಮಟ್ಟಿ ಅಡಿ ಬರುವ ಮುಳವಾಡ ಏತ ನೀರಾವರಿ ಹಂತ–2 ರ ಪೂರ್ವ ಮತ್ತು ಪಶ್ಚಿಮ ಕಾಲುವೆ, ಸೊನ್ನ ಏತ ನೀರಾವರಿ, ರೊಳ್ಳಿ–ಮನ್ನಿಕೇರಿ ಏತ ನೀರಾವರಿ ಮತ್ತು ತೆಗ್ಗಿ–ಸಿದ್ದಾಪೂರ ಏತ ನೀರಾವರಿ ಯೋಜನೆಗಳ ಅಡಿ ದಿನಾಂಕ: 26–07–2022 ರಿಂದ ಮುಂಗಾರು ಹಂಗಾಮಿಗೆ ಮಳೆ ಆಧರಿಸಿ ನೀರು ಹರಿಸಲು ಪ್ರಾರಂಭಿಸಲಾಗುವುದು, ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಸ್ಥಗಿತವಾದ ನಂತರ ಬಾಕಿ ಉಳಿದಿರುವ ಮುಂಗಾರು ಹಂಗಾಮಿನ ದಿನಗಳಿಗೆ 14 ದಿನ ಚಾಲೂ ಹಾಗೂ 08 ದಿನ ಬಂದ ಪದ್ಧತಿಯನ್ನು ಈ ಕೆಳಗಿನಂತೆ ಅನುಸರಿಸಲಾಗುವುದು.

ಕ್ರ ಸಂ.	ನೀರು ಬಿಡುವ ದಿನಾಂಕಗಳು	ದಿನಗಳು	ನೀರು ನಿಲ್ಲಿಸುವ ದಿನಾಂಕಗಳು	ದಿನಗಳು
1.	27–07–2022 ರಿಂದ 09–08–2022	14	10–08–2022 ರಿಂದ 17–08–2022	8
2.	18–08–2022 ರಿಂದ 31–08–2022	14	01–09–2022 ರಿಂದ 08–09–2022	8
3.	09–09–2022 ರಿಂದ 22–09–2022	14	23–09–2022 ರಿಂದ 30–09–2022	8
4.	01–10–2022 ರಿಂದ 14–10–2022	14	15–10–2022 ರಿಂದ 22–10–2022	8
5.	23–10–2022 ರಿಂದ 05–11–2022	14	06–11–2022 ರಿಂದ 13–11–2022	8
6.	14–11–2022 ರಿಂದ 23–11–2022	10	--	--
	ಒಟ್ಟು:	80		40

ಕಾಲುವೆ ಜಾಲದ ಗೇಟ್‌ಗಳನ್ನು ಹಾನಿ ಮಾಡುವುದು, ಎಸ್ಕೇಪಗಳ ಮೂಲಕ ಹಳ್ಳಕೆ ನೀರು ಹರಿಸುವುದು, ಸೈಫನಗಳ ಮೂಲಕ ಮಣ್ಣಿನ ಏರಿಯಲ್ಲಿ ನೀರನ್ನು ಎತ್ತಿಕೊಳ್ಳುವುದು, ಕಾಲುವೆ ಜಾಲದಲ್ಲಿ ಪಂಪುಗಳ ಮೂಲಕ ನೀರನ್ನು ಎತ್ತುವುದನ್ನು ನಿರ್ಭಂದಿಸಲಾಗಿದೆ. ಈ ಪರಿಸ್ಥಿತಿ ಕಂಡು ಬಂದರೆ ಸಂಬಂಧಿಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾಗುವುದು. ರೈತ ಬಾಂಧವರು ಕೃಷ್ಣಾ ಮೇಲ್ದಂಡೆ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿ 120 ದಿನಗಳಲ್ಲಿ ಬರುವ ಲಘು ನೀರಾವರಿ ಬೆಳೆಗಳನ್ನು ಮಾತ್ರ ಕ್ಷೇತ್ರದ 80 ಪ್ರತಿಶತ ಕ್ಷೇತ್ರಕ್ಕೆ (65 ಪ್ರತಿಶತ ಮುಂಗಾರು ಹಾಗೂ 15 ಪ್ರತಿಶತ ದ್ವಿಋತು) ಬೆಳೆಯಲು ವಿನಂತಿಸಲಾಗಿದೆ. ಕಬ್ಬು, ಬಾಳೆ ಮತ್ತು ಭತ್ತದ ಬೆಳೆಗಳನ್ನು ನೀರಾವರಿ ಆಶ್ರಯದಲ್ಲಿ ಬೆಳೆಯುವುದನ್ನು ನಿಷೇದಿಸಲಾಗಿದೆ.

ರೈತ ಬಾಂಧವರು ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಹಾಗೂ ಈ ದಿಶೆಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳಿಗೆ ಸಹಕಾರ ನೀಡಲು ಕೋರಲಾಗಿದೆ.

"ಜೀವ ಜಲ ಅತೀ ಅಮೂಲ್ಯ ಅದನ್ನು ಪೋಲು ಮಾಡಬೇಡಿ"

ಸಹಿ/–(ಜಗದೀಶ ಜಿ. ರಾಠೋಡ)

ಅಧೀಕ್ಷಕ ಅಭಿಯಂತರರು, ಕೃಭಾಜನಿನಿ ಮು.ಏ.ನೀ ವೃತ್ತ

ಬ.ಬಾಗೇವಾಡಿ ಕ್ಯಾಂಪ್:ಆಲಮಟ್ಟಿ

DIPR/BGK/RO-NO-315/MCA/2022-23

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667

ಇ–ಮೇಲ್: kerc-ka@nic.in ವೆಬ್‌ಸೈಟ್: kerc.karnataka.gov.in

ಸಂಖ್ಯೆ: ಕವಿನಿಆ/ಉ.ನಿ.(ಜಕಾತಿ)/ಬಿ/15/12/591 ದಿನಾಂಕ: 01–08–2022

ಪ್ರಕಟಣೆ

ವಿಷಯ: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ) ವಿನಿಯಮಗಳು, 2022–ಕರಡು ಪ್ರತಿ ಹೊರಡಿಸಿರುವುದಕ್ಕೆ ಆಸಕ್ತರಿಂದ ಅಭಿಪ್ರಾಯ / ವಿಮರ್ಶೆ / ಸಲಹೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಿರುವ ಬಗ್ಗೆ.

ಮೇಲಿನ ವಿಷಯದ ಬಗ್ಗೆ ಮಾಡಲಾದ ಕರಡು ವಿನಿಯಮವನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 28–07–2022ರಂದು ಪ್ರಕಟಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ: **https://kerc.karnataka.gov.in** ದಲ್ಲಿ ಸದರಿ ಕರಡು ವಿನಿಯಮವು ಲಭ್ಯವಿರುತ್ತದೆ.

ಆಸಕ್ತರು, ಸದರಿ ಕರಡು ವಿನಿಯಮಗಳ ಬಗ್ಗೆ ಅಭಿಪ್ರಾಯ / ವಿಮರ್ಶೆ / ಸಲಹೆ / ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ **ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ** ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ **30 ದಿನಗಳ ಒಳಗಾಗಿ** ಲಿಖಿತ ರೂಪದಲ್ಲಿ ಸಲ್ಲಿಸಬಹುದು.

ಸಹಿ/– ಕಾರ್ಯದರ್ಶಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/1611/2022–23

ಕರ್ನಾಟಕ ಸರ್ಕಾರ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518

ಅಧಿಸೂಚನೆ ಸಂಖ್ಯೆ: ಡಿಪಿಎಸ್14ಪಿಯುಆರ್(ಬಿ)2022–23/ಎಸ್ ಎಸ್ ಮ್ಯಾಪ್‌ಲಿಥೋ ದಿನಾಂಕ : 30–07–2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಎಸ್ ಎಸ್ ಮ್ಯಾಪ್‌ಲಿಥೋ ಮುದ್ರಣ ಕಾಗದಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 250.00** ಲಕ್ಷಗಳು ಹಾಗೂ ಇ.ಎಂ.ಡಿ. **ರೂ. 12.50** ಲಕ್ಷಗಳಾಗಿರುತ್ತದೆ. ಟೆಂಡರ್‌ನ ಪೂರ್ವಭಾವಿ ಸಭೆಯ ದಿನಾಂಕ: 17–08–2022, ಬೆಳಿಗ್ಗೆ 11.30ಕ್ಕೆ ಹಾಗೂ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 29–08–2022, 17.30 ಗಂಟೆ. ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–

ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/1592/ಆಕಾರ್/22–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101"

ಸಂಖ್ಯೆ:ಜಿನಕೊಬ/ಮುಅನ/ಹಂತ–4/ಸಿರುಗುಪ್ಪ/01/2022–23 ದಿನಾಂಕ :27–07–2022

ಟೆಂಡರ್ ಪ್ರಕಟಣೆ

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ನಗರಸಭೆ ಮಾನ್ಯ ಮುಖ್ಯ ಮಂತ್ರಿಗಳ ಅಮೃತ್ ನಗರೋತ್ಥಾನ (ಮುನ್ಸಿಪಾಲಿಟಿ) ಹಂತ 04 ರ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆವಾರು ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಪ್ಯಾಕೇಜ್ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಗಳನ್ವಯ ಈ ಕೆಳಕಾಣಿಸಿದಂತೆ ರಾಜ್ಯ ಸರ್ಕಾರದ **E-Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಪ್ಯಾಕೇಜ್ ಕಾಮಗಾರಿ ವಿವರ: 01. Siruguppa Name of work : Improvements of Roads, construction of CC drains at various wards in Siruguppa CMC limits Ballari District under Chief Minister's Amrut Nagarothana (Municipality) Phase-4DMA/2022-23/OW/WORK_INDENT134235. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 1391.78. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 1235.64. **EMD (Rs):** 13,92,000/-

1.Last date & time for tender queries / clarifications: **26.08.2022 at 16:00 Hrs.** 2.Pre Bid Meeting: **08.08.2022 at 11.00 hrs.** 3.Last date and time for receipt of tender technical bids: **29.08.2022 at 17.30 hrs.** 4.Date & time for opening of (Technical bids): **01.09.2022 at 11:00 Hrs.** 5.Date & time for opening of (Financial bids): **12.09.2022 at 11:00 Hrs.** 6.Auto extension of tender schedule: **07 days**

ಸದರಿ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ: 29.08.2022 ರಂದು 17.30 ಗಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ, ಸದರಿ ಟೆಂಡರನ್ನು ದಿನಾಂಕ: 01.09.2022 ರಂದು 11:00 ಗಂಟೆಗೆ ತೆರೆಯಲಾಗುವುದು, ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಇ–ಪ್ರೊಕ್ಯೂರ್‌ಮೆಂಟ್‌ರಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ: **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತಕರು / ಸಹಾಯಕ ಕಾರ್ಯಪಾಲಕ ಅಭಿಯಂತಕರು ಜಿಲ್ಲಾ ನಗರಾಭಿವೃದ್ಧಿ ಕೋಶ, (ದೂ ಸಂ : 7760848586, 7892198334) ಇವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,

ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/318/ಎಂಸಿಎ/2022–23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ. 49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560001, ಕರ್ನಾಟಕ, ಭಾರತ ಫೋನ್: 25581383, 25589112, 25586520, ಫ್ಯಾಕ್ಸ್: 080–25586321

ಇ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂಖ್ಯೆ: ಮಾನಿಮ/ತ್ಯಾನಿವಿ/PLS/2022–23/975 **ಪ್ರಕಟಣೆ** ದಿನಾಂಕ: 01/08/2022

ವಿಷಯ: ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ Centralized EPR Portal ನಲ್ಲಿ ಎಲ್ಲಾ ಪ್ಲಾಸ್ಟಿಕ್ PIBPOs and PWPs ಘಟಕಗಳು ನೋಂದಾಯಿಸಿಕೊಳ್ಳುವ ಬಗ್ಗೆ

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, (MoEF & CC) ನವದೆಹಲಿ ಪರಿಸರ (ಸಂರಕ್ಷಣಾ) ಕಾಯ್ದೆ, 1986 ರ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರಡಿಯಲ್ಲಿ Extended Producer Responsibility for Plastic Packaging ಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು 4ನೇ ತಿದ್ದುಪಡಿಯ ಅಧಿಸೂಚನೆ (G.S.R. 133(E)) ದಿನಾಂಕ 16.02.2022 ರಂದು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯ ಅನುಷ್ಠಾನದ ಕುರಿತು ಈಗಾಗಲೇ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಬಂಧಪಟ್ಟ ಎಲ್ಲಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದೆ.

ಮುಂದುವರೆದು, ಸದರಿ ತಿದ್ದುಪಡಿ ಪ್ರಕಾರ ಎಲ್ಲಾ ಪ್ಲಾಸ್ಟಿಕ್ ಪ್ಯಾಕೇಜಿಂಗ್ ವಸ್ತುಗಳ ಉತ್ಪಾದಕರು, ಆಮದುದಾರರು, ಬ್ರ್ಯಾಂಡ್ ಮಾಲೀಕರು, (PIBOs) and Recyclers, Plastic Waste to Energy Plants, Plastic Waste Co-processor (PWPs) ಘಟಕಗಳು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ Centralized EPR Portal ನಲ್ಲಿ 30 ದಿನಗಳೊಳಗೆ ನೋಂದಾಯಿಸಿಕೊಳ್ಳುವಂತೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ: 01.06.2022 ರಂದು ಎಲ್ಲಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ನಿರ್ದೇಶಿಸಿದೆ. ಸದರಿ ನಿರ್ದೇಶಾನುಸಾರ 30 ದಿನಗಳೊಳಗೆ ನೋಂದಾಯಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ಮಂಡಳಿಯ ಅಧೀನ ಕಛೇರಿಗಳಿಗೆ ದಿನಾಂಕ: 14.06.2022 ರ ಸುತ್ತೋಲೆ ಮುಖೇನ ಸೂಚಿಸಲಾಗಿತ್ತು. ಏತನ್ಮಧ್ಯೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಎಲ್ಲಾ PWP ಘಟಕಗಳಿಗೆ ದಿನಾಂಕ: 26.07.2022 ರ ಪತ್ರದಲ್ಲಿ ಆಗಸ್ಟ್ 5, 2022 ರೊಳಗಾಗಿ Centralized EPR Portal ನಲ್ಲಿ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಿ ಸೂಚಿಸಿದೆ.

ಆದುದರಿಂದ ಮಂಡಳಿಯಿಂದ ಜಲ ಹಾಗೂ ವಾಯು ಕಾಯ್ದೆಗಳಡಿ ಸಮ್ಮತಿ ಪತ್ರ ಪಡೆದಿರುವ ನೋಂದಾಯಿತ ಪ್ಲಾಸ್ಟಿಕ್ ಘಟಕಗಳು ಹಾಗೂ ಹೊಸದಾಗಿ ನೋಂದಾಯಿಸಕೊಳ್ಳಬೇಕಾಗಿರುವ (PIBOs and PWPs) ಘಟಕಗಳು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ Centralized EPR Portal (https://www.cpcbeprplastic.in/) ನಲ್ಲಿ ದಿನಾಂಕ: 05.08.2022 ರೊಳಗಾಗಿ ನೋಂದಾಯಿಸಿಕೊಂಡು, ಹಿರಿಯ ಪರಿಸರ ಅಧಿಕಾರಿಗಳು, ತ್ಯಾಜ್ಯ ನಿರ್ವಹಣಾ ಕೋಶ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ಇ–ಮೇಲ್ pwmeprkspcb@gmail.com ವಿಳಾಸಕ್ಕೆ ವರದಿ ಮಾಡಲು ನಿರ್ದೇಶಿಸಿದೆ. ತಪ್ಪಿದಲ್ಲಿ ಮುಂದಿನ ಯಾವುದೇ ಅವಕಾಶ ನೀಡದೆ ಸದರಿ ನೋಂದಾಯಿತ ಘಟಕಗಳ ಜಲ ಮತ್ತು ವಾಯು ಕಾಯ್ದೆಯಡಿಯಲ್ಲಿ ನೀಡಿರುವ ಸಮ್ಮತಿ ಪತ್ರಗಳನ್ನು (Consent) ಹಿಂಪಡೆಯಲು ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮ, 2016 ರಡಿ ನೀಡಿರುವ ನೋಂದಾಯಿತ ಪತ್ರ (Plastic Registration Certificate) ಗಳನ್ನು ರದ್ದುಮಾಡಲು (Cancel) ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/–

ಸದಸ್ಯ ಕಾರ್ಯದರ್ಶಿ

"ಏಕ ಬಳಕೆ ಪ್ಲಾಸ್ಟಿಕ್ ಬಳಸುವುದನ್ನು ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

DIPR/CP/1601/GREENFMC/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಸಂಸ್ಥೆ)

ನಂ.55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020.

ದೂರವಾಣಿ: 23460085, 23468949,23462436,23563506 ಫ್ಯಾಕ್ಸ್:23567060

ಇ–ಮೇಲ್: ksdb.acnt@gmail.com ವೆಬ್‌ಸೈಟ್: ksdb.karnataka.gov.in

ನೋಟಿಫಿಕೇಷನ್ ನಂ: ಕಕೊಅಮ/01/ಲೆ.ಪ.ಶಾ/2022 ದಿನಾಂಕ: 01.08.2022

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) – ಸರ್ವರಿಗೂ ಸೂರು ಯೋಜನೆಗಳನ್ನು ಅನುಷ್ಟಾನಗೊಳಿಸುವ ಮೂಲಕ ಕೊಳಗೇರಿಗಳಲ್ಲಿ ವಾಸಿಸುವ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೆರವು ನೀಡಲು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಭದ್ರತಾ ಸಾಲ ಪಡೆಯಲು ಕೊಟೇಷನ್ ಆಹ್ವಾನ.

ನಗರ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳು ಜೀವಿಸಲು ಯೋಗ್ಯವಲ್ಲದ ವಾತಾವರಣವಿದ್ದು, ಆರೋಗ್ಯ ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ.ಅವರ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರವು ಕೊಳಚೆ ನಿವಾಸಿಗಳ ಅಭಿವೃದ್ಧಿಗಾಗಿ ಕರ್ನಾಟಕ ಕೊಳಚೆ ಪ್ರದೇಶ(ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯಿದೆ 1973 ರನ್ನು ಜಾರಿಗೆ ತರುವ ಮೂಲಕ 1975 ರ ಜುಲೈನಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಗಿದೆ.

ಕರ್ನಾಟಕ ಸರ್ಕಾರವು ರೂ. 100 ಕೋಟಿಗಳನ್ನು ಸಾಲ ಪಡೆಯಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಅನುಮತಿ ನೀಡಿದೆ.ಕರ್ನಾಟಕ ಸರ್ಕಾರದ ಖಾತರಿಯ ಆಧಾರದಲ್ಲಿ ಸಾಲ ಪಡೆಯಲಾಗುವುದು.ಸದರಿ ಸಾಲಮರುಪಾವತಿಯನ್ನು ಫಲಾನುಭವಿ ವಂತಿಕೆಯಿಂದ ಭರಿಸಲಾಗುವುದು.

ಮಂಡಳಿ ಮೊದಲ ಕಂತಿನಲ್ಲಿ ದಿನಾಂಕ: 29.08.2022 ರೊಳಗೆ ರೂ. 100 ಕೋಟಿ ಸಾಲ ಪಡೆಯಲು ಪ್ರಸ್ತಾವನೆ ಸಲ್ಲಿಸುತ್ತದೆ ಮತ್ತು ಉಳಿದ ಸಾಲವನ್ನು ಅಗತ್ಯಕ್ಕೆ ಅನುಗುಣವಾಗಿ ಪಡೆಯಲಾಗುವುದು.ಆದರೂ ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳು ನಮೂದಿಸಿದ ದರ ದಾಖಲೆಗಳಲ್ಲಿ ತಿಳಿಸಿರುವಂತೆ ಸಂಪೂರ್ಣ ಸಾಲಕ್ಕೆ ಅನ್ವಯವಾಗಲಿದೆ.

ಸಾಲ ಮರುಪಾವತಿ 15 ವರ್ಷಗಳ ಅವಧಿಯಾಗಿದ್ದು, 1 ವರ್ಷದ ನಂತರ ಪ್ರಾರಂಭವಾಗಲಿದ್ದು,ಕನಿಷ್ಟ ಒಂದು ವರ್ಷದ ಮಾರಿಟೋರಿಯಂ ಬೇಕಿದ್ದು,ಬಡ್ಡಿ ದರವನ್ನು ಮಾಸಿಕ ಆಧಾರದಲ್ಲಿ ಲೆಕ್ಕಹಾಕಬೇಕು ಮತ್ತು ಬಡ್ಡಿ ಮತ್ತು ಅಸಲನ್ನು ತ್ರೈಮಾಸಿಕವಾಗಿ ರಾಜ್ಯ ಸರ್ಕಾರದ ನಿಯಮಾನುಸಾರ ಮರುಪಾವತಿಸಲಾಗುವುದು.

ಆಸಕ್ತ ಬ್ಯಾಂಕ್‌ಗಳು/ ಹಣಕಾಸು ಸಂಸ್ಥೆಗಳು ಭದ್ರತಾ ಸಾಲಕ್ಕಾಗಿ ಕಡಿಮೆ ದರವನ್ನು ನಮೂದಿಸಿ, ಇತರೆ ನಿಯಮಗಳು ಮತ್ತು ಇತರೆ ವೆಚ್ಚಗಳನ್ನು ಸೇರಿಸಿ ಕೊಟೇಷನ್ ಸಲ್ಲಿಸಬಹುದು. ಕೊಟೇಷನ್ ಅನ್ನು ಒಂದು ಬ್ಯಾಂಕ್ /ಹಣಕಾಸು ಸಂಸ್ಥೆ ಸಲ್ಲಿಸಬಹುದು ಅಥವಾ ಒಂದು ಬ್ಯಾಂಕ್ /ಹಣಕಾಸು ಸಂಸ್ಥೆಯಿಂದ ಕನಿಷ್ಟ ರೂ.50 ಕೋಟಿ ಸಾಲ ನೀಡುವಂತೆ ಬ್ಯಾಂಕ್‌ಗಳ ಒಕ್ಕೂಟವೂ ಕೊಟೇಷನ್ ಸಲ್ಲಿಸಬಹುದು. ಬ್ಯಾಂಕ್‌ಗಳ ಒಕ್ಕೂಟವೂ ಕೊಟೇಷನ್ ನೀಡಿದಾಗ ಎಲ್ಲಾ ಬ್ಯಾಂಕ್ ಗಳು ಒಂದೇ ಬಡ್ಡಿದರವನ್ನು ನಮೂದಿಸಬೇಕು ಮತ್ತು ನಿಯಾಮಾವಳಿಗಳು ಏಕರೂಪವಾಗಿರಬೇಕು. ಬ್ಯಾಂಕ್ /ಹಣಕಾಸು ಸಂಸ್ಥೆಗಳು ನಿರ್ದಿಷ್ಟ ಸಾಲದ ಸ್ವರೂಪದ ಆಧಾರದಲ್ಲಿ ನಿರ್ದಿಷ್ಟ ಬಡ್ಡಿದರವನ್ನು ನಮೂದಿಸಬೇಕು.ಸ್ಥಿರ ದರವಾಗಿದ್ದಲ್ಲಿ ಬಡ್ಡಿದರವನ್ನು ಕನಿಷ್ಟ 5 ವರ್ಷಗಳಿಗೊಮ್ಮೆ ಮರು ಹೊಂದಿಸಬೇಕು. ಸರಾಸರಿ ದರವನ್ನು ನಮೂದಿಸಬಾರದು. ಸರಾಸರಿ ದರಗಳನ್ನು ನಮೂದಿಸಿದ ಬ್ಯಾಂಕ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ಬಿಡ್ ಪೂರ್ವ ಸಭೆ ದಿನಾಂಕ: 06.08.2022 ರಂದು ಸಂಜೆ: 4.00 ಗಂಟೆಗೆ ಮೇಲೆ ತಿಳಿಸಿರುವ ವಿಳಾಸದಲ್ಲಿ ಕಕೊಅಮ ಸಭಾಂಗಣದಲ್ಲಿ ನಡೆಯಲಿದೆ.ಸಭೆಯಲ್ಲಿ ಸಾಲ ಪಡೆಯುವ ವಿಧಾನಗಳು ಮತ್ತು ಭದ್ರತಾ ಸಾಲದ ಕುರಿತು ಸ್ಪಷ್ಟೀಕರಣ ನೀಡಲಾಗುವುದು. ಆಸಕ್ತ ಬ್ಯಾಂಕ್ /ಹಣಕಾಸು ಸಂಸ್ಥೆಗಳು ಸಭೆಯಲ್ಲಿ ಪಾಲ್ಗೊಳ್ಳಬಹುದು.ಕೊಟೇಷನ್ ಸಲ್ಲಿಸಲು ಕೊನೆಯ ದಿನಾಂಕ:12.08.2022 ಸಂಜೆ 4.00 ಗಂಟೆ. ನಿಗದಿತ ಸಮಯದ ನಂತರ ಸಲ್ಲಿಕೆಯಾಗುವ ಕೊಟೇಷನ್‌ಗಳನ್ನು ಸ್ವೀಕರಿಸುವುದಿಲ್ಲ. ಮೊಹರು ಮಾಡಿದ ಕೊಟೇಷನ್ ಲಕೋಟೆಯ ಮೇಲೆ "ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)–ಸರ್ವರಿಗೂ ಸೂರು ಯೋಜನೆಯ ಅನುಷ್ಟಾನಕ್ಕಾಗಿ ಭದ್ರತಾ ಸಾಲ ಒದಗಿಸಲು ಕೊಟೇಷನ್"ಎಂದು ನಮೂದಿಸಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕು.

ಸಹಿ/–

ಆಯುಕ್ತರು,

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು

DIPR/CP/1620/Zenkar/2022-23

ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ

ಅರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560 023.

ಫೋನ್: 080–23113584, ಇ–ಮೇಲ್: pdrch-hfws@karnataka.gov.in

National Health Mission

ಸಂಖ್ಯೆ: NHM/PROC/09/2021-22 ದಿನಾಂಕ: 29.07.2022

ಟೆಂಡರ್ ಅಧಿಸೂಚನೆ

Tender Notification for **"Providing Vehicles on Daily and Monthly basis with Drivers" for National Health Mission, Bengaluru.**

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಬೆಂಗಳೂರು ಇವರು ಅರ್ಹ ನೋಂದಾಯಿತ ಸಾರಿಗೆ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು **ದಿನಾಂಕ: 01.08.2022ರ ಬೆಳಿಗ್ಗೆ 11:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13.08.2022ರ ಸಂಜೆ 5:30 ಗಂಟೆಯೊಳಗೆ** ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರು, ಆರ್.ಸಿ.ಹೆಚ್ ರವರ ಕಚೇರಿ ಸಮಯ **ಬೆಳಿಗ್ಗೆ 11:00 ಗಂಟೆಯಿಂದ ಸಂಜೆ 5:30 ಗಂಟೆಯೊಳಗಾಗಿ** ಪಡೆಯಬಹುದಾಗಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/BCPL/1615/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಶಾಂತಿನಗರ, ಬೆಂಗಳೂರು–560027

ಅಲ್ಪಾವಧಿ ಟೆಂಡರ್ ಆಹ್ವಾನ ಸೂಚನಾ ಪತ್ರ

ಟೆಂಡರ್ ಸಂಖ್ಯೆ: ಟಿ–130 ದಿನಾಂಕ: 02.08.2022

(ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

(1) ಕ.ರಾ.ರ.ಸಾ. ನಿಗಮ ಹಾಗೂ ವಾ.ಕ.ರ.ಸಾ. ಸಂಸ್ಥೆಗೆ ಅಗತ್ಯವಿರುವ 950 ಹಳೆಯ ವಾಹನಗಳ ಕವಚ ನವೀಕರಣ ಕಾರ್ಯ ನಿರ್ವಹಿಸಲು ಕ.ರಾ.ರ.ಸಾ. ನಿಗಮದ ವತಿಯಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮೇಲ್ಕಂಡ ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ:

(ಅ) ಕ.ರಾ.ರ.ಸಾ. ನಿಗಮ : 700 ಸಂಖ್ಯೆ

(ಆ) ವಾ.ಕ.ರ.ಸಾ. ಸಂಸ್ಥೆ : 250 ಸಂಖ್ಯೆ

ಒಟ್ಟು : **950 ಸಂಖ್ಯೆ**

(2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **23.08.2022 ಸಮಯ: 17:30 ಗಂಟೆಯವರೆಗೆ.**

ಮುಂದುವರೆದು, ಟೆಂಡರ್‌ನ ವೇಳಾಪಟ್ಟಿ ಕಾರ್ಯವ್ಯಾಪ್ತಿ ಹಾಗೂ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಯಿದ್ದಲ್ಲಿ, ಸೇರ್ಪಟೆ / ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು / ಪ್ರಕಟಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೋಂದಣಿಯಾಗಿರಬೇಕು. ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ: **https://eproc.karnataka.gov.in**ಗೆ ಲಾಗ್‌ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: **eprocurementhelpdesk@gmail.com** ಅಥವಾ ದೂರವಾಣಿ ಸಂಖ್ಯೆ: 080–22230960, 080–22234115ಕ್ಕೆ ಕರೆಮಾಡಬಹುದು. ಆಸಕ್ತಿಯುಳ್ಳ ಬಿಡ್ಡುದಾರರು ಬಿಡ್ ಸಲ್ಲಿಕೆಯ ತರಬೇತಿಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಸೆಲ್‌ನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ eprocurementhelpdesk@gmail.comಗೆ ಮೇಲ್ ಮಾಡಿ ಪಡೆಯಬಹುದಾಗಿದೆ.

ಸಹಿ/–,

ಮುಖ್ಯ ಯಾಂತ್ರಿಕ ಅಭಿಯಂತರರು

(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಎಲ್‌ಸಿ/1598/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕ್ಷೇಮ ಕುಶಲ



ನಮ್ಮ ಕೂದಲಿನ ಬಣ್ಣ, ರಚನೆ, ಉದುರುವಿಕೆ, ಬೆಳೆಯುವಿಕೆ, ಒರಟುತನ, ಜಿಗುಟುತನ ಮುಂತಾದ ಸ್ವಭಾವಗಳು ನಮಗೆ ಹುಟ್ಟಿನಿಂದ ಬರುವ ಬಳುವಳಿ.

ಕೇಶ ಅನಾರೋಗ್ಯಕ್ಕೂ ಪಾಶ

ಡಾ. ಪಲ್ಲವಿ ಹೆಗಡೆ

ಸೂಕ್ಷ್ಮವಾಗಿ ಗಮನಿಸಿದರೆ ಪ್ರತಿ ವ್ಯಕ್ತಿಯ ಕೂದಲಿನ ಗುಣಸ್ವಭಾವಗಳು ಬೇರೆ ಬೇರೆ. ಹೀಗಾಗಿಯೇ ಅಪರಾಧಿಗಳನ್ನು ಪತ್ತೆಮಾಡಲು, ಕೂದಲಿನ ಅನನ್ಯತೆಯನ್ನು ಆಧರಿಸಿ, ವಿಧಿವಿಜ್ಞಾನವನ್ನು ಬಳಸಲಾಗುತ್ತದೆ. ಕೂದಲು ಚರ್ಮದ ಮೇಲೆ ನೆಲೆನಿಂತು, ಶರೀರಕ್ಕೆ ವಾತಾವರಣದ ತಾಪಮಾನ, ದೂಳು, ತೇವದಿಂದ ರಕ್ಷಣೆ ಒದಗಿಸುತ್ತದೆ. ಮುಖ್ಯವಾಗಿ ಚರ್ಮ ಮತ್ತು ಆಂತರಿಕ ಅಂಗಾಂಶಗಳನ್ನು ಕಾಪಾಡಲು ಕೂದಲಿರಲೇ ಬೇಕು. ಕೇಶವು ಸೌಂದರ್ಯದ ಮೂಲವೂ ಹೌದು. ಆದ್ದರಿಂದ, ಕೂದಲು ವ್ಯಕ್ತಿತ್ವದ ದ್ಯೋತಕವೆನ್ನಬಹುದು. ನಮ್ಮ ಆರೋಗ್ಯ, ಅನಾರೋಗ್ಯವನ್ನು ಸಹ ನಮ್ಮ ಕೂದಲು ಸೂಚಿಸುತ್ತದೆ, ಗೊತ್ತೆ?

ಚರ್ಮದಲ್ಲಿ ಹುದುಗಿದ್ದರೂ ಕೂದಲು ಹೋಲುವುದು ಮೂಳೆಗಳಿಗೆ. ಆಯುರ್ವೇದವು ಕೂದಲನ್ನು ಅಸ್ಥಿಧಾತುವಿನ ಮಲ ಎಂದು ಗುರುತಿಸುತ್ತದೆ. ಅಂದರೆ ಮೂಳೆಗಳು ಉತ್ಪತ್ತಿಯಾಗುವ ಕ್ರಿಯೆಯಲ್ಲಿ ಕೂದಲಿನ ಮೂಲಭೂತ-ಅಂಶಗಳು ಉತ್ಪತ್ತಿಯಾಗುವುದು. ಚರ್ಮದ ಮೂಲಕ, ಶರೀರದಾಚೆ ವಿಸರ್ಜಿಸಲ್ಪಡುವ ಅಂಶವಾದ್ದರಿಂದ ಕೂದಲು 'ಮಲ'. ವಾಸ್ತವವಾಗಿ ಕೂದಲಿನ ಬುಡವು ಚರ್ಮದಲ್ಲಿ ನೆಟ್ಟಿದ್ದಾಗ ಮಾತ್ರ ಸೂಕ್ಷ್ಮರಕ್ತನಾಳಗಳ ಮೂಲಕ ಪೋಷಣೆ ಹೊಂದುವುದು. ಬುಡದ ಹೊರತಾಗಿ ಕೂದಲಿನ ಉಳಿದೆಲ್ಲಾ ಭಾಗವು ನಿರ್ಜೀವ. ಕೂದಲಿನ ಪೋಷಣೆಯಾಗುವುದು ಚರ್ಮಕ್ಕೆ ಪೋಷಣೆಯನ್ನು ಒದಗಿಸುವ 'ರಸ-ರಕ್ತಧಾತು'ವಿನಿಂದ. ಕೂದಲಿನ ರಾಸಾಯನಿಕ ಸಂಘಟನೆ, ಜೈವಿಕಾಂಶಗಳೆಲ್ಲಾ ಚರ್ಮ-ಮಾಂಸದ ಮೂಲಕ ಆಚೆ ನೂಕಲ್ಪಟ್ಟಂಥವು. ಕೂದಲಿನ ರಚನೆಯು 'ಕೆರಟಿನ್' ಎಂಬ ನಾರು-ಪ್ರೊಟೀನಿನಿಂದ ಆಗಿರುವುದು. ಕೆರಾಟಿನ್ ಎಂಬುದು ಜೀವಿಗಳಲ್ಲಿ ಕೂದಲು, ಹೊಪ್ಪಳಿಕೆ, ರೆಕ್ಕೆ, ಕೊಂಬು, ಉಗುರು ಮೊದಲಾದ ಭಾಗಗಳಲ್ಲಿ ಕಂಡುಬರುವ ನಾರಿನಂಥ ಗಟ್ಟಿ ಅಂಶ. ಕಾರ್ಬನ್, ಆಕ್ಸಿಜನ್, ಹೈಡ್ರೋಜನ್, ನೈಟ್ರೋಜನ್, ಸಲ್ಫರ್, ಅಮಿನೋ ಆಸಿಡ್ಸ್ – ಇವು ಕೂದಲಿನ ಸ್ವಭಾವವನ್ನು ನಿರ್ಧರಿಸುತ್ತವೆ. ಕೂದಲು ಕೂಡ ಮೂಳೆಯಂತೆ ಕ್ಯಾಲ್ಸಿಯಂ ಅನ್ನು ಹೊಂದಿರುತ್ತದೆ. ಒಟ್ಟಿನಲ್ಲಿ ಕೂದಲನ್ನು ಗಮನಿಸಿ ದೇಹದ ಆಂತರಿಕ ಸ್ಥಿತಿಯನ್ನು ಗುರುತಿಸಬಹುದು.

ಪ್ರಭಾವಗಳು

ವ್ಯಕ್ತಿಯ ದೇಹಸ್ವಭಾವ ಹುಟ್ಟಿನಿಂದ ಬಂದಿರುತ್ತದೆ; ಬಹುತೇಕ ಅದನ್ನು ಬದಲಿಸಲು ಸಾಧ್ಯವಿಲ್ಲ. ಹುಟ್ಟುವಾಗ ಎಷ್ಟು ಕೇಶ-ರೋಮಕೂಪಗಳಿರುತ್ತವೆಯೋ ಅಷ್ಟೇ ಸಂಖ್ಯೆಯಲ್ಲಿ ಕೊನೆಯವರೆಗೂ ಇರುತ್ತವೆ. ಕೂದಲಿನ ಬಣ್ಣ, ರಚನೆ, ಉದುರುವಿಕೆ, ಬೆಳೆಯುವಿಕೆ, ಒರಟುತನ, ಜಿಗುಟುತನ ಮುಂತಾದ ಸ್ವಭಾವಗಳು ಕೂಡ ಹುಟ್ಟಿನಿಂದ ಬರುವ ಬಳುವಳಿ. ದೇಹ ಬೆಳೆದಂತೆ ವಯಸ್ಸಿಗೆ ತಕ್ಕ ಬದಲಾವಣೆ ಅನಿವಾರ್ಯ. ನಲವತ್ತು ದಾಟಿದ ನಂತರ ಎಲ್ಲಾ ಅಂಗಾಂಶಗಳಂತೆ ಕೂದಲಿನ ಪೋಷಣೆ, ಬೆಳವಣಿಗೆ, ರಿಪೇರಿಗಳು ಕಡಿಮೆಯಾಗತೊಡಗುತ್ತವೆ. ವಯಸ್ಕರಲ್ಲಿ ದಿನಕ್ಕೆ ಸುಮಾರು ಐವತ್ತರಿಂದ ನೂರು ಕೂದಲುಗಳು ಉದುರುವುದು ಸಹಜವೆಂದು ಒಂದು ಅಂಕಿ–ಅಂಶ. ಈ ಸಂಖ್ಯೆ ಕೂಡ ವಾತಾವರಣ, ಆಹಾರ, ನಿದ್ರೆ, ದೈನಂದಿನ ಚಟುವಟಿಕೆ, ತಲೆಸ್ನಾನ, ಮಾರ್ಜಕಗಳನ್ನೆಲ್ಲಾ ಆಧರಿಸಿರುತ್ತದೆ.

ದಿನವೂ ಉದುರಿದಂತೆ ಕೂದಲಿಗೆ ಸಿಗುವ ಪೋಷಣೆಯನ್ನು ಆಧರಿಸಿ ತಿಂಗಳಲ್ಲಿ ಸುಮಾರು ಏಳು ಮಿಲಿಮೀಟರ್‌ನಿಂದ ಒಂದೂವರೆ ಸೆಂಟಿಮೀಟರಿನಷ್ಟು ಉದ್ದವೂ ಬೆಳೆಯುತ್ತದೆ. ವಯಸ್ಸು ಮೀರಿದಂತೆ ಇದು ಕಡಿಮೆಯಾಗುತ್ತದೆ. ಕೇಶ-ರೋಮಕೂಪಗಳು ಯಾವುದೋ ಕಾರಣಕ್ಕೆ ಮುಚ್ಚಿ ಹೋದರೆ ಚರ್ಮದಾಚೆ ಕೂದಲು ಇಣುಕುವುದೇ ಇಲ್ಲ. ಬಿಸಿಲು, ಉಷ್ಣವಾತಾವರಣದಲ್ಲಿ ಕೆಲಸ, ಬಿಸಿಬಿಸಿ ನೀರಿನಿಂದ ತಲೆಸ್ನಾನ, ಬಿಸಿಲಿನಲ್ಲಿ ತಲೆ ಒಣಗಿಸುವುದು, ಹೇರ್ ಡ್ರೈಯರ್ ಬಳಕೆ, ಚಿಂತೆ-ಒತ್ತಡದ ದಿನಚರಿಯಲ್ಲಿ ಕೂದಲಬುಡಕ್ಕೆ ರಕ್ತದ ಒತ್ತಡ, ಉಷ್ಣತೆ ತಗುಲಿ ಉದುರುವ ತೀವ್ರತೆ ಹೆಚ್ಚಬಹುದು. ನಿದ್ದೆಗೆಡುವುದರಿಂದ ಜೈವಿಕಗಡಿಯಾರದ ಏರುಪೇರಿನಿಂದ ಪೋಷಣೆಯ ಕೊರತೆಯಾಗಿ ಬೆಳವಣಿಗೆ ಕುಂಠಿತವಾಗಬಹುದು. ಉಪ್ಪು, ಖಾರ, ಹುಳಿ, ಕ್ಷಾರೀಯ ಪದಾರ್ಥಗಳ ಸತತ ಸೇವನೆಯಿಂದ ಕೂದಲಿನ ಪೋಷಣೆಯಲ್ಲಿ ಏರುಪೇರಾಗುವುದರಿಂದ, ಬುಡಸಮೇತ ಉದುರುವುದನ್ನು ಗಮನಿಸಬಹುದು.



ಬಹಳ ದಿನಗಳು ಜ್ವರವನ್ನು ಅನುಭವಿಸುವುದು, ಸತತವಾಗಿ ರೋಗವೊಂದರಿಂದ ಬಳಲುವುದು, ತೀಕ್ಷ್ಣೌಷಧಗಳ ಸೇವನೆ, ಕೆಲವು ಚಿಕಿತ್ಸೆಗಳ ದುಷ್ಪರಿಣಾಮ - ಇವು ಕೂಡ ತಾತ್ಕಾಲಿಕವಾಗಿಯೂ ಅಥವಾ ಸ್ಥಿರವಾಗಿಯೂ ಕೂದಲಿನಲ್ಲಿ ಬದಲಾವಣೆಗಳನ್ನು ತರಬಹುದು. ಚಟುವಟಿಕೆರಹಿತ, ಸದಾ ಕುಳಿತು, ಮಲಗಿಯೇ ಇರುವ ದಿನಚರಿಯವರು, ಹವಾನಿಯಂತ್ರಿತ ವಾತಾವರಣದಲ್ಲಿಯೇ ಇರುವವರಿಗೆ, ರಾತ್ರಿ ಮಲಗುವಾಗ ವಿನಾ ಕಾರಣ ಎಣ್ಣೆ ಹಾಕಿಕೊಳ್ಳುವ ಅಭ್ಯಾಸದಿಂದ, ಸದಾ ಶೀತಲೀಕೃತ/ ಶೀತಲಾಹಾರ, ಜೀರ್ಣಕ್ಕೆ ಜಡವಾಗುವ ಮೈದಾಪದಾರ್ಥಗಳ ಸೇವನೆ, ಬೇಕರಿ ತಿನಿಸು, ಕರಿದ ಪದಾರ್ಥಗಳ ಸೇವನೆ, ಹಸಿವೆ-ಬಾಯಾರಿಕೆಯನ್ನು ಗಮನಿಸದೆ ಕುಡಿಯುತ್ತಾ-ತಿನ್ನುತ್ತಾ ಇರುವವರಿಗೆ, ತಡರಾತ್ರಿಯ ಆಹಾರಸೇವನೆಯ ಅಭ್ಯಾಸದಿಂದ ಕೂದಲಿನ ಬುಡದ ಸೂಕ್ಷ್ಮರಕ್ತನಾಳಗಳು ಮುಚ್ಚಿ, ಪೋಷಣೆಯೇ ತಲುಪದಂತೆ ತಡೆಯಾದರೂ ಕೂದಲಿನ ಬೆಳವಣಿಗೆ ಮಂದಗೊಳ್ಳುತ್ತದೆ.

ದೇಹದ ಇತರ ಅಂಗಾಂಶಗಳಂತೆ ಕೂದಲು ಕೂಡ ನಮ್ಮ ಆಹಾರ, ನಿದ್ರೆ, ಚಟುವಟಿಕೆಗಳ ಫಲಿತಾಂಶ ಎಂಬುದನ್ನು ಮರೆಯಬಾರದು. ❖

ರಕ್ಷಣೆಗೆ ಸುಲಭೋಪಾಯಗಳು

ಸಿಹಿ, ಹುಳಿ, ಉಪ್ಪು, ಖಾರ, ಕಹಿ, ಒಗರುರುಚಿಯ ಆಹಾರಗಳೆಲ್ಲವೂ ಸೇವನೆಯಲ್ಲಿರಲಿ. ಆದರೆ, ದಿನವೂ ಉಪ್ಪು, ಹುಳಿ, ಖಾರಪ್ರಧಾನವಾದ ಆಹಾರಾಭ್ಯಾಸ ಬೇಡ. ಸಕಾಲದಲ್ಲಿ ಜೀರ್ಣವಾಗುವಂತೆ ಸೇವಿಸುವುದು ಆರೋಗ್ಯಕರ. ಕೂದಲಿನ ಸಹಜ ಹೊಳಪು, ಮೃದುತ್ವ, ಗಾಢತ್ವಕ್ಕೆ ಅಡುಗೆಯಲ್ಲಿ ಏಕದಳ, ದ್ವಿದಳ, ಮಾಂಸ, ಸೊಪ್ಪು-ತರಕಾರಿಗಳು, ಗಡ್ಡೆ-ಗೆಣಸು, ಹಾಲು, ಬೆಣ್ಣೆ-ತುಪ್ಪ, ಎಣ್ಣೆ-ಎಣ್ಣೆಕಾಳುಗಳು, ದಾಳಿಂಬೆ, ನೆಲ್ಲಿಕಾಯಿ, ಒಣದ್ರಾಕ್ಷಿ, ಅಂಜೂರ, ಖರ್ಜೂರ – ಇವುಗಳು ಬೇಕು. ಹೀರೆ, ಹಾಲುಗುಂಬಳ, ಬೂದುಗುಂಬಳ, ಪಡವಲ, ಪಾಲಕ್, ಹರಿವೆ, ದಂಟು, ಮೆಂತೆ, ಅಮೃತಬಳ್ಳಿಯ ಚಿಗುರು, ಒಂದೆಲಗ, ಕರಿಬೇವಿನ ಎಲೆಗಳ ಒಗ್ಗರಣೆಯೂ ಸಹಾಯಕ. ನಿತ್ಯವೂ ಮಜ್ಜಿಗೆ ಕುಡಿಯುವುದು, ಮೊಸರಿನ ನಿತ್ಯ ಸೇವನೆ, ರಾತ್ರಿ ಮೊಸರಿನ ಅಭ್ಯಾಸ, ಮಲಗುವಾಗ ಹಾಲು, ಹಣ್ಣು ಸೇವಿಸುವುದು ತಲೆಹೊಟ್ಟಿಗೆ ಕಾರಣವಾಗಿ ಕೂದಲನ್ನು ಬೆಳೆಯಗೊಡದಂತೆ ತಡೆಯಬಹುದು. ಆದ್ದರಿಂದ ರಾತ್ರಿಯ ಆಹಾರದಲ್ಲಿ ಇವು ಬೇಡ. ಉಪ್ಪಿನಕಾಯಿ, ಹುಳಿಬಂದ, ಫ್ರಿಜ್‌ನಲ್ಲಿಟ್ಟ ದೋಸೆ-ಇಡ್ಲಿಹಿಟ್ಟು, ಟೊಮೆಟೊ ಅತಿಬಳಕೆ, ಲಿಂಬೆಹುಳಿ, ಸೋಡಾ ಇವುಗಳ ಸತತ ಬಳಕೆ ಸಲ್ಲದು. ಮೇಲುಪ್ಪು, ಖಾರ, ಮಸಾಲೆ ಒಳಿತಲ್ಲ. ಬೇಗನೆ ಕೂದಲು ನೆರೆಯುವುದಕ್ಕೆ ಇವುಗಳೂ ಕಾರಣ.

ರಾತ್ರಿ ಬೇಗನೆ ನಿದ್ರೆ, ಮುಂಜಾನೆ ಬೇಗ ಎದ್ದು ಚಟುವಟಿಕೆ ಆರಂಭಿಸುವುದು, ಹಗಲಲ್ಲಿ ಮಲಗದೆ ದಿನಚರಿಯಲ್ಲಿ ವ್ಯವಸ್ಥಿತವಾಗಿರುವುದು ಒತ್ತಡ, ಚಿಂತೆ, ಗಡಿಬಿಡಿಯಿಂದ ದೂರವಿರಿಸಿ ಕೂದಲಿನ ಚೈತನ್ಯಕ್ಕೂ ಸಹಾಯಕ.

ಬಿಸಿಲು, ಗಾಳಿ, ಹಿಮ, ದೂಳು ಮೊದಲಾದ ಅತಿಯಾದ ವಾತಾವರಣದ ಏರುಪೇರಿನಿಂದ ಕೂದಲನ್ನು ರಕ್ಷಿಸಿಕೊಳ್ಳುವುದು. ಟೋಪಿ, ಪೇಟ, ಹ್ಯಾಟ್, ಪಗಡಿ ಮೊದಲಾದ ತಲೆಯನ್ನು ಬಿಸಿಯಾಗಿಸದ ರಕ್ಷಕಗಳು. ಸತತವಾಗಿ ಹೆಲ್ಮೆಟ್ ಧಾರಣೆ ಕೂಡ ಕೂದಲಿಗೆ ಹಾನಿ. ತಲೆಸ್ನಾನಕ್ಕೆ ಹೂಬಿಸಿ ಅಥವಾ ತಣ್ಣೀರು ಉತ್ತಮ. ಸ್ನಾನಕ್ಕೂ ಮುನ್ನ ಕೊಬ್ಬರಿ ಎಣ್ಣೆಯಿಂದ ಕೂದಲಿನ ಬುಡಗಳಿಗೆ ಪೋಷಣೆ ನೀಡಬಹುದು.

ನಿತ್ಯವೂ ತಲೆಯ ಚರ್ಮಕ್ಕೆ ಎಣ್ಣೆ ಹಚ್ಚುವುದು ಕೇಶಗಳ ಬುಡವನ್ನು ಗಟ್ಟಿಯಾಗಿಸಿ, ಸಹಜವರ್ಣವನ್ನು ಕಾದಿಡುತ್ತದೆ. ತಲೆಗೆ ಎಣ್ಣೆಹಾಕುವುದು ಹಗಲಿನಲ್ಲಿ ಕ್ಷೇಮ. ಎರಡು-ಮೂರು ದಿನಗಳಿಗೊಮ್ಮೆ ತಲೆಸ್ನಾನವನ್ನೂ ಮಾಡುವುದು. ಬಹಳ ಬೆವರುವ ಮೈಯವರು, ಬೇಸಿಗೆಯಲ್ಲಿ, ಕರಾವಳಿಯ ಜನರಿಗೆ ನಿತ್ಯವೂ ತಲೆಸ್ನಾನ ಹಿತಕರ. ಕಡಿಮೆ ನೊರೆಬರುವ ಮೃದುಮಾರ್ಜಕಗಳ ಬಳಕೆಯಿರಲಿ. ❖



ಸರಿಯಾಗಿ ನಿಲ್ಲಿ!

ಡಾ. ವೀಣಾ ಎಸ್. ಭಟ್

ನಮ್ಮ ಇಡೀ ಜೀವನವೆಲ್ಲ ಸ್ವಂತ ಕಾಲಿನ ಮೇಲೆ ನಿಲ್ಲಬೇಕಾದದ್ದು ಅನಿವಾರ್ಯ! ನಾವು ನೇರ ನಿಲ್ಲಲು, ನಡೆಯಲು, ಕುಣಿಯಲು ನಮ್ಮ ಅಸ್ಥಿ-ಸ್ನಾಯು-ನರವ್ಯೂಹ ವ್ಯವಸ್ಥೆಗಳು ನಿರಂತರವಾಗಿ ತಮ್ಮ ಕಾರ್ಯ ನಿರ್ವಹಿಸುತ್ತಿರಬೇಕಾಗುತ್ತವೆ. ಈ ಕ್ರಿಯೆಗಳು ನಿಂತರೆ ನಾವೆಲ್ಲರೂ ಮಣ್ಣೋ ಬೂದಿಯೋ ಆಗಿಬಿಡುತ್ತೇವೆ. ಹೆಚ್ಚಿನವರಿಗೆ ಒಮ್ಮೊಮ್ಮೆ ತಮ್ಮ ಶರೀರವೇ ಭಾರವಾಗಿ ಬಿಡುತ್ತವೆ. ಯಾವುದಾದರೂ ಕಾರಣಗಳಿಂದ ಕೈ-ಕಾಲುಗಳ ನ್ಯೂನತೆಯಾದಾಗ ನಮ್ಮ ಶರೀರದ ಭಾರವನ್ನು ಇನ್ನೊಬ್ಬರ ಮೇಲೋ ಅಥವಾ ಕೋಲಿನ ಮೇಲೋ ಹೇರುವ ಪ್ರಸಂಗ ಹಲವರಿಗೆ ಬರಬಹುದು. ಅಷ್ಟೇ ಅಲ್ಲದೇ, ಹಿಮ್ಮಡಿನೋವು, ವ್ಯಾರಿಕೋಸ್‌ವೇನ್ ಸಮಸ್ಯೆ, ಕಾಲುನೋವು, ಮಂಡಿನೋವು, ಬೆನ್ನುನೋವು – ಹೀಗೆ ಹತ್ತು ಹಲವು ರೀತಿಯ ನೋವುಗಳಿಂದ, ಸಮಸ್ಯೆಗಳಿಂದ ನರಳುವಂತಾಗಬಹುದು. ಇವಕ್ಕೆಲ್ಲ ಹಲವು ತರಹದ ಚಿಕಿತ್ಸೆಗಳು ದಿನೇದಿನೇ ಹೆಚ್ಚುತ್ತಿದ್ದರೂ ಮನುಕುಲದ ನೋವು, ನರಳುವಿಕೆಯೂ ಏರುಗತಿಯಲ್ಲಿಯೇ ಇದೆ.

ಏಕೆ ಹೀಗೆ?

ಇದಕ್ಕೆಲ್ಲಾ ಮುಖ್ಯ ಕಾರಣ, ನಮ್ಮ ದಿನನಿತ್ಯದ ಸಹಜಭಂಗಿಯಲ್ಲಿ ನಿಂತಾಗಲಿರಲಿ, ಕುಳಿತಾಗಿರಲಿ, ನಡೆಯುವಾಗಿರಲಿ ವ್ಯವಸ್ಥಿತ ರೀತಿಯಲ್ಲಿ ಶರೀರದ ಭಾರ ಸೊಂಟದಿಂದ ಕೆಳಭಾಗದಲ್ಲಿ ಮತ್ತು ಕಾಲುಗಳಲ್ಲಿ ಸಮನಾಗಿ ಹಂಚಿಕೆಯಾಗದೇ ಇರುವುದು. (ಹೆಚ್ಚಿನವರು ಧರಿಸುವ ಪಾದರಕ್ಷೆಗಳಲ್ಲಿ ಒಂದೊಂದು ಕಡೆ ಹೆಚ್ಚು ಕಡಿಮೆ ಸವೆದಿರುವುದನ್ನು ಗಮನಿಸಿರಬಹುದು.)

ಕೆಲವರ ನಿಂತ ಸಹಜಭಂಗಿಯನ್ನು ಗಮನಿಸಿದರೆ, ಅವರು ಎರಡು ಕಾಲಿನ ಪಾದಗಳು ಹೊರಕ್ಕೆ ಚಾಚಿರುವುದು ಕಂಡುಬರುತ್ತದೆ. ಪಾದಗಳ ಹಿಮ್ಮಡಿ ಒಳಗೂ ಮತ್ತು ಮುಮ್ಮಡಿಗಳು ಹೊರಗಡೆಗೂ ಚಾಚಲ್ಪಟ್ಟು, ನಡೆಯುವಾಗಲೂ ಇದೇ ರೀತಿ ಮುಂದುವರೆಯಲ್ಪಡುತ್ತದೆ. ಈ ರೀತಿ ಹೊರಚಾಚಿ ನಿಂತಾಗ ನಮ್ಮ ಪಾದಗಳ ಮೇಲೆ ಸಮನಾಗಿ ಭಾರ ಹಂಚಿಕೆಯಾಗಿರುವುದಿಲ್ಲ. ಬದಲಾಗಿ ಪಾದದ ಹೊರ ಅಂಚಿನ ಮೇಲೆ ಹೆಚ್ಚಿನ ಭಾರ ಬೀಳುತ್ತದೆ. ಅದರಲ್ಲೂ ಹಿಮ್ಮಡಿಯ ಹೊರ ಅಂಚಿನ ಮೇಲೆ ಅತ್ಯಧಿಕ ಭಾರ ಇರುತ್ತದೆ. ಹೀಗೆ ಪಾದದ ನಾಲ್ಕೂ ಮೂಲೆಗಳ ಮೇಲೆ ಸರಿಯಾಗಿ ಭಾರ ಹಂಚಿಕೆಯಾಗದೇ ಕಾಲಕ್ರಮೇಣ ಕಾಲುಗಳ ಸಾಮರ್ಥ್ಯ ಕಡಿಮೆಯಾಗುತ್ತಾ ಬರುತ್ತದೆ. ಮುಂದೆ, ನಮ್ಮ ಶರೀರವೇ ನಮಗೆ ಭಾರವಾಗುವ ಹಾಗೆ ಆಗುತ್ತದೆ. ಕಾಲುನೋವು, ಹಿಮ್ಮಡಿನೋವುಗಳು ಬಾಧಿಸುವುದು ಇದೇ ಕಾರಣಕ್ಕಾಗಿ.

ಈ ಸಮಸ್ಯೆಗಳಿಗೆ ನೀವು ಸಿಲುಕಬಾರದು ಎಂದಾದಲ್ಲಿ ನೀವು ಅನುಸರಿಸಬೇಕಾದ ಸ್ಥಿತಿಯೊಂದಿದೆ: ಅದೇ ಸಮಸ್ಥಿತಿ.

ಸಮಸ್ಥಿತಿಯಲ್ಲಿ ನಿಲ್ಲಿ

ಕಾಲಿನ ಪಾದದಡಿಯಲ್ಲಿ ನಾಲ್ಕು ಮೂಲೆಗಳ ಮೇಲೆ ನಾಲ್ಕು ಬಿಂದುಗಳನ್ನು ಗುರುತಿಸಿ. ಒಟ್ಟು ಎರಡು ಪಾದಗಳು ಸೇರಿ ಎಂಟು ಬಿಂದುಗಳ ಮೇಲೆ ಶರೀರದ ಭಾರ ಸಮನಾಗಿ ಹಂಚಿ ನಿಂತರೆ ಅದು ಪಾದಗಳ ಸಮಸ್ಥಿತಿ. ಈ ಸ್ಥಿತಿಯಲ್ಲಿ ಪಾದಗಳು ಹಿಮ್ಮಡಿಯಿಂದ ಮುಮ್ಮಡಿಯವರೆಗೆ ಪೂರ್ತಿ ಜೋಡಿಸಿರುತ್ತದೆ.

ಪಾದದ ಒಳಅಂಚು ನೆಲಕ್ಕೆ ಒತ್ತುತ್ತ ಕಾಲು ಸ್ವಲ್ಪ ಒಳಗೆ ತಿರುಗಿಸಬೇಕು. ಕಾಲುಗಳಲ್ಲಿ ಸಮತೆಯನ್ನು ಸ್ಥಾಪಿಸುತ್ತಾ, ಮುಂದಿನ ಹಂತದಲ್ಲಿ ಮೊಣಕಾಲಿನ ಚಿಪ್ಪುಗಳನ್ನು ಒಳಕ್ಕೆ, ಮೇಲಕ್ಕೆ ಸೆಳೆದುಕೊಳ್ಳಬೇಕು.


ಮಂಡಿಯ ಮುಂಭಾಗವನ್ನು ಹೊರಗಿನಿಂದ ಒಳಗೂ, ಹಿಂಭಾಗವನ್ನು ಒಳಗಿನಿಂದ ಹೊರಗೂ, ಹೊರಳಿಸುತ್ತಾ ಬಾಳೆದಿಂಡು ಹೇಗೆ ಗೋಲಾಕಾರವಾಗಿರುತ್ತದೆಯೋ ಹಾಗೆಯೇ ಕಾಲಿನ ಸ್ನಾಯುಗಳನ್ನೂ ಗೋಲಾಕಾರವಾಗಿರಿಸಲು ಪ್ರಯತ್ನಿಸಬೇಕು. ಕಿಬ್ಬೊಟ್ಟೆಯನ್ನು ಸೆಳೆದು ನೇರವಾಗಿಸಿ, ಬೆನ್ನೆಲುಬುಗಳನ್ನು ಒಳಸೆಳೆದು ಸಮಾನಾಂತರಗೊಳಿಸುತ್ತಾ, ಭುಜಗಳನ್ನು ಹಿಂದಕ್ಕೆ ಸೆಳೆಯುತ್ತಾ ಎದೆಯನ್ನು ಹಿಗ್ಗಿಸಿ. ಯಾವುದೇ ಒತ್ತಡ ಬೇಡ. ಕತ್ತು ಹಾಗೂ ತಲೆ ಸರಳರೇಖೆಯಲ್ಲಿದ್ದು ದೃಷ್ಟಿಯೂ ನೇರವಾಗಿ ಎದುರಿಗಿರಲಿ. ಶ್ವಾಸೋಚ್ಛ್ವಾಸ ಸಹಜವಾಗಿರಲಿ. ಶರೀರದ ಭಾರವೂ ಹಿಮ್ಮಡಿ ಹಾಗೂ ಹೆಬ್ಬೆರಳುಗಳ ಮೇಲೆ ಸಮವಾಗಿರುವಂತೆ ನೋಡಿಕೊಳ್ಳಿ. ಇದೇ ಸಮಸ್ಥಿತಿ. ಈ ಸಮಸ್ಥಿತಿಯಲ್ಲಿ ದೀರ್ಘಕಾಲ ಇರಬಹುದು ಮತ್ತು ಈ ಸ್ಥಿತಿಯಲ್ಲಿ ನಿರ್ಭಾರದ ಅನುಭವವನ್ನು ಪಡೆಯಬಹುದು.

ಹೆಚ್ಚಿನ ಸಮಯ ನಿಂತು ಕೆಲಸ ಮಾಡುವವರು – ಉದಾಹರಣೆಗೆ, ಅಡುಗೆಮನೆಯಲ್ಲಿ ನಿಂತು ಅಡುಗೆ ಮಾಡುವ ಗೃಹಿಣಿಯರು,ಟ್ರಾಫಿಕ್ ಪೊಲೀಸರು, ಬಸ್ ಕಂಡಕ್ಟರ್‌ಗಳು, ದೀರ್ಘಾವಧಿ ಶಸ್ತ್ರಚಿಕಿತ್ಸೆಯನ್ನು ಮಾಡುವ ವೈದ್ಯರು, ಶಾಲಾ-ಕಾಲೇಜು ಶಿಕ್ಷಕರು – ಹೀಗೆ ಎಲ್ಲರೂ ಅನುಸರಿಸಬೇಕಾದ ಸೂಕ್ತ ಭಂಗಿಯೇ ಸಮಸ್ಥಿತಿ.

ಬೆನ್ನುನೋವು, ಸೊಂಟನೋವು, ಕೀಲುನೋವು ಅಥವಾ ಗರ್ಭಾಶಯ, ಮೂತ್ರಕೋಶ ಜಾರುವಿಕೆ – ಇಂಥವುಗಳಿಂದ ಬಳಲುತ್ತಿರುವವರು ಸಮಸ್ಥಿತಿಯಲ್ಲಿ ನಿಲ್ಲುವುದು ಬಹಳ ಮುಖ್ಯ. ಇವರು ಸಮಸ್ಥಿತಿಯಲ್ಲಿ ನಿಲ್ಲಬೇಕಾದ ಮುಖ್ಯವಾಗಿ ಪಾದಗಳನ್ನು ಒಳಮುಖವಾಗಿ, ಹಿಮ್ಮಡಿಗಳನ್ನು ಹೊರಮುಖವಾಗಿಟ್ಟು ನಿಂತುಕೊಂಡು, ಮಂಡಿಗಳನ್ನು ಒಳಕ್ಕೆ ಸೆಳೆದುಕೊಂಡಾಗ, ಕಾಲಿನ ಹಿಂಭಾಗ ನೇರವಾಗಿ ಕಾಲುಗಳ ಮೇಲೆ ಸಮಭಾರ ಬಿದ್ದು, ಬೆನ್ನಿನ ಸ್ನಾಯುಗಳು ಕೂಡ ನೇರಗೊಳ್ಳುವುದರಿಂದ ಈ ಸ್ಥಿತಿಯಲ್ಲಿ ಅತ್ಯಂತ ನೆಮ್ಮದಿ ಎನಿಸುವುದು. ಹೀಗೆ ನಿಲ್ಲುವುದರಿಂದ ದೇಹದ ಜಡತೆಯೂ ಮಾಯವಾಗಿ, ಮನಸ್ಸು ಕೂಡ ಚುರುಕಾಗುತ್ತದೆ. ಸಮಸ್ಥಿತಿಯು ಯೋಗಾಸನದ ಆರಂಭದ ಸ್ಥಿತಿಯಾದರೂ ಇದೇ ಒಂದು ಆಸನ ಕೂಡ ಆಗಿ ಸಂಪೂರ್ಣ ಫಲವನ್ನು ಕೊಡಬಲ್ಲದು. ಈ ಸಮಸ್ಥಿತಿಯ ಭಂಗಿಯನ್ನು ಅನುಸರಿಸುತ್ತ, ಜೊತೆಗೆ ಪೌಷ್ಟಿಕವಾದ, ಪ್ರಕೃತಿಸಹಜವಾದ, ಋತುಗನುಗುಣವಾದ ಆಹಾರವನ್ನು ಹಿತಮಿತವಾಗಿ ಸೇವಿಸುತ್ತ, ಶಾರೀರಿಕ ಸಮತೂಕವನ್ನು ಕಾಯ್ದುಕೊಳ್ಳುತ್ತಾ ಹೋಗಬೇಕು. ಶಾರೀರಿಕ ಸಮಸ್ಥಿತಿಯ ಜೊತೆಗೆ ಮನಸ್ಸಿನ ಅಲೋಚನೆಗಳನ್ನು ಸಮಸ್ಥಿತಿಗೆ ತಂದಾಗ, ಜೀವನ ಏಳು-ಬೀಳುಗಳನ್ನು ಸಮಭಾವದಿಂದ ಸ್ವೀಕರಿಸಿದಾಗ, ಅದು ನಿಜವಾದ ಯೋಗ ಎನಿಸಿಕೊಳ್ಳುತ್ತದೆ. ಆ ಯೋಗ ಎಲ್ಲರಿಗೂ ಬರಲಿ, ಸಿಗಲಿ. ನಮ್ಮ ಶರೀರ ನಮ್ಮ ಕಾಲುಗಳ ಮೇಲೆ ನಿರ್ಭಾರಸ್ಥಿತಿಯಲ್ಲಿರಲಿ. ❖



ಮಹಿಳೆಯರ ಮಧ್ಯವಯಸ್ಸಿನ ಬಿಕ್ಕಟ್ಟುಗಳು



ಜೀವನಶೈಲಿ ಹೀಗಿರಲಿ:

- ಆದಷ್ಟೂ ನಿಮ್ಮ ಎತ್ತರಕ್ಕೆ ತಕ್ಕ ತೂಕವನ್ನು ಹೊಂದಿರಲು ಪ್ರಯತ್ನಿಸಿ. ಈ ಬಗ್ಗೆ ಆರಂಭದಿಂದಲೂ ಕಾಳಜಿ ಇದ್ದರೆ ಒಳಿತು.
- ಆಹಾರದಲ್ಲಿ ಸಿಹಿತಿಂಡಿಗಳು, ಬೆಣ್ಣೆ, ತುಪ್ಪ, ಎಣ್ಣೆಯಲ್ಲಿ ಕರಿದ, ಹುರಿದ ಪದಾರ್ಥಗಳು ಆದಷ್ಟು ಮಿತಿಯಲ್ಲಿರಲಿ. ಸಂಸ್ಕರಿಸಿದ ಆಹಾರಗಳು ಬೇಡವೇ ಬೇಡ.
- ಸೊಪ್ಪು, ಹಸಿರು ತರಕಾರಿಗಳು, ಹಣ್ಣು, ಮೊಳಕೆಕಾಳುಗಳು, ಮೊಟ್ಟೆ, ಹಾಲು, ದ್ವಿದಳ ಧಾನ್ಯಗಳು ನಿಮ್ಮ ನಿತ್ಯದ ಆಹಾರದಲ್ಲಿರಲಿ. ವೈದ್ಯರ ಸಲಹೆಯ ಮೇರೆಗೆ ಪೂರಕ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ತೆಗೆದುಕೊಳ್ಳಿ.
- ಯಾವುದಾದರೊಂದು ಬಗೆಯ ವ್ಯಾಯಾಮವನ್ನು ಕಡ್ಡಾಯವಾಗಿ ರೂಢಿಸಿಕೊಳ್ಳಿರಿ. ವಾಕಿಂಗ್, ಜಾಗಿಂಗ್, ಜಿಮ್‌ನಲ್ಲಿ ಬೆವರಿಳಿಸುವಿಕೆ,
- ಯೋಗ, ಈಜು, ಯಾವುದಾದರೂ ಸರಿಯೆ, ಆದರೆ ನಿಯಮಿತವಾಗಿರಲಿ. ನೆನಪಿಡಿ, ವ್ಯಾಯಾಮದಿಂದ ನಿಮ್ಮ ಸ್ನಾಯುಗಳು ಸಬಲಗೊಂಡು ಸುಸ್ಥಿತಿಯಲ್ಲಿರುತ್ತವೆ.
- ನಿಮ್ಮ ಮಾನಸಿಕ ತುಮುಲಗಳನ್ನು ಕುಟುಂಬವರೊಡನೆ ಮತ್ತು ಆಪ್ತರೊಡನೆ ಹಂಚಿಕೊಳ್ಳಿರಿ.
- ಅತಿಯಾದ ಮೊಬೈಲ್ ಬಳಕೆ ಮತ್ತು ಇತರ ರೀತಿಯ ಕಾಲಹರಣವನ್ನು ಮಿತಿಗೊಳಿಸಿ. ಒಳ್ಳೆಯ ಪುಸ್ತಕಗಳನ್ನು ಓದಿ ನಿಮ್ಮ ಜ್ಞಾನ ಭಂಡಾರವನ್ನು ವೃದ್ಧಿಸಿಕೊಳ್ಳಿ. ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ತಪ್ಪದೇ ವೀಕ್ಷಿಸಿ.
- ಒಳ್ಳೆಯ ಸ್ನೇಹಿತರನ್ನು ಸಂಪಾದಿಸಿ. ಸದಾ ಕ್ರಿಯಾಶೀಲರಾಗಿರಿ. ಆಗಾಗ್ಗೆ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ. ಇದು ನಿಮ್ಮ ದೇಹ ಮತ್ತು ಮನಸ್ಸುಗಳನ್ನು ಪ್ರಫುಲ್ಲವಾಗಿಡುತ್ತದೆ.
- ನಿಮ್ಮ ಪ್ರವೃತ್ತಿಗಳನ್ನು ಪ್ರಜ್ಞಾಪೂರ್ವಕವಾಗಿ ಪೋಷಿಸಿಕೊಳ್ಳಿರಿ.
- ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳಿರಿ. ರಕ್ತದೊತ್ತಡ, ಮಧುಮೇಹ, ಕೊಬ್ಬಿನಾಂಶವನ್ನು ಆರಂಭದಿಂದಲೇ ನಿಯಂತ್ರಣದಲ್ಲಿಡುವುದು ಸೂಕ್ತ.
- ವೈದ್ಯರ ಸಲಹೆಯ ಮೇರೆಗೆ ಕ್ಯಾನ್ಸರ್ ಸ್ಕ್ರೀನಿಂಗ್ ಪರೀಕ್ಷೆಗಳಾದ ಪ್ಯಾಪ್ ಸ್ಮಿಯರ್ ಪರೀಕ್ಷೆ ಮತ್ತು ಮ್ಯಾಮೊಗ್ರಾಮ್ ಪರೀಕ್ಷೆಗಳನ್ನು ಮಾಡಿಸಿಕೊಳ್ಳಿ.

ಡಾ. ವಿನಯ ಶ್ರೀನಿವಾಸ್

ನಲವತ್ತೈದರ ಹರೆಯ ತಲುಪತ್ತಲೂ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಏಕೆಂದರೆ, ಈ ಹಂತದಲ್ಲಿ ಅನುಸರಿಸುವ ಉತ್ತಮ ಜೀವನಶೈಲಿ ಮುಂದಿನ ದಿನಗಳಲ್ಲಿಯೂ ಅವರ ಆರೋಗ್ಯವನ್ನು ಕಾಪಾಡಬಲ್ಲದು ಎನ್ನುತ್ತವೆ ಅಧ್ಯಯನಗಳು. ಈಗ ವಹಿಸುವ ಕಾಳಜಿಯಿಂದ ವಯಸ್ಸಾದ ದಿನಗಳಲ್ಲಿಯೂ ಹೃದಯ ಮತ್ತು ಇತರ ಅಂಗಾಂಗ ವ್ಯವಸ್ಥೆಗಳ ಕಾರ್ಯಕ್ಷಮತೆ ಮತ್ತು ಮೆದುಳಿನ ಗ್ರಹಿಕಾ ಶಕ್ತಿ ಉತ್ತಮ ಮಟ್ಟದಲ್ಲಿರುತ್ತದೆ ಎನ್ನುತ್ತಾರೆ ವೈದ್ಯವಿಜ್ಞಾನಿಗಳು.

ಋತುಬಂಧದ ಆಸುಪಾಸಿನ ಈ ಹರೆಯದಲ್ಲಿ ಕ್ಷೀಣಗೊಳ್ಳುವ ಅಂಡಾಶಯದ ಕಾರ್ಯಕ್ಷಮತೆ ಶರೀರದ ಇತರ ಅಂಗಾಂಗಗಳ ಮೇಲೆಯೂ ಮಹತ್ತರವಾದ ಪರಿಣಾಮವನ್ನು ಬೀರಬಲ್ಲದು. ಇಳಿಮುಖವಾಗುವ ಅಂಡಾಶಯದ ರಸದೂತಗಳು ಮೊಟ್ಟಮೊದಲನೆಯದಾಗಿ ಮಾಸಿಕ ಋತುಚಕ್ರದ ಏರುಪೇರಿಗೆ ಕಾರಣವಾಗುತ್ತವೆ. ಇದರ ಜೊತೆಯಲ್ಲಿಯೇ ಆಗಾಗ್ಗೆ ಮುಖ ಮತ್ತು ಕುತ್ತಿಗೆಯ ಭಾಗ ಕೆಂಪಾಗಿ ಬಿಸಿಯಾಗುವುದು, ವಿಪರೀತ ತಲೆನೋವು, ವೇಗವಾದ ಎದೆ ಬಡಿದುಕೊಳ್ಳುವಿಕೆ, ಅತಿಯಾದ ಬೆವರುವಿಕೆ ಆಕೆಯನ್ನು ಘಾಸಿಗೊಳಿಸುತ್ತವೆ. ಇನ್ನು ಕೆಲವರನ್ನು ನಿದ್ರಾಹೀನತೆ, ಮರೆವು, ಏಕಾಗ್ರತೆಯ ಕೊರತೆಯೂ ಕಾಡಬಹುದು. ಈ ಘಟ್ಟದಲ್ಲಿ ಮಹಿಳೆಯರು ತೀವ್ರ ಭಾವೋದ್ವೇಗಕ್ಕೊಳಗಾಗಿ ಸಣ್ಣಪುಟ್ಟದಕ್ಕೂ ಸಿಡುಕುವುದೂ ಈ ಕಾರಣದಿಂದಲೇ. ಕುಟುಂಬದಲ್ಲಿನ ಇತರ ಸಮಸ್ಯೆಗಳು ಆಕೆಯ ಮಾನಸಿಕ ವೈಪರೀತ್ಯವನ್ನು ಇನ್ನಷ್ಟು ಹೆಚ್ಚಿಸಬಹುದು. ಹಾಗಾಗಿಯೇ ಮನೆಯ ಎಲ್ಲ ಸದಸ್ಯರ ಸಾಂತ್ವನ ಮತ್ತು ಬೆಂಬಲ ಈ ವಯಸ್ಸಿನಲ್ಲಿ ಮಹಿಳೆಗೆ ಅತ್ಯವಶ್ಯ. ಸಾಮಾನ್ಯವಾಗಿ ನಲವತ್ತರ ನಂತರ ಮೂಳೆಗಳ ಸಾಂದ್ರತೆ ಇಳಿಮುಖವಾಗುತ್ತದೆ. ಮಹಿಳೆಯರಲ್ಲಿ ಅಂಡಾಶಯದಿಂದ ಸ್ರವಿಸುವ ಈಸ್ಟ್ರೋಜನ್ ಕ್ಷೀಣಿಸುವಿಕೆಯಿಂದ ಈ ಪ್ರಕ್ರಿಯೆ ಇನ್ನಷ್ಟು ವೇಗವಾಗಿ ನಡೆಯುತ್ತದೆ. ಇದರಿಂದ ಶರೀರದ ಮೂಳೆಗಳು ಟೊಳ್ಳಾಗಿ, ಸಣ್ಣ ಪುಟ್ಟ ಪೆಟ್ಟಿಗೂ ಮುರಿತಕ್ಕೊಳಗಾಗಬಹುದು. ಆಹಾರದಲ್ಲಿನ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ಕೊರತೆಯು ಮೂಳೆ ಟೊಳ್ಳಾಗುವ ಪ್ರಕ್ರಿಯೆಯನ್ನು ಮತ್ತಷ್ಟು ವೇಗವಾಗಿಸುತ್ತದೆ.


ರಸದೂತಗಳ ವ್ಯತ್ಯಾಸದಿಂದಾಗಿ ನಿತಂಬ ಮತ್ತು ಹೊಟ್ಟೆಯ ಭಾಗದಲ್ಲಿ ಕೊಬ್ಬು ಶೇಖರವಾಗುತ್ತದೆ. ವಯಸ್ಸಾಗುವ ಕಾರಣದಿಂದ ಕುಗ್ಗುವ ಚಯಾಪಚಯಾ ಕ್ರಿಯೆ ಮತ್ತು ದೋಷಪೂರಿತ ಆಹಾರ ಕ್ರಮದಿಂದಾಗಿ ಆಕೆಯ ದೇಹತೂಕ ಏರುಮುಖವಾಗುತ್ತದೆ. ಇದು ಕೂಡ ಒಮ್ಮೊಮ್ಮೆ ಆಕೆಯ ಮಾನಸಿಕ ತುಮುಲಕ್ಕೆ ಕಾರಣವಾಗಬಹುದು.

ಬೊಜ್ಜು ಮತ್ತು ಸ್ಥೂಲಕಾಯದ ಸಂಭವನೀಯ ಪರಿಣಾಮಗಳು ಒಂದೆರಡಲ್ಲ. ಈ ಏರಿದ ತೂಕ ಶರೀರದ ಕೀಲುಗಳಿಗೆ, ಅದರಲ್ಲಿಯೂ ಮುಖ್ಯವಾಗಿ ಮಂಡಿಗಳಿಗೆ ಬಹಳ ಅಪಾಯಕಾರಿ. ಶರೀರದ ಅತಿಯಾದ ಭಾರ ತನ್ನ ಮೇಲೆ ಬೀಳುವುದರಿಂದ ಕೀಲುಗಳ ಕಾರ್ಯಕ್ಷಮತೆ ಕ್ಷೀಣಿಸುತ್ತದೆ. ಟೊಳ್ಳಾದ ಮೂಳೆಗಳು ಮತ್ತು ತೆಳುವಾದ ಕೀಲು ಪದರಗಳಿಂದ ಆವೃತವಾದ ಕೀಲುಗಳಲ್ಲಿ ಉರಿಯೂತ ಪ್ರಕ್ರಿಯೆ ಆರಂಭವಾಗಿ ಸಂಧಿವಾತಕ್ಕೆ ಕಾರಣವಾಗುತ್ತದೆ. ಕೀಲುನೋವು ಅಥವಾ ಸಂಧಿವಾತ ಬಹುತೇಕ ಮಧ್ಯವಯಸ್ಸಿನ ಮಹಿಳೆಯರನ್ನು ಕಾಡುವ ಪ್ರಮುಖ ಸಮಸ್ಯೆ. ಇದು ಅವರ ದೈಹಿಕ ಕ್ಷಮತೆಯನ್ನು ಸಾಕಷ್ಟು ಕುಗ್ಗಿಸಿ ಚಲನವಲನಗಳನ್ನು ನಿರ್ಬಂಧಿಸುತ್ತದೆ.

ಈ ವಯಸ್ಸಿನಲ್ಲಿ ಹೊಟ್ಟೆ ಮತ್ತು ಸೊಂಟದ ಸುತ್ತ ಶೇಖರವಾಗುವ ಕೊಬ್ಬು ಮಧುಮೇಹವನ್ನು ಆಹ್ವಾನಿಸುತ್ತದೆ. ನಲವತ್ತರ ಆಸುಪಾಸಿನಲ್ಲಿ ಅಂಟಿಕೊಳ್ಳುವ ಅಧಿಕ ರಕ್ತದೊತ್ತಡ ಮಹಿಳೆಯರನ್ನು ಮತ್ತಷ್ಟು ಮೆತ್ತಗಾಗಿಸುತ್ತದೆ. ಕ್ಷೀಣಿಸುವ ಚಯಾಪಚಯ ಕ್ರಿಯೆ ಮತ್ತು ಜಡ ಜೀವನಶೈಲಿಯಿಂದಾಗಿ ರಕ್ತದ ವಿವಿಧ ಬಗೆಯ ಕೊಬ್ಬಿನಾಂಶವೂ ಹೆಚ್ಚಾಗಬಹುದು. ಎಲ್‌ಡಿಎಲ್ ಎಂಬ ಕೊಬ್ಬಿನಾಂಶವು ಬಹು ಅಪಾಯಕಾರಿಯಾಗಿದ್ದು, ರಕ್ತನಾಳಗಳ ಒಳಪದರಗಳಲ್ಲಿ ಶೇಖರವಾಗಿ ಅಂಗಾಂಗಗಳ ರಕ್ತ ಪೂರೈಕೆಯಲ್ಲಿ ವ್ಯತ್ಯಯವನ್ನುಂಟು ಮಾಡುತ್ತದೆ. ಇದು ಮುಖ್ಯವಾಗಿ ಹೃದಯ ಮತ್ತು ಮೆದುಳಿನ ರಕ್ತಪೂರೈಕೆಗೆ ತಡೆಯೊಡ್ಡಿ ಹೃದಯಾಘಾತ ಮತ್ತು ಸ್ಟ್ರೋಕ್‌ಗೆ ಕಾರಣವಾಗಬಹುದು. ಸರಿಯಾಗಿ ನಿಯಂತ್ರಿಸದ ಮಧುಮೇಹವು ಮೂತ್ರಪಿಂಡ, ಕಣ್ಣು ಹಾಗೂ ನರಗಳ ಕಾರ್ಯಕ್ಷಮತೆಯನ್ನೂ ಕುಗ್ಗಿಸಬಹುದು.

ನಲವತ್ತೈದರ ನಂತರ ಸ್ತನ, ಅಂಡಾಶಯ, ಗರ್ಭಕೋಶ ಮತ್ತು ಗರ್ಭ ಕೊರಳಿನ ಕ್ಯಾನ್ಸರ್‌ಗಳ ಸಂಭವ ಹೆಚ್ಚು. ಹಾಗಾಗಿ ಈ ಎಲ್ಲ ಕ್ಯಾನ್ಸರ್ ಗುಣಲಕ್ಷಣಗಳ ಬಗ್ಗೆ ಪ್ರತಿ ಮಹಿಳೆಯೂ ತಿಳಿದಿರಬೇಕು. ಸ್ತನಗಳಲ್ಲಿ ಕಂಡುಬರುವ ಗಡ್ಡೆ, ಸ್ತನತೊಟ್ಟುಗಳ ಗಾತ್ರ-ಆಕಾರಗಳಲ್ಲಿ ವ್ಯತ್ಯಾಸ, ತೊಟ್ಟುಗಳಿಂದ ರಕ್ತ ಮಿಶ್ರಿತ ಅಥವಾ ತಿಳಿ ಬಣ್ಣದ ದ್ರವ ಸ್ರವಿಸುವಿಕೆ ಮೊದಲಾದ ಲಕ್ಷಣಗಳು ಕಂಡು ಬಂದಾಗ ಕೂಡಲೇ ವೈದ್ಯರಲ್ಲಿ ಸಲಹೆ ಪಡೆಯಬೇಕು. ಯೋನಿಯಲ್ಲಿ ಅತಿಯಾದ ರಕ್ತಸ್ರಾವ, ದುರ್ವಾಸನೆಯುಕ್ತ ಬಿಳಿಮುಟ್ಟು, ಋತುಬಂಧವಾಗಿ ಒಂದು ವರ್ಷದ ನಂತರ ಮುಟ್ಟು ಕಾಣಿಸಿಕೊಳ್ಳುವುದು, ಲೈಂಗಿಕ ಸಂಪರ್ಕದ ನಂತರ ರಕ್ತಸ್ರಾವ ಮೊದಲಾದ ಲಕ್ಷಣಗಳನ್ನು ನಿರ್ಲಕ್ಷ್ಯಿಸಬಾರದು.

ನಿಃಶಕ್ತಿ, ಆಯಾಸ ಮತ್ತು ಕೆಲಸದಲ್ಲಿ ನಿರಾಸಕ್ತಿ ಈ ವಯಸ್ಸಿನ ಮಹಿಳೆಯರನ್ನು ಕಾಡುವ ಮತ್ತೊಂದು ಮುಖ್ಯ ಸಮಸ್ಯೆ. ಬಹುತೇಕರಲ್ಲಿ ರಕ್ತಹೀನತೆಯೇ ಇದಕ್ಕೆ ಮುಖ್ಯ ಕಾರಣ. ಆಹಾರದಲ್ಲಿ ಕಬ್ಬಿಣ, ಫೋಲಿಕ್ ಆಮ್ಲ ಮತ್ತಿತರ ಪೌಷ್ಟಿಕಾಂಶಗಳ ಕೊರತೆ ಮತ್ತು ಅಧಿಕ ರಕ್ತಸ್ರಾವದ ಪರಿಣಾಮವೇ ರಕ್ತಹೀನತೆ. ರಕ್ತ ಪರೀಕ್ಷೆಯಿಂದ ಅದನ್ನು ಗುರುತಿಸಿ, ಸೂಕ್ತ ಔಷಧೋಪಚಾರವನ್ನು ಪಡೆಯುವುದು ಅತ್ಯಗತ್ಯ. ಒಮ್ಮೊಮ್ಮೆ ಥೈರಾಯ್ಡ್ ಗ್ರಂಥಿಯ ಕಾರ್ಯಕ್ಷಮತೆಯಲ್ಲಿ ವ್ಯತ್ಯಾಸವಾದಾಗಲೂ ಆಯಾಸ ಕಾಣಿಸಿಕೊಳ್ಳಬಹುದು. ಸಮಸ್ಯೆಯನ್ನು ಗುರುತಿಸಿ ವೈದ್ಯರ ಸಲಹೆಯ ಮೇರೆಗೆ ಔಷಧೋಪಚಾರದ ಮೂಲಕ ಸಮಸ್ಯೆಯನ್ನು ನಿಗ್ರಹಿಸಬಹುದು. ಜೊತೆಯಲ್ಲಿಯೇ ಸತ್ವಯುತ ಆಹಾರ ಸೇವನೆಯತ್ತಲೂ ಗಮನಹರಿಸಬೇಕು. ❖



ಸುಭಾಷಿತ

ಸೋಗು ಹಾಕದೆ ಸಹಜವಾಗಿ ಇರುವುದರಲ್ಲಿಯೇ ಸೌಂದರ್ಯವಿದೆ.

-ಜಿಡ್ಡು ಕೃಷ್ಣಮೂರ್ತಿ

ನೆಲದ ಕಾನೂನನ್ನು ಉಲ್ಲಂಘಿಸಲು ಹಾತೊರೆಯುವ ಯಾವುದೇ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಲು ಅನರ್ಹ

ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ಹತ್ಯೆಗಳು ನಿಸ್ಸಂಶಯವಾಗಿ ಕೋಮು ಸ್ವರೂಪವನ್ನು ಹೊಂದಿವೆ. ಅವು, ಸಾಮರಸ್ಯದ ಬದುಕನ್ನು ಬಯಸುವವರಿಗೆಲ್ಲ ಆಘಾತವನ್ನು ಉಂಟುಮಾಡಿವೆ. 'ಸರ್ವಜನಾಂಗದ ಶಾಂತಿಯ ತೋಟ'ದ ಭವಿಷ್ಯದ ಕುರಿತು ಆತಂಕ ಕೂಡ ಎದುರಾಗಿದೆ. ಹತ್ಯೆ ಪ್ರಕರಣಗಳ ಕುರಿತು ರಾಜ್ಯ ಸರ್ಕಾರ ಪ್ರತಿಕ್ರಿಯಿಸಿರುವ ರೀತಿಯೂ ಕೋಮುಭಾವದಿಂದಲೇ ಕೂಡಿದೆ. ಕಾನೂನುಬಾಹಿರ ಹಾಗೂ ಅನೈತಿಕವಾಗಿರುವ ಅದರ ಚಿಂತನೆಯ ಸ್ವರೂಪವು ಇನ್ನೂ ಹೆಚ್ಚಿನ ಕಳವಳವನ್ನು ಉಂಟುಮಾಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರು, ಹತ್ಯೆಯನ್ನು ಹತ್ಯೆಯಿಂದ, ಹಿಂಸೆಯನ್ನು ಹಿಂಸೆಯಿಂದ ಎದುರಿಸುವ ಮಾತನಾಡಿರುವುದು ಆಘಾತಕಾರಿ ಬೆಳವಣಿಗೆ. ಇದೊಂದು ಅನಪೇಕ್ಷಿತ, ಹೊಣೆಗೇಡಿ ಮತ್ತು ಅಸಮಂಜಸವಾದ ಪ್ರತಿಕ್ರಿಯೆಯಾಗಿದೆ. ಈಗಾಗಲೇ ಹದಗೆಟ್ಟಿರುವ ರಾಜ್ಯದ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸುವಂಥದ್ದು. ಹಿಂಸಾಚಾರದ ಬೆದರಿಕೆ ಮತ್ತು ಹಿಂಸಾಚಾರವು ರಾಜ್ಯಕ್ಕೆ ಹೊಸದಲ್ಲ. ಅವುಗಳು ಕೆಲವು ತಿಂಗಳುಗಳಿಂದ ರಾಜ್ಯದ ಜನರ ಗ್ರಹಿಕೆಗೆ ನಿಲುಕುತ್ತಿವೆ. ದಕ್ಷಿಣ ಕನ್ನಡದ ಕಳಂಜೆಯಲ್ಲಿ ನಡೆದ ಮಸೂದ್ ಹತ್ಯೆ, ನೆಟ್ಟಾರುವಿನಲ್ಲಿ ನಡೆದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಮತ್ತು ಸುರತ್ಕಲ್‌ನಲ್ಲಿ ನಡೆದ ಮೊಹಮ್ಮದ್ ಫಾಝಿಲ್ ಅವರ ಹತ್ಯೆಯು ರಾಜ್ಯದಾದ್ಯಂತ ತಲ್ಲಣವನ್ನು ಉಂಟುಮಾಡಿವೆ. ಪ್ರವೀಣ್ ಹತ್ಯೆಯಿಂದ ಉಂಟಾದ ಬಿಗುವಿನ ವಾತಾವರಣವನ್ನು ತಿಳಿಗೊಳಿಸಲು ಮತ್ತು ಸ್ವಪಕ್ಷೀಯರ ಆಕ್ರೋಶವನ್ನು ತಣಿಸಲು ಸರ್ಕಾರದ ಹೊಣೆ ಹೊತ್ತವರು ನೀಡಿದ ಹೇಳಿಕೆಗಳು ಅತ್ಯಂತ ಕೆಟ್ಟ ರೀತಿಯ ಪ್ರತಿಕ್ರಿಯೆಗೆ ನಿದರ್ಶನ.

ರಾಜಕೀಯ ಹತ್ಯೆ ಮತ್ತು ಹಿಂಸಾಚಾರವನ್ನು ಕೊನೆಗಾಣಿಸಲು ಅಗತ್ಯವಾದರೆ 'ಯೋಗಿ ಮಾದರಿ'ಯನ್ನು ಅನುಸರಿಸುವುದಾಗಿಯೂ ಬೊಮ್ಮಾಯಿ ಹೇಳಿದ್ದಾರೆ. ಕರ್ನಾಟಕವು ಉತ್ತರಪ್ರದೇಶದಂತೆ ಅರಣ್ಯ ನ್ಯಾಯವನ್ನು ಅನುಸರಿಸುತ್ತಿರುವ ಹಿಂದುಳಿದ ರಾಜ್ಯವಲ್ಲ. ಒಳ್ಳೆಯ ಆಡಳಿತದ ದೊಡ್ಡ ಪರಂಪರೆಯೇ ನಮ್ಮ ರಾಜ್ಯಕ್ಕಿದೆ. ನಾವು ಯಾವ ರೀತಿಯಲ್ಲೂ ಉತ್ತರಪ್ರದೇಶವನ್ನು ಅನುಸರಿಸಬೇಕಿಲ್ಲ. ಪ್ರಜಾಪ್ರಭುತ್ವವಾದಿ ಸರ್ಕಾರಕ್ಕೆ ಇಲ್ಲವೇ ಅತ್ಯುತ್ತಮ ಆಡಳಿತಕ್ಕೆ ಉತ್ತರಪ್ರದೇಶ ಸರ್ಕಾರದ ನಡವಳಿಕೆಯು ಖಂಡಿತ ಮಾದರಿಯಲ್ಲ. ಉತ್ತರಪ್ರದೇಶದಲ್ಲಿ ಅಲ್ಪಸಂಖ್ಯಾತರಿಗೆ ಶಿಕ್ಷೆ ಆಗುತ್ತಿರುವುದು ಅವರು ಏನು ಮಾಡಿದ್ದಾರೆ ಎಂಬುದರ ಆಧಾರದಲ್ಲಿ ಅಲ್ಲ, ಬದಲಿಗೆ ಅವರು ಅಲ್ಪಸಂಖ್ಯಾತರು ಎಂಬ ಕಾರಣಕ್ಕೆ. ಸರ್ಕಾರದ ನಿಲುವನ್ನು ವಿರೋಧಿಸಿ ಪ್ರತಿಭಟನೆ ಮಾಡಿದ್ದಾರೆ ಮತ್ತು ಅವರು ಮುಸ್ಲಿಮರಾಗಿದ್ದಾರೆ ಎನ್ನುವ ಕಾರಣಕ್ಕಾಗಿ ಅವರ ಮನೆಗಳನ್ನು ಧ್ವಂಸ ಮಾಡಲಾಗುತ್ತಿದೆ. ಹೀಗಾಗಿ, ಅಲ್ಲಿನ ಆಡಳಿತ ವ್ಯವಸ್ಥೆಯ ಸಂಕೇತವಾಗಿ ಬುಲ್ಡೋಜರ್ ಗೋಚರಿಸುತ್ತಿದೆ. ಅಲ್ಲಿ ಕಾನೂನಿನ ಪ್ರಕ್ರಿಯೆಗಳು ಯಾವುವೂ ಸಮರ್ಪಕವಾಗಿ ನಿರ್ವಹಣೆಯಾಗುತ್ತಿಲ್ಲ. ತ್ವರಿತ ಹಾಗೂ ನಿರ್ದಯಿ ಶಿಕ್ಷೆಯೊಂದೇ ಗುರಿಯಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕಳೆದ ಐದು ವರ್ಷಗಳಲ್ಲಿ ಈ ಮಾದರಿಯನ್ನು ಕರಗತ ಮಾಡಿಕೊಂಡಿದ್ದಾರೆ. ಶಿಕ್ಷೆಗೆ ಒಳಗಾದವರನ್ನು 'ಸಮಾಜಘಾತುಕ ಶಕ್ತಿಗಳು', 'ಪ್ರತಿಭಟನಕಾರರು', 'ಗಲಭೆಕೋರರು', 'ಅತಿಕ್ರಮಣಕಾರರು', 'ಅಕ್ರಮ ನಿವಾಸಿಗಳು' ಎಂದೆಲ್ಲ ಅಲ್ಲಿನ ಸರ್ಕಾರ ಕರೆದರೂ ಬಹುತೇಕ ಪ್ರಕರಣಗಳಲ್ಲಿ ಆರೋಪಿ ಸ್ಥಾನದಲ್ಲಿ ಇದ್ದವರು ಮುಸ್ಲಿಮರು.



ಕರ್ನಾಟಕವು ಉತ್ತರಪ್ರದೇಶದಂತೆ ಅರಣ್ಯ ನ್ಯಾಯವನ್ನು ಅನುಸರಿಸುತ್ತಿರುವ ಹಿಂದುಳಿದ ರಾಜ್ಯವಲ್ಲ. ಒಳ್ಳೆಯ ಆಡಳಿತದ ದೊಡ್ಡ ಪರಂಪರೆಯೇ ನಮ್ಮ ರಾಜ್ಯಕ್ಕಿದೆ. ನಾವು ಯಾವ ರೀತಿಯಲ್ಲೂ ಉತ್ತರಪ್ರದೇಶವನ್ನು ಅನುಸರಿಸಬೇಕಿಲ್ಲ

ಅತ್ಯುತ್ತಮ ಆಡಳಿತದ ಹಿನ್ನೆಲೆ ಹೊಂದಿರುವ, ಬಹುತ್ವ ಸಂಸ್ಕೃತಿಯ ಬೀಡಾಗಿರುವ, ಆರ್ಥಿಕವಾಗಿ ಅಭಿವೃದ್ಧಿಯ ಪಥದಲ್ಲಿರುವ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಗಾಧ ಸಾಧನೆ ಮಾಡಿರುವ, ಇತರ ಹಲವು ಕ್ಷೇತ್ರಗಳಲ್ಲಿಯೂ ಮುಂದಿರುವ ಕರ್ನಾಟಕ ಅನುಸರಿಸಬೇಕಾದ ಮಾದರಿ ಖಂಡಿತ ಇದಲ್ಲ. ಉಳಿದ ರಾಜ್ಯಗಳು ಒಳ್ಳೆಯ ಮಾದರಿಗಾಗಿ ಕರ್ನಾಟಕದತ್ತ ನೋಡುತ್ತವೆ. ಜಾಗತಿಕ ಮಾನ್ಯತೆ ಗಳಿಸಿರುವ ಬೆಂಗಳೂರು ನಗರವಂತೂ ತಂತ್ರಜ್ಞಾನದ ವಿಷಯದಲ್ಲಿ ದೇಶದ ಇತರ ನಗರಗಳಿಗೆ ಆದರ್ಶಪ್ರಾಯದಂತಿದೆ. ಶೈಕ್ಷಣಿಕವಾಗಿಯೂ ನಮ್ಮ ರಾಜ್ಯ ಮುಂಚೂಣಿಯಲ್ಲಿದೆ. ಅಭಿವೃದ್ಧಿ ಯೋಜನೆಗಳು, ಸುಧಾರಣೆಗಳು ಮತ್ತು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ನೀತಿಗಳ ಅನುಷ್ಠಾನದಲ್ಲಿ ರಾಜ್ಯವು ದೇಶದ ಇತರ ರಾಜ್ಯಗಳಿಗೆ ಮಾದರಿಯಾಗಿದೆ. ಸಾಮಾಜಿಕ ಹಾಗೂ ರಾಜಕೀಯ ಸಂಘರ್ಷಗಳು, ಕೋಮು ಗಲಭೆಗಳು ಉಲ್ಬಣಗೊಳ್ಳದಂತೆ ಲಾಗಾಯ್ತಿನಿಂದಲೂ ನಿಯಂತ್ರಿಸಿದ ಹಿರಿಮೆ ಕೂಡ ನಮ್ಮ ರಾಜ್ಯಕ್ಕಿದೆ. ಒಂದು ರಾಜ್ಯವಾಗಿ, ಕರ್ನಾಟಕಕ್ಕೆ ಉತ್ತರಪ್ರದೇಶದಿಂದ ಕಲಿಯುವಂತಹದ್ದು ಏನೂ ಇಲ್ಲ. ನಾಡಿನ ಸಾಮಾಜಿಕ ಹಾಗೂ ರಾಜಕೀಯ ಬದುಕಿನಲ್ಲಿ ಬಹುದೀರ್ಘ ಸಮಯವನ್ನು ಸವೆಸಿರುವ ಮುಖ್ಯಮಂತ್ರಿ, ಇಂತಹ ಉತ್ಕೃಷ್ಟ ಮಾದರಿಯನ್ನು ಕಡೆಗಣಿಸಿ, ಉತ್ತರಪ್ರದೇಶದ ಪ್ರತಿಗಾಮಿ ಮತ್ತು ಕಾನೂನಿಗೆ ಕಿಮ್ಮತ್ತು ಇಲ್ಲದ ಮಾದರಿಯತ್ತ ಒಲವು ತೋರಿರುವುದು ವಿಷಾದದ ಸಂಗತಿ. ಕೆಲವು ವರ್ಷಗಳ ಹಿಂದೆಯಷ್ಟೇ ಬಿಜೆಪಿಗೆ ಸೇರ್ಪಡೆಯಾಗಿರುವ ಅವರು, ಪಕ್ಷದ ನಾಯಕರು ಮತ್ತು ಕಾರ್ಯಕರ್ತರನ್ನು ಮೆಚ್ಚಿಸಬೇಕಾದ ಒತ್ತಡದಲ್ಲಿ ಇರಬಹುದು. ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಸೇರ್ಪಡೆಗೊಂಡವರು ತಮ್ಮ ಬದ್ಧತೆಯನ್ನು ತೋರಿಸಲು, ಪಕ್ಷದವರನ್ನೆಲ್ಲ ಮೆಚ್ಚಿಸಲು ಇಂತಹ ಬಿಡುಬೀಸು ಹೇಳಿಕೆ ನೀಡುವುದು ಹೊಸದೇನಲ್ಲ. ಆದರೆ, ಸಾಂವಿಧಾನಿಕ ಹುದ್ದೆಯಲ್ಲಿರುವ ಮುಖ್ಯಮಂತ್ರಿ, ತಮ್ಮ ರಾಜಕೀಯ ಉಳಿವಿಗಾಗಿ ಈಗ ಹಿಡಿದಿರುವ ಹಾದಿ ಒಪ್ಪತಕ್ಕದ್ದಲ್ಲ. ಇದರಿಂದ ಅವರಿಗೆ ರಾಜಕೀಯವಾಗಿ ಅನುಕೂಲವಾಗುವುದೋ ಇಲ್ಲವೋ ಗೊತ್ತಿಲ್ಲ; ರಾಜ್ಯಕ್ಕಂತೂ ಒಳಿತಾಗುವುದಿಲ್ಲ.

ಸಚಿವ ಅಶ್ವತ್ಥನಾರಾಯಣ ಅವರು ಒಂದು ಹೆಜ್ಜೆ ಮುಂದೆ ಹೋಗಿ ಎನ್‌ಕೌಂಟರ್ ಮಾಡುವ ಬೆದರಿಕೆಯನ್ನೂ ಹಾಕಿದ್ದಾರೆ. ಸಂಭಾವ್ಯ ನಕಲಿ ಎನ್‌ಕೌಂಟರ್‌ಗಳ ಕ್ರೂರ ಶಿಕ್ಷೆಯ ಬೆದರಿಕೆ ಅವರ ಹೇಳಿಕೆಯಲ್ಲಿದೆ. ಸಂವಿಧಾನಬದ್ಧವಾಗಿ ನಡೆಯುವುದಾಗಿ ಮತ್ತು ಸಂವಿಧಾನವನ್ನು ರಕ್ಷಿಸುವುದಾಗಿ ಪ್ರಮಾಣ ಮಾಡಿದ ಸಚಿವರೇ 'ಎನ್‌ಕೌಂಟರ್ ನಡೆಸಲು ಸರ್ಕಾರ ಸಿದ್ಧ' ಎನ್ನುವಂತಹ ಹೇಳಿಕೆ ನೀಡಿರುವುದು ಆಘಾತಕಾರಿ. ಎನ್‌ಕೌಂಟರ್‌ಗಳಲ್ಲಿ ಯಾರಿಗೆ ಗುಂಡಿಕ್ಕಲಾಗುತ್ತದೆ ಮತ್ತು ಯಾವ ಕಾನೂನಿನ ಅಡಿಯಲ್ಲಿ ಅವರನ್ನು ಕೊಲ್ಲಲಾಗುತ್ತದೆ? ದೇಶದಲ್ಲಿ ಈ ಹಿಂದೆ ಎನ್‌ಕೌಂಟರ್‌ಗಳು ನಡೆದಿವೆ ಮತ್ತು ಈಗಲೂ ನಡೆಯುತ್ತಿವೆ. ಆದರೆ ನಕಲಿ ಎನ್‌ಕೌಂಟರ್ ನಡೆಸಿದವರು ಕೂಡ ತಾವು ಕೊಲೆ ಮಾಡಿದ್ದೇವೆ ಎಂಬುದನ್ನು ಹೇಳಿಕೊಳ್ಳುವುದಿಲ್ಲ. ಆದರೆ, ಈ ಸಚಿವರು ತಮ್ಮ ಸರ್ಕಾರ ಕೊಲ್ಲುವುದಕ್ಕೂ ಸಿದ್ಧ ಎಂದು ಹೇಳಿದ್ದಾರೆ. ಇಲ್ಲಿಯೂ ರಾಜಕೀಯ ಲಾಭ ಪಡೆಯುವುದು ಮತ್ತು ಪಕ್ಷದ ಕಾರ್ಯಕರ್ತರನ್ನು ಮೆಚ್ಚಿಸುವುದೇ ಉದ್ದೇಶವಾಗಿರಬಹುದು. ಆದರೆ, ಅಧಿಕಾರದ ಗದ್ದುಗೆಗೆ ಏರಿದವರು ಕಾನೂನುಬಾಹಿರವಾದುದನ್ನು ಪ್ರತಿಪಾದಿಸಿದ ಕ್ಷಣದಿಂದಲೇ ಆ ಹುದ್ದೆಯಲ್ಲಿ ಮುಂದುವರಿಯುವ ನೈತಿಕ ಹಾಗೂ ರಾಜಕೀಯ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಕರ್ನಾಟಕವು ಕೋಮು ಸಂಘರ್ಷದ ತಾಣವಾಗಬೇಕೇ, ಇಲ್ಲಿಯೂ ನೋಟಿಸ್ ನೀಡದೆಯೇ ಮನೆಗಳನ್ನು ಬುಲ್ಡೋಜರ್‌ಗಳಿಂದ ಧ್ವಂಸಗೊಳಿಸಬೇಕೇ, ವಿವೇಚನಾರಹಿತವಾಗಿ ಜನರನ್ನು ಗುಂಡಿಕ್ಕಿ ಕೊಲ್ಲಬೇಕೇ ಎನ್ನುವುದನ್ನು ಬೊಮ್ಮಾಯಿ ಮತ್ತು ಅವರ ಸಂಪುಟದ ಸಚಿವರು ಯೋಚಿಸಬೇಕು. ನಾಡಿನ ಜನ ಬಯಸುವ ಕರ್ನಾಟಕವಂತೂ ಅದಲ್ಲ. ಅಂತಹ ಮಾತುಗಳು ಕೂಡ ಕೋಮು ಸೌಹಾರ್ದವನ್ನು ಕದಡುವುದಲ್ಲದೆ ರಾಜ್ಯದ ಪ್ರತಿಷ್ಠೆಗೂ ಮಸಿ ಬಳಿಯುತ್ತವೆ.

ಸಮಾಜದಲ್ಲಿ ಕೋಮು ಧ್ರುವೀಕರಣ ಹೆಚ್ಚುತ್ತಿರುವುದು ನಿಜ. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಎರಡೂ ಸಮುದಾಯಗಳಲ್ಲಿನ ಸಮಾಜವಿರೋಧಿ ಶಕ್ತಿಗಳ ಪಾತ್ರ ಇದರಲ್ಲಿರುವುದು ನಿಸ್ಸಂಶಯ. ಆದರೆ ಬೊಮ್ಮಾಯಿ ಅವರು ಪ್ರತಿಪಾದಿಸಿರುವಂತೆ, ಇಂತಹ ಸನ್ನಿವೇಶವನ್ನು ಹೇಗೆ ನಿಭಾಯಿಸಬೇಕು ಎನ್ನುವುದು ಸರ್ಕಾರಕ್ಕೆ ನಿಜವಾಗಿಯೂ ಗೊತ್ತಿದ್ದರೆ ಇಂದಿನ ಸ್ಥಿತಿ ಖಂಡಿತವಾಗಿ ನಿರ್ಮಾಣವಾಗುತ್ತಿರಲಿಲ್ಲ. ನಾಡಿನ ಎಲ್ಲ ಪ್ರಜೆಗಳನ್ನು ಮತ್ತು ಅವರ ಆಸ್ತಿಗಳನ್ನು ಸಂರಕ್ಷಿಸಬೇಕಾದುದು ಸರ್ಕಾರದ ಪ್ರಾಥಮಿಕ ಮತ್ತು ಬಹುಮುಖ್ಯ ಹೊಣೆ. ಈ ಹೊಣೆ ನಿಭಾಯಿಸುವಲ್ಲಿ ಬೊಮ್ಮಾಯಿ ನೇತೃತ್ವದ ಸರ್ಕಾರ ಪದೇ ಪದೇ ಎಡವಿದೆ. ಹತ್ಯೆಗೆ ಕಾರಣವಾದ ಸನ್ನಿವೇಶ ಮತ್ತು ಸಂದರ್ಭಗಳನ್ನು ಆಡಳಿತಾತ್ಮಕವಾಗಿ ಮತ್ತು ರಾಜಕೀಯವಾಗಿ ನಿಭಾಯಿಸಬೇಕಿತ್ತು. ಇಂತಹ ಸನ್ನಿವೇಶಗಳನ್ನು ನಿಭಾಯಿಸಲು ಆಡಳಿತವು ಸನ್ನದ್ಧವಾಗಿತ್ತೇ? ಅಹಿತಕರ ಘಟನೆಗಳು ಸಂಭವಿಸುವ ಕುರಿತು ಗುಪ್ತಚರದಳ ಯಾವ ಮುನ್ಸೂಚನೆಯನ್ನೂ ನೀಡಿರಲಿಲ್ಲವೇ? ಒಂದುವೇಳೆ ಮುನ್ಸೂಚನೆ ಇದ್ದಿದ್ದರೆ ಅದನ್ನು ಗಂಭೀರವಾಗಿ ಪರಿಗಣಿಸಿ, ಯಾವುದಾದರೂ ಕ್ರಮ ಕೈಗೊಳ್ಳಲಾಗಿದೆಯೇ? ಆಡಳಿತಾತ್ಮಕ ವೈಫಲ್ಯದೊಂದಿಗೆ ರಾಜಕೀಯ ವೈಫಲ್ಯವೂ ಸೇರಿ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿರುವುದು ಎದ್ದು ಕಾಣುತ್ತಿದೆ. ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬರುವ ವಿಷಯದಲ್ಲಿ, ಹಲಾಲ್ ಮಾಂಸದ ಕುರಿತ ವಿವಾದದಲ್ಲಿ, ಪ್ರಾರ್ಥನಾ ಸ್ಥಳಗಳಲ್ಲಿ ಧ್ವನಿವರ್ಧಕ ಬಳಸುವ ವಿಚಾರದಲ್ಲಿ ಸರ್ಕಾರದ ನೀತಿ-ನಿಲುವುಗಳು ಕೋಮು ಧ್ರುವೀಕರಣದ ಪರವಾಗಿಯೇ ಇದ್ದವು. ವಿಧಾನಸಭಾ ಚುನಾವಣೆ ಇನ್ನೇನು ಹತ್ತಿರದಲ್ಲಿಯೇ ಇದೆ. ರಾಜಕೀಯವಾಗಿ ಹಾಗೂ ಸೈದ್ಧಾಂತಿಕವಾಗಿ ಪಕ್ಷದ ಹತಾರವನ್ನು ಚೂಪುಗೊಳಿಸಿ ಚುನಾವಣೆಗೆ ಸನ್ನದ್ಧಗೊಳಿಸುವುದೇ ಇದರ ಹಿಂದಿನ ಉದ್ದೇಶವಾಗಿದೆ. ಸಮುದಾಯಗಳ ನೆಲೆಯಲ್ಲಿ ಸಮಾಜದ ವಿಭಜನೆ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಪ್ರಕ್ಷುಬ್ಧ ವಾತಾವರಣ, ಹಿಂಸಾಚಾರ, ಪ್ರತೀಕಾರ ಎಲ್ಲವೂ ಈ ನೀತಿ-ನಿಲುವುಗಳ ತಕ್ಷಣದ ಫಲ. ಹತ್ಯೆಗಳು ಮತ್ತು ಅವುಗಳನ್ನು ಎದುರಿಸಲು ಕಾನೂನುಬಾಹಿರ, ಸಂವಿಧಾನಬಾಹಿರ ಮಾರ್ಗ ಅಳವಡಿಸಿಕೊಳ್ಳುವ ಸರ್ಕಾರದ ಹತಾಶೆಯನ್ನು ಆ ಹಿನ್ನೆಲೆಯಲ್ಲಿ ನೋಡಬೇಕಿರುವುದು ಇಂದಿನ ಅಗತ್ಯ.

ಕಿಡಿನುಡಿ


ಎಲ್ಲ ರಾಜಕೀಯ ಪಕ್ಷಗಳ ನಾಯಕರೂ ಸಾಮಾನ್ಯ ಕಾರ್ಯಕರ್ತರನ್ನು ಮೆಟ್ಟಿಲುಗಳನ್ನಾಗಿ ಬಳಸಿಕೊಳ್ಳುತ್ತಾರೆ. ನಂತರ ಅವರ ಕೈಬಿಡುತ್ತಾರೆ. ಪಕ್ಷಾಂತರಿಗಳು ಮತ್ತು ರಾಜಕೀಯ ಹಿನ್ನೆಲೆಯ ಕುಟುಂಬಗಳ ಸದಸ್ಯರಿಗೆ ಪ್ರಮುಖ ಸ್ಥಾನ ಕಲ್ಪಿಸಿ, ನಿಷ್ಠಾವಂತರನ್ನು ಕಸದ ಬುಟ್ಟಿಗೆ ಎಸೆದಿರುವುದು ಕರ್ನಾಟಕದಲ್ಲಿ ಬಿಜೆಪಿ ಕಾರ್ಯಕರ್ತರು ಬೇಸರಗೊಂಡಿರುವುದಕ್ಕೆ ಒಂದು ಕಾರಣ.



ಗೌತಮ್ ಮಾಚಯ್ಯ, ಪತ್ರಕರ್ತ

ಪ್ರಜಾಪ್ರಭುತ್ವದ ಮೌಲ್ಯ ಎತ್ತಿಹಿಡಿದಿದ್ದ ನೆಹರೂ, ವಿದೇಶಾಂಗ ನೀತಿಯಲ್ಲಿ ಎಡವಿದ್ದರು

ವಿದೇಶಾಂಗ ನೀತಿ: ಆದರ್ಶ, ವಾಸ್ತವ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಇದು, ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷ. 1947ರ ಆಗಸ್ಟ್ 15ರಂದು ಬ್ರಿಟಿಷರ ಆಳ್ವಿಕೆ ಕೊನೆಗೊಂಡು ನಮ್ಮ ನಾಯಕರು ದೇಶದ ಚುಕ್ಕಾಣಿ ಹಿಡಿದಾಗ ಜನ ಸಂಭ್ರಮಿಸಿದ್ದರು. ಆ ಸಂಭ್ರಮದ ಜೊತೆಗೇ ನಾಳೆಯ ಕುರಿತು ಕನಸುಗಳು ಚಿಗುರಿದ್ದವು. 'ಭಾರತಕ್ಕೆ ಸ್ವಾತಂತ್ರ್ಯ ನೀಡಿದರೆ ಅದು ಒಂದು ದೇಶವಾಗಿ ಉಳಿಯಲಾರದು. ಭಾರತೀಯರು ಆಳ್ವಿಕೆ ನಡೆಸಲು ಅಸಮರ್ಥರು' ಎಂಬರ್ಥದ ಮಾತನ್ನು ಚರ್ಚಿಲ್ ಆದಿಯಾಗಿ ಅನೇಕರು ಹೇಳಿದ್ದರು.

ಆ ಮಾತು ನಿಜವಾಗಿಬಿಡಬಹುದೇ ಎಂಬ ವಾತಾವರಣ ಅಲ್ಲಲ್ಲಿ ಕಾಣುತ್ತಿತ್ತು. ದೇಶದ ವಿವಿಧ ಭಾಗಗಳಲ್ಲಿ ಕೋಮುದಂಗೆಗಳು ನಡೆದಿದ್ದವು. ಹಲವು ಪ್ರಾಂತ್ಯಗಳನ್ನು ಒಂದು ದೇಶವಾಗಿ ಒಗ್ಗೂಡಿಸುವ ಕೆಲಸ ಸರಳವಾಗಿರಲಿಲ್ಲ. ಎಲ್ಲರಿಗೂ ಅನ್ವಯವಾಗುವ, ಎಲ್ಲರನ್ನೂ ಸಮಭಾವದಿಂದ ಕಾಣುವ, ಎಲ್ಲರೂ ಒಪ್ಪಿಕೊಳ್ಳಬಹುದಾದ ಕಾನೂನು ರೂಪಿಸುವುದು ಸುಲಭವಾಗಿರಲಿಲ್ಲ. ಬ್ರಿಟಿಷರು ಭಾರತದ ಸಂಪತ್ತನ್ನಷ್ಟೇ ಲೂಟಿ ಹೊಡೆದಿರಲಿಲ್ಲ. ಭಾರತದ ಗುಡಿ ಕೈಗಾರಿಕೆಗಳನ್ನು ನಾಶ ಮಾಡಿದ್ದರು. ಉತ್ಪಾದನಾ ಸಾಮರ್ಥ್ಯವನ್ನು ಕುಗ್ಗಿಸಿದ್ದರು. ಇದೆಲ್ಲವನ್ನೂ ದಾಟಿ ಹೊಸ ನಾಡೊಂದನ್ನು ಕಟ್ಟುವುದು, ಅಭ್ಯುದಯದ ಕಡೆ ಹೆಜ್ಜೆ ಹಾಕುವುದು ನಮ್ಮ ಗುರಿಯಾಯಿತು. ಜಗತ್ತಿನ ಇತರ ದೇಶಗಳೊಂದಿಗೆ ವ್ಯವಹರಿಸಲು ಭಾರತಕ್ಕೊಂದು ಸ್ಪಷ್ಟ ವಿದೇಶಾಂಗ ನೀತಿಯ ಅವಶ್ಯಕತೆ ಇತ್ತು.

ವಿದೇಶಾಂಗ ನೀತಿ ರೂಪಿಸಲು ಮತ್ತು ವಿದೇಶಾಂಗ ವ್ಯವಹಾರಗಳನ್ನು ನಿರ್ವಹಿಸಲು ತಾವೇ ಸಮರ್ಥ ವ್ಯಕ್ತಿ ಎಂಬ ಅಭಿಪ್ರಾಯವನ್ನು ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಹೊಂದಿದ್ದರು. ಆ ಕಾರಣದಿಂದಲೇ ತಾವು ಪ್ರಧಾನಿಯಾಗಿದ್ದ 16 ವರ್ಷಗಳ ಅವಧಿಯಲ್ಲಿ ವಿದೇಶಾಂಗ ಖಾತೆಯನ್ನು ಮತ್ತೊಬ್ಬರಿಗೆ ನೀಡಲಿಲ್ಲ. 1947ರಿಂದ 1950ರವರೆಗೆ ವಿದೇಶಾಂಗ ಇಲಾಖೆಯ ನೇಮಕಾತಿ ಕೇವಲ ಶಿಫಾರಸಿನ ಆಧಾರದ ಮೇಲೆ ನಡೆಯುತ್ತಿತ್ತು. ಸ್ವತಃ ಪ್ರಧಾನಿ ನೆಹರೂ ಅಭ್ಯರ್ಥಿಗಳ ಸಂದರ್ಶನ ನಡೆಸುತ್ತಿದ್ದರು. ನೆಹರೂ ಅವರ ಸೈದ್ಧಾಂತಿಕ ನಿಲುವು, ಲೋಕದೃಷ್ಟಿ, ಮಹತ್ವಾಕಾಂಕ್ಷೆಗಳ ಛಾಯೆಯಲ್ಲಿ ಭಾರತದ ವಿದೇಶಾಂಗ ನೀತಿ ರೂಪುಗೊಂಡಿತು. ಅದೇ ಅದರ ಮಿತಿಯೂ ಆಗಿತ್ತು.

ಯಾವುದೇ ದೇಶದ ವಿದೇಶಾಂಗ ನೀತಿಯನ್ನು ಹಲವು ಸಂಗತಿಗಳು ಪ್ರಭಾವಿಸುತ್ತವೆ. ದೇಶದ ಇತಿಹಾಸ, ಆಳುವವರ ಮಾನಸಿಕತೆ, ಭೌಗೋಳಿಕತೆ, ಸೇನಾ ಸಾಮರ್ಥ್ಯ, ಮಾನವ ಸಂಪನ್ಮೂಲದ ಗಾತ್ರ ಮತ್ತು ಆರ್ಥಿಕ ಸ್ಥಿತಿಗತಿ ಆ ಪೈಕಿ ಮುಖ್ಯವಾದವು. ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಿ ದಾಸ್ಯದ ಸಂಕೋಲೆಯನ್ನು ಬಿಡಿಸಿಕೊಂಡಿದ್ದ ನಮಗೆ ಇನ್ನೊಂದು ರೂಪದ ದಾಸ್ಯಕ್ಕೆ ಒಳಗಾಗುವುದು ಬೇಕಿರಲಿಲ್ಲ. ಹಾಗಾಗಿ ನಮ್ಮದೇ ಸ್ಥಿತಿಯಲ್ಲಿದ್ದ, ವಸಾಹತು ವ್ಯವಸ್ಥೆಯಿಂದ ಬಿಡಿಸಿಕೊಂಡು ಎದ್ದುನಿಲ್ಲುತ್ತಿದ್ದ ರಾಷ್ಟ್ರಗಳನ್ನು ಒಗ್ಗೂಡಿಸುವ, ತನ್ಮೂಲಕ ನವ ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಸಂಘಟಿತವಾಗುವ ಪ್ರಯತ್ನಕ್ಕೆ ನೆಹರೂ ಚಾಲನೆ ಕೊಟ್ಟರು.

ಆದರೆ ವಿದೇಶಾಂಗ ನೀತಿಯು ಭಾರತದ ಹಿತಾಸಕ್ತಿಯನ್ನು ಪೂರ್ಣವಾಗಿ ಒಳಗೊಳ್ಳಲಿಲ್ಲ. ಭಾರತದ ಆರ್ಥಿಕತೆ ಸದೃಢವಾಗಿರಲಿಲ್ಲ. ಆಧುನಿಕ ಯುದ್ಧೋಪಕರಣಗಳ ಕೊರತೆ ಇತ್ತು. ತಾಂತ್ರಿಕ ಪರಿಣತಿಯನ್ನು ನಾವು ಸಾಧಿಸಿರಲಿಲ್ಲ. ಉದ್ಯೋಗ ಅವಕಾಶ ಕಲ್ಪಿಸಲು ಬಂಡವಾಳ ಆಕರ್ಷಿಸುವ ಅಗತ್ಯವಿತ್ತು. ಆಹಾರದ ಅಭಾವ ಕಾಡುತ್ತಿತ್ತು. ದೇಶದ ಮೂಲಸೌಕರ್ಯ ಯೋಜನೆಗಳಿಗೆ ಹಣ ಬೇಕಿತ್ತು. ಈ ಸವಾಲುಗಳನ್ನು ದಾಟುವುದು ನಮ್ಮ ಆದ್ಯತೆಯಾಗಬೇಕಿತ್ತು. ಆದರೆ ಆದರ್ಶವಾದ, ಅನುಮಾನ ಮತ್ತು ಅಸ್ಪಷ್ಟತೆಗಳೇ ನಮ್ಮ ವಿದೇಶಾಂಗ ನೀತಿಯ ಅಡಿಗಲ್ಲಾದವು.

ಎರಡನೇ ಮಹಾಯುದ್ಧದ ಭೀಕರತೆಯನ್ನು ಕಂಡಿದ್ದ, ಜಗತ್ತಿಗೆ ಅಹಿಂಸಾತ್ಮಕ ಹೋರಾಟವನ್ನು ಪರಿಚಯಿಸಿದ್ದ ಭಾರತ, ಯಾವುದೇ ಮಿಲಿಟರಿ ಬಣದ ಜೊತೆ ಗುರುತಿಸಿಕೊಳ್ಳುವುದಿಲ್ಲ ಎಂಬ ನಿಲುವು ತಳೆದಿದ್ದು ನೈತಿಕವಾಗಿ ಸರಿಯಿತ್ತು. ರಾಜಕೀಯವಾಗಿ ಯಾವುದೇ ಬಣದ ಜೊತೆ ಗುರುತಿಸಿಕೊಳ್ಳದಿದ್ದರೂ ಆರ್ಥಿಕ ಮತ್ತು ವಾಣಿಜ್ಯಿಕ ಹಿತಾಸಕ್ತಿಗಳಿಗೆ ಪೂರಕವಾಗಿ ಅಮೆರಿಕದೊಂದಿಗೆ ಸಂಬಂಧ ಗಟ್ಟಿಮಾಡಿಕೊಳ್ಳುವ ಅವಶ್ಯಕತೆ ಭಾರತಕ್ಕೆ ಇತ್ತು.

ಆದರೆ ಮಾತುಕತೆಗೆ ಅಮೆರಿಕ ಆಸಕ್ತಿ ತೋರಿದಾಗ, ನೆಹರೂ ನಿರುತ್ಸಾಹ ತೋರಿದರು. ಬೆಳೆ ವೈಫಲ್ಯವಾದರೆ ಬಳಸಲು ಹತ್ತು ಲಕ್ಷ ಟನ್ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಗುರಿಯನ್ನು 1949ರಲ್ಲಿ ಭಾರತ ಹೊಂದಿತ್ತು. ಅದೇ ವರ್ಷ ಅಮೆರಿಕ ಅಧ್ಯಕ್ಷ ಟ್ರೂಮನ್ ಅವರನ್ನು ನೆಹರೂ ಭೇಟಿಯಾಗಿದ್ದರು. ಟ್ರೂಮನ್ ಅವರೊಂದಿಗೆ ಚರ್ಚಿಸಬೇಕಾದ ವಿಷಯಗಳನ್ನು ಪಟ್ಟಿ ಮಾಡಿ ಪ್ರಧಾನಿ ನೆಹರೂ ಅವರ ಗಮನಕ್ಕೆ ಸರ್ ಗಿರಿಜಾಶಂಕರ್ ಬಾಜಪೇಯಿ ತಂದಿದ್ದರು. ಆಹಾರಧಾನ್ಯ ಕುರಿತ ಪ್ರಸ್ತಾಪವಿದ್ದ ಟಿಪ್ಪಣಿ ನೋಡಿ ನೆಹರೂ ಸಿಟ್ಟಾಗಿದ್ದರು. 'ನೀವು ನನಗೆ ಏನು ಮಾಡಬೇಕೆಂದು ಸಲಹೆ ನೀಡುತ್ತಿದ್ದೀರಿ? ಕೈಗಳಲ್ಲಿ ಭಿಕ್ಷಾಪಾತ್ರೆ ಹಿಡಿದು ಟ್ರೂಮನ್ ಅವರನ್ನು ಕಾಣಬೇಕೆ' ಎಂದು ರೇಗಿದ್ದರು. ಟ್ರೂಮನ್ ಭೇಟಿಯ ವೇಳೆ ವಿಯೆಟ್ನಾಂ ಮತ್ತು ಕೊರಿಯಾ ವಿಷಯದಲ್ಲಿ ಅಮೆರಿಕದ ನೀತಿಯ ಕುರಿತು, ಫ್ರಾನ್ಸ್ ಮತ್ತು ನೆದರ್‌ಲೆಂಡ್ಸ್‌ನ ವಸಾಹತು ಮನಃಸ್ಥಿತಿ ಕುರಿತು ಚರ್ಚಿಸಿ ನೆಹರೂ ಭಾರತಕ್ಕೆ ಮರಳಿದ್ದರು!


1952ರಲ್ಲಿ ಅಮೆರಿಕದ ಉಪಾಧ್ಯಕ್ಷ ರಿಚರ್ಡ್ ನಿಕ್ಸನ್, 1954 ಮತ್ತು 1956ರಲ್ಲಿ ಅಮೆರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಾಲಸ್ ಭಾರತಕ್ಕೆ ಬಂದಿದ್ದರು. ಆಗ ಕೂಡ ಜಾಗತಿಕ ಸಂಗತಿಗಳ ಕುರಿತು ಮಾತನಾಡಲು ನೆಹರೂ ಹೆಚ್ಚಿನ ಸಮಯ ವ್ಯಯಿಸಿದ್ದರು. 1959ರಲ್ಲಿ ಮೊದಲ ಬಾರಿಗೆ ಅಮೆರಿಕದ ಅಧ್ಯಕ್ಷ ಐಸೆನ್ ಹೋವರ್ ಭಾರತಕ್ಕೆ ಬಂದರು. ಅದಾಗಲೇ ಗಡಿ ವಿಷಯವಾಗಿ ಭಾರತದೊಂದಿಗೆ ಚೀನಾ ತಂಟೆಗೆ ನಿಂತಿತ್ತು. ಸೇನೆಗೆ ಆಧುನಿಕ ಯುದ್ಧೋಪಕರಣ ಒದಗಿಸುವ ಕುರಿತು ಚರ್ಚಿಸುವ ಅಗತ್ಯವಿತ್ತು. ಆದರೆ ನೆಹರೂ ಅವರು ಮತ್ತೊಮ್ಮೆ ಆದರ್ಶದ ಬಳ್ಳಿ ಹಿಡಿದು ನಿಂತರು. ಜಾನ್ ಕೆನಡಿ ಅವರು ಅಧ್ಯಕ್ಷರಾದ ಬಳಿಕ ನೆಹರೂ ಅವರ ಕುರಿತು ಕೆನಡಿ ಒಳ್ಳೆಯ ಮಾತನ್ನಾಡಿದ್ದರು. ಆದರೆ ಅದನ್ನು ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಬಳಸಿಕೊಳ್ಳುವಲ್ಲಿ ನೆಹರೂ ಸೋತರು. ವಯಸ್ಸಿನಲ್ಲಿ ಕಿರಿಯರಾಗಿದ್ದ ಕೆನಡಿ ಅವರೊಂದಿಗೆ ನೆಹರೂ ಅವರು ಉಪದೇಶ ಮಾಡುವ ಧಾಟಿಯಲ್ಲಿ ಮಾತನಾಡುತ್ತಿದ್ದರು. 'ಬೇ ಆಫ್ ಪಿಗ್ಸ್' ದಾಳಿಯ ಮೂಲಕ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಅವರನ್ನು ಪದಚ್ಯುತಿಗೊಳಿಸಲು ಅಮೆರಿಕ ಯತ್ನಿಸುತ್ತಿದೆ ಎಂದು ಅಮೆರಿಕದ ಮೇಲೆ ನೆಹರೂ ಸಿಟ್ಟಾಗಿದ್ದರು!

1962ರಲ್ಲಿ ಭಾರತದ ಮೇಲೆ ಚೀನಾ ಆಕ್ರಮಣ ಮಾಡಿತು. ಯುದ್ಧೋಪಕರಣಗಳ ಅಭಾವದಿಂದ ಭಾರತದ ಸೇನೆಯ ಶಕ್ತಿ ಕುಂದಿತ್ತು. ಸೋವಿಯತ್ ತಟಸ್ಥ ನಿಲುವು ತಳೆಯಿತು. ಅಲಿಪ್ತ ರಾಷ್ಟ್ರಗಳು ಸನಿಹ ಬರಲಿಲ್ಲ. ಆಪತ್ಕಾಲದಲ್ಲಿ ಆದರ್ಶ ಸಹಾಯಕ್ಕೆ ಒದಗಲಿಲ್ಲ. 1962ರ ನವೆಂಬರ್ 19ರಂದು ಕೆನಡಿ ಅವರಿಗೆ ನೆಹರೂ ಎರಡು ಪತ್ರಗಳನ್ನು ಬರೆದರು. ಮೊದಲ ಪತ್ರದಲ್ಲಿ ಅಗತ್ಯ ಶಸ್ತ್ರಾಸ್ತ್ರಗಳನ್ನು ರವಾನಿಸಿದ್ದಕ್ಕೆ ಧನ್ಯವಾದ ಅರ್ಪಿಸಿದ್ದ ಪ್ರಧಾನಿ ನೆಹರೂ, ಮತ್ತೊಂದು ಪತ್ರದಲ್ಲಿ ಚೀನಾದ ಪಡೆಗಳು ಕಾಶ್ಮೀರವನ್ನು ವಶಪಡಿಸಿಕೊಳ್ಳುವ ಆತಂಕ ನನ್ನನ್ನು ಕಾಡುತ್ತಿದೆ. ಚೀನಾದ ಸೇನೆಯನ್ನು ಹಿಮ್ಮೆಟ್ಟಿಸಲು ಅಮೆರಿಕದ ಸೂಪರ್ ಸಾನಿಕ್ ಯುದ್ಧವಿಮಾನಗಳ ಅಗತ್ಯವಿದೆ ಎಂದು ಸಹಾಯ ಕೇಳಿದ್ದರು. ಈ ಪತ್ರ ಬರೆದ ಎರಡು ದಿನದಲ್ಲಿ ಚೀನಾ ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿತು. ಇದು ಕೇವಲ ಕಾಕತಾಳೀಯವಾಗಿರಲಿಲ್ಲ.

ಪ್ರಧಾನಿ ನೆಹರೂ ಓರ್ವ ಮುತ್ಸದ್ದಿಯಾಗಿದ್ದರು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿದರು. ಆಧುನಿಕ ಭಾರತದ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರು. ಆದರೆ ಉತ್ತಮ ವಿದೇಶಾಂಗ ಮಂತ್ರಿಯಾಗಿರಲಿಲ್ಲ. ಸೋವಿಯತ್ ಕುರಿತು ಅವರಿಗೆ ವೈಯಕ್ತಿಕವಾಗಿ ಒಲವಿತ್ತು. ಆದರೆ ಭಾರತಕ್ಕೆ ಅಮೆರಿಕದ ನೆರವಿನ ಅಗತ್ಯವಿತ್ತು. ಕೊನೆಗೆ ಆಹಾರ ಧಾನ್ಯ ಪೂರೈಕೆಯ ವಿಷಯದಲ್ಲಿ, ಚೀನಾದ ಯುದ್ಧ ಸಂದರ್ಭದಲ್ಲಿ ಅಮೆರಿಕದ ನೆರವನ್ನು ಪಡೆಯಲೇಬೇಕಾಯಿತು. ಆದರ್ಶದ ಕಲ್ಪನಾ ಪಥದಿಂದ ವಾಸ್ತವದ ಹಾದಿಗೆ ವಿದೇಶಾಂಗ ನೀತಿಯನ್ನು ಎಳೆದು ತರುವ ಮೊದಲ ಪ್ರಯತ್ನ 90ರ ದಶಕದಲ್ಲಿ ಆಯಿತು. ಅಮೃತ ಮಹೋತ್ಸವದ ನೆಪದಲ್ಲಿ, ಇಟ್ಟ ತಪ್ಪು ಹೆಜ್ಜೆಗಳನ್ನೂ ಮೆಲುಕು ಹಾಕಬೇಕು.



ಚುರುಮುರಿ



ನಾಮದ ಮಹಿಮೆ!

• ಲಿಂಗರಾಜು ಡಿ.ಎಸ್.

'ಇದ್ಯಾಕ್ಸಾ ಹಿಂಗೆ ಗಡಿಗೆ ಗಾತ್ರ ಮಕ ಮಾಡಿಕ್ಯಂಡಿದೀರಿ? ಮಂಗನ ಕಾಯಿಲೆ ಬಂದದಾ?' ಅಂತ ತುರೇಮಣೆಗೆ ವಿಚಾರಿಸಿದೆ.

'ನನ್ನೆಂಡ್ರು, 'ಕರೋನ ಮುಗಿದೋದ್ರೂ ಒಂದು ಟ್ರಿಪ್ಪಿಲ್ಲ, ಮೊಬೈಲ್ ಕೊಡುಸ್ಲಿಲ್ಲ' ಅಂತ ಕ್ವಾಪ ಮಾಡಿಕ್ಯಂಡವುಳೆ! ಎಣ್ಣೆಗೆ ಅಂತ ಕಾಸು ಕದ್ದು ಮಡಗಿದ್ದೆ! ಅದನ್ನೂ ಜಪ್ತಿ ಮಾಡ್ಯವುಳೆ!' ಅಂದ್ರು ತುರೇಮಣೆ.

'ಅಲ್ಲ ಸಾ ಇಷ್ಟಕ್ಕೇ ಕಣ್ಣೀರು ಹಾಕಿದ್ರೆ ಹ್ಯಂಗೆ? ಇದೆಲ್ಲಾ ಮನೇಕಿ ಬಾತ್! ಯಾರದೋ ಕೆಟ್ಟ ಕಣ್ಣು ಬಿದ್ದಿರಬೇಕು! ಹಿರಿಯರಿಗೆ ಬೈಯ್ಯಬ್ಯಾಡ ಅಂತ ದಬಾಯ್ಸಕುಲ್ವೇ!' ಅಂತ ಪುಳ್ಳೆ ಹಾಕಿದೆ.

'ನಾನು ಬುಟ್ಟೇನಾ ದಬಾಸಿದೆ. ಆದರೆ 'ನಿಮಗೆ ಮೆಚ್ಯೂರಿಟಿ ಇಲ್ಲ. ಮನೆಗೆ ಏನು ಕೊಡುಗೆ ಕೊಟ್ಟದೀರ? ನೀವಲ್ಲದಿದ್ರೆ ಇನ್ನೊಬ್ರು ಮನೆ ನಡೆಸ್ತರೆ. ಅಧಿಕಾರ ಬುಟ್ಟುಕೊಡಿ' ಅಂತ ಮೂತಿ ತಿವಿದಳು ಕನೋ! ನಂದೇನೂ ನಡೀನಿಲ್ಲ. ಅದುಕ್ಕೆ 'ಗಡವ ನೀ ಮಡಗಿದಂಗಿರು' ಅಂತ ಅಮಿಕ್ಕಂಡು ಸುಮ್ಮಗಿದ್ದೀನಿ!' ಅಂತ ಬೇಜಾರು ಮಾಡಿಕ್ಯಂದರು.

'ಪರ್ಸೆಂಟೇಜು ಸರಿಯಾಗಿ ಕೊಟ್ಟಿಲ್ಲ ಅನ್ನಿಸ್ತದೆ? ಅದುಕ್ಕೇ ಅಧಿಕಾರ ಬುಡಿ ಅಂದಿರಬೇಕು!' ಅಂತಂದೆ.

'ನೀವು ಸುಮ್ಮಗಿರ್ರೀ! ನಂದೆಲ್ಲಿಕ್ಲೀ ಅಂತ ನೀವು ಬ್ಯಾರೆ! ಅಧಿಕಾರ ಬುಡದೇನು ಐದು ನಿಮಿಸದ ಕೆಲಸ! ಆಮೇಲೆ ಅಣ್ಣ ಎಲ್ಲಿಗೋಯ್ತದೆ?' ಅಂತ ನನ್ನ ಬೈದ ಚಂದ್ರು.

'ನನ್ಗೇನು ಇಂತೇ ತಾಪತ್ರಯ ಇಲ್ಲ ಕನ್ರಪ್ಪಾ! ನಮ್ಮನೇಳಿಗೆ ಸೋಮವಾರ ಶಿವನ ದೇವಸ್ಥಾನ, ಮಂಗಳವಾರ, ಶುಕ್ರವಾರ ಲಕ್ಷ್ಮೀ ದೇವಸ್ಥಾನ, ಗುರುವಾರ ರಾಯರ ಮಠ, ಶನಿವಾರ ಆಂಜನೇಯನ ದೇವಸ್ಥಾನಕ್ಕೆ ಕರಕೋಗಿ ದರ್ಶನ ಮಾಡಸಿದ್ರಾತು. ದಿನಕ್ಕೆ ಮೂರು ಊಟ, ಭಾನುವಾರ ಬಾಡೂಟ ಗ್ಯಾರಂಟಿ! ನೀನೂ ಹಿಂಗೇ ಮಾಡ್ಲಾ!' ಅಂತು ಯಂಟಪ್ಪಣ್ಣ.

'ಯಂಟಪ್ಪಣ್ಣಂದೇ ಈ ಹುನ್ನಾರೆಲ್ಲಾ ನಂತಾವ ಬ್ಯಾಡ! ರಾಜಕಾರಣಿಗಳ ಥರಾ ಪಂಗನಾಮ ತೇದು ಮಡಗಬ್ಯಾಡಿ' ಅಂದ ತುರೇಮಣೆ ಮಾತಿಗೆ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ.

ದಿನದ ಟ್ವೀಟ್

ತೆರಿಗೆ ಇವರಿಗೆ ಮಾತ್ರವೇ?

ದೇಶದಲ್ಲಿ ಲಕ್ಷಾಂತರ ಸಣ್ಣ ಅಂಗಡಿಗಳು, ಬೀದಿಬದಿ ದರ್ಶಿನಿಗಳು, ದಿನಸಿ ಅಂಗಡಿಗಳು ಇವೆ. ಇವುಗಳಲ್ಲಿ ಹಲವು ಪ್ರತಿದಿನವೂ ದೊಡ್ಡ ಮೊತ್ತದ ವಹಿವಾಟು ನಡೆಸುತ್ತವೆ. ಆದರೆ ತೆರಿಗೆ ರಸೀದಿ ನೀಡುವುದಿಲ್ಲ. ಆದಾಯ ತೆರಿಗೆ ಮತ್ತು ಜಿಎಸ್‌ಟಿಯನ್ನು ಮಧ್ಯಮ ವರ್ಗದವರು ಮಾತ್ರ ಪಾವತಿಸಬೇಕೇ?



ರವಿಸುತಂಜನಿ ಕುಮಾರ್, ಮಾರ್ಕೆಟಿಂಗ್ ತಜ್ಞ

25 ವರ್ಷಗಳ ಹಿಂದೆ

ಶನಿವಾರ, 2-8-1997

• **ಬಿಹಾರ ಬಂದ್; ವ್ಯಾಪಕ ಹಿಂಸಾಚಾರ**

ಪಟ್ನಾ, ಆ. 1 (ಯುಎನ್‌ಐ)– ಮೇವು ಹಗರಣದ ಸಂಬಂಧ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರನ್ನು ಬಂಧಿಸಿರುವುದನ್ನು ಪ್ರತಿಭಟಿಸಿ ಇಂದು ಕರೆ ನೀಡಲಾಗಿದ್ದ 'ಬಿಹಾರ ಬಂದ್' ಹಿಂಸಾಚಾರದ ತಿರುವು ಪಡೆಯಿತು.

ಆಸ್ತಿ-ಪಾಸ್ತಿ ಹಾನಿ, ಗಾಯಗೊಂಡಿರುವ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ನಾಗರಿಕರಿಗೆ ಕರೆ ನೀಡಿರುವ ಪಟ್ನಾ ಹೈಕೋರ್ಟ್, ರಾಜ್ಯದ ಉನ್ನತ ಅಧಿಕಾರಿಗಳಿಗೆ ಭದ್ರತೆ ಕುರಿತಾಗಿ ವರದಿ ಸಲ್ಲಿಸುವಂತೆ ಸಮನ್ಸ್ ನೀಡಿದೆ.

• **ವೀರಪ್ಪನ್ ಷರತ್ತು: ವಿವರ ಸದನಕ್ಕೆ, ಮಂಗಳವಾರ ಚರ್ಚೆ**

ಬೆಂಗಳೂರು, ಆ. 1– ರಾಜ್ಯ ಸರ್ಕಾರವು ತಮಿಳುನಾಡು ಸರ್ಕಾರದ ಮುಖಾಂತರ ನರಹಂತಕ ವೀರಪ್ಪನ್‌ನ ಷರತ್ತುಗಳ ಸಂಬಂಧದಲ್ಲಿ ನಡೆಸಿರುವ ಪತ್ರ ವ್ಯವಹಾರ ಹಾಗೂ ಕಳುಹಿಸಿರುವ ಸಂದೇಶಗಳು ಸೇರಿದಂತೆ ಇತರೆ ವಿವರಗಳನ್ನು ವಿರೋಧ ಪಕ್ಷಗಳ ಗಮನಕ್ಕೆ ತಂದಿಲ್ಲ ಎಂಬ ವಿರೋಧ ಪಕ್ಷಗಳ ಆರೋಪದ ಹಿನ್ನೆಲೆಯಲ್ಲಿ ಎಲ್ಲ ವಿವರಗಳನ್ನು ಮಂಗಳವಾರದಂದು ಸದನದ ಮುಂದಿಡುವುದಾಗಿ ಅರಣ್ಯ ಸಚಿವ ಗುರುಪಾದಪ್ಪ ನಾಗಮಾರಪಲ್ಲಿ ಅವರು ಇಂದು ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಇದೇ ವಿಷಯದಲ್ಲಿ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿದ್ದ ವಿರೋಧ ಪಕ್ಷಗಳು ಅದರ ಪೂರ್ವಭಾವಿಯಾಗಿ ಪ್ರಸ್ತಾವನೆ ಮಾಡಿ ಸರ್ಕಾರದ ಕ್ರಮಗಳ ಬಗ್ಗೆ ತರಾಟೆಗೆ ತೆಗೆದುಕೊಂಡಾಗ ಸಚಿವರು ಈ ಭರವಸೆ ನೀಡಿದರು.

50 ವರ್ಷಗಳ ಹಿಂದೆ

ಬುಧವಾರ, 2-8-1972

• **ಅಗತ್ಯ ವಸ್ತುಗಳ ದಾಸ್ತಾನು ತಡೆಗೆ ಉಗ್ರ ಕ್ರಮ ಸಂಭವ**

ನವದೆಹಲಿ, ಆ. 1– ಅಗತ್ಯ ವಸ್ತುಗಳ ಬೆಲೆಗಳಲ್ಲಿ ಅಸಾಧಾರಣ ಏರಿಕೆಗಳನ್ನು ತಡೆಗಟ್ಟಲು, ಲಾಭಗಳಿಕೆಗಾಗಿ ದಾಸ್ತಾನಿಡುವವರ ವಿರುದ್ಧ ಕಟು ಕ್ರಮ ಹಾಗೂ ಸರ್ಕಾರಿ ವಿತರಣೆಯಲ್ಲಿ ಹೆಚ್ಚು ವಿಚಕ್ಷಣೆಯ ದ್ವಿಮುಖ ಕ್ರಮಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳುವ ಸಂಭವವಿದೆ.

ಪ್ರಧಾನಿ ಇಂದಿರಾ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಕೇಂದ್ರ ಸಂಪುಟದ ಆರ್ಥಿಕ ನೀತಿ ಕುರಿತ ಸಮಿತಿಯ ಒಂದು ಗಂಟೆ ಕಾಲದ ಸುದೀರ್ಘ ಸಮಾಲೋಚನೆ ಅಂತ್ಯದಲ್ಲಿ ದೊರೆತ ಇಂಗಿತವಿದು.

ಯಾವ ನಿರ್ದಿಷ್ಟ ನಿರ್ಧಾರವನ್ನೂ ತೆಗೆದುಕೊಳ್ಳಲಿಲ್ಲವಾದರೂ ದಿನಬಳಕೆ ವಸ್ತುಗಳಾದ ಧಾನ್ಯ, ದ್ವಿದಳ ಧಾನ್ಯ, ಖಾದ್ಯ ತೈಲ, ಬಟ್ಟೆ, ಸಕ್ಕರೆ, ತರಕಾರಿ, ಬೆಂಕಿ ಪೊಟ್ಟಣ, ಸೀಮೆಎಣ್ಣೆ ಮೊದಲಾದವುಗಳ ಬಗೆಗೆ ನಿರ್ದಿಷ್ಟ ದೀರ್ಘಾವಧಿ ಬೆಲೆ ನೀತಿಯೊಂದನ್ನು ರಚಿಸಬೇಕೆಂಬುದು ಸಮಿತಿಯ ಒಟ್ಟಾರೆ ಅಭಿಪ್ರಾಯವಾಗಿತ್ತು.

• **ಸಿಮ್ಲಾ ಒಪ್ಪಂದಕ್ಕೆ ಲೋಕಸಭೆ ಅಸ್ತು**

ನವದೆಹಲಿ, ಆ. 1– ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಅವರು ಜುಲೈ 3ರಂದು ಮಾಡಿಕೊಂಡ ಸಿಮ್ಲಾ ಒಪ್ಪಂದವನ್ನು ಲೋಕಸಭೆ ಇಂದು ಭಾರಿ ಬಹುಮತದಿಂದ ಅನುಮೋದಿಸಿತು.

ಒಪ್ಪಂದ ತಿರಸ್ಕರಿಸುವಂತೆ ಬಿರುಸಾಗಿ ಹೋರಾಡಿದ ಜನಸಂಘದ ಸದಸ್ಯರು ಆ ಸಂಬಂಧದ ಎ.ಬಿ. ವಾಜಪೇಯಿ ಅವರ ಇನ್ನೊಂದು ಸೂಚನೆಯನ್ನು ಮತಕ್ಕೆ ಹಾಕಿದಾಗ ಮತಗಳ ಎಣಿಕೆಗೆ ಒತ್ತಾಯ ಮಾಡಲಿಲ್ಲ. ಇದು ಅವರ ಒಬ್ಬಂಟಿತನದ ಮತ್ತು ಒಪ್ಪಂದದ ಪರ ಭಾರಿ ಬಹುಮತ ಖಚಿತವೆಂಬುಂದರ ಸೂಚಕವಾಗಿತ್ತು. ಮತದಾನದ ಸಮಯದಲ್ಲಿ ವಾಜಪೇಯಿ ಅವರು ಕೂಡ ಹಾಜರಿರಲಿಲ್ಲ.

• **ಅರ್ಧ ರಾಜ್ಯದಲ್ಲಿ ಬರಗಾಲ**

ಬೆಂಗಳೂರು, ಅ. 1– ಬಿಜಾಪುರ ಮತ್ತಿತರ ಜಿಲ್ಲೆಗಳೂ ಸೇರಿ ರಾಜ್ಯದ ಅರ್ಧ ಭಾಗವು ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆ.

ಆ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಅಭಾವ ಪರಿಹಾರ ಕಾಮಗಾರಿಗಳ ಮೂಲಕ ಜನರಿಗೆ ಉದ್ಯೋಗ ಮತ್ತು ನ್ಯಾಯಬೆಲೆ ಅಂಗಡಿಗಳ ಮೂಲಕ ಧಾನ್ಯ ವಿತರಣೆಗೆ ಸರ್ಕಾರ ಈವರೆಗೆ ತೆಗೆದುಕೊಂಡಿರುವ ಕ್ರಮಗಳನ್ನು ಕಂದಾಯ ಸಚಿವ ಶ್ರೀ ಎನ್. ಹುಚ್ಚಮಾಸ್ತಿಗೌಡ ಅವರು ಇಂದು ವಿಧಾನಸಭೆಯಲ್ಲಿ ವಿವರಿಸಿದರು.

ವಾಚಕರ ವಾಣಿ

ಕೆಟ್ಟ ಕಣ್ಣು ಎಂಬುದಿಲ್ಲ...

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಅನಾರೋಗ್ಯಕ್ಕೆ ಒಳಗಾಗಿರುವುದನ್ನು ನೆನೆದು 'ಯಾರದೋ ಕೆಟ್ಟ ಕಣ್ಣು ಅವರ ಮೇಲೆ ಬಿದ್ದಿದೆ' ಎಂದು ಅವರ ಪುತ್ರ ಎಚ್.ಡಿ. ಕುಮಾರಸ್ವಾಮಿ ಅವರು ಸಭೆಯೊಂದರಲ್ಲಿ ಕಣ್ಣೀರಿಟ್ಟರು ಎಂದು ವರದಿಯಾಗಿದೆ (ಪ್ರ.ವಾ., ಆ. 1). ಕೆಟ್ಟ ಕಣ್ಣು ಬೀಳುವುದು, ದೃಷ್ಟಿ ತಗಲುವುದು, ದೃಷ್ಟಿ ತೆಗೆಯುವುದು... ಇಂಥವೆಲ್ಲ ಮೂಢ ನಂಬಿಕೆಗಳು. ಪ್ರತಿಯೊಬ್ಬ ಭಾರತೀಯನೂ ವೈಚಾರಿಕತೆ, ವೈಜ್ಞಾನಿಕ ಮನೋಭಾವ ರೂಢಿಸಿಕೊಂಡು ಬದುಕಬೇಕು, ಬಾಳಬೇಕು ಎಂದು ನಮ್ಮ ಸಂವಿಧಾನದಲ್ಲಿ ಹೇಳಲಾಗಿದೆ. ಅದರಲ್ಲೂ ಜನನೇತಾರರಾದವರು ಹೀಗೆಲ್ಲ ಕಾರ್ಯಕಾರಣ ಸಂಬಂಧಗಳಿಗೆ ಹೊರತಾಗಿ ಆಲೋಚಿಸಬಾರದು.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಸರ್ಕಾರದ ಕರ್ತವ್ಯವಲ್ಲವೇ?

ರಾಜ್ಯದ ಗಡಿ ಜಿಲ್ಲೆ ಬೀದರ್‌ನ ಕೆಲವು ಗ್ರಾಮಗಳ ದುಃಸ್ಥಿತಿ ಕುರಿತ ವರದಿ (ಒಳನೋಟ, ಜುಲೈ 31) ಓದಿ ಮನಸಿಗೆ ತುಂಬಾ ನೋವಾಯಿತು. ಈ ಭಾಗದ ಜನರು ಮೂಲಸೌಕರ್ಯಗಳನ್ನು ಪಡೆಯಲು ನ್ಯಾಯಾಲಯದ ಕದ ತಟ್ಟಬೇಕಾಗಿರುವುದು ವಿಪರ್ಯಾಸ. ಜನರಿಗೆ ಸಾರಿಗೆ, ನೀರು, ವಿದ್ಯುತ್‌ನಂಥ ಮೂಲಸೌಕರ್ಯಗಳನ್ನು ಕಲ್ಪಿಸುವುದು ಸರ್ಕಾರದ ಕರ್ತವ್ಯವಲ್ಲವೇ? ಆಡಳಿತ ನಡೆಸುವವರ ಅನುಭವ ಕೊರತೆಯೋ ಅಥವಾ ಅಸಡ್ಡೆಯೋ? ಮೂಲಸೌಕರ್ಯ ಕಲ್ಪಿಸುವ ಕಡೆಗೆ ಇನ್ನಾದರೂ ಸರ್ಕಾರ ಗಮನ ನೀಡಲಿ. ಅನುಷ್ಠಾನದಲ್ಲಿ ಭ್ರಷ್ಟಾಚಾರ ನುಸುಳದಂತೆ ಎಚ್ಚರ ವಹಿಸಲಿ.

ಡಾ. ಎಚ್.ತುಕಾರಾಂ ಮಲ್ಲತ್ತಹಳ್ಳಿ, ಬೆಂಗಳೂರು

ಹಸಿದವರಿಗೆ ಹಾಲು ನೀಡಿ

ನಾಗರಪಂಚಮಿ ಹಬ್ಬದ ನಿಮಿತ್ತ ಅನೇಕರು ಕಲ್ಲುನಾಗರಗಳಿಗೆ ಇಲ್ಲವೇ ಹುತ್ತದಲ್ಲಿ ಹಾಲು ಸುರಿಯುವುದು ವಾಡಿಕೆ. ಇದು ಅವರವರ ಧಾರ್ಮಿಕ ನಂಬಿಕೆ ಎನ್ನುವುದು ನಿಜ. ಆದರೆ, ವೈಜ್ಞಾನಿಕವಾಗಿ ನೋಡಿದರೆ ಹಾವುಗಳು ಹಾಲನ್ನಾಗಲೀ, ಹಾಲಿನ ಉತ್ಪನ್ನಗಳನ್ನಾಗಲೀ ಸೇವಿಸುವುದಿಲ್ಲ. ಹಾಗಾಗಿ, ಪಂಚಮಿಯಂದು ಪೌಷ್ಟಿಕಾಂಶಗಳ ಆಗರವಾಗಿರುವ ಹಾಲನ್ನು ಹುತ್ತದಲ್ಲಿ ಸುರಿಯುವ ಬದಲು ಹಸಿದವರಿಗೆ ನೀಡುವುದು ಉತ್ತಮ.

ಬಿಂದುಶ್ರೀ, ಚಿಕ್ಕನಾಯಕನಹಳ್ಳಿ

ಮಾನವ ಘನತೆ ಎತ್ತಿಹಿಡಿಯೋಣ

ಭಾರತದ ಸೊಬಗು ಬಹುತ್ವದಲ್ಲಿ ಇದೆ. ದೇಶದ ಭವಿಷ್ಯವು ಏಕತೆ, ಸಾಮರಸ್ಯ ಮತ್ತು ಸಮಗ್ರತೆಯಲ್ಲಿ ಅಡಗಿದೆ. ಎಲ್ಲರ ಪಾಲ್ಗೊಳ್ಳುವಿಕೆಯಿಂದ ಮಾತ್ರ ಇಲ್ಲಿ ಅಭಿವೃದ್ಧಿ ಸಾಧ್ಯ. ಮತೀಯ ನೆಲೆಯಲ್ಲಿ ನಡೆಯುತ್ತಿರುವ ಘರ್ಷಣೆಗಳು ನಾಡನ್ನು ಹಿಂದಕ್ಕೆ ಒಯ್ಯುತ್ತವೆ ಎಂಬ ಅರಿವು ನಮ್ಮ ಜನನಾಯಕರಲ್ಲಿ ಇರಬೇಕು.

ತಿಳಿವಳಿಕೆಯ ಅಭಾವದಿಂದ ದಾರಿ ತಪ್ಪಿರುವ ಜನರಲ್ಲಿ ಜೀವನ್ಮುಖಿ ಚಿಂತನೆ, ಬೆಳಕು ಮೂಡುವಂತೆ ಮಾಡುವ ಗುರುತರ ಹೊಣೆ ಪ್ರಜ್ಞಾವಂತರ ಮೇಲಿದೆ. ಇದಕ್ಕಾಗಿ ಅಗತ್ಯವೆನಿಸಿದರೆ ಪ್ರತಿವರ್ಷ ಸರ್ವಧರ್ಮ ಸಮ್ಮೇಳನ ಆಯೋಜಿಸಬಹುದು. ಎಲ್ಲ ಧರ್ಮಗಳ ಗುರುಗಳು, ಮಠಾಧೀಶರು, ಪಾದ್ರಿಗಳು, ಮೌಲ್ವಿಗಳು ಅದರಲ್ಲಿ ಭಾಗವಹಿಸಿ ಜನರಲ್ಲಿ ಅರಿವು ಮೂಡಿಸಬೇಕು. ಮಾನವ ಘನತೆಯನ್ನು ಎತ್ತಿಹಿಡಿಯುವಂತಹ ಕೆಲಸ ತುರ್ತಾಗಿ ಆಗಬೇಕಿದೆ. ಅಮಾಯಕರ ಬದುಕನ್ನು ಯಾವುದೇ ಕಾರಣಕ್ಕೆ ಅಪಾಯಕ್ಕೆ ದೂಡಬಾರದು.

ಎಂ. ಮಂಚಶೆಟ್ಟಿ, ಕಡಿಲುವಾಗಿಲು, ಮದ್ದೂರು

ಸಕ್ರಿಯ ರಾಜಕಾರಣಕ್ಕೆ ಬರುವುದು ಒಳಿತು

ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ವಿವಾದ ಸೃಷ್ಟಿಸುವುದರಲ್ಲಿ ನಿಸ್ಸೀಮರು. ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಅವರು ಸಕ್ರಿಯ ರಾಜಕಾರಣಕ್ಕೆ ಬರುವುದು ಒಳಿತು. 'ಗುಜರಾತ್ ಮತ್ತು ರಾಜಸ್ಥಾನದವರು ಒಂದು ವೇಳೆ ಮುಂಬೈ ಹಾಗೂ ಠಾಣೆ ನಗರಗಳಿಂದ ಹೊರನಡೆದರೆ, ಈ ನಗರಗಳಲ್ಲಿ ದುಡ್ಡೇ ಇರುವುದಿಲ್ಲ' ಎಂದು ಹೇಳುವ ಮೂಲಕ ಈಗ ಅವರು ವಿವಾದದ ಕಿಡಿ ಹತ್ತಿಸಿದ್ದಾರೆ. ಈ ಹಿಂದೆ, ಉದ್ಧವ್ ಠಾಕ್ರೆ ನೇತೃತ್ವದ ಸರ್ಕಾರವನ್ನು ಕಾಡುತ್ತಿದ್ದ ಅವರು, ಈಗ ಶಿಂದೆ ನೇತೃತ್ವದ ಸರ್ಕಾರಕ್ಕೆ ಇರಿಸುಮುರಿಸು ತಂದಿದ್ದಾರೆ.

ಅನಿಲ್ ನಾಯ್ಕ, ಹೊನ್ನಾವರ

ಲಿಂಗತ್ವ ಅಲ್ಪಸಂಖ್ಯಾತರಿಗೂ ಅವಕಾಶ ನೀಡಿ

ಕ್ರೀಡಾಕೂಟಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಅವಕಾಶ ನೀಡಬೇಕೆಂದು ಕೇರಳ ಹೈಕೋರ್ಟ್ ಈಚೆಗೆ ನೀಡಿರುವ ಆದೇಶ ಮಹತ್ವದ್ದಾಗಿದೆ. ಅವರು ಆಯ್ಕೆ ಮಾಡಿದ ಲಿಂಗ ವಿಭಾಗಗಳಲ್ಲಿ ಅವರಿಗೆ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶ ನೀಡಬೇಕೆಂದೂ ಕೋರ್ಟ್ ಹೇಳಿರುವುದು ಸ್ವಾಗತಾರ್ಹ.

ಲಿಂಗತ್ವ ಅಲ್ಪಸಂಖ್ಯಾತರು ಈಗಾಗಲೇ ಸಾಮಾನ್ಯರಂತೆ ಇತರ ವೃತ್ತಿಗಳಲ್ಲಿ ತೊಡಗಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಮುಂದಾಗಿದ್ದಾರೆ. ಇತರರಂತೆಯೇ ಅವರಿಗೂ ಕ್ರೀಡಾಕೂಟಗಳಲ್ಲಿ ಅವಕಾಶ ನೀಡುವುದರಿಂದ ಅವರಲ್ಲಿ ಆತ್ಮವಿಶ್ವಾಸ ಮೂಡಲು ಸಹಕಾರಿಯಾಗಲಿದೆ.

ನಕ್ಷತ್ರ ಬಿ., ಬೆಂಗಳೂರು

ನೆರವು ಕೋರಿ ಮನವಿ

ನನ್ನ ಹದಿನಾಲ್ಕು ವರ್ಷದ ಮಗಳು ಆರ್. ರಿತು ರಕ್ತ ಕ್ಯಾನ್ಸರ್‌ನಿಂದ (Acute myeliod Leukemia) ಬಳಲುತ್ತಿದ್ದು, ಆಕೆಗೆ ಬೆಂಗಳೂರಿನ ರಾಮಯ್ಯ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇದಕ್ಕೆ ಸುಮಾರು ಹತ್ತು ಲಕ್ಷ ರೂಪಾಯಿ ವೆಚ್ಚ ತಗಲುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ.

ವೃತ್ತಿಯಲ್ಲಿ ಕಾರು ಚಾಲಕನಾಗಿರುವ ನನಗೆ ಈ ವೆಚ್ಚ ಭರಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ಮಗಳ ಚಿಕಿತ್ಸಾ ವೆಚ್ಚಕ್ಕೆ ದಾನಿಗಳು ನೆರವಾಗಬೇಕೆಂದು ಕೋರುತ್ತೇನೆ. ಬ್ಯಾಂಕ್ ವಿವರ: ರಾಜೇಂದ್ರ ಎನ್., ಅಕೌಂಟ್ ನಂ: 260100050300117, ತಮಿಳುನಾಡು ಮರ್ಕಂಟೈಲ್ ಬ್ಯಾಂಕ್. IFSC: TMBL0000260, MICR CODE- 560060005. ಮೊಬೈಲ್ ಸಂಖ್ಯೆ: 99801 82221.

ರಾಜೇಂದ್ರ ಎನ್., ನೆಲಮಂಗಲ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪಶ್ಚಿಮ ಘಟ್ಟ ರಾಜ್ಯಗಳ ಸ್ಥಿತಿಗತಿ ಏನು?


• ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.

ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ (ಇಎಸ್ಎ) ಎಂದು ಘೋಷಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಹೊರಡಿಸಿರುವ ಕರಡು ಅಧಿಸೂಚನೆಗೆ ಹಲವು ರಾಜ್ಯಗಳು ಆಕ್ಷೇಪ ವ್ಯಕ್ತಪಡಿಸಿವೆ. ಹೀಗೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯಗಳಲ್ಲಿ ಕರ್ನಾಟಕವು ಮೊದಲ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ ಮತ್ತು ಗೋವಾ ನಂತರದಲ್ಲಿವೆ.

ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಪರಿಗಣಿಸುವುದಕ್ಕೆ ಸಂಬಂಧಿಸಿದ ಅಧ್ಯಯನವು 2010ರಲ್ಲಿ ಆರಂಭವಾಗಿತ್ತು. ಆದರೆ, ಈ ಅಧ್ಯಯನಕ್ಕೆ 2001ರ ಜನಗಣತಿಯನ್ನು ದತ್ತಾಂಶಗಳನ್ನು ಆಧಾರವಾಗಿ ಪರಿಗಣಿಸಲಾಗಿತ್ತು. ಅಧ್ಯಯನ ಆರಂಭಿಸಿದಾಗಲೇ 10 ವರ್ಷಗಳಷ್ಟು ಹಳೆಯ ದತ್ತಾಂಶಗಳನ್ನು ಬಳಸಿಕೊಳ್ಳಲಾಗಿತ್ತು. ಅದರ ಆಧಾರದಲ್ಲಿಯೇ ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಪರಿಗಣಿಸುವ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಕರಡು ಅಧಿಸೂಚನೆ ಬರುವ ಹೊತ್ತಿಗಾಗಲೇ, ಅದಕ್ಕೆ ಆಧಾರವಾಗಿ ಬಳಸಿಕೊಂಡಿದ್ದ ದತ್ತಾಂಶವು 14 ವರ್ಷಗಳಷ್ಟು ಹಳೆಯದಾಗಿತ್ತು. ಕಳೆದ ಬಾರಿ ಕರಡು ಅಧಿಸೂಚನೆ ಹೊರಡಿಸಿದಾಗ ದತ್ತಾಂಶವು 18 ವರ್ಷಗಳಷ್ಟು ಹಳತಾಗಿತ್ತು ಎಂದು ಈ ರಾಜ್ಯಗಳು ಹೇಳಿವೆ. ಈಗ ಆ ದತ್ತಾಂಶವು 22 ವರ್ಷಗಳಷ್ಟು ಹಳೆಯದಾಗಿದೆ. ವಾಸ್ತವ ಸ್ಥಿತಿ ಅದಕ್ಕಿಂತಲೂ ಭಿನ್ನವಾಗಿದೆ. 2001ರಲ್ಲಿ ಇದ್ದುದ್ದಕ್ಕಿಂತ, ಆ ಎಲ್ಲಾ ಪ್ರದೇಶಗಳು ಅಭಿವೃದ್ಧಿಯಲ್ಲಿ ಮುಂದೆ ಸಾಗಿವೆ. ಜನಸಂಖ್ಯೆಯೂ ಹೆಚ್ಚಾಗಿದೆ. ಪರಿಸ್ಥಿತಿ ಹೀಗಿರುವಾಗ 22 ವರ್ಷಗಳಷ್ಟು ಹಳೆಯ ದತ್ತಾಂಶಗಳ ಆಧಾರದಲ್ಲಿ ಮಾಡಿದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವುದು ಎಷ್ಟು ಸರಿ ಎಂಬುದು ರಾಜ್ಯ ಸರ್ಕಾರಗಳ ಪ್ರಮುಖ ಆಕ್ಷೇಪಗಳಲ್ಲಿ ಒಂದು. ಇವುಗಳ ಹೊರತಾಗಿ ರಾಜ್ಯಗಳು ತಮ್ಮದೇ ಆದ ಪ್ರತ್ಯೇಕ ಆಕ್ಷೇಪಗಳನ್ನು ವ್ಯಕ್ತಪಡಿಸಿವೆ ಮತ್ತು ತಿದ್ದುಪಡಿಗಳನ್ನು ಬಯಸಿವೆ. ಇವು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಭಿನ್ನವಾಗಿವೆ.



ಕೇರಳದಲ್ಲಿ ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿ ಬರುವ ವಯನಾಡ್‌ನ ಹಳ್ಳಿಯೊಂದರ ಮಹಿಳೆ ಸೌದೆ ಹೊತ್ತು ಸಾಗಿದರು



1,60,000 ಚದರ ಕಿ.ಮೀ.
ಪಶ್ಚಿಮ ಘಟ್ಟ ಪ್ರದೇಶದ ಒಟ್ಟು ವಿಸ್ತೀರ್ಣ

56,825 ಚದರ ಕಿ.ಮೀ.
ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಗುರುತಿಸಿರುವ ಪಶ್ಚಿಮ ಘಟ್ಟ ಪ್ರದೇಶದ ವಿಸ್ತೀರ್ಣ

ಗುಜರಾತ್‌ನಲ್ಲಿ ಆಕ್ಷೇಪವಿಲ್ಲ

ಉದ್ದೇಶಿತ ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲೇ, ಅತ್ಯಂತ ಕಡಿಮೆ ವಿಸ್ತೀರ್ಣದ ಪ್ರದೇಶ ಹೊಂದಿರುವ ರಾಜ್ಯ ಗುಜರಾತ್. ಆರು ರಾಜ್ಯಗಳಲ್ಲಿ ಹರಡಿರುವ ಪಶ್ಚಿಮ ಘಟ್ಟದ ಒಟ್ಟು ಉದ್ದೇಶಿತ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ, ಗುಜರಾತ್‌ನಲ್ಲಿ ಗುರುತಿಸಲಾಗಿರುವ ಪ್ರದೇಶದ ಪ್ರಮಾಣ ಶೇ 0.80ರಷ್ಟು ಮಾತ್ರ. ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ದಕ್ಷಿಣ ಗುಜರಾತ್‌ನ ಮೂರು ಜಿಲ್ಲೆಗಳಲ್ಲಷ್ಟೇ ಪಶ್ಚಿಮ ಘಟ್ಟ ವ್ಯಾಪಿಸಿದೆ. ಅದೂ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಗಡಿಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಪಶ್ಚಿಮ ಘಟ್ಟವಿದೆ. ರಾಜ್ಯದ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆ ಕೇಂದ್ರಗಳಲ್ಲಿ ಒಂದಾಗಿರುವ ಸೂರತ್‌ನ ಕೆಲವು ಪ್ರದೇಶಗಳು ಸಹ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಬರುತ್ತವೆ. ಈವರೆಗಿನ ಮೂರೂ ಕರಡು ಅಧಿಸೂಚನೆಗಳಿಗೆ ಗುಜರಾತ್ ಸರ್ಕಾರವು ಯಾವುದೇ ಆಕ್ಷೇಪ ಸಲ್ಲಿಸಿಲ್ಲ.

449 ಚದರ ಕಿ.ಮೀ.
ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗುರುತಿಸಿರುವ ರಾಜ್ಯದ ಪ್ರದೇಶದ ವಿಸ್ತೀರ್ಣ

64
ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಖ್ಯೆ

ಕರ್ನಾಟಕ

20,668 ಚದರ ಕಿ.ಮೀ.
ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗುರುತಿಸಿರುವ ರಾಜ್ಯದ ಪ್ರದೇಶದ ವಿಸ್ತೀರ್ಣ

1,529
ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಖ್ಯೆ

ಗೋವಾ: ಬದಲಾವಣೆಗೆ ಒತ್ತಾಯ

1,461 ಚದರ ಕಿ.ಮೀ.
ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗುರುತಿಸಿರುವ ರಾಜ್ಯದ ಪ್ರದೇಶದ ವಿಸ್ತೀರ್ಣ

99
ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಖ್ಯೆ

ಕೇಂದ್ರ ಸರ್ಕಾರವು ಹೊರಡಿಸಿರುವ ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕರಡು ಅಧಿಸೂಚನೆಯನ್ನು ತಿರಸ್ಕರಿಸುವುದಾಗಿ ಗೋವಾದ ಹಲವು ಶಾಸಕರು ಹೇಳಿದ್ದಾರೆ. ರಾಜ್ಯದ 99 ಗ್ರಾಮಗಳನ್ನು ಈ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಗುರುತಿಸಲಾಗಿದೆ. ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಿದರೆ ಈ ಗ್ರಾಮಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತವಾಗಲಿವೆ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕರಡು ಅಧಿಸೂಚನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಆಕ್ಷೇಪಗಳನ್ನು ಸಲ್ಲಿಸಲಾಗುವುದು ಎಂದು ಆಡಳಿತ ಪಕ್ಷದ ನಾಯಕರು ಹೇಳಿದ್ದಾರೆ.

ಗೋವಾ ಅರಣ್ಯ ಸಹಕಾರ ನಿಗಮದ ಅಧ್ಯಕ್ಷೆ ದಿವ್ಯಾ ರಾಣೆ ಅವರು ಕರಡು ಅಧಿಸೂಚನೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅವರ ವಿಧಾನಸಭಾ ಕ್ಷೇತ್ರದ 55 ಹಳ್ಳಿಗಳು ಉದ್ದೇಶಿತ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತವೆ. ಈ ಹಳ್ಳಿಗಳು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಗಣಿಗಾರಿಕೆ ಪ್ರಧಾನ ಉದ್ಯೋಗವಾಗಿದೆ. ಅವುಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಿದರೆ, ಅವಧಿ ಮುಗಿದ ನಂತರ ಗಣಿಗಾರಿಕೆ ನಿಲ್ಲಿಸಬೇಕಾಗುತ್ತದೆ. ಹೀಗಾಗಿಯೇ ಇಲ್ಲಿ ವಿರೋಧ ವ್ಯಕ್ತವಾಗುತ್ತಿದೆ ಎಂದು 'ದಿ ಗೋವನ್' ಪತ್ರಿಕೆ ವರದಿ ಮಾಡಿದೆ.

ಮಹಾರಾಷ್ಟ್ರ: ವ್ಯಾಪಕ ಪ್ರತಿರೋಧ

2018ರಲ್ಲಿ ಹೊರಡಿಸಲಾಗಿದ್ದ ಕರಡು ಅಧಿಸೂಚನೆಯಲ್ಲಿ ರಾಜ್ಯದ 17,340 ಚದರ ಕಿ.ಮೀ.ನಷ್ಟು ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲಾಗಿತ್ತು. ಆ ಕರಡು ಅಧಿಸೂಚನೆಗೆ ಆಕ್ಷೇಪವನ್ನು ಸಲ್ಲಿಸಿದ್ದ ಮಹಾರಾಷ್ಟ್ರ ಸರ್ಕಾರವು, ರಾಜ್ಯದಲ್ಲಿನ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯನ್ನು 15,359 ಚದರ ಕಿ.ಮೀ.ಗೆ ಇಳಿಸುವಂತೆ ಮನವಿ ಮಾಡಿಕೊಂಡಿತ್ತು. ಆದರೆ ಈಗ ಹೊರಡಿಸಲಾಗಿರುವ ಕರಡು ಅಧಿಸೂಚನೆಯಲ್ಲೂ 17,340 ಚದರ ಕಿ.ಮೀ. ಪ್ರದೇಶವನ್ನೇ ಉಳಿಸಿಕೊಳ್ಳಲಾಗಿದೆ. ಹೀಗಾಗಿ ಈ ಅಧಿಸೂಚನೆಗೂ, ಈ ಹಿಂದಿನಂತೆಯೇ ಆಕ್ಷೇಪಗಳನ್ನು ಮಹಾರಾಷ್ಟ್ರ ಸರ್ಕಾರವು ಸಲ್ಲಿಸಬಹುದು ಎಂದು ನಿರೀಕ್ಷಿಸಲಾಗಿದೆ.

ಈ ಹಿಂದಿನ ಅಧಿಸೂಚನೆಯಲ್ಲಿ ರಾಜ್ಯದ 2,133 ಗ್ರಾಮಗಳು ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದವು. ಈ ಪಟ್ಟಿಯಿಂದ 388 ಗ್ರಾಮಗಳನ್ನು ಕೈಬಿಡಬೇಕು ಎಂದು ರಾಜ್ಯ ಸರ್ಕಾರವು ಹೇಳಿತ್ತು. ಜತೆಗೆ ಹೆಚ್ಚುವರಿಯಾಗಿ 347 ಬೇರೆ ಗ್ರಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಸೇರಿಸುವಂತೆ ಕೋರಿತ್ತು. ಈಗ ಹೊರಡಿಸಲಾಗಿರುವ ಅಧಿಸೂಚನೆಯಲ್ಲೂ 2,133 ಗ್ರಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಉಳಿಸಿಕೊಳ್ಳಲಾಗಿದೆ. ಈ ಬಗ್ಗೆಯೂ ಮತ್ತೆ ಆಕ್ಷೇಪ ಸಲ್ಲಿಸಲು ರಾಜ್ಯ ಸರ್ಕಾರವು ಸಿದ್ಧತೆ ನಡೆಸಿದೆ ಎನ್ನಲಾಗಿದೆ.

ಮಹಾರಾಷ್ಟ್ರ ಸರ್ಕಾರವು ಕೈಬಿಡುವಂತೆ ಸೂಚಿಸಿದ್ದ 388 ಗ್ರಾಮಗಳಲ್ಲಿ, 55 ಗ್ರಾಮಗಳು 'ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮ'ದ ಕೈಗಾರಿಕಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತವೆ. ಈ ಗ್ರಾಮಗಳಲ್ಲಿ ನಿಗಮವು ಈಗಾಗಲೇ ಹಲವು ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ಮೂಲಕ, ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿದೆ. ಇವುಗಳನ್ನು ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸೇರಿಸಿದರೆ, ಕೈಗಾರಿಕೆಗಳ ಬೆಳವಣಿಗೆಗೆ ಅಡಚಣೆಯಾಗುತ್ತದೆ ಎಂದು ರಾಜ್ಯ ಸರ್ಕಾರವು ಪ್ರತಿಪಾದಿಸಿತ್ತು. ಈ ಗ್ರಾಮಗಳನ್ನೂ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಉಳಿಸಿಕೊಳ್ಳಲಾಗಿದೆ. ಈ ಬಗ್ಗೆಯೂ ಆಕ್ಷೇಪ ವ್ಯಕ್ತವಾಗಿದೆ.

ತಮಿಳುನಾಡು

6,914 ಚದರ ಕಿ.ಮೀ.
ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗುರುತಿಸಿರುವ ರಾಜ್ಯದ ಪ್ರದೇಶದ ವಿಸ್ತೀರ್ಣ

138
ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಖ್ಯೆ

ಪಶ್ಚಿಮ ಘಟ್ಟದ ಉದ್ದೇಶಿತ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ತಮಿಳುನಾಡಿನ ಪ್ರದೇಶದ ಪ್ರಮಾಣ 6,914 ಚದರ ಕಿ.ಮೀ. ಇಷ್ಟು ವಿಸ್ತಾರವಾದ ಪ್ರದೇಶವು ಉದ್ದೇಶಿತ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಇದ್ದರೂ, 138 ಗ್ರಾಮಗಳಷ್ಟೇ ಅದರಲ್ಲಿ ಬರುತ್ತವೆ. ಇದರಲ್ಲಿ ಗುರುತಿಸಲಾಗಿರುವ ಪ್ರದೇಶದಲ್ಲಿ ಹೆಚ್ಚಿನ ಪಾಲು ಅರಣ್ಯವಾಗಿದೆ. ಈವರೆಗಿನ ಕರಡು ಅಧಿಸೂಚನೆಗಳಿಗೆ ತಮಿಳುನಾಡು ಸರ್ಕಾರವು ಗಣನೀಯವಾದ ಆಕ್ಷೇಪವನ್ನು ಸಲ್ಲಿಸಿಲ್ಲ. ಮೊದಲ ವರದಿಗೆ ಸಲ್ಲಿಸಿದ್ದ ಆಕ್ಷೇಪದಲ್ಲಿ, ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯನ್ನು ಕಡಿಮೆ ಮಾಡಲು ಕೋರಿತ್ತು.

ಭೌತಿಕ ಗಡಿ ಗುರುತು ಮಾಡಿದ ಕೇರಳ

9,993 ಚದರ ಕಿ.ಮೀ.
ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗುರುತಿಸಿರುವ ರಾಜ್ಯದ ಪ್ರದೇಶದ ವಿಸ್ತೀರ್ಣ

119
ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಖ್ಯೆ

ಕಸ್ತೂರಿರಂಗನ್ ವರದಿ ಪ್ರಕಾರ, ಕೇರಳದ 13,108 ಚದರ ಕಿಲೋಮೀಟರ್ ವ್ಯಾಪ್ತಿಯ 123 ಗ್ರಾಮಗಳು ಪರಿಸರ ಸೂಕ್ಷ್ಮ ಪ್ರದೇಶದಲ್ಲಿ (ಇಎಸ್ಎ) ಬರುತ್ತವೆ. ಉಳಿದ ರಾಜ್ಯಗಳಿಗಿಂತ ಮೊದಲೇ, ಭೌತಿಕವಾಗಿ ಗಡಿ ಗುರುತಿಸುವ ಕೆಲಸವನ್ನು ಕೇರಳ ಸರ್ಕಾರ ಮಾಡಿ ಮುಗಿಸಿದೆ. ರಾಜ್ಯ ಜೀವವೈವಿಧ್ಯ ಮಂಡಳಿ ಮುಖ್ಯಸ್ಥ ಉಮ್ಮನ್ ವಿ. ಉಮ್ಮನ್ ನೇತೃತ್ವದ ಮೂವರು ತಜ್ಞರ ಸಮಿತಿಯು ಸೂಕ್ಷ್ಮ ಪ್ರದೇಶಕ್ಕೆ ಒಳಪಡುವ ಎಲ್ಲ ಗ್ರಾಮಗಳಲ್ಲಿ ಭೌತಿಕ ಪರಿಶೀಲನೆ ನಡೆಸಿ ವರದಿ ನೀಡಿದೆ. ಇದನ್ನು ಕೇಂದ್ರಕ್ಕೆ ಸಲ್ಲಿಸಲಾಗಿದೆ. ಭೌತಿಕ ಪರಿಶೀಲನೆಯಲ್ಲಿ 9,993.7 ಚದರ ಕಿಲೋಮೀಟರ್ ಪ್ರದೇಶವನ್ನು ಪರಿಸರ ಸೂಕ್ಷ್ಮ ಎಂದು ಗುರುತಿಸಲಾಗಿದೆ. ಇದರಲ್ಲಿ 9,107 ಚ.ಕಿ.ಮೀ ಅರಣ್ಯ ಪ್ರದೇಶ, 886.7 ಚ.ಕಿ.ಮೀ ಅರಣ್ಯೇತರ ಪ್ರದೇಶ ಸೇರಿದೆ. ಈ ಸಮಿತಿಯು 3,115 ಚ.ಕಿ.ಮೀ ಪ್ರದೇಶವನ್ನು ಇಎಸ್ಎಯಿಂದ ಕೈಬಿಡುವಂತೆ ಶಿಫಾರಸು ಮಾಡಿತು. ಕೋಟಯಂ ಜಿಲ್ಲೆಯ ನಾಲ್ಕು ಗ್ರಾಮಗಳನ್ನು ಕೈಬಿಟ್ಟಿದ್ದು, ಗ್ರಾಮಗಳ ಸಂಖ್ಯೆ 119ಕ್ಕೆ ಇಳಿಕೆಯಾಗಿದೆ. ಇಡುಕ್ಕಿ ಜಿಲ್ಲೆಯಲ್ಲಿ (58) ಅತಿಹೆಚ್ಚು ಗ್ರಾಮಗಳು ಈ ವ್ಯಾಪ್ತಿಯಲ್ಲಿವೆ. ಕಸ್ತೂರಿ ರಂಗನ್ ನೇತೃತ್ವದ ಸಮಿತಿ ಶಿಫಾರಸುಗಳ ಬದಲಾಗಿ, ಕೇರಳ ಸರ್ಕಾರವು ಭೌತಿಕವಾಗಿ ಗಡಿ ಗುರುತು ಮಾಡಿರುವ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಕೇಂದ್ರ ಪರಿಸರ ಸಚಿವಾಲಯ ಪರಿಗಣಿಸಿ ಕರಡು ಅಧಿಸೂಚನೆಯಲ್ಲಿ ಉಲ್ಲೇಖಿಸಿದೆ.

ಕೇಂದ್ರದ ಅಧಿಸೂಚನೆಗೆ ಕೇರಳದಲ್ಲಿ ತೋಟ ಹೊಂದಿರುವವರು ಮತ್ತು ಕ್ವಾರಿ ಮಾಲೀಕರಿಂದ ಭಾರಿ ವಿರೋಧವಿದೆ. ಜನವಸತಿ, ಕೃಷಿ ಹಾಗೂ ತೋಟಗಳು ಇರುವ ಪ್ರದೇಶಗಳನ್ನು ಸೂಕ್ಷ್ಮ ವಲಯದಿಂದ ಕೈಬಿಡುವ ನಿರ್ಣಯವನ್ನು ಕೇರಳ ವಿಧಾನಸಭೆ 2014ರಲ್ಲಿ ಅವಿರೋಧವಾಗಿ ಅನುಮೋದಿಸಿತ್ತು. ಮುಖ್ಯವಾಗಿ ಇಡುಕ್ಕಿ, ವಯನಾಡ್ ಹಾಗೂ ಪತ್ತನಂತಿಟ್ಟ ಜಿಲ್ಲೆಗಳಲ್ಲಿ ಭಾರಿ ವಿರೋಧವಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವಂತೆ ಆಗ್ರಹಿಸಿ ಕೇರಳ ವಿಧಾನಸಭೆಯು ಅವಿರೋಧವಾಗಿ ನಿರ್ಣಯ ಅಂಗೀಕರಿಸಿದೆ. ಇದರ ಜೊತೆಗೆ, ಸಂರಕ್ಷಿತ ಪ್ರದೇಶಗಳಾದ ರಾಷ್ಟ್ರೀಯ ಉದ್ಯಾನಗಳು, ವನ್ಯಜೀವಿ ಸಂರಕ್ಷಣಾ ತಾಣಗಳು ಹಾಗೂ ಅಭಯಾರಣ್ಯಗಳ ಒಂದು ಕಿಲೋಮೀಟರ್ ಸುತ್ತಳತೆಯನ್ನು ಬಫರ್ ಝೋನ್ (ನಿರ್ಬಂಧಿತ ಪ್ರದೇಶ) ಎಂದು ಘೋಷಿಸುವಂತೆ ಕೇರಳ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಸೂಚಿಸಿರುವುದಕ್ಕೂ ವಿರೋಧ ವ್ಯಕ್ತವಾಗಿದೆ. ಒಂದು ವೇಳೆ ಪರಿಸರ ಸೂಕ್ಷ್ಮ ವಲಯ ಆದೇಶ ಜಾರಿಯಾದರೆ, ಸುಮಾರು 25 ಸಾವಿರ ಜನರು ತಮ್ಮ ವಾಸಸ್ಥಳಗಳನ್ನು ತೊರೆಯಬೇಕಾಗುತ್ತದೆ ಎಂಬ ಆತಂಕವೂ ವ್ಯಕ್ತವಾಗಿದೆ.

ಆಧಾರ: ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕರಡು ಅಧಿಸೂಚನೆ–2022, ಪಿಟಿಐ

ಚಳವಳಿಗೆ 35 ವರ್ಷ

'ಪಶ್ಚಿಮ ಘಟ್ಟ ರಕ್ಷಿಸಿ' ಎಂಬ ಕೂಗಿಗೆ ಹಲವು ದಶಕಗಳ ಇತಿಹಾಸವಿದೆ. ಗಣಿಗಾರಿಕೆ, ನಗರೀಕರಣ, ತೋಟಗಾರಿಕೆ, ಜಲವಿದ್ಯುತ್ ಯೋಜನೆಗಳಿಂದ ಪಶ್ಚಿಮ ಘಟ್ಟಕ್ಕೆ ಧಕ್ಕೆಯಾಗುತ್ತಿದೆ ಎಂಬ ಕೂಗು 1980ರ ದಶಕದಲ್ಲೇ ಕೇಳಿಬಂದಿತ್ತು. ಆ ಕೂಗಿಗೆ ಒಂದು ಚಳವಳಿ ರೂಪ ಬಂದಿದ್ದು 1986ರಲ್ಲಿ.

ಗೋವಾದ, 'ಪೀಸ್‌ಫುಲ್ ಸೊಸೈಟಿ' ಎಂಬ ಸ್ವಯಂಸೇವಾ ಸಂಸ್ಥೆಯು 'ಪಶ್ಚಿಮ ಘಟ್ಟ ರಕ್ಷಿಸಿ ಚಳವಳಿ'ಯನ್ನು ಆಯೋಜಿಸಿತ್ತು. ಪಶ್ಚಿಮ ಘಟ್ಟ ವ್ಯಾಪಿಸಿರುವ ಆರೂ ರಾಜ್ಯಗಳಿಂದ ಕಾಲ್ನಡಿಗೆ ಜಾಥಾ ಹೊರಟು, ಗೋವಾದಲ್ಲಿ ಸಮ್ಮೇಳನ ನಡೆಸುವುದು ಈ ಚಳವಳಿಯ ಯೋಜನೆಯಾಗಿತ್ತು. ದಕ್ಷಿಣದ ಕೇರಳದಿಂದ ಒಂದು ತಂಡ ಮತ್ತು ಗುಜರಾತ್‌ನಿಂದ ಒಂದು ತಂಡ ಕಾಲ್ನಡಿಗೆ ಆರಂಭಿಸಿದ್ದವು. 95 ದಿನಗಳ ಕಾಲ್ನಡಿಗೆಯ ನಂತರ ಗೋವಾದಲ್ಲಿ 5 ದಿನಗಳ ಸಮ್ಮೇಳನ ನಡೆದಿತ್ತು.

100 ದಿನಗಳ ಈ ಚಳವಳಿಯು, ಚಿಪ್ಕೋ ಚಳವಳಿ ಮತ್ತು ನರ್ಮದಾ ರಕ್ಷಿಸಿ ಚಳವಳಿಯ ನಂತರದ ದೇಶದ ಅತ್ಯಂತ ದೊಡ್ಡ ಪರಿಸರ ಚಳವಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪಶ್ಚಿಮ ಘಟ್ಟ ರಕ್ಷಿಸಿ ಎಂಬ ಕೂಗಿಗೆ ಜಾಗತಿಕ ಮಟ್ಟದಲ್ಲಿ ವೇದಿಕೆ ಒದಗಿಸಿದ ಚಳವಳಿ ಇದು. ಈ ಚಳವಳಿಯ ನಂತರ ಪಶ್ಚಿಮ ಘಟ್ಟಗಳ ರಕ್ಷಣೆಗೆ ಹಲವು ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಆದರೆ ಪಶ್ಚಿಮ ಘಟ್ಟವನ್ನು 'ಪರಿಸರ ಸೂಕ್ಷ್ಮ ಪ್ರದೇಶ' ಎಂದು ಘೋಷಿಸುವ ಕಾರ್ಯ ಮಾತ್ರ ನನೆಗುದಿಗೆ ಬಿದ್ದಿದೆ.

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಶಿವಸೇನಾ ಸಂಸದ ಸಂಜಯ ರಾವುತ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿರುವುದು ರಾಜಕೀಯ ಪ್ರೇರಿತವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 188

ದೇವತೆಗಳಿಗೆ ಶಾಪವಿತ್ತ ದಧೀಚಿ

ವಿಷ್ಣುಗಣಗಳು ಭಸ್ಮವಾದುದನ್ನು ನೋಡಿ ಹರಿಯು ದಧೀಚಿಯನ್ನು ತಬ್ಬಿಬ್ಬುಗೊಳಿಸಲು ತನ್ನ ವಿರಾಟ್ ಸ್ವರೂಪವನ್ನು ತೋರಿಸಿದ. ಹರಿಯ ವಿಶ್ವರೂಪ ಶರೀರದಲ್ಲಿ ಸಾವಿರಾರು ದೇವತೆಗಳು, ರಾಕ್ಷಸರು, ಜೀವರುಗಳು ಇರುವುದನ್ನು ದಧೀಚಿ ನೋಡಿದ. ಆ ಶರೀರದಲ್ಲಿ ಭೂತಕೋಟಿಗಳನ್ನು, ಕೋಟಿ ಕೋಟಿ ಗಣಗಳನ್ನು, ಅನೇಕ ಕೋಟಿ ಬ್ರಹ್ಮಾಂಡಗಳನ್ನೂ ನೋಡಿದ. ಮಹಾದ್ಭುತವಾದ ವಿಶ್ವರೂಪವನ್ನು ನೋಡಿದ ದಧೀಚಿಯು ಹೇಳಿದ: 'ಎಲೈ ಹರಿಯೇ, ನಿನ್ನ ಮಾಯೆಯನ್ನು ತ್ಯಜಿಸು. ವಿಚಾರಮಾಡಿದರೆ ಇವೆಲ್ಲವೂ ಸುಳ್ಳು. ಇಂತಹ ಸಹಸ್ರಾರು ಮಾಯೆಗಳು ನನಗೆ ತಿಳಿದಿರುವುದು. ನನ್ನಲ್ಲಿಯೂ ಜಗತ್ತೆಲ್ಲವೂ ಇರುವುದು ನೋಡು. ನೀನೂ ರುದ್ರನೂ ಬ್ರಹ್ಮನೂ ಎಲ್ಲರೂ ನನ್ನಲ್ಲಿ ಇರುವಿರಿ. ನಿನಗೆ ದಿವ್ಯದೃಷ್ಟಿಯನ್ನು ಕೊಡುವೆನು ನೋಡು' ಎಂದು ಶಿವನ ತೇಜಸ್ಸಿನಿಂದ ತನ್ನ ಶರೀರದಲ್ಲಿ ಬ್ರಹ್ಮಾಂಡವೆಲ್ಲ ಇರುವುದನ್ನು ಹರಿಗೆ ತೋರಿಸಿದ.

ನಂತರ ಹೇಳಿದ: 'ಎಲೈ ಹರಿ, ಈ ಮಾಯೆಯಿಂದಲಾಗಲೀ ಮಂತ್ರಶಕ್ತಿಯಿಂದಾಗಲೀ ಏನೂ ಪ್ರಯೋಜನವಿಲ್ಲ. ಇದೆಲ್ಲವೂ ಸುಳ್ಳು. ಸತ್ಕಾಮನೆಯಿಂದ ನನ್ನೊಡನೆ ಯುದ್ಧ ಮಾಡು' ಎಂದು ಪ್ರಚೋದಿಸಿದ. ದಧೀಚಿಯ ಮಾತನ್ನು ಕೇಳಿ ಹರಿಯು ತುಂಬಾ ಕೋಪಗೊಂಡು ಯುದ್ಧಸನ್ನದ್ಧನಾದ. ಆಗ ಓಡಿಹೋಗಿದ್ದ ದೇವತೆಗಳೆಲ್ಲರೂ ಮತ್ತೆ ಹರಿಗೆ ಸಹಾಯಕರಾಗಿ ಬಂದರು. ವಿಷ್ಣು-ದಧೀಚಿ ನಡುವೆ ಯುದ್ಧವಾದರೆ ವಿಶ್ವಕ್ಕೆ ಹಾನಿಯಾಗುತ್ತದೆ ಎಂದು ಬ್ರಹ್ಮ ಆತಂಕಿತನಾದ. ಹೇಗಾದರೂ ಯುದ್ಧವನ್ನು ತಪ್ಪಿಸಬೇಕೆಂದು ಕ್ಷುವರಾಜನಿಗೆ ಸೂಚಿಸಿದ. ಕ್ಷುವರಾಜ ವಿಷ್ಣುವನ್ನು ಮುನಿಯೊಡನೆ ಯುದ್ಧ ಮಾಡಬೇಡವೆಂದು ತಡೆದ. ಹಾಗೇ, ಯುದ್ಧಸನ್ನದ್ಧನಾದ ದಧೀಚಿಯನ್ನು ಹೀಗೆ ಪ್ರಾರ್ಥಿಸಿದ: 'ಓ ಮುನಿಶ್ರೇಷ್ಠನೇ, ಪ್ರಸನ್ನನಾಗು. ನೀನು ಶಿವಭಕ್ತಶಿಖಾಮಣಿಯು, ಪರಮೇಶ್ವರಸ್ವರೂಪನು. ದುರ್ಜನರಿಗೆ ನಿನ್ನ ಸ್ವರೂಪವು ತಿಳಿಯದು. ಕೋಪವನ್ನು ಬಿಡು'.

ದಧೀಚಿಯು ಕರುಣೆಯಿಂದ ಕ್ಷುವರಾಜನನ್ನು ಅನುಗ್ರಹಿಸಿದ. ಬಳಿಕ ತನ್ನೊಡನೆ ಯುದ್ಧಮಾಡಿದಂತಹ ವಿಷ್ಣು ಮೊದಲಾದ ದೇವತೆಗಳನ್ನು ನೋಡಿ ಕೋಪಗೊಂಡು 'ಎಲೈ ವಿಷ್ಣು, ಮತ್ತು ದೇವತೆಗಳಿರಾ, ಮೂರ್ಖರಂತೆ ನನ್ನಂಥ ಶಿವಭಕ್ತನೊಂದಿಗೆ ಕಾದಾಡಲು ಬಂದಿದ್ದೀರ. ಈ ಪಾಪಕ್ಕಾಗಿ ಮುಂದೊಮ್ಮೆ ನೀವು ಮೂಢರಂತೆ ಶಿವದ್ರೋಹಿಯ ಪರವಾಗಿ ನಿಂತು ರುದ್ರನ ಕೋಪಕ್ಕೆ ಪಾತ್ರರಾಗಿ ನಾಶವನ್ನು ಹೊಂದಿರಿ' ಎಂದು ಶಪಿಸಿದ.

ಕ್ಷುವರಾಜನಿಗೆ 'ಎಲೈ ರಾಜೇಂದ್ರನೆ, ಬ್ರಾಹ್ಮಣನು ದೇವತೆಗಳಿಂದಲೂ ರಾಜರುಗಳಿಂದಲೂ ಪೂಜಿಸಲರ್ಹನು. ಇದನ್ನು ಚೆನ್ನಾಗಿ ನೆನಪಿಟ್ಟುಕೋ' ಎಂದು ಹೇಳಿ ದಧೀಚಿಮುನಿಯು ತನ್ನಾಶ್ರಮಕ್ಕೆ ತೆರಳಿದ. ಹಾಗೆಯೇ, ಕ್ಷುವರಾಜನೂ ದಧೀಚಿಮುನಿಯನ್ನು ನಮಸ್ಕರಿಸಿ ತನ್ನ ಅರಮನೆಗೆ ಹೋದ. ವಿಷ್ಣು, ಇಂದ್ರಾದಿ ದೇವತೆಗಳೂ ತಮ್ಮತಮ್ಮ ಸ್ಥಾನಗಳಿಗೆ ಹೊರಟು ಹೋದರು.

ದಧೀಚಿಯ ಶಾಪದಿಂದ ವಿಷ್ಣು ಮತ್ತು ದೇವತೆಗಳು ಮೂಢರಂತೆ ಶಿವದ್ರೋಹಿ ದಕ್ಷಬ್ರಹ್ಮನ ಬೆಂಬಲಿಸಿ, ಶಿವನ ಕೋಪಕ್ಕೆ ತುತ್ತಾದರು ಎಂದು ಬ್ರಹ್ಮ ತನ್ನ ಮಗ ನಾರದನಿಗೆ ಸಂಕ್ಷೇಪವಾಗಿ ಹಿಂದಿನ ಶಾಪದ ಕಥೆಯನ್ನ ತಿಳಿಸುತ್ತಾನೆ. ಹಾಗೇ, ದಧೀಚಿ ಮತ್ತು ವಿಷ್ಣು ಯುದ್ಧಮಾಡಿದ ಸ್ಥಾನವು 'ಸ್ಥಾನೇಶ್ವರ' ಎಂಬ ಪ್ರಸಿದ್ಧ ತೀರ್ಥಕ್ಷೇತ್ರವಾಯಿತು. ಸ್ಥಾನೇಶ್ವರ ತೀರ್ಥಕ್ಷೇತ್ರದ ದರ್ಶನದಿಂದ ಶಿವಸಾಯುಜ್ಯವು ಲಭಿಸುವುದು. ಹಾಗೆಯೇ, ಕ್ಷುವರಾಜ ಮತ್ತು ದಧೀಚಿಮುನಿಗಳ ಕಥೆಯನ್ನು ಯಾರು ಶ್ರದ್ಧೆಯಿಂದ ಕೇಳುವರೋ, ಅವರು ಅಪಮೃತ್ಯುವನ್ನು ಜಯಿಸಿ, ಬ್ರಹ್ಮಲೋಕವನ್ನು ಸೇರುವರು. ಈ ಕಥೆ ಕೇಳಿದ ಯೋಧನಿಗೆ ರಣರಂಗದಲ್ಲಿ ಮರಣಭಯವೇ ಇರುವುದಿಲ್ಲ. ಅವನಿಗೆ ಯುದ್ಧದಲ್ಲಿ ವಿಜಯವೂ ಲಭಿಸುವುದು ಖಚಿತ ಎಂದು ಬ್ರಹ್ಮ ಹೇಳುವಲ್ಲಿಗೆ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು – ಗುರುರಾಜ ಕರಜಗಿ

ಇಬ್ಬರು ಉಪಕಾರಿಗಳು

ದಿವಸಕೊಳಗದಿನ್ ಆಯುರಾಶಿಯನು
ರವಿಯಳೆಯಲ್ |
ಅವನ ಮಗ ಜವನ್ ಅದರ ಲೆಕ್ಕವಿರಿಸುವನು ||
ದಿವಿಜರೊಳಗಿವರಿರ್ವರುಪಕಾರಿಗಳು ನಮಗೆ |
ಸವೆಸುವರು ತನುಘಟವ – ಮಂಕುತಿಮ್ಮ || 684 ||

ಪದ-ಅರ್ಥ: ದಿವಸಕೊಳಗದಿನ್ = ದಿವಸ + ಕೊಳಗದಿನ್(ಕೊಳಗದಿಂದ), ಆಯುರಾಶಿಯನು = ಆಯುಸ್ಸಿನ ಮೊತ್ತವನ್ನು, ರವಿಯಳೆಯಲ್ = ರವಿ + ಅಳೆಯಲ್(ಅಳೆಯಲು), ಜವನ್ = ಯಮ, ದಿವಿಜರೊಳಗಿವರಿರ್ವರುಪಕಾರಿಗಳು = ದಿವಿಜರೊಳಗೆ + ಇವರು + ಇರ್ವರು(ಇಬ್ಬರು) + ಉಪಕಾರಿಗಳು, ತನುಘಟವ = ದೇಹವೆಂಬ ಮಡಕೆ

ವಾಚ್ಯಾರ್ಥ: ದಿವಸವೆಂಬ ಕೊಳಗದಿಂದ ಸೂರ್ಯ ನಮ್ಮ ಬದುಕಿನ ಮೊತ್ತವನ್ನು ಅಳೆಯುತ್ತಾನೆ. ಅವನ ಮಗ ಯಮ ಅದರ ಲೆಕ್ಕವಿಡುತ್ತಾನೆ. ದೇವತೆಗಳಲ್ಲಿ ಇವರಿಬ್ಬರೂ ನಮಗೆ ಉಪಕಾರಿಗಳು. ಯಾಕೆಂದರೆ ಅವರು ದೇಹವೆಂಬ ಮಡಕೆಯನ್ನು ಸವೆಸುತ್ತಾರೆ.

ವಿವರಣೆ: ಹಿಂದೂ ಧರ್ಮದ ಚಿಂತನೆಯಂತೆ ಮನುಷ್ಯನಿಗೆ ಮುಕ್ತಿ ದೊರಕುವುದು ದೇಹದಿಂದ ವಿಮೋಚನೆ ಪಡೆದಾಗ. ಆದರೆ ದೇಹ ಹಾವಿನ ಪೊರೆಯಂತೆ ಒಂದರಿಂದ ಪಾರಾಗಿ ಪುನರ್ಜನ್ಮದಲ್ಲಿ ಮತ್ತೊಂದನ್ನು ಪಡೆಯುತ್ತದೆ. ಹೀಗೆ ಒಂದಾದ ಮೇಲೊಂದರಂತೆ ದೇಹಗಳ ಸರಮಾಲೆ ನಡೆಯುತ್ತದೆ. ರಾಜನಿಗೊಬ್ಬ ಮಗ ದೇವತೆಗಳ ಕೃಪೆಯಿಂದ ಜನಿಸಿದ. ಆದರೆ ಒಂದು ವರ್ಷವಾಗುವುದರೊಳಗೆ ಮೃತನಾದ. ರಾಜ-ರಾಣಿಯರ ಶೋಕಕ್ಕೆ ಮಿತಿಯಿಲ್ಲ. ನಾರದರು ಅಲ್ಲಿಗೆ ಬಂದು ಸಾವಿಗಾಗಿ ಅಳಬೇಡ ಎಂದು ಸಾಂತ್ವನ ಹೇಳಿದರು. ಆಗ ರಾಜ ತನ್ನ ಮಗನೊಡನೆ ಮಾತನಾಡಬೇಕೆಂದು ಆರ್ತನಾಗಿ ಬೇಡಿದಾಗ ನಾರದರು, "ರಾಜಾ, ನಿನ್ನ ಮಗ ಈಗ ನಿನ್ನೊಡನೆ ಎರಡು ಕ್ಷಣ ಮಾತನಾಡುತ್ತಾನೆ. ಅವನ ಮಾತಿನ ಅರ್ಥ ಮಾಡಿಕೊ" ಎಂದರು.

ಸತ್ತ ಮಗ ಎದ್ದು ಕುಳಿತ. "ದಯವಿಟ್ಟು ಅಳಬೇಡಿ. ನಾನು ಕೇವಲ ನಿಮ್ಮ ಮಗ ಅಲ್ಲ. ಹಿಂದಿನ ಜನ್ಮಗಳಲ್ಲಿ ನನಗೆ ಬೇರೆ ಬೇರೆ ತಂದೆ-ತಾಯಿಯರು, ಸಂಬಂಧಿಗಳು ಇದ್ದರು. ಈಗ ಒಂದು ವರ್ಷ ನೀವು ತಂದೆ-ತಾಯಿಯರಾಗಿದ್ದೀರಿ. ಮತ್ತೆ ನನಗೆ ಎಷ್ಟು ಜನ್ಮಗಳಿವೆಯೋ ತಿಳಿಯದು. ಪ್ರತಿಯೊಂದರಲ್ಲಿ ಒಬ್ಬ ಹೊಸ ತಂದೆ-ತಾಯಿ, ಬಂಧು ಬಳಗದವರಿರುತ್ತಾರೆ. ಹೀಗಿರುವಾಗ ನನ್ನ ನಿಜವಾದ ಜನಕರು ಯಾರು? ಎಲ್ಲ ಜನ್ಮಗಳಲ್ಲಿ ನನಗೆ ಬರುವ ದೇಹಕ್ಕೆ ಸಂಬಂಧಗಳು ಅಂಟುತ್ತಲೇ ಬರುತ್ತವೆ. ಎಲ್ಲಿಯವರೆಗೆ ದೇಹದ ಬಂಧ ಇದೆಯೋ ಅಲ್ಲಿಯವರೆಗೆ ನನಗೆ ಮುಕ್ತಿ ಇಲ್ಲ. ದಯವಿಟ್ಟು ದೇಹ ಒಮ್ಮೆ ಅಂತಿಮವಾಗಿ ಕರಗಿಹೋಗುವಂತೆ ನನಗಾಗಿ ಪ್ರಾರ್ಥಿಸಿ" ಎಂದು ಹೇಳಿ ಮತ್ತೆ ಪ್ರಾಣ ಕಳೆದುಕೊಂಡ. ದೇಹವನ್ನು ಶಾಶ್ವತವಾಗಿ ಕಳೆದುಕೊಳ್ಳುವುದು ವಿದೇಹ ಮುಕ್ತಿ. ದೇಹವನ್ನು ಸವೆಸಿ ಕಳೆಯುವವರು ಇಬ್ಬರು ದೇವತೆಗಳು. ಒಬ್ಬ ಸೂರ್ಯ. ಆತ ಉದಯ ಮತ್ತು ಅಸ್ತಮಾನಗಳಿಂದ, ದಿವಸವೆಂಬ ಕೊಳಗದಿಂದ, ನಮ್ಮ ಆಯಸ್ಸನ್ನು ಅಳೆಯುತ್ತಾನೆ. ಅವನ ಮಗ ಯಮರಾಜ ಅದರ ಸರಿಯಾದ ಲೆಕ್ಕವನ್ನಿಟ್ಟು, ಅದು ಪೂರ್ತಿಯಾದ ಕೂಡಲೆ ಒಂದು ಕ್ಷಣ ಕೂಡ ತಡಮಾಡದೆ ಸೆಳೆದುಕೊಂಡು ಹೋಗಿಬಿಡುತ್ತಾನೆ. ಹೀಗೆ ದೇಹವೆಂಬ ಮಡಕೆಯನ್ನು ಸವೆಸುವ ಕಾರ್ಯವನ್ನು ಮಾಡುವ ಈ ದೇವತೆಗಳು ನಮಗೆ ದೊಡ್ಡ ಉಪಕಾರಿಗಳು. ಅವರಿಂದಲೇ ನಮಗೆ ದೇಹದಿಂದ ಮುಕ್ತಿ.

ಮಹದೇವಿಯಕ್ಕ ಕಗ್ಗದ ಈ ಮಾತುಗಳನ್ನೇ ಒಂಭೈನೂರು ವರ್ಷಗಳ ಹಿಂದೆ ಧ್ವನಿಸಿದ್ದಾಳೆ.

"ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ,
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ"

ಎನ್ನುತ್ತಾಳೆ. ಎಂಥ ಸಮಾನ ಚಿಂತನೆ!

ದಿನ ಭವಿಷ್ಯ – ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ – ಮಂಗಳವಾರ ಆಗಸ್ಟ್ 2, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುದ್ಧ ಪಂಚಮಿ ಅಹೋರಾತ್ರ ನಕ್ಷತ್ರ: ಉತ್ತರಫಲ್ಗುನಿ ಗಂ. 17-29 ಯೋಗ: ಶಿವ ಗಂ. 18-37, ಕರಣ: ಬವ ಗಂ. 17-32, ಕರ್ಕಾಟಕ ಮಾಸದ 16 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-19 ಸೂರ್ಯಾಸ್ತ : 06-54 ಮುಸ್ಲಿಂ ದಿನಾಂಕ : 03 ಮೊಹರಮ್
ದಿನ ವಿಶೇಷ : ನಾಗರ ಪಂಚಮಿ, ಶೃಂಗೇರಿ ಜಗದ್ಗುರು ವಿಧುಶೇಖರ ಭಾರತಿ ಸ್ವಾಮೀಜಿ ಅವರ ವರ್ಧಂತಿ. ಅದೃಷ್ಟ ಸಂಖ್ಯೆ : 3, 5

ಮೇಷ: ಅಕ್ಕ-ಪಕ್ಕದವರ ಹಾವಭಾವಗಳಿಂದ ಬೇಸರಗೊಂಡು ಜೀವನದ ಪಾಠವನ್ನು ಕಲಿಯುವುದು ಅಗತ್ಯವೆನಿಸುವುದು. ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳು ಹೆಚ್ಚಾಗಲಿದ್ದು, ವ್ಯವಹಾರಕ್ಕೆ ಆತಂಕದ ಪರಿಸರ ಬರಬಹುದು.

ವೃಷಭ: ವೃತ್ತಿಯಲ್ಲಿ ತಾತ್ಕಾಲಿಕ ಸಮಾಧಾನ ಹೊಂದಿರುವವರು ಕೆಲವು ಬದಲಾವಣೆ ಮಾಡಿಕೊಂಡರೆ ನಿರಂತರ ಸಮಾಧಾನ ಸಿಗುವಂತಾಗಲಿದೆ. ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯ ಕೂಡಿ ಬರುವ ಸಾಧ್ಯತೆ ಇದೆ.

ಮಿಥುನ: ರಕ್ತ ಸಂಬಂಧಿ ಕಾಯಿಲೆ ಹೊಂದಿದವರು ಅಥವಾ ಅಂತಹ ಅನುಮಾನ ಇರುವವರು ಇಂದು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಅಧಿಕಾರಿಗಳಿಗೆ ನಿಮ್ಮ ಮೇಲೆ ಅಪನಂಬಿಕೆ ಮೂಡಬಹುದು.

ಕರ್ಕಾಟಕ: ಆಲಸ್ಯತನವನ್ನು ದೂರಮಾಡಿಕೊಳ್ಳುವುದರಿಂದ ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ಒಳ್ಳೆಯದು. ನಿಮ್ಮ ವ್ಯವಹಾರದಲ್ಲಿ ಸಮಂಜಸವಾದ ನಿರ್ಧಾರ ಕೈಗೊಳ್ಳುವುದರ ಬಗ್ಗೆ ಗಮನಕೊಡಿ.

ಸಿಂಹ: ಶನಿಯು ತಿರುಗಾಟ ಮಾಡಿಸುವುದರಿಂದ ಆರೋಗ್ಯದ ಬಗ್ಗೆ ಗಮನಹರಿಸಿ. ನಿಮ್ಮ ಮಾತುಗಾರಿಕೆಯಿಂದಾಗಿ ಸಹೋದರರ ಕಲಹ ಉಂಟಾಗಬಹುದು. ಆದ್ದರಿಂದ ಮಾತನಾಡುವಾಗ ಎಚ್ಚರವಹಿಸಿ

ಕನ್ಯಾ: ಸ್ನೇಹಿತರಲ್ಲಿ ಮುಕ್ತವಾಗಿ ಮಾತನಾಡುವುದರಿಂದ ಮಾನಸಿಕ ಸಮಾಧಾನ ದೊರೆತು ಅನುಕೂಲ ವಾತಾವರಣದ ಅನುಭವ ದೊರಕಲಿದೆ. ಶಿವನ ಆರಾಧನೆಯಿಂದಾಗಿ ನಿಮ್ಮ ಅಭೀಷ್ಟ ಪ್ರಾಪ್ತಿಯಾಗುವುದು.

ತುಲಾ: ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಎಡವುವ ಪರಿಸ್ಥಿತಿ ನಿಮ್ಮದಾಗಲಿದೆ. ಒಂದು ಹಂತದಲ್ಲಿ ಆದಾಯವಿದ್ದರೂ ಅದರ ಜೊತೆಯಲ್ಲಿ ಅನಿವಾರ್ಯವಾಗಿ ಬಹುಮುಖದ ಖರ್ಚು-ವೆಚ್ಚಗಳು ಉಂಟಾಗುತ್ತದೆ.

ವೃಶ್ಚಿಕ: ವಾಣಿಜ್ಯ ಕ್ಷೇತ್ರದ ವಿದ್ಯಾರ್ಥಿಗಳಿಗೆ ಶುಭ ಸಮಯ, ಪಟ್ಟ ಶ್ರಮಕ್ಕೆ ಅತಿ ಹೆಚ್ಚಿನ ಅಂಕ ಪಡೆದು ತಮ್ಮ ಗುರಿ ಮುಟ್ಟುವ ಸಾಧ್ಯತೆಗಳಿವೆ. ವೈದ್ಯರು ತಮ್ಮ ಅಭ್ಯಾಸದಲ್ಲಿ ಹೆಚ್ಚಿನ ಜಾಗ್ರತೆ ವಹಿಸುವುದು ಒಳ್ಳೆಯದು.

ಧನು: ಸಮಯ ಪ್ರಜ್ಞೆಯಿಂದಾಗಿ ದುಡಿಯುವ ಸಂಸ್ಥೆಗೆ ನಿಮ್ಮಿಂದ ಲಾಭ ಉಂಟಾಗುವುದು. ದೀರ್ಘಕಾಲದಿಂದಿರುವ ಆರೋಗ್ಯ ಸಮಸ್ಯೆಗೆ ಸೂಕ್ತ ವೈದ್ಯರಿಂದ ಸಲಹೆ ಸಿಗಲಿದೆ ಹಾಗೂ ಆರೋಗ್ಯದಲ್ಲಿ ಚೇತರಿಕೆ ಕಾಣುವಿರಿ.

ಮಕರ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜೊತೆಯಲ್ಲಿ ವಿದೇಶದಲ್ಲಿ ಕೆಲಸ ಮಾಡುವ ಅವಕಾಶ ಸಿಗಬಹುದು. ಸಾಮಾಜಿಕ ಕಾರ್ಯಕ್ರಮದಿಂದ ಮತ್ತು ಮಾಧ್ಯಮದಿಂದ ದೂರ ಉಳಿಯಿರಿ.


ಕುಂಭ: ಗೃಹದಲ್ಲಿ ಸಂತೋಷ ತರುವಂತಹ ಶುಭ ಸಮಾರಂಭಗಳು ನಡೆಯುವುದು. ನ್ಯಾಯಾಲಯದ ಕೆಲಸದಲ್ಲಿ ಕೆಲವು ಅಡೆತಡೆಗಳು ಎದುರಾದರೂ ಸತ್ಯಕ್ಕೆ ಜಯವಿದೆ.

ಮೀನ: ದೇವತಾ ಅನುಗ್ರಹ ಸ್ವಲ ಕಡಿಮೆ ಇರುವುದರಿಂದ ಕಾರ್ಯ ಸಾಧನೆಗೆ ಇನ್ನೂ ಹೆಚ್ಚಿನ ಪರಿಶ್ರಮ ಬೇಕಾಗುತ್ತದೆ. ನೆರೆಹೊರೆಯವರು ಸರಳತೆಯನ್ನು ದುರುಪಯೋಗಪಡಿಸಿಕೊಂಡಾರು ಗಮನವಿರಲಿ.

ಪದಬಂಧ 5037 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹುತ್ತ ಇಲ್ಲಿದೆ(3)
3.ಸೂಕ್ಷ್ಮವಾದ ಪರಿಶೀಲನೆ(3)
4.ಗಡಿ ಬಳಿ ಖರೀದಿಸಿದ ದೊಡ್ಡ ಹಾರೆ (3)
5.ಅಗುಳು ನುಂಗುವಾಗ ಉದುರಿದ ಅಶ್ರು (2)
6.ಕರದಲ್ಲಿರುವುದು ನೀರು ತುಂಬಿದ ಕಳಶ(3)
8.ವಿಷಯ ತಿಳಿಸಿದಾಗ ಆಗಿರುವ ದುಃಖ(3)
9.ಮಾತು ಕೇಳುತ್ತಿರುವ ಸೋದರಮಾವ(3)
11.ನರನು ನೋಡಿರುವ ಪಟ್ಟಣ(3)
14.ದಿಟ್ಟತನದಿಂದ ನುಡಿದಿರುವ ಸತ್ಯ (2)
15.ಈತ ಭಾರ ಹೊರುವ ಕೂಲಿಯಾಳು(3)
16.ಬಯ್ಯಲು ಸೂಕ್ತವೆನಿಸಿದ ವಿಸ್ತಾರವಾದ ಜಾಗ(3)
17.ತಾರೆ ಇಲ್ಲಿ ಕಾಣುತ್ತಿದೆ(3)

ಮೇಲಿಂದ ಕೆಳಕ್ಕೆ
2.ಕರುವಿನ ಪಚನಾಂಗ(3)
3.ಓರಿಗೆಯವರು ಧರಿಸಿರುವ ಕಂಠಾಭರಣ(3)
4.ಟಾರ ರಸ್ತೆಯ ಬಳಿಯಲ್ಲಿರುವ ಮೋರಿ (3)
5.ಅಡಗಿಕೊಳ್ಳಲು ಸೂಕ್ತವಾದ ಕಾಡು(3)
6.ದನಕ್ಕಾಗಿ ನಡೆದ ಕಾಳಗ(3)
7.ಈತ ಪಕ್ಕಾ ಹಳ್ಳಿಯವ(3)
10.ಲಟಕ್ಕನೆ ಮುತ್ತಿಕ್ಕಿದ ಹಣೆ(3)
12.ರಸ್ತೆಯ ಉದ್ದಗಲ ನಡೆಯುತ್ತಿರುವ ಗಲಾಟೆ(3)
13.ಮಹನೀಯ ಕಟ್ಟಿಸಿರುವ ಭವ್ಯ ಸೌಧ(3)
14.ದಿನದಲ್ಲೇ ಮಂತ್ರಿ ಬಂದಿರುವನಲ್ಲಾ! (3)



5036ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಲೋಭನ 3.ಕಂತುಪಿತ
5.ಗುಲಾಬಿ 7.ಸಜಾ
9.ರಣ 11.ಮುರ
12.ಮಿತ 14.ಪಾನಕ
16.ಕರಂಡಕ 17.ಪಿತಾಮಹ

ಮೇಲಿಂದ ಕೆಳಕ್ಕೆ:
1.ಪ್ರವಾಸ 2.ನಗು
3.ಕಂಬಿ 4.ತರುಣ
6.ಲಾಲಸೆ 8.ಜಾಮೀನುದಾರ
9.ರಥಸಪ್ತಮಿ 10.ಭೋಜನ
11.ಮುದುಕ 13.ತರಹ
14.ಪಾಕ 15.ಕಪಿ

ಸುಡೊಕು 5423

	6			7		2	9	
	8		5	2		1	6	
1		5					8	
4			2		5			1
	9						2	
		9	3				4	
7			9		8	5		2
	5			4			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5422 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

‘ಚೆಕ್‌ಬೌನ್ಸ್: ಸ್ವತಂತ್ರ ನಿರ್ದೇಶಕರು ಹೊಣೆಯಲ್ಲ’

ನವದೆಹಲಿ: ಕಂಪನಿಯಲ್ಲಿ ಸ್ವತಂತ್ರ ನಿರ್ದೇಶಕರು ವ್ಯವಹಾರದ ಅಧಿಕಾರ ಹೊಂದಿಲ್ಲದ ಅಥವಾ ಜವಾಬ್ದಾರಿಯ ಸ್ಥಾನದಲ್ಲಿ ಇಲ್ಲದಿದ್ದಾಗ ನಡೆದ ಚೆಕ್‌ಬೌನ್ಸ್ ಪ್ರಕರಣಕ್ಕೆ ಅವರನ್ನು ಬಾಧ್ಯಸ್ಥರನ್ನಾಗಿಸಲಾಗದು ಎಂದು ಸುಪ್ರೀಂಕೋರ್ಟ್ ಸೋಮವಾರ ತೀರ್ಪು ನೀಡಿದೆ.

ಬಂಧನ ಖಂಡಿಸಿ ಮಹಾರಾಷ್ಟ್ರದ ಹಲವೆಡೆ ಶಿವಸೇನಾ ಕಾರ್ಯಕರ್ತರಿಂದ ಪ್ರತಿಭಟನೆ

ರಾವುತ್‌ಗೆ 4ರವರೆಗೆ ಇ.ಡಿ ಕಸ್ಟಡಿ

ಮುಂಬೈ/ಔರಂಗಾಬಾದ್ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಶಿವಸೇನಾದ ಮುಖಂಡ ಸಂಜಯ ರಾವುತ್ ಅವರನ್ನು ವಿಶೇಷ ನ್ಯಾಯಾಲಯವು ಗುರುವಾರದ (ಆ. 4) ವರೆಗೆ ಜಾರಿ ನಿರ್ದೇಶನಾಲಯದ ವಶಕ್ಕೆ ಒಪ್ಪಿಸಿದೆ.

ಭಾನುವಾರ ರಾತ್ರಿ ಬಂಧಿಸಲಾದ ರಾವುತ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ.) ಹಣ ಅಕ್ರಮ ವರ್ಗಾವಣೆ ತಡೆ ನ್ಯಾಯಾಲಯದ ನ್ಯಾಯಾಧೀಶ ಎಂ.ಜಿ. ದೇಶಪಾಂಡೆ ಅವರ ಮುಂದೆ ಸೋಮವಾರ ಹಾಜರುಪಡಿಸಿತು. ತನಿಖೆಗಾಗಿ ಎಂಟು ದಿನಗಳ ಅವಧಿಗೆ ವಶಕ್ಕೆ ಒಪ್ಪಿಸಬೇಕು ಎಂದು ಕೋರಿತು. ಅಪರಾಧ ಕೃತ್ಯದಿಂದ ಬಂದ ಹಣದಲ್ಲಿ ರಾವುತ್ ಮತ್ತು ಅವರ ಕುಟುಂಬದವರು ನೇರ ಫಲಾನುಭವಿಗಳು ಎಂದು ಇ.ಡಿ. ಪರ ವಕೀಲರು ವಾದಿಸಿದರು.

ಹಿರಿಯ ವಕೀಲ ಅಶೋಕ್ ಮುಂಡರಗಿ ಅವರು ರಾವುತ್ ಪರವಾಗಿ ವಾದಿಸಿದರು. ರಾವುತ್ ವಿರುದ್ಧ ಇರುವ ಆರೋಪಗಳು ಅಸ್ಪಷ್ಟ ಮತ್ತು ಅವರ ಬಂಧನ ರಾಜಕೀಯ ಪ್ರೇರಿತ ಎಂದು ಮುಂಡರಗಿ ವಾದಿಸಿದರು.



ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ ರಾವುತ್ ಅವರು ಎರಡೂ ಕೈಗಳನ್ನು ಮೇಲೆತ್ತಿ ಫೋಟೊಗೆ ಪೋಸ್ ನೀಡಿದರು —ಪಿಟಿಐ ಚಿತ್ರ

ಪಾತ್ರಾ ಚಾಳ್ ನವೀಕರಣ ಯೋಜನೆಯಲ್ಲಿ ಅಕ್ರಮವಾಗಿದೆ ಎಂಬ ಪ್ರಕರಣದಲ್ಲಿ ರಾವುತ್ ಅವರ ಬಂಧನವಾಗಿದೆ. ರಾವುತ್ ಅವರ ಮನೆಯಲ್ಲಿ ಭಾನುವಾರ ಒಂಬತ್ತು ತಾಸು ಶೋಧ ನಡೆಸಲಾಗಿತ್ತು. ಅವರ ಮನೆಯಲ್ಲಿ ₹11.5 ಲಕ್ಷ ನಗದು ದೊರೆತಿದೆ ಎಂದು ಇ.ಡಿ. ಹೇಳಿದೆ.

ರಾವುತ್‌ಗೆ ₹1 ಕೋಟಿ: ಇ.ಡಿ ಆರೋಪ

ಮುಂಬೈನ ಹೌಸಿಂಗ್ ಡೆವಲಪ್‌ಮೆಂಟ್ ಯೋಜನೆಯಲ್ಲಿ ನಡೆದಿರುವ ಅವ್ಯವಹಾರದಿಂದ ಶಿವಸೇನಾ ಸಂಸದ ಸಂಜಯ ರಾವುತ್ ಹಾಗೂ ಅವರ ಕುಟುಂಬಕ್ಕೆ ₹1.06 ಕೋಟಿ ಸಿಕ್ಕಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಿಸಿದೆ. ಅವ್ಯವಹಾರ ನಡೆಸಿ ಈ ಅಕ್ರಮ ಸಂಪತ್ತು ಗಳಿಸಲಾಗಿದೆ ಎಂದು ವಿಶೇಷ ಕೋರ್ಟ್‌ಗೆ ಮಾಹಿತಿ ನೀಡಿದೆ.

ಪಾತ್ರಾ ಚಾಳ್ ಯೋಜನೆಯಲ್ಲಿ ಪುನರ್ ಅಭಿವೃದ್ಧಿ ಕೆಲಸ ನಡೆಸಲು ಗುರು ಆಶಿಶ್ ಕನ್‌ಸ್ಟ್ರಕ್ಷನ್ ಕಂಪನಿಯು ಅನುಮೋದನೆ ಪಡೆದಿತ್ತು. ₹1,039.79 ಕೋಟಿಯ ಯೋಜನೆ ಇದಾಗಿತ್ತು. ರಾವುತ್ ಹಾಗೂ ಅವರ ಕುಟುಂಬ ₹1.06 ಕೋಟಿ ಹಣ ಪಡೆದಿದೆ ಎಂದು ಇ.ಡಿ. ಆರೋಪಿಸಿದೆ. ಈ ಕಂಪನಿಯ ನಿರ್ದೇಶಕ ಪ್ರವೀಣ್ ರಾವುತ್ ಅವರನ್ನು ಇ.ಡಿ. ಈಗಾಗಲೇ ಬಂಧಿಸಿದೆ. ಆದರೆ, ತಮ್ಮ ವಿರುದ್ಧ ಇ.ಡಿ ಮಾಡಿರುವ ಆರೋಪಗಳನ್ನು ಅಲ್ಲಗಳೆದಿರುವ ಸಂಜಯ ರಾವುತ್, ರಾಜಕೀಯ ಷಡ್ಯಂತ್ರದಿಂದ ಆರೋಪ ಮಾಡಲಾಗಿದೆ ಎಂದಿದ್ದಾರೆ.

ಪ್ರತಿಭಟನೆ: ರಾವುತ್ ಬಂಧನವನ್ನು ಖಂಡಿಸಿ ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ಶಿವಸೇನಾದ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದ್ದಾರೆ. ನಾಸಿಕ್‌ನಲ್ಲಿಯೂ ಪ್ರತಿಭಟನೆ ನಡೆದಿದೆ. ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ರಾವುತ್ ಕುಟುಂಬದ ಸದಸ್ಯರನ್ನು ಸೋಮವಾರ ಭೇಟಿಯಾಗಿದ್ದಾರೆ.

ರಾವುತ್ ವಿರುದ್ಧ ಕೈಗೊಂಡಿರುವ ಕ್ರಮವನ್ನು ಎಐಎಂಐಎಂ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಮತ್ತು ಸಂಸದ ಇಮ್ತಿಯಾಜ್ ಜಲೀಲ್ ಕೂಡ ಟೀಕಿಸಿದ್ದಾರೆ. ಕಳೆದ 70 ವರ್ಷಗಳಲ್ಲಿ ಎಂದೂ ರಾಜಕೀಯ ದ್ವೇಷ ಸಾಧನೆಗಾಗಿ ತನಿಖಾ ಸಂಸ್ಥೆಗಳನ್ನು ಇಷ್ಟೊಂದು ದುರ್ಬಳಕೆ ಮಾಡಿಕೊಂಡಿರಲಿಲ್ಲ ಎಂದು ಅವರು ಹೇಳಿದ್ದಾರೆ.

ದಾಖಲೆಗಳು, ಸಾಕ್ಷ್ಯಗಳ ಆಧಾರದಲ್ಲಿ ರಾವುತ್ ವಿರುದ್ಧ ಇ.ಡಿ. ಕ್ರಮ ಕೈಗೊಂಡಿರಬಹುದು. ಈ ವಿಚಾರದ ಬಗ್ಗೆ ಹೆಚ್ಚಿನದೇನನ್ನೂ ಹೇಳಲು ಬಯಸುವುದಿಲ್ಲ

ದೇವೇಂದ್ರ ಫಡಣವೀಸ್, ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ

ಇ.ಡಿ.ಯ ಕಳೆದ ಎಂಟು ವರ್ಷ ದಾಖಲೆ ಗಮನಿಸಿದರೆ, ವಿರೋಧ ಪಕ್ಷಗಳ ಮುಖಂಡರನ್ನೇ ಗುರಿಯಾಗಿಸಲಾಗಿದೆ

ಭೂಪೇಶ್ ಬಘೇಲ್, ಛತ್ತೀಸಗಡ ಮುಖ್ಯಮಂತ್ರಿ

ರಾವುತ್ ಮಾಡಿದ ತಪ್ಪಾದರೂ ಏನು? ಅವರೊಬ್ಬ ಪತ್ರಕರ್ತ, ಶಿವಸೈನಿಕ. ನಿರ್ಭೀತರಾಗಿರುವ ಅವರು ತಮಗೆ ಇಷ್ಟ ಇಲ್ಲದ ವಿಚಾರಗಳ ವಿರುದ್ಧ ಮಾತನಾಡುತ್ತಾರೆ

ಉದ್ಧವ್ ಠಾಕ್ರೆ, ಶಿವಸೇನಾ ನಾಯಕ

ಮತದಾರರಿಗೆ ರಿಷಿ ಸುನಕ್ ಭರವಸೆ

ಮಾರ್ಗರೆಟ್ ಥ್ಯಾಚರ್ (ಟೋರಿ ಪಕ್ಷದ ಮಾಜಿ ಪ್ರಧಾನಿ) ಘೋಷಿಸಿದ್ದಂತೆ, ಅತಿ ದೊಡ್ಡ ಆದಾಯ ತೆರಿಗೆ ಕಡಿತ ಘೋಷಿಸುವ ಕನಸು ಹೊಂದಿದ್ದೇನೆ

‘ಶೇ 20 ಆದಾಯ ತೆರಿಗೆ ಕಡಿತ’

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾದರೆ ಕೆಲವೇ ವರ್ಷಗಳಲ್ಲಿ ಆದಾಯ ತೆರಿಗೆಯ ಮೂಲ ದರವನ್ನು ಶೇ 20ರಷ್ಟು ಕಡಿತ ಮಾಡುವುದಾಗಿ ಅಭ್ಯರ್ಥಿ ರಿಷಿ ಸುನಕ್ ಮತದಾರರಿಗೆ ಭರವಸೆ ನೀಡಿದ್ದಾರೆ.



ರಿಷಿ ಸುನಕ್

ಕನ್ಸರ್ವೇಟಿವ್ ಪಕ್ಷದ ನಾಯಕತ್ವ ಚುನಾವಣೆಗಾಗಿ ಸದಸ್ಯರಿಗೆ ಮತಪತ್ರ ಕಳುಹಿಸುವ ಮೂಲಕ ಸೋಮವಾರ ಅಂಚೆ ಮತದಾನ ಔಪಚಾರಿಕವಾಗಿ ಆರಂಭವಾಗಿದ್ದು, ಸದಸ್ಯರಿಗೆ ಇಮೇಲ್‌ನಲ್ಲಿ ಕಳುಹಿಸಿರುವ ಸಂದೇಶದಲ್ಲಿ ಸುನಕ್ ತೆರಿಗೆ ಕಡಿತದ ವಾಗ್ದಾನ ನೀಡಿದ್ದಾರೆ.

ತಮ್ಮ ಪ್ರತಿಸ್ಪರ್ಧಿ ಲಿಜ್ ಟ್ರಸ್ ಅವರಿಂದ ತೀವ್ರ ಪೈಪೋಟಿ ಎದುರಿಸುತ್ತಿರುವ ಸುನಕ್, ‘ಶೇ 20ರಷ್ಟು ಆದಾಯ ತೆರಿಗೆ ಕಡಿತ ವಾಗ್ದಾನವು ಆಮೂಲಾಗ್ರ ದೂರದೃಷ್ಟಿಯದ್ದಾಗಿದೆ. 30 ವರ್ಷಗಳಲ್ಲಿ ಇದು ಅತೀ ದೊಡ್ಡ ತೆರಿಗೆ ಕಡಿತ’ ಎಂದಿದ್ದಾರೆ.

ತೆರಿಗೆ ಕಡಿತ ವಿಷಯವೇ ಪ್ರಚಾರದಲ್ಲಿ ಪ್ರಮುಖ ವಿಷಯವಾಗಿದ್ದು, ಲಿಜ್ ಟ್ರಸ್ ಅವರು ಪ್ರಚಾರದ ಮೊದಲ ದಿನದಿಂದಲೇ ತೆರಿಗೆ ಕಡಿತದ ವಾಗ್ದಾನ ನೀಡಿದ್ದರು. ಹಣದುಬ್ಬರ ತಗ್ಗಿಸುವ ಕ್ರಮಗಳತ್ತ ಚಿತ್ತ ಹರಿಸಿದ್ದ ಸುನಕ್, ಈಗ ಆದಾಯ ತೆರಿಗೆ ಕಡಿತದ ಭರವಸೆ ನೀಡಿ, ಮತದಾರರ ವಿಶ್ವಾಸ ಗೆಲ್ಲಲು ಪ್ರಯತ್ನಿಸುತ್ತಿದ್ದಾರೆ.

ಮ್ಯಾಗಿ, ಪೆನ್ಸಿಲ್ ದುಬಾರಿ: ಪ್ರಧಾನಿಗೆ ಬಾಲಕಿ ಪತ್ರ

ಬೆಂಗಳೂರು: ಪೆನ್ಸಿಲ್, ಮ್ಯಾಗಿ ಖರೀದಿಗೆ ಹಣ ಸಾಲುತ್ತಿಲ್ಲ ಎಂದು ಆರೋಪಿಸಿ ಒಂದನೇ ತರಗತಿಯ ಬಾಲಕಿಯೊಬ್ಬಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದಿರುವ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಉತ್ತರ ಪ್ರದೇಶದ ಕನೌಜ್ ಜಿಲ್ಲೆಯ ಆರು ವರ್ಷದ ಕೀರ್ತಿ ದುಬೆ ಎಂಬ ಬಾಲಕಿ ಪ್ರಧಾನಿ ಕಚೇರಿಗೆ ಪತ್ರ ಬರೆದಿದ್ದು, ಬಾಲಕಿಯ ತಂದೆ ಇದನ್ನು ಖಚಿತಪಡಿಸಿದ್ದಾರೆ.

‘ನನ್ನ ಹೆಸರು ಕೀರ್ತಿ ದುಬೆ. ಒಂದನೇ ತರಗತಿಯಲ್ಲಿ ಓದುತ್ತಿದ್ದೇನೆ. ನೀವು ಬೆಲೆಗಳನ್ನು ಹೆಚ್ಚಿಸಿದ್ದೀರಿ. ಪೆನ್ಸಿಲ್ ಹಾಗೂ ರಬ್ಬರ್ ಸಹ ದುಬಾರಿಯಾಗಿವೆ. ಮ್ಯಾಗಿ ಬೆಲೆಯೂ ಅಧಿಕವಾಗಿದೆ. ಪೆನ್ಸಿಲ್ ಕೇಳಿದರೆ ನನ್ನ ತಾಯಿ ನನಗೆ ಹೊಡೆದಳು. ಇತರ ವಿದ್ಯಾರ್ಥಿಗಳು ಪೆನ್ಸಿಲ್ ಕದ್ದರೆ ನಾನೇನು ಮಾಡಲಿ’ ಎಂದು ಪ್ರಧಾನಿ ಅವರಿಗೆ ಕೇಳಿದ್ದಾಳೆ. ದಿನವೂ ಪೆನ್ಸಿಲ್ ಬೇಕೆಂದು ಕೇಳಿ ತಾಯಿಯಿಂದ ಬೈಸಿಕೊಂಡಿರುವ ಮಗಳು ಬೇಸರದಿಂದ ಈ ಪತ್ರ ಬರೆದಿದ್ದಾಳೆ ಎಂದು ತಂದೆ ವಿಶಾಲ್ ದುಬೆ ಅವರು ಹೇಳಿದ್ದಾರೆ.

ರಾಜ್ಯಸಭೆ: 2 ಮಸೂದೆಗೆ ಒಪ್ಪಿಗೆ

ಮುಂಗಾರು ಅಧಿವೇಶನ: ಎರಡು ವಾರಗಳ ಬಳಿಕ ಕಲಾಪಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನದ ಎರಡು ವಾರಗಳ ಕಲಾಪವು ಸಂಪೂರ್ಣವಾಗಿ ವ್ಯರ್ಥವಾದ ಬಳಿಕ, ರಾಜ್ಯಸಭೆಯಲ್ಲಿ ಎರಡು ಮಸೂದೆಗಳಿಗೆ ಸೋಮವಾರ ಅನುಮೋದನೆ ಸಿಕ್ಕಿದೆ. ಸಮೂಹ ನಾಶದ ಶಸ್ತ್ರಾಸ್ತ್ರಗಳಿಗೆ ಹಣ ನೀಡಿಕೆ ನಿಷೇಧ ಮತ್ತು ಅಂಟಾರ್ಕ್ಟಿಕ್ ಮಸೂದೆಗೆ ಒಪ್ಪಿಗೆ ಕೊಡಲಾಗಿದೆ. ಅಂಟಾರ್ಕ್ಟಿಕ್ ಪ್ರದೇಶದಲ್ಲಿರುವ ಭಾರತದ ಸಂಶೋಧನಾ ಸಂಸ್ಥೆಗಳ ಪ್ರದೇಶಕ್ಕೆ ಭಾರತದ ಕಾನೂನು ಅನ್ವಯಿಸುವುದಕ್ಕಾಗಿ ಅಂಟಾರ್ಕ್ಟಿಕ್ ಮಸೂದೆ ರೂಪಿಸಲಾಗಿದೆ.

ಲೋಕಸಭೆಯಲ್ಲಿ ಈ ಮಸೂದೆಗಳು ಈಗಾಗಲೇ ಅಂಗೀಕಾರ ಆಗಿವೆ.

ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದವು. ಆದರೆ, ಕಲಾಪಕ್ಕೆ ಸಂಪೂರ್ಣವಾಗಿ ಅಡ್ಡಿಪಡಿಸದಿರಲು ವಿರೋಧ ಪಕ್ಷಗಳು ನಿರ್ಧರಿಸಿದ ಕಾರಣ ಎರಡು ಮಸೂದೆಗಳು ಅಂಗೀಕಾರ ಆದವು.

ಬೆಲೆ ಏರಿಕೆಯ ಕುರಿತು ಚರ್ಚೆ ಆಗಲೇಬೇಕು ಎಂದು ವಿರೋಧ ಪಕ್ಷಗಳು ಪಟ್ಟು ಹಿಡಿದ ಕಾರಣ ಮೊದಲ ಎರಡು ವಾರಗಳ ಕಲಾಪವು ವ್ಯರ್ಥವಾಗಿದೆ. ಎರಡು ವಾರಗಳಲ್ಲಿ 11.08 ತಾಸು ಮಾತ್ರ ಕಲಾಪ ನಡೆದಿದೆ. ಈ ಅವಧಿಯಲ್ಲಿ ಒಂದು ಮಸೂದೆಯೂ ಅಂಗೀಕಾರ ಆಗಿಲ್ಲ.

ಬೆಲೆ ಏರಿಕೆ, ಅಗ್ನಿಪಥ ಯೋಜನೆ, ರಾಜ್ಯಸಭಾ ಸದಸ್ಯ ಸಂಜಯ ರಾವುತ್ ಬಂಧನಕ್ಕೆ ಸಂಬಂಧಿಸಿ, ಬೆಳಿಗ್ಗೆ ಕಲಾಪ ಆರಂಭವಾದಾಗ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದವು. ಹೀಗಾಗಿ, ಶೂನ್ಯವೇಳೆಯನ್ನು 50 ನಿಮಿಷಗಳಲ್ಲಿ ನಿಲ್ಲಿಸಬೇಕಾಯಿತು.

ಮಧ್ಯಾಹ್ನ ನಂತರವೂ ವಿರೋಧ ಪಕ್ಷಗಳ ಪ್ರತಿಭಟನೆ ಮುಂದುವರಿಯಿತು. ಆದರೆ ಎರಡು ಮಸೂದೆಗಳನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು.

ಸಂಸತ್ ಅಧಿವೇಶನ

ಬೆಲೆ ಏರಿಕೆ: ಚರ್ಚೆ ಇಂದು

ಅಗತ್ಯ ವಸ್ತುಗಳ ಬೆಲೆ ಏರಿಕೆ ಕುರಿತಂತೆ ರಾಜ್ಯಸಭೆಯಲ್ಲಿ ಮಂಗಳವಾರ ಚರ್ಚೆ ನಡೆಸಲು ಸರ್ಕಾರ ಸಮ್ಮತಿಸಿದೆ.

ವಿರೋಧ ಪಕ್ಷದ ಸದಸ್ಯರು ರಾಜ್ಯಸಭೆಯಲ್ಲಿ ಸೋಮವಾರವೂ ಗದ್ದಲ ನಡೆಸಿದರು. ಆಗ ಸಭಾಪತಿ ಪೀಠದಲ್ಲಿದ್ದ ಭುವನೇಶ್ವರ ಕಾಲಿತಾ ಅವರು ಶಾಂತರಾಗುವಂತೆ ಸದಸ್ಯರನ್ನು ಕೋರಿದರು. ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಈ ಸಂದರ್ಭದಲ್ಲಿ ಎದ್ದು ನಿಂತು, ವಿವಿಧ ವಿಚಾರಗಳ ಕುರಿತ ಚರ್ಚೆಗೆ ಹಲವು ನೋಟಿಸ್ ನೀಡಿದ್ದರೂ ಸರ್ಕಾರ ಅದನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದರು.

ಮಧ್ಯಾಹ್ನ 12.40ಕ್ಕೆ ಕಲಾಪವನ್ನು ಮುಂದೂಡಿದಾಗ, ವಿರೋಧ ಪಕ್ಷದ ನಾಯಕರ ಬೇಡಿಕೆಯಂತೆ, ಬೆಲೆ ಏರಿಕೆ ಕುರಿತು ಚರ್ಚೆಗೆ ಸರ್ಕಾರ ಒಪ್ಪಿದೆ ಎಂದು ಸದನದಲ್ಲಿ ಆಡಳಿತ ಪಕ್ಷದ ನಾಯಕ ಪೀಯೂಷ್ ಗೋಯಲ್ ತಿಳಿಸಿದ್ದಾರೆ ಎಂದು ಸಭಾಪತಿ ಹೇಳಿದರು.

‘ಅಡುಗೆ ಮನೆ ಲಾಕ್‌ಡೌನ್ ಸನ್ನಿಹಿತ’

ಒಂದನೇ ಪುಟದಿಂದ...

ದಿನ ಬಳಕೆಯ ವಸ್ತುಗಳ ದರ ಏರಿಕೆಯು ಹಲವು ಬಾರಿ ಹೆಚ್ಚಳವಾಗಿದ್ದರೂ ರೈತರ ಆದಾಯವು ಅರ್ಧಕ್ಕೆ ಇಳಿದಿದೆ ಎಂದು ಬಿಎಸ್‌ಪಿಯ ಸಂಗೀತಾ ಆಜಾದ್ ಹೇಳಿದರು.

ಭಾರತದ ಅರ್ಥ ವ್ಯವಸ್ಥೆಯು ಪ್ರಬಲವಾಗಿದೆ ಎಂಬುದಕ್ಕೆ ಜಿಎಸ್‌ಟಿ ಸಂಗ್ರಹ ಮತ್ತು ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ ಸೂಚನೆಗಳಾಗಿವೆ. ಜಿಎಸ್‌ಟಿ ಸಂಗ್ರಹವು ಶೇ 28ರಷ್ಟು ಏರಿಕೆಯಾಗಿದೆ ಎಂದು ನಿರ್ಮಲಾ ತಿಳಿಸಿದರು.

ಚಿಲ್ಲರೆ ಹಣದುಬ್ಬರ ದರವನ್ನು ಶೇ 7ಕ್ಕಿಂತ ಕೆಳಗೆ ತರಲು ಪ್ರಯತ್ನಗಳು ನಡೆದಿವೆ. ಸರ್ಕಾರದ ಕ್ರಮಗಳಿಂದಾಗಿ ಅಡುಗೆ ಎಣ್ಣೆ ದರದಲ್ಲಿ ತೀವ್ರ ಇಳಿಕೆ ಆಗಿದೆ ಎಂದರು.

‘ಮೋದಿಯಿಂದಾಗಿ ಜೀವಂತವಿದ್ದೇವೆ’

ಪಟ್ನಾ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರಿಂದಾಗಿ ನಾವು ಜೀವಂತವಾಗಿ ಇದ್ದೀವಿ’ ಎಂದು ಬಿಹಾರದ ಸಚಿವ ರಾಮ್ ಸೂರತ್ ರಾಯ್ ಪ್ರತಿಪಾದಿಸಿದ್ದು, ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕೋವಿಡ್ ಪರಿಸ್ಥಿತಿಯ ನಿರ್ವಹಣೆ ಕ್ರಮವನ್ನು ಉಲ್ಲೇಖಿಸಿ ಮಾತನಾಡಿದರು. ‘ಮೋದಿ ಅವರಿಂದಾಗಿ ದೊರೆತ ಲಸಿಕೆ ನಮ್ಮನ್ನು ರಕ್ಷಿಸಿದೆ. ಅವರು ದೇಶದ ಆರ್ಥಿಕತೆಯನ್ನು ಚೆನ್ನಾಗಿ ನಿರ್ವಹಣೆ ಮಾಡಿದ್ದಾರೆ’ ಎಂದು ಸಚಿವರು ಹೇಳಿದ್ದಾರೆ.

ಮಂಕಿಪಾಕ್ಸ್ ತಡೆಗೆ ಕಾರ್ಯಪಡೆ ರಚನೆ

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚುತ್ತಿರುವ ಮಂಕಿಪಾಕ್ಸ್ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲು ಮತ್ತು ರೋಗ ಹರಡುವಿಕೆ ನಿಭಾಯಿಸಲು ಕೇಂದ್ರ ಸರ್ಕಾರ ಕಾರ್ಯಪಡೆ ರಚಿಸಿದೆ ಎಂದು ಅಧಿಕೃತ ಮೂಲಗಳು ಸೋಮವಾರ ತಿಳಿಸಿವೆ.



ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿ. ಕೆ. ಪಾಲ್ ಅವರ ನೇತೃತ್ವದಲ್ಲಿ ಈ ಕಾರ್ಯಪಡೆ ರಚಿಸಲಾಗಿದೆ. ಇದು ದೇಶದಲ್ಲಿ ಮಂಕಿಪಾಕ್ಸ್ ರೋಗನಿರ್ಣಯ ಸೌಲಭ್ಯಗಳನ್ನು ಹೆಚ್ಚಿಸುವ, ರೋಗ ಹರಡುವಿಕೆ ತಡೆಯಲು ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಹಾಗೂ ರೋಗದ ವಿರುದ್ಧ ಲಸಿಕೆಯ ಸಂಬಂಧ ಸರ್ಕಾರಕ್ಕೆ ಸೂಕ್ತ ಮಾರ್ಗದರ್ಶನ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

ದೇಶದಲ್ಲಿ ಕೈಗೊಂಡಿರುವ ಸಾರ್ವಜನಿಕ ಆರೋಗ್ಯ ಸನ್ನದ್ಧತೆ ಪರಿಶೀಲಿಸಲು ಪ್ರಧಾನಿ ಜುಲೈ 26ರಂದು ನಡೆಸಿದ ಪ್ರಧಾನ ಕಾರ್ಯದರ್ಶಿಗಳ ಹಂತದ ಉನ್ನತ ಸಭೆಯಲ್ಲಿ ಕಾರ್ಯಪಡೆ ರಚಿಸುವ ನಿರ್ಧಾರ ಕೈಗೊಳ್ಳಲಾಗಿತ್ತು.

ಕೇರಳ: ಹಂದಿ ಜ್ವರ ಪ್ರಕರಣ ಪತ್ತೆ

ವಯನಾಡು/ಕಣ್ಣೂರು (ಪಿಟಿಐ): ಕೇರಳದ ವಯನಾಡು ಹಾಗೂ ಕಣ್ಣೂರು ಜಿಲ್ಲೆಗಳಲ್ಲಿ ಆಫ್ರಿಕನ್ ಹಂದಿ ಜ್ವರದ ತಲಾ ಒಂದು ಹೊಸ ಪ್ರಕರಣ ಪತ್ತೆಯಾಗಿದೆ.

‘ವಯನಾಡು ಜಿಲ್ಲೆಯ ನೆನ್‌ಮೆನಿ ಗ್ರಾಮದಲ್ಲಿ ಸೋಮವಾರ ಪ್ರಕರಣವೊಂದು ಪತ್ತೆಯಾಗಿದೆ. ಹಂದಿ ಜ್ವರ ಪಸರಿಸದಂತೆ ತಡೆಯಲು ನೆನ್‌ಮೆನಿ ಫಾರಂ ಸುತ್ತಲಿನ ಪ್ರದೇಶಗಳಲ್ಲಿರುವ 193 ಹಂದಿಗಳನ್ನು ಕೊಲ್ಲಲಾಗುತ್ತದೆ. ವಯನಾಡಿನ 222 ಫಾರಂಗಳಲ್ಲಿ ಸುಮಾರು 20 ಸಾವಿರ ಹಂದಿಗಳನ್ನು ಸಾಕಲಾಗುತ್ತಿದೆ. ಅವುಗಳಿಂದ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ’ ಎಂದು ಪಶುಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ.ರಾಜೇಶ್ ತಿಳಿಸಿದ್ದಾರೆ.

ಕೇರಳ: ಮೃತ ಯುವಕನಲ್ಲಿ ಮಂಕಿಪಾಕ್ಸ್ ದೃಢ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ತ್ರಿಶೂರಿನಲ್ಲಿ ಶನಿವಾರ ಮೃತಪಟ್ಟ 22 ವರ್ಷದ ಯುವಕನಲ್ಲಿನ ಮಾದರಿಯನ್ನು ರಾಷ್ಟ್ರೀಯ ವೈರಾಣು ಸಂಸ್ಥೆಯ ಅಲಪುಳದ ಘಟಕದಲ್ಲಿ ಪರೀಕ್ಷಿಸಿದ್ದು, ಮಂಕಿಪಾಕ್ಸ್ ವೈರಾಣು ಇರುವುದು ದೃಢಪಟ್ಟಿದೆ. ಪುಣೆಯಲ್ಲಿನ ರಾಷ್ಟ್ರೀಯ ವೈರಾಣು ಸಂಸ್ಥೆಯ ವರದಿಯಲ್ಲೂ ಸೋಂಕು ದೃಢಪಡಿಸಿದೆ.

ದೇಶದಲ್ಲಿ ಮಂಕಿಪಾಕ್ಸ್ ರೋಗದಿಂದ ಸಾವು ಸಂಭವಿಸಿದ ಮೊದಲ ಪ್ರಕರಣ ಇದಾಗಿದೆ. ಮೊದಲ ಮೂರು ಪ್ರಕರಣಗಳೂ ಕೇರಳದಲ್ಲೇ ಪತ್ತೆಯಾಗಿದ್ದವು. ಸಂಯುಕ್ತ ಅರಬ್ ಸಂಸ್ಥಾನದಿಂದ (ಯುಎಇ) ವಾಪಸಾದ ಮೂವರಲ್ಲಿ ರೋಗ ಪತ್ತೆಯಾಗಿತ್ತು. ನಾಲ್ಕನೇ ಪ್ರಕರಣ ಪಶ್ಚಿಮ ದೆಹಲಿಯಲ್ಲಿ ವರದಿಯಾಗಿತ್ತು.

ಮಂಕಿಪಾಕ್ಸ್ ರೋಗಿಗಳಿಗೆ ಚಿಕಿತ್ಸೆ ವಿಳಂಬ: ಮಂಕಿಪಾಕ್ಸ್ ಸೋಂಕಿನಲ್ಲಿ ಮರಣ ಪ್ರಮಾಣ ಕಡಿಮೆ ಇದೆ ಎನ್ನುವ ಕಾರಣಕ್ಕೆ ರೋಗಿಗಳಿಗೆ ಚಿಕಿತ್ಸೆ ಸಿಗುವುದು ವಿಳಂಬವಾಗುತ್ತಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ಹೇಳಿವೆ.

ವಿಮಾನ, ರೈಲು, ಬಸ್ ನಿಲ್ದಾಣಗಳಲ್ಲಿ ತಪಾಸಣೆ

ಬೆಂಗಳೂರು: ದೇಶದಲ್ಲಿ ಮಂಕಿಪಾಕ್ಸ್ ಪ್ರಕರಣಗಳು ಪತ್ತೆಯಾಗುತ್ತಿರುವ ಬೆನ್ನಲ್ಲೇ ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ 24 ಗಂಟೆಯೂ ಪ್ರಯಾಣಿಕರ ತಪಾಸಣೆ ನಡೆಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಆರೋಗ್ಯ ಇಲಾಖೆ ಆಯುಕ್ತರು ಈ ಸಂಬಂಧ ಆದೇಶ ಹೊರಡಿಸಿದ್ದು, ಬಿಬಿಎಂಪಿ, ಜಿಲ್ಲಾ ಆರೋಗ್ಯ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಲು ಸೂಚಿಸಲಾಗಿದೆ.

ಶಂಕಿತ ಪ್ರಕರಣಗಳ ಸಂಪರ್ಕಿತರ ಪತ್ತೆ ಮಾಡಬೇಕು. ಅವರನ್ನು 21 ದಿನ ತೀವ್ರ ನಿಗಾವಹಿಸಬೇಕು. ಮಂಕಿಪಾಕ್ಸ್ ಲಕ್ಷಣಗಳು ಕಂಡುಬಂದರೆ ಕೂಡಲೇ ಪರೀಕ್ಷೆಗೊಳಪಡಿಸಿ, ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಮಾದರಿ ಪರೀಕ್ಷೆಯನ್ನು ಬೆಂಗಳೂರಿನಲ್ಲಿರುವ ನಿಗದಿತ ಪ್ರಯೋಗಶಾಲೆಯಲ್ಲಿ ನಡೆಸಲಾಗುವುದು. ಬಿಬಿಎಂಪಿ ವ್ಯಾಪ್ತಿಯಲ್ಲಿ ಹೆಚ್ಚಿನ ನಿಗಾವಹಿಸಲು ಸೂಚಿಸಲಾಗಿದೆ.

ಇಂದು ಸಭೆ

ದಾವಣಗೆರೆ: ‘ರಾಜ್ಯದಲ್ಲಿ ಮಂಕಿಪಾಕ್ಸ್ ಸೋಂಕು ತಡೆಗಟ್ಟುವ ಸಂಬಂಧ ಚರ್ಚೆ ನಡೆಸಲು ಆಗಸ್ಟ್ 2ರಂದು ಬೆಂಗಳೂರಿನಲ್ಲಿ ಸಭೆ ಕರೆಯಲಾಗಿದೆ‘ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

’ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ಪ್ರಯಾಣಿಕರನ್ನೂ ಪರೀಕ್ಷೆಗೆ ಒಳಪಡಿಸುವುದು, ಪ್ರಯೋಗಾಲಯಗಳ ಸ್ಥಾಪನೆ ಸಂಬಂಧ ಚರ್ಚಿಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದು. ಔಷಧಗಳನ್ನು ಒದಗಿಸುವ ಬಗ್ಗೆಯೂ ಕ್ರಮ ಕೈಗೊಳ್ಳಲಾಗುವುದು. ಆರೋಗ್ಯ ಸಚಿವರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ‘ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

‘ಪಾನ್ಸರೆ ಹತ್ಯೆ ತನಿಖೆ ಎಟಿಎಸ್‌ಗೆ: ಆಕ್ಷೇಪವಿಲ್ಲ’

ಮುಂಬೈ (ಪಿಟಿಐ): ‘ಹೋರಾಟಗಾರ ಗೋವಿಂದ ಪಾನ್ಸರೆ ಹತ್ಯೆ ಪ್ರಕರಣದ ತನಿಖೆಯನ್ನು ಭಯೋತ್ಪಾದನಾ ನಿಗ್ರಹ ಘಟಕಕ್ಕೆ (ಎಟಿಎಸ್) ಹಸ್ತಾಂತರಿಸಲು ತನ್ನ ಆಕ್ಷೇಪವಿಲ್ಲ’ ಎಂದು ಮಹಾರಾಷ್ಟ್ರದ ಅಪರಾಧ ತನಿಖಾ ಘಟಕ, ಬಾಂಬೆ ಹೈಕೋರ್ಟ್‌ಗೆ ತಿಳಿಸಿದೆ.

ಎನ್‌ಟಿಆರ್ ಪುತ್ರಿ ಆತ್ಮಹತ್ಯೆ

ಹೈದರಾಬಾದ್ (ಪಿಟಿಐ): ದಿವಂಗತ ನಟ ಹಾಗೂ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ನಂದಮೂರಿ ತಾರಕ ರಾಮರಾವ್ (ಎನ್‌ಟಿಆರ್) ಅವರ ನಾಲ್ಕನೇ ಪುತ್ರಿ ಉಮಾ ಮಹೇಶ್ವರಿ (57) ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಉಮಾ ಮಹೇಶ್ವರಿ ಅವರು ಜ್ಯುಬಿಲಿ ಹಿಲ್ಸ್‌ನಲ್ಲಿರುವ ಫ್ಲ್ಯಾಟ್‌ನ ಕೋಣೆಯೊಂದರಲ್ಲಿ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಗಳು ಹಾಗೂ ಅಳಿಯ ಎಷ್ಟೇ ಕೂಗಿದರೂ ಬಾಗಿಲು ತೆರೆದಿರಲಿಲ್ಲ. ಅನುಮಾನಗೊಂಡ ಅವರು ಮಹಿಳೆಯೊಬ್ಬರ ಸಹಾಯದಿಂದ ಬಾಗಿಲು ಮುರಿದು ಒಳಗೆ ಹೋಗಿದ್ದರು’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಸ್ಮೃತಿ ಇರಾನಿ ಕುಟುಂಬ ರೆಸ್ಟೋರೆಂಟ್ ಹೊಂದಿಲ್ಲ’

ನವದೆಹಲಿ (ಪಿಟಿಐ): ‘ಸ್ಮೃತಿ ಇರಾನಿ ಮತ್ತು ಅವರ ಮಗಳು ಗೋವಾದಲ್ಲಿ ಯಾವುದೇ ರೆಸ್ಟೋರೆಂಟ್ ಹೊಂದಿಲ್ಲ. ಪರವಾನಗಿ ಪಡೆಯಲು ಈವರೆಗೂ ಯಾವುದೇ ಅರ್ಜಿಯನ್ನೂ ಸಲ್ಲಿಸಿಲ್ಲ’ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

‘ಕಾಂಗ್ರೆಸ್ ಮುಖಂಡರಾದ ಜೈರಾಮ್ ರಮೇಶ್, ಪವನ್ ಖೇರಾ ಹಾಗೂ ನೆಟ್ಟಾ ಡಿಸೋಜಾ ಅವರು ವಾಸ್ತವಾಂಶಗಳನ್ನು ಅರಿಯದೆ ಸ್ಮೃತಿ ಅವರ ವಿರುದ್ಧ ಮಾನಹಾನಿಕರ ಆರೋಪಗಳನ್ನು ಮಾಡಿದ್ದಾರೆ’ ಎಂದು ನ್ಯಾಯಾಧೀಶೆ ಮಿನಿ ಪುಷ್ಕರಣಾ ತಿಳಿಸಿದ್ದಾರೆ.

‘ಸ್ಮೃತಿ ಅವರ ತೇಜೋವಧೆ ಮಾಡುವ ಹಾಗೂ ಅವರ ಹೆಸರಿಗೆ ಕಳಂಕ ತರುವ ಉದ್ದೇಶ ಕಾಂಗ್ರೆಸ್ ನಾಯಕರ ಆರೋಪದ ಹಿಂದೆ ಅಡಗಿರುವುದು ಸ್ಪಷ್ಟವಾಗಿದೆ’ ಎಂದಿದೆ.

ರಾಜಪಕ್ಸ ಸಹೋದರರ ವಿದೇಶ ಪ್ರಯಾಣ ನಿರ್ಬಂಧ ವಿಸ್ತರಣೆ

ಕೊಲಂಬೊ (ಪಿಟಿಐ): ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ ಮತ್ತು ಅವರ ತಮ್ಮ, ಮಾಜಿ ಹಣಕಾಸು ಸಚಿವ ಬಾಸಿಲ್ ರಾಜಪಕ್ಸ ಅವರನ್ನು ವಿದೇಶ ಪ್ರಯಾಣದ ಮೇಲಿನ ನಿರ್ಬಂಧವನ್ನು ಆಗಸ್ಟ್ 4ರ ವರೆಗೆ ಸುಪ್ರೀಂ ಕೋರ್ಟ್ ಸೋಮವಾರ ವಿಸ್ತರಿಸಿದೆ.

ದೇಶದ ಸದ್ಯದ ಆರ್ಥಿಕ ಬಿಕ್ಕಟಿಗೆ ಕಾರಣರಾದ ಮಹಿಂದಾ ಹಾಗೂ ಬಾಸಿಲ್ ಅವರ ವಿರುದ್ಧ ತನಿಖೆಗೆ ಆದೇಶಿಸಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ ಮುಖ್ಯ ನ್ಯಾಯಮೂರ್ತಿ ಜಯಂತ ಜಯಸೂರ್ಯ ಅವರ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠ ಈ ನಿರ್ದೇಶನ ನೀಡಿದೆ.

ಮಾಲೆಗಾಂವ್ ಸ್ಫೋಟ: ತ್ವರಿತ ವಿಚಾರಣೆಗೆ ಸಲಹೆ

ನವದೆಹಲಿ (ಪಿಟಿಐ): ಮಾಲೆಗಾಂವ್ ಸ್ಫೋಟ ಪ್ರಕರಣದ ಆರೋಪಿ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಅವರ ಅರ್ಜಿಯನ್ನು ತ್ವರಿತವಾಗಿ ವಿಚಾರಣೆಗೆ ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಬಾಂಬೆ ಹೈಕೋರ್ಟ್‌ಗೆ ತಿಳಿಸಿದೆ.

ಪ್ರಕರಣದಲ್ಲಿ ತಮ್ಮನ್ನು ಶಿಕ್ಷೆಗೆ ಒಳಪಡಿಸಲು ಅನುಮತಿ ನೀಡಿರುವ ರಾಜ್ಯ ಸರ್ಕಾರದ ಕ್ರಮವು ಕಾನೂನುಬಾಹಿರವಾದುದು ಎಂದು ಪ್ರತಿಪಾದಿಸಿ ಪುರೋಹಿತ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಜಾಮೀನು: ಹೈಕೋರ್ಟ್‌ಗೆ ತೀಸ್ತಾ ಸೆಟಲ್‌ವಾಡ್ ಅರ್ಜಿ

ಅಹಮದಾಬಾದ್: ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾಡ್ ಅವರು ಜಾಮೀನು ಕೋರಿ ಗುಜರಾತ್ ಹೈಕೋರ್ಟ್‌ಗೆ ಸೋಮವಾರ ಅರ್ಜಿ ಸಲ್ಲಿಸಿದ್ದಾರೆ. ಎರಡು ದಿನಗಳ ಹಿಂದೆ ಸೆಷನ್ಸ್ ನ್ಯಾಯಾಲಯವು ತೀಸ್ತಾ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು.

ಅರ್ಜಿಯ ವಿಚಾರಣೆಯು ಈ ವಾರದ ನಂತರ ನಡೆಯಲಿದೆ. ಮಾಜಿ ಐಪಿಎಸ್ ಅಧಿಕಾರಿ ಶ್ರೀಕುಮಾರ್ ಅವರ ಜಾಮೀನು ಅರ್ಜಿಯನ್ನು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿತ್ತು.

ಭಾರತ ‘ಎ’– ಫ್ರಾನ್ಸ್ ಪಂದ್ಯ ಡ್ರಾ

ಚೆಸ್ ಒಲಿಂಪಿಯಾಡ್: ‘ಬಿ’ ತಂಡಕ್ಕೆ ಸತತ ನಾಲ್ಕನೇ ಗೆಲುವಿನ ಸಂಭ್ರಮ

ಮಹಾಬಲಿಪುರಂ: ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತ ‘ಎ’ ತಂಡದ ಗೆಲುವಿನ ಓಟಕ್ಕೆ ಫ್ರಾನ್ಸ್ ತಡೆಯೊಡ್ಡಿದೆ. ಆದರೆ ‘ಬಿ’ ತಂಡ ಸತತ ನಾಲ್ಕನೇ ಗೆಲುವು ಸಾಧಿಸಿತು.

ಸೋಮವಾರ ನಡೆದ ನಾಲ್ಕನೇ ಸುತ್ತಿನ ಹಣಾಹಣಿಯಲ್ಲಿ ಭಾರತ ಮತ್ತು ಫ್ರಾನ್ಸ್ 2–2 ರಲ್ಲಿ ಸಮಬಲ ಸಾಧಿಸಿದವು. ಎಲ್ಲ ನಾಲ್ಕೂ ಪಂದ್ಯಗಳು ಡ್ರಾದಲ್ಲಿ ಕೊನೆಗೊಂಡವು.

ಟಾಪ್‌ಬೋರ್ಡ್‌ನಲ್ಲಿ ಆಡಿದ ಪಿ.ಹರಿಕೃಷ್ಣ ಅವರು ಜೂಲ್ಸ್ ಮೊಸಾರ್ಡ್ ಜತೆ ಪಾಯಿಂಟ್ ಹಂಚಿಕೊಂಡರು. ವಿದಿತ್ ಸಂತೋಷ್ ಗುಜರಾತಿ– ಲಾರೆಂಟ್ ಫ್ರೆಸಿನೆಟ್, ಅರ್ಜುನ್ ಎರಿಗೈಸಿ– ಮ್ಯಾಥ್ಯೂ ಕಾರ್ನೆಟ್, ಎಸ್.ಎಲ್.ನಾರಾಯಣನ್– ಮ್ಯಾಕ್ಸಿಮ್ ಲಗಾರ್ಡ್ ನಡುವಿನ ಪಂದ್ಯಗಳು ಡ್ರಾದಲ್ಲಿ ಕೊನೆಗೊಂಡವು.

‘ಬಿ’ ತಂಡ ಜಯಭೇರಿ: ಯುವ ಆಟಗಾರರನ್ನು ಒಳಗೊಂಡಿರುವ ‘ಬಿ’ ತಂಡದ ಅಜೇಯ ಓಟ ಮುಂದುವರಿದಿದ್ದು, ನಾಲ್ಕನೇ ಸುತ್ತಿನಲ್ಲಿ 3–1 ರಲ್ಲಿ ಇಟಲಿ ತಂಡವನ್ನು ಮಣಿಸಿತು.

ಟಾಪ್‌ಬೋರ್ಡ್‌ನಲ್ಲಿ ಆಡಿದ ಡಿ.ಗುಕೇಶ್ ಅವರು ಡೇನಿಯಲ್ ವೊಕಾಟುರೊ ವಿರುದ್ಧ ಗೆದ್ದರೆ, ನಿಹಾಲ್ ಸರಿನ್ ಅವರು ಲುಕಾ ಮೊರೊನಿ ಅವರನ್ನು ಮಣಿಸಿದರು. ಇವರಿಬ್ಬರು ಪೂರ್ಣ ಪಾಯಿಂಟ್ಸ್ ಕಲೆಹಾಕಿದ್ದು, ತಂಡದ ಗೆಲುವಿಗೆ ಕಾರಣವಾಯಿತು.



ನಾಲ್ಕನೇ ಸುತ್ತಿನಲ್ಲಿ ಆಡಿದ ಭಾರತ ‘ಬಿ’ ತಂಡದ ಆರ್‌.ಪ್ರಗ್ನಾನಂದ –ಪಿಟಿಐ ಚಿತ್ರ

ಆರ್. ಪ್ರಗ್ನಾನಂದ– ಲೊರೆಂಜೊ ಲೊಡಿಕಿ, ರೌನಕ್ ಸಾಧ್ವಾನಿ– ಫ್ರಾನ್ಸಿಸ್ಕೊ ಸೊನಿಸ್ ನಡುವಿನ ಪಂದ್ಯ ಡ್ರಾದಲ್ಲಿ ಮುಕ್ತಾಯಗೊಂಡಿತು.

‘ಸಿ’ ತಂಡಕ್ಕೆ ಸೋಲು: ಮುಕ್ತ ವಿಭಾಗದಲ್ಲಿ ಕಣದಲ್ಲಿರುವ ಭಾರತದ ಮೂರನೇ ತಂಡ 1.5–2.5 ಪಾಯಿಂಟ್‌ಗಳಿಂದ ಸ್ಪೇನ್ ಎದುರು ಸೋತಿತು.

ಸೂರ್ಯಶೇಖರ್ ಗಂಗೂಲಿ– ಅಲೆಕ್ಸಿ ಶಿರೋವ್, ಎಸ್.ಪಿ.ಸೇತುರಾಮನ್– ಫ್ರಾನ್ಸಿಸ್ಕೊ ವಲೆಜೊ ಮತ್ತು ಮುರಳಿ ಕಾರ್ತಿಕೇಯನ್– ಜೈಮ್ ಸಂಟೊಸ್ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡವು. ಆದರೆ ಅಭಿಜಿತ್ ಗುಪ್ತಾ ಅವರು ಡೇವಿಡ್ ಆ್ಯಂಟನ್ ಗುಜಾರೊ ಎದುರು ಸೋತದ್ದು ಭಾರತಕ್ಕೆ ಮುಳುವಾಗಿ ಪರಿಣಮಿಸಿತು.

ಮಹಿಳಾ ತಂಡಕ್ಕೆ ಗೆಲುವು: ಮಹಿಳೆಯರ ವಿಭಾಗದಲ್ಲಿ ಭಾರತ ‘ಎ’ ತಂಡ 2.5–1.5 ಪಾಯಿಂಟ್‌ಗಳಿಂದ ಹಂಗರಿ ತಂಡವನ್ನು ಮಣಿಸಿತು.

ಕೊನೇರು ಹಂಪಿ– ತ್ರಾಂಗ್ ಹೊವಂಗ್, ಡಿ.ಹರಿಕಾ– ಟಿಸಿಯ ಗರಾ ಮತ್ತು ಆರ್.ವೈಶಾಲಿ– ಸಿದೊನಿಯಾ ಲಜಾರ್ನೆ ನಡುವಿನ ಪಂದ್ಯಗಳು ಡ್ರಾದಲ್ಲಿ ಕೊನೆಗೊಂಡವು. ಸೊಕಾಗಾಲ್ ಅವರನ್ನು ಮಣಿಸಿದ ತಾನಿಯಾ ಸಚ್‌ದೇವ್, ಭಾರತದ ಗೆಲುವಿಗೆ ಕಾರಣರಾದರು.

‘ಬಿ’ ತಂಡ 2.5–1.5 ಪಾಯಿಂಟ್‌ಗಳಿಂದ ಎಸ್ಟೋನಿಯ ವಿರುದ್ಧ ಗೆದ್ದರೆ, ‘ಸಿ’ ತಂಡ 1–3 ರಲ್ಲಿ ಜಾರ್ಜಿಯಾ ಕೈಯಲ್ಲಿ ಪರಾಭವಗೊಂಡಿತು.

ಮುಖ್ಯಾಂಶಗಳು

- ‘ಬಿ’ ತಂಡಕ್ಕೆ ಇಟಲಿ ಎದುರು ಜಯ
- ಗುಕೇಶ್, ನಿಹಾಲ್ ಜಯಭೇರಿ
- ಸ್ಪೇನ್‌ಗೆ ಸೋತ ಭಾರತ ‘ಸಿ’ ತಂಡ

ವೇದಾಂತ್, ಶೈವಿ ಜಯದ ಆರಂಭ

ಬೆಂಗಳೂರು: ಮೊದಲ ಶ್ರೇಯಾಂಕ ಪಡೆದಿರುವ ವೇದಾಂತ್ ಗುಂಡು ಹಾಗೂ ಶೈವಿ ದಲಾಲ್ ಅವರು ಇಲ್ಲಿ ಆರಂಭವಾದ ಕೆಎಸ್‌ಎಲ್‌ಟಿಎ ಟ್ರಾನ್ಸ್‌ಫಾರ್ಮ್ ಸೂಪರ್ ಸಿರೀಸ್ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ವಿಭಾಗದ ಮೊದಲ ಸುತ್ತಿನಲ್ಲಿ, ತೆಲಂಗಾಣದ ವೇದಾಂತ್ 6-4, 6-4ರಿಂದ ಕರ್ನಾಟಕದ ತೇಜಸ್ ಆರ್. ಅವರನ್ನು ಸೋಲಿಸಿದರು. ಬಾಲಕಿಯರ ವಿಭಾಗದಲ್ಲಿ ಗುಜರಾತ್‌ನ ಶೈವಿ 6-0, 6-0ರಿಂದ ಯಾಹಾನಾ ಅರೋರಾ ಅವರನ್ನು ಪರಾಭವಗೊಳಿಸಿದರು.

ಮಳೆಯ ಕಾರಣ ಬಾಲಕರ ವಿಭಾಗದ 6 ಪಂದ್ಯಗಳು ಸ್ಥಗಿತಗೊಂಡಿದ್ದವು. ಈ ವಿಭಾಗದಲ್ಲಿ ಶರಣ್ ಸೋಮಾಸಿ 6-2, 6-1ರಿಂದ ಅರ್ಜುನ್ ಸೂರಿ ಎದುರು, ಕೌಶಿಕ್ ರಾಜೇಶ್ 6-4, 6-0ರಿಂದ ಆಯಾನ್ ತಾರೀನ್ ವಿರುದ್ಧ ಗೆದ್ದರು. ಬಾಲಕಿಯರ ವಿಭಾಗದ ಮೊದಲ ಸುತ್ತಿನ ಇನ್ನುಳಿದ ಹಣಾಹಣಿಗಳಲ್ಲಿ ಲಾವಣ್ಯ 6-3, 6-4ರಿಂದ ತನು ವಿಶ್ವಾಸ್ ಎದುರು, ಸಾನ್ವಿ ಮಿಶ್ರಾ 6-2, 6-1ರಿಂದ ಅನ್ವೇಷಾ ಎದುರು ಗೆದ್ದರು.

ಡಾಟಿನ್ ವಿದಾಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಅಂತರರಾಷ್ಟ್ರೀಯ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ವೇಗದ ಶತಕ ದಾಖಲೆ ಹೊಂದಿರುವ ವೆಸ್ಟ್ ಇಂಡೀಸ್ ತಂಡದ ದಿಯಾಂದ್ರ ಡಾಟಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿ ಕ್ರಿಕೆಟ್ ವಲಯದಲ್ಲಿ ಅಚ್ಚರಿ ಮೂಡಿಸಿದ್ದಾರೆ.

31 ವರ್ಷದ ಡಾಟಿನ್ 2010ರಲ್ಲಿ ದಕ್ಷಿಣ ಅಫ್ರಿಕಾ ಎದುರಿನ ಟಿ20 ಪಂದ್ಯದಲ್ಲಿ 45 ಎಸೆತಗಳಲ್ಲಿ 112 ರನ್ ಗಳಿಸಿ ದಾಖಲೆ ಬರೆದಿದ್ದರು.



ಇಂಗ್ಲೆಂಡ್ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಮಹಿಳಾ ಯೂರೊ ಕಪ್ ಫುಟ್‌ಬಾಲ್ ಟೂರ್ನಿ

ಇಂಗ್ಲೆಂಡ್ ಚಾಂಪಿಯನ್

ಲಂಡನ್ (ರಾಯಿಟರ್ಸ್/ ಎಎಫ್‌ಪಿ): ಕ್ಲೋಯಿ ಕೆಲ್ಲಿ ಅವರು ಹೆಚ್ಚುವರಿ ಅವಧಿಯಲ್ಲಿ ತಂದಿತ್ತ ಗೋಲಿನ ನೆರವಿನಿಂದ ಇಂಗ್ಲೆಂಡ್ ತಂಡ, ಮಹಿಳಾ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಜಯಿಸಿತು.

ವೆಂಬ್ಲಿ ಕ್ರೀಡಾಂಗಣದಲ್ಲಿ ನೆರೆದಿದ್ದ ದಾಖಲೆ ಸಂಖ್ಯೆಯ ಪ್ರೇಕ್ಷಕರ ಸಮ್ಮುಖದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಆತಿಥೇಯ ತಂಡ 2–1 ಗೋಲುಗಳಿಂದ ಜರ್ಮನಿ ತಂಡವನ್ನು ಮಣಿಸಿತು.

ರೋಚಕ ಪೈಪೋಟಿ ನಡೆದ ಪಂದ್ಯದ ನಿಗದಿತ 90 ನಿಮಿಷಗಳ ಆಟದಲ್ಲಿ ಉಭಯ ತಂಡಗಳು 1–1 ರಲ್ಲಿ ಸಮಬಲ ಸಾಧಿಸಿದ್ದವು. ಇಂಗ್ಲೆಂಡ್‌ನ ಎಲಾ ಟೂನ್ 62ನೇ ನಿಮಿಷದಲ್ಲಿ ಗೋಲು ಗಳಿಸಿದರೆ, 17 ನಿಮಿಷಗಳ ಬಳಿಕ ಜರ್ಮನಿಯ ಲಿನಾ ಮಗುಲ್ ಚೆಂಡನ್ನು ಗುರಿ ಸೇರಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

ಆ ಬಳಿಕ ಎರಡೂ ತಂಡಗಳು ಗೆಲುವಿನ ಗೋಲಿಗಾಗಿ ಪ್ರಯತ್ನ ನಡೆಸಿದರೂ ಯಶಸ್ಸು ಲಭಿಸಲಿಲ್ಲ. ಇದರಿಂದ ವಿಜೇತರನ್ನು ನಿರ್ಣಯಿಸಲು ಹೆಚ್ಚುವರಿ ಸಮಯದ ಮೊರೆ ಹೋಗಲಾಯಿತು. 110ನೇ ನಿಮಿಷದಲ್ಲಿ ಫಾರ್ವರ್ಡ್ ಆಟಗಾರ್ತಿ ಕೆಲ್ಲಿ ಗೆಲುವಿನ ಗೋಲು ಗಳಿಸಿದರು. ಇಂಗ್ಲೆಂಡ್ ಮಹಿಳಾ ತಂಡ ಪ್ರಮುಖ ಟೂರ್ನಿಯೊಂದರಲ್ಲಿ ಪ್ರಶಸ್ತಿ ಜಯಿಸಿದ್ದು ಇದೇ ಮೊದಲು.

ದಾಖಲೆ ಸಂಖ್ಯೆಯ ಪ್ರೇಕ್ಷಕರು: ಮಹಿಳಾ ಯೂರೊ ಕಪ್ ಫೈನಲ್ ಪಂದ್ಯ ದಾಖಲೆ ಸಂಖ್ಯೆಯ ಪ್ರೇಕ್ಷಕರನ್ನು ಸೆಳೆಯಿತು. ವೆಂಬ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯವನ್ನು 87,192 ಮಂದಿ ವೀಕ್ಷಿಸಿದರು. ಯೂರೊ ಕಪ್ ಫುಟ್‌ಬಾಲ್ ಇತಿಹಾಸದಲ್ಲಿ ಪುರುಷರ ಮತ್ತು ಮಹಿಳೆಯರ ಪಂದ್ಯಕ್ಕೆ ಇಷ್ಟೊಂದು ಸಂಖ್ಯೆಯ ಪ್ರೇಕ್ಷಕರು ಸೇರಿರಲಿಲ್ಲ. 1964ರ ಪುರುಷರ ಟೂರ್ನಿಯ ಸ್ಪೇನ್ ಮತ್ತು ಸೋವಿಯತ್ ಯೂನಿಯನ್ ನಡುವಿನ ಫೈನಲ್ ಪಂದ್ಯಕ್ಕೆ 79,115 ಪ್ರೇಕ್ಷಕರು ಸೇರಿದ್ದು ಇದುವರೆಗಿನ ದಾಖಲೆಯಾಗಿತ್ತು.

ಟಿ20 ಕ್ರಿಕೆಟ್: ಒಬೆದ್‌ಗೆ ಆರು ವಿಕೆಟ್

ಸೆಂಟ್ ಕಿಟ್ಸ್: ಒಬೆದ್ ಮೆಕೆ (17ಕ್ಕೆ 6) ದಾಳಿಗೆ ನಲುಗಿದ ಭಾರತ ತಂಡ ವೆಸ್ಟ್ ಇಂಡೀಸ್ ಎದುರಿನ ಎರಡನೇ ಟಿ20 ಪಂದ್ಯದಲ್ಲಿ ಸವಾಲಿನ ಮೊತ್ತ ಪೇರಿಸಿತು. 19.4 ಓವರ್‌ನಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು 138 ರನ್ ಗಳಿಸಿತು.

ಸೋಮವಾರ ಟಾಸ್ ಗೆದ್ದ ವೆಸ್ಟ್ ಇಂಡೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ಆರಂಭಿಸಿದ ಭಾರತ ಆರಂಭದಿಂದಲೇ ಪರದಾಡಿತು. 61 ರನ್ ಆಗುವಷ್ಟರಲ್ಲಿ ನಾಲ್ಕು ಬ್ಯಾಟರ್‌ಗಳು ಪೆವಿಲಿಯನ್ ಸೇರಿದರು. ಈ ಹಂತದಲ್ಲಿ ಜೊತೆಗೂಡಿದ ಆಲ್‌ರೌಂಡರ್‌ಗಳಾದ ಹಾರ್ದಿಕ್ ಪಾಂಡ್ಯ (31, 31ಎ, 4X1, 6X2) ಮತ್ತು ರವೀಂದ್ರ ಜಡೇಜ (27, 30ಎ, 6X1) ಐದನೇ ವಿಕೆಟ್‌ಗೆ 43 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 19.4 ಓವರ್‌ಗಳಲ್ಲಿ 138 (ಸೂರ್ಯಕುಮಾರ್ ಯಾದವ್ 11, ರಿಷಭ್ ಪಂತ್ 24, ಹಾರ್ದಿಕ್ ಪಾಂಡ್ಯ 31, ರವೀಂದ್ರ ಜಡೇಜ 27, ರವಿಚಂದ್ರನ್ ಅಶ್ವಿನ್ 10; ಒಬೆದ್ ಮೆಕೆ 17ಕ್ಕೆ 6, ಅಲ್ಜರಿ ಜೋಸೆಫ್ 29ಕ್ಕೆ 1, ಅಕೀಲ್ ಹೊಸೇನ್ 22ಕ್ಕೆ 1, ಜೇಸನ್ ಹೋಲ್ಡರ್ 23ಕ್ಕೆ 2).

ಪಂದ್ಯ ವಿಳಂಬ: ಮಳೆಯಿಂದಾಗಿ ಕ್ರಿಕೆಟ್ ಪಂದ್ಯಗಳು ವಿಳಂಬವಾಗಿ ಆರಂಭವಾಗುವ ಘಟನೆಗಳು ಬಹಳಷ್ಟು ನಡೆದಿವೆ. ಆದರೆ, ಸೋಮವಾರ ಇಲ್ಲಿ ಆಯೋಜಿಸಲಾಗಿದ್ದ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಎರಡನೇ ಟಿ20 ಪಂದ್ಯವು ಆಟಗಾರರ ಸರಂಜಾಮು ಸೂಕ್ತ ಸಮಯಕ್ಕೆ ಮೈದಾನಕ್ಕೆ ತಲುಪದ ಕಾರಣ ಮೂರು ಗಂಟೆ ವಿಳಂಬವಾಗಿ ಆರಂಭವಾಯಿತು.

ಬೆಸೆಟರ್ ಕ್ರೀಡಾಂಗಣದಲ್ಲಿ ಭಾರತೀಯ ಕಾಲಮಾನದ ಪ್ರಕಾರ ಏಳು ಗಂಟೆಗೆ ಪಂದ್ಯ ಆರಂಭವಾಗಬೇಕಿತ್ತು. ರಾತ್ರಿ 11 ಗಂಟೆಗೆ ಪಂದ್ಯ ಆರಂಭವಾಯಿತು.




ಹಾರ್ದಿಕ್ ಪಾಂಡ್ಯ

ಟೆನಿಸ್: ಬಿಎನ್‌ಎಸ್ ರೆಡ್ಡಿಗೆ ಚಿನ್ನ

ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಭ್ರಷ್ಟಾಚಾರ ತಡೆ ಘಟಕದ ವಲಯ ಪ್ರತಿನಿಧಿ, ನಿವೃತ್ತ ಐಪಿಎಸ್ ಅಧಿಕಾರಿ ಬಿಎನ್‌ಎಸ್ ರೆಡ್ಡಿ ಅವರು ನೆದರ್ಲೆಂಡ್ಸ್‌ನ ರೋಟರ್‌ಡ್ಯಾಮ್‌ನಲ್ಲಿ ನಡೆದ ವಿಶ್ವ ಪೊಲೀಸ್ ಮತ್ತು ಫೈರ್ ಗೇಮ್ಸ್‌ನ ಟೆನಿಸ್ ಟೂರ್ನಿಯಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕ ಗೆದ್ದಿದ್ದಾರೆ.


ಪುರುಷರ ಡಬಲ್ಸ್‌ನಲ್ಲಿ ಎಸ್.ಎಂ.ಶರ್ಮಾ ಜತೆಗೂಡಿ ಆಡಿದ ರೆಡ್ಡಿ ಚಿನ್ನ ಗೆದ್ದರು. ಫೈನಲ್‌ನಲ್ಲಿ ಭಾರತದ ಜೋಡಿ 6–1, 6–4 ರಲ್ಲಿ ಥಾಯ್ಲೆಂಡ್‌ನ ಸುಖವಚನ ಸಂತ್– ವಿನ್ಸನ್ ಸಂತದ್ ವಿರುದ್ಧ ಜಯಿಸಿತು. ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದ ಅವರು ಮಂಡಿನೋವಿನ ಕಾರಣ ಆಡದಿರಲು ನಿರ್ಧರಿಸಿದರು. ಇದರಿಂದ ಅವರ ಎದುರಾಳಿ ರೊಮೇನಿಯದ ಎಂ.ಇಯೊನ್‌ಗೆ ಚಿನ್ನ ಲಭಿಸಿದರೆ, ರೆಡ್ಡಿ ಅವರು ಬೆಳ್ಳಿ ಪದಕ ಪಡೆದರು.

ವಿಶ್ವ ಪೊಲೀಸ್ ಗೇಮ್ಸ್‌ನ ಟೆನಿಸ್‌ನ ಸಿಂಗಲ್ಸ್ ವಿಭಾಗದಲ್ಲಿ ಸತತವಾಗಿ ಮೂರು ಚಿನ್ನ ಗೆದ್ದ ಸಾಧನೆಯನ್ನು ಅವರು ಮಾಡಿದ್ದರು. ಈ ಹಿಂದೆ ಅಮೆರಿಕದ ವರ್ಜೀನಿಯಾ (2015), ಲಾಸ್ ಏಂಜಲೀಸ್ (2017) ಮತ್ತು ಚೀನಾದ ಚೆಂಗ್ಡುವಿನಲ್ಲಿ (2019) ನಡೆದಿದ್ದ ಕೂಟಗಳಲ್ಲಿ ಚಾಂಪಿಯನ್ ಆಗಿದ್ದರು.



ಬಿಎನ್‌ಎಸ್ ರೆಡ್ಡಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,158
ಇಂದಿನ ಅಂತ್ಯ	17,340
▲	182
ದಿನದ ಗರಿಷ್ಠ	17,356

ವಿನಿಮಯ ದರ

$ ಡಾಲರ್	79.06
£ ಪೌಂಡ್	96.78
€ ಯುರೊ	81.10
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹57
ಮೈಸೂರು	
100 ಮೊಟ್ಟೆಗೆ	₹405

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1625)
ಸೋಯಾ (ರಿಫೈನ್ಡ್)	₹1290 (1300)
ಸೂರ್ಯಕಾಂತಿ (ರಿಫೈನ್ಡ್)	₹1590 (1580)
ಪಾಮೋಲಿನ್	₹1275 (1275)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹250-600
ದ್ವಿತಳಿ (ಬಿ.ವಿ)	₹342-810

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹167
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹150

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹ ಆಗಿರುವ ಎರಡನೇ ಗರಿಷ್ಠ ಮೊತ್ತ

ಜಿಎಸ್‌ಟಿ: ₹1.49 ಲಕ್ಷ ಕೋಟಿ ಸಂಗ್ರಹ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಜುಲೈನಲ್ಲಿ ₹1.49 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ.

ಜಿಎಸ್‌ಟಿ ವ್ಯವಸ್ಥೆಯಡಿ ಸಂಗ್ರಹ ಆಗಿರುವ ಎರಡನೇ ಗರಿಷ್ಠ ಮೊತ್ತ ಇದಾಗಿದೆ. ಈ ಹಿಂದೆ, ಏಪ್ರಿಲ್‌ನಲ್ಲಿ ₹ 1.68 ಲಕ್ಷ ಕೋಟಿಯ ದಾಖಲೆಯ ಮೊತ್ತ ಸಂಗ್ರಹ ಆಗಿತ್ತು.

2021ರ ಜುಲೈನಲ್ಲಿ ಜಿಎಸ್‌ಟಿ ಮೂಲಕ ₹ 1.16 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇಕಡ 28ರಷ್ಟು ಹೆಚ್ಚು ವರಮಾನ ಸಂಗ್ರಹ ಆಗಿದೆ.

ಆರ್ಥಿಕ ಚೇತರಿಕೆ ಮತ್ತು ತೆರಿಗೆ ವಂಚನೆ ತಡೆಯಲು ತೆಗೆದುಕೊಂಡಿರುವ ಕ್ರಮಗಳಿಂದಾಗಿ ತೆರಿಗೆ ಸಂಗ್ರಹವು ಹೆಚ್ಚಾಗುತ್ತಿದೆ ಎಂದು ಸರ್ಕಾರ ಸೋಮವಾರ ತಿಳಿಸಿದೆ.

‘ಮಂದಗತಿಯ ಚಲನೆಯಿಂದ ಆರ್ಥಿಕತೆಯು ಹೊರಬಂದಿದೆ ಎನ್ನುವುದನ್ನು ತೆರಿಗೆ ಸಂಗ್ರಹವು ಸೂಚಿಸುತ್ತಿದೆ. ಹಣದುಬ್ಬರ ಮತ್ತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಸಹ ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಕಾರಣವಾಗಿವೆ’ ಎಂದು ಕೆಪಿಎಂಜಿ ಇಂಡಿಯಾದ ಪರೋಕ್ಷ ತೆರಿಗೆ ಪಾಲುದಾರ ಅಭಿಷೇಕ್ ಜೈನ್ ತಿಳಿಸಿದ್ದಾರೆ.

ವರಮಾನ ಇನ್ನಷ್ಟು ಹೆಚ್ಚಲಿದೆ: ಹಲವು ಉತ್ಪನ್ನಗಳ ಮೇಲಿನ ತೆರಿಗೆ ದರದಲ್ಲಿ ಪರಿಷ್ಕರಣೆ ಮಾಡಿರುವುದರಿಂದ ವರಮಾನ ಸಂಗ್ರಹವು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.


ಪ್ಯಾಕ್ ಮಾಡಿರುವ, ಲೇಬಲ್ ಇರುವ ಮೊಸರು, ಮಜ್ಜಿಗೆ, ಬೆಲ್ಲ, ಮಂಡಕ್ಕಿ ಸೇರಿದಂತೆ ಹಲವು ಉತ್ಪನ್ನಗಳ ಮೇಲೆ ಜುಲೈ 18ರಿಂದ ಶೇಕಡ 5ರಷ್ಟು ತೆರಿಗೆ ವಿಧಿಸಲಾಗಿದೆ. ದಿನಕ್ಕೆ ₹ 1,000 ಕ್ಕಿಂತ ಹೆಚ್ಚಿನ ಬಾಡಿಗೆಯ ಹೋಟೆಲ್ ಕೊಠಡಿಗೆ, ನಕಾಶೆ, ಚಾರ್ಟ್, ಅಟ್ಲಾಸ್‌ಗೆ ಶೇ 12ರಷ್ಟು ತೆರಿಗೆ ವಿಧಿಸಲಾಗಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಎಸ್‌ಟಿ ಸಂಗ್ರಹ ಶೇ 36.4ರಷ್ಟು ಬೆಳವಣಿಗೆ ಕಂಡಿದೆ ಎಂದು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ಆರನೇ ಬಾರಿಗೆ ₹ 1.40 ಲಕ್ಷ ಕೋಟಿ ದಾಟಿದ ತೆರಿಗೆ ಸಂಗ್ರಹ
- ಜೂನ್‌ನಲ್ಲಿ 7.45 ಕೋಟಿ ಇ–ವೇ ಬಿಲ್ ಸೃಷ್ಟಿ

ಜಿಎಸ್‌ಟಿ ಸಂಗ್ರಹ ವಿವರ (ಕೋಟಿ ₹ ಗಳಲ್ಲಿ)



ಬಡ್ಡಿ ದರ ಹೆಚ್ಚಿಸಿದ ಐಸಿಐಸಿಐ ಬ್ಯಾಂಕ್

ನವದೆಹಲಿ (ಪಿಟಿಐ): ದೇಶದ ಎರಡನೆಯ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ಐಸಿಐಸಿಐ ಬ್ಯಾಂಕ್, ಸಾಲದ ಮೇಲಿನ ಬಡ್ಡಿ ದರವನ್ನು ಸೋಮವಾರ ಶೇಕಡ 0.15ರಷ್ಟು ಹೆಚ್ಚಿಸಿದೆ.

ಎಂಸಿಎಲ್‌ಆರ್ ಆಧಾರಿತ ಎಲ್ಲ ಅವಧಿಯ ಸಾಲಗಳ ಮೇಲಿನ ಬಡ್ಡಿ ದರದಲ್ಲಿ ಏರಿಕೆ ಆಗಿದೆ. ಇದರಿಂದಾಗಿ ಸಾಲದ ತಿಂಗಳ ಕಂತುಗಳ ಮೊತ್ತ ಹೆಚ್ಚಾಗಲಿದೆ. ಬಡ್ಡಿ ದರ ಏರಿಕೆಯು ಹೊಸ ಗ್ರಾಹಕರಿಗೆ ಸೋಮವಾರದಿಂದ ಅನ್ವಯವಾಗಲಿದೆ. ಹಾಲಿ ಗ್ರಾಹಕರಿಗೆ ಶುಕ್ರವಾರದಿಂದ ಅನ್ವಯವಾಗಲಿದೆ.

ಇನ್ನು ಮುಂದೆ ಒಂದು ವರ್ಷದ ಅವಧಿಯ, ಎಂಸಿಎಲ್‌ಆರ್ ಆಧಾರಿತ ಸಾಲದ ಮೇಲಿನ ಬಡ್ಡಿ ದರವು ಶೇಕಡ 7.90ರಷ್ಟಾಗಲಿದೆ.

ಮತ್ತೆ 58 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಏಪ್ರಿಲ್ 13ರ ನಂತರ ಇದೇ ಮೊದಲ ಬಾರಿಗೆ ಮತ್ತೆ 58 ಸಾವಿರ ಅಂಶಗಳ ಗಡಿಯನ್ನು ದಾಟಿದೆ.

ಜಾಗತಿಕ ಷೇರುಪೇಟೆಗಳಲ್ಲಿ ನಡೆದ ಸಕಾರಾತ್ಮಕ ವಹಿವಾಟು ಹಾಗೂ ವಿದೇಶಿ ಬಂಡವಾಳದ ಒಳಹರಿವು, ರೂಪಾಯಿ ಮೌಲ್ಯದಲ್ಲಿ ಚೇತರಿಕೆ, ಹೂಡಿಕೆದಾರರು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳನ್ನು ಹಾಗೂ ಆಟೊಮೊಬೈಲ್ ವಲಯದ ಷೇರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದು ಸೂಚ್ಯಂಕಗಳ ಜಿಗಿತಕ್ಕೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ.

ಬಿಎಸ್‌ಇ ಸೆನ್ಸೆಕ್ಸ್ ಸೋಮವಾರ ಒಟ್ಟು 545 ಅಂಶ ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 182 ಅಂಶ ಏರಿಕೆ ಕಂಡಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 1.35ರಷ್ಟು ಕಡಿಮೆ ಆಗಿದ್ದು, ಪ್ರತಿ ಬ್ಯಾರಲ್‌ಗೆ 102.6 ಡಾಲರ್‌ಗೆ ತಲುಪಿದೆ.

‘ಒಂಭತ್ತು ತಿಂಗಳುಗಳಿಂದ ಷೇರುಗಳ ಮಾರಾಟಕ್ಕೆ ಗಮನ ನೀಡಿದ್ದ ವಿದೇಶಿ ಹೂಡಿಕೆದಾರರು ಜುಲೈ ತಿಂಗಳಲ್ಲಿ ಖರೀದಿಗೆ ಆದ್ಯತೆ ನೀಡಿದ್ದಾರೆ. ಇದು ಬಹಳ ದೊಡ್ಡ ಧನಾತ್ಮಕ ವಿಚಾರ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.51ರಷ್ಟು ಹಾಗೂ ಶೇ 1.47ರಷ್ಟು ಏರಿಕೆ ಕಂಡಿವೆ.

ವಿಮಾನ ಇಂಧನ, ವಾಣಿಜ್ಯ ಬಳಕೆ ಎಲ್‌ಪಿಜಿ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸೋಮವಾರ ವಿಮಾನ ಇಂಧನ (ಎಟಿಎಫ್) ದರದಲ್ಲಿ ಭಾರಿ ಇಳಿಕೆ ಮಾಡಿವೆ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನೂ ತಗ್ಗಿಸಲಾಗಿದೆ.

ಎಟಿಎಫ್ ದರವನ್ನು ಪ್ರತಿ ಕಿಲೋ ಲೀಟರಿಗೆ ₹ 16,232ರಷ್ಟು (ಶೇಕಡ 12) ಇಳಿಕೆ ಮಾಡಲಾಗಿದೆ. ಇದರಿಂದಾಗಿ ದೆಹಲಿಯಲ್ಲಿ ಮಾರಾಟ ದರವು ಕಿಲೋ ಲೀಟರಿಗೆ ₹ 1,21,915ಕ್ಕೆ ಇಳಿಕೆ ಆಗಿದೆ.

ಎಲ್‌ಪಿಜಿ ದರ ಇಳಿಕೆ: ವಾಣಿಜ್ಯ ಬಳಕೆಯ 19 ಕೆ.ಜಿ ತೂಕದ ಎಲ್‌ಪಿಜಿ ಸಿಲಿಂಡರ್ ದರ ₹ 36ರಷ್ಟು ಇಳಿಕೆ ಮಾಡಲಾಗಿದ್ದು, ಮಾರಾಟ ದರವು ₹1,976.50ಕ್ಕೆ ತಲುಪಿದೆ.

ವಾಣಿಜ್ಯ ಬಳಕೆ ಸಿಲಿಂಡರ್ ದರ ಇಳಿಕೆ ಮಾಡುತ್ತಿರುವುದು ಮೇ ಬಳಿಕ ಇದು ನಾಲ್ಕನೇ ಬಾರಿ.

ಮುಂಬೈ ಧಾರಣೆ

ಶೇಂಗಾ

1-8-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1635)
ಒಂದು ವಾರದ ಡೆಲಿವರಿ	1625 (1630)
ಸೋಯಾ ಕಚ್ಚಾ	1260 (1250)
ಪಾಮ್ ವಾರದ ಡೆಲಿವರಿ	1273 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 51,500 (51,390)

ಬೆಳ್ಳಿ ಕೆ.ಜಿ 58,300 (58,050)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹೊಸತು	40000-45000
ಹಳತು	46000-56000
ಕುಮಟ	
ಚಿಪ್ಪು	27169-32229
ಕೋಕ	18689-31469
ಫ್ಯಾಕ್ಟರಿ	12019-21700
ಹೊಸಚಾಲಿ	36089-39699
ಹಳೆಚಾಲಿ	43899-47372
ಪುತ್ತೂರು	
ಹೊಸತು	32000-45000
ಸಾಗರ	
ಬಿಳಿಗೋಟು	18899-32559
ಚಾಲಿ	35010-38312
ಕೋಕ	27160-34299
ಕೆಂಪುಗೋಟು	22110-38599
ರಾಶಿ	40299-51099
ಸಿಪ್ಪೆಗೋಟು	11318-22210
ಶಿವಮೊಗ್ಗ	
ಬೆಟ್ಟೆ	52099-54130
ಗೊಬರಲು	17000-38359
ರಾಶಿ	47409-50799
ಸರಕು	56019-75769
ಸಿದ್ದಾಪುರ	
ಬಿಳಿಗೋಟು	26699-32699
ಚಾಲಿ	36099-40099
ಕೋಕ	25699-32899
ಕೆಂಪುಗೋಟು	32899-34699
ರಾಶಿ	49419-49939
ತಟ್ಟಿಬೆಟ್ಟೆ	38809-45689
ಶಿರಸಿ	
ಬೆಟ್ಟೆ	30152-43699
ಬಿಳಿಗೋಟು	25099-34299
ಚಾಲಿ	36169-40599
ರಾಶಿ	46200-51099
ಯಲ್ಲಾಪುರ	
ಬಿಳಿಗೋಟು	24612-33899
ಚಾಲಿ	34899-40491
ಕೋಕ	18612-29612
ಕೆಂಪುಗೋಟು	26119-35369
ರಾಶಿ	48899-55009
ತಟ್ಟಿಬೆಟ್ಟೆ	41119-46912

ಕಾಫಿ (50 ಕೆ.ಜಿಗೆ ₹ ಗಳಲ್ಲಿ)


	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15800	16000	219.10 ಸೆಂಟ್ಸ್
ಎಸಿ	8820	8400	8900	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4700	4500	4550	2009 ಡಾಲರ್ಸ್

ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್: ಮುಂದುವರಿದ ಭಾರತದ ಪದಕ ಬೇಟೆ

ಚಿನ್ನ ಗೆದ್ದ ಅಚಿಂತ

ಚಿನ್ನ ಗೆದ್ದದ್ದು ಸಂತಸ ನೀಡಿದೆ. ಇದಕ್ಕಾಗಿ ಕಠಿಣ ಪರಿಶ್ರಮಪಟ್ಟಿದೆ. ನನ್ನ ಸಹೋದರ, ತಾಯಿ ಹಾಗೂ ಕೋಚ್ ಸಾಕಷ್ಟು ತ್ಯಾಗ ಮಾಡಿದ್ದಾರೆ.

ಅಚಿಂತ ಶಿವಲಿ ವೇಟ್‌ಲಿಫ್ಟರ್



ಪದಕದೊಂದಿಗೆ ಸಂಭ್ರಮಿಸಿದ ಅಚಿಂತ ಶಿವಲಿ –ಪಿಟಿಐ ಚಿತ್ರ

ಬರ್ಮಿಂಗ್‌ಹ್ಯಾಮ್ (ಪಿಟಿಐ): ನಿರೀಕ್ಷೆಗೆ ತಕ್ಕಂತೆ ಸಾಮರ್ಥ್ಯ ಪ್ರದರ್ಶಿಸಿದ ಭಾರತದ ವೇಟ್‌ಲಿಫ್ಟರ್ ಅಚಿಂತ ಶಿವಲಿ, ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನದ ನಗು ಬೀರಿದರು.

ಭಾನುವಾರ ರಾತ್ರಿ ನಡೆದ ಪುರುಷರ 73 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಅವರು ಒಟ್ಟು 313 ಕೆ.ಜಿ (143 ಕೆ.ಜಿ + 170 ಕೆ.ಜಿ) ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದರು. ಇದರೊಂದಿಗೆ ಭಾರತದ ವೇಟ್‌ಲಿಫ್ಟಿಂಗ್ ಸ್ಪರ್ಧಿಗಳು ಈ ಕೂಟದಲ್ಲಿ ಗೆದ್ದ ಪದಕಗಳ ಸಂಖ್ಯೆ ಆರಕ್ಕೇರಿತು.

ಶಿವಲಿಗೆ ಪ್ರಬಲ ಪೈಪೋಟಿ ಒಡ್ಡಿದ್ದ ಮಲೇಷ್ಯಾದ ಎರಿ ಹಿದಾಯತ್ ಮುಹಮ್ಮದ್ (ಒಟ್ಟು 303 ಕೆ.ಜಿ) ಬೆಳ್ಳಿ ಹಾಗೂ ಕೆನಡಾದ ಶಾಡ್ ಡಾರ್ಸಿಗ್ನಿ (298 ಕೆ.ಜಿ) ಕಂಚು ಪಡೆದುಕೊಂಡರು. ಜೂನಿಯರ್ ವಿಶ್ವಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಶಿವಲಿ, ಸ್ನ್ಯಾಚ್‌ನಲ್ಲಿ ಮೂರು ಪ್ರಯತ್ನಗಳಲ್ಲಿ ಕ್ರಮವಾಗಿ 137 ಕೆ.ಜಿ, 140 ಕೆ.ಜಿ ಮತ್ತು 143 ಕೆ.ಜಿ ಭಾರ ಎತ್ತಿದರು. ಇದು ಕೂಟ ದಾಖಲೆ ಮತ್ತು ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನವೂ ಹೌದು.

ತಮ್ಮ ಪ್ರತಿಸ್ಪರ್ಧಿಗಳಿಂತ ಐದು ಕೆ.ಜಿ ಅಂತರದ ಮುನ್ನಡೆಯೊಂದಿಗೆ ಕ್ಲೀನ್– ಜರ್ಕ್ ವಿಭಾಗದಲ್ಲಿ ಕಣಕ್ಕಿಳಿದ ಅವರು ಮೊದಲ ಪ್ರಯತ್ನದಲ್ಲಿ 166 ಕೆ.ಜಿ. ಭಾರವನ್ನು ಸಲೀಸಾಗಿ ಎತ್ತಿದರು. ಎರಡನೇ ಪ್ರಯತ್ನದಲ್ಲಿ 170 ಕೆ.ಜಿ. ಎತ್ತಲು ವಿಫಲರಾದರೂ, 3ನೇ ಹಾಗೂ ಕೊನೆಯ ಪ್ರಯತ್ನದಲ್ಲಿ ಯಶ ಕಂಡರು.

ಮಲೇಷ್ಯಾದ ಪ್ರತಿಸ್ಪರ್ಧಿ ಹಿದಾಯತ್ ಕೊನೆಯ ಎರಡು ಪ್ರಯತ್ನಗಳಲ್ಲಿ 176 ಕೆ.ಜಿ. ಭಾರ ಎತ್ತಲು ಪ್ರಯತ್ನಿಸಿ ವಿಫಲರಾದರು. ಇದರಿಂದ ಅಚಿಂತಗೆ ಚಿನ್ನ ಒಲಿಯಿತು.

‘ನನ್ನ ವೃತ್ತಿಜೀವನದ ಅತಿದೊಡ್ಡ ಕೂಟ ಇದಾಗಿದ್ದು, ಈ ಪದಕವನ್ನು ದಿವಂಗತರಾದ ತಂದೆಗೆ (ಹೃದಯಾಘಾತದಿಂದ ನಿಧನರಾಗಿದ್ದರು) ಅರ್ಪಿಸುವೆ. ಈ ಯಶಸ್ಸು ಮುಂದಿನ ದಿನಗಳಲ್ಲಿ ನನಗೆ ಉತ್ತೇಜನ ನೀಡಲಿದೆ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಮುಖ್ಯಾಂಶಗಳು

- ಒಟ್ಟು 313 ಕೆ.ಜಿ. ಭಾರ ಎತ್ತಿದ ಶಿವಲಿ
- ಸ್ನ್ಯಾಚ್‌ನಲ್ಲಿ ಕೂಟ ದಾಖಲೆ
- ಅಜಯ್ ಸಿಂಗ್‌ಗೆ ನಾಲ್ಕನೇ ಸ್ಥಾನ

ಅಜಯ್ ಸಿಂಗ್‌ಗೆ ನಾಲ್ಕನೇ ಸ್ಥಾನ: ಪುರುಷರ 81 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ ಭಾರತದ ಅಜಯ್ ಸಿಂಗ್, ಕಂಚಿನ ಪದಕ ಗೆಲ್ಲುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು. ತಮ್ಮ ಚೊಚ್ಚಲ ಕಾಮನ್‌ವೆಲ್ತ್ ಕೂಟದಲ್ಲಿ ಪಾಲ್ಗೊಂಡ 25 ವರ್ಷದ ಲಿಫ್ಟರ್, ಒಟ್ಟು 319 ಕೆ.ಜಿ ಭಾರ ಎತ್ತಿದರು. ಸ್ನ್ಯಾಚ್‌ನಲ್ಲಿ 143 ಕೆ.ಜಿ. ಹಾಗೂ ಕ್ಲೀನ್–ಜರ್ಕ್‌ನಲ್ಲಿ 176 ಕೆ.ಜಿ. ಸಾಧನೆ ಮಾಡಿದರು.

325 ಕೆ.ಜಿ. ಭಾರ (144 ಕೆ.ಜಿ + 181 ಕೆ.ಜಿ) ಎತ್ತಿದ ಇಂಗ್ಲೆಂಡ್‌ನ ಕ್ರಿಸ್ ಮರೆ ಚಿನ್ನ ಗೆದ್ದರು. ಒಟ್ಟಾರೆ ವಿಭಾಗದಲ್ಲಿ ಅವರು ಕೂಟ ದಾಖಲೆ ಸ್ಥಾಪಿಸಿದರು.

ಆಸ್ಟ್ರೇಲಿಯದ ಕೈಲ್ ಬ್ರೂಸ್ ಅವರು 323 ಕೆ.ಜಿ (143 + 180) ಸಾಧನೆಯೊಂದಿಗೆ ಬೆಳ್ಳಿ ಹಾಗೂ ಕೆನಡಾದ ನಿಕೊಲಸ್ ವಚೊನ್ 320 ಕೆ.ಜಿ ಯೊಂದಿಗೆ (140 + 180) ಕಂಚು ತಮ್ಮದಾಗಿಸಿಕೊಂಡರು.

‘ನನ್ನಿಂದಾದ ಶ್ರೇಷ್ಠ ಪ್ರದರ್ಶನ ನೀಡಿದರೂ, ಪದಕ ಸಿಗಲಿಲ್ಲ. ಕೋಚ್ ವಿಜಯ್ ಶರ್ಮಾ ಅವರು ಸ್ಪರ್ಧೆಯ ವೇಳೆ ಉತ್ತೇಜನ ನೀಡುತ್ತಲೇ ಇದ್ದರು. ಆದರೆ ಅದೃಷ್ಟ ನನ್ನ ಪರ ಇರಲಿಲ್ಲ’ ಎಂದು ಅಜಯ್ ಪ್ರತಿಕ್ರಿಯಿಸಿದರು.

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	26	18	20	64
2	ಇಂಗ್ಲೆಂಡ್	19	18	10	47
3	ನ್ಯೂಜಿಲೆಂಡ್	12	7	4	23
4	ದಕ್ಷಿಣ ಆಫ್ರಿಕಾ	5	1	3	9
5	ಕೆನಡಾ	4	9	14	27
6	ಭಾರತ	3	3	2	8

ಸುಶೀಲಾಗೆ ಬೆಳ್ಳಿ, ವಿಜಯ್‌ಗೆ ಕಂಚು

ಜೂಡೊ ಸ್ಪರ್ಧೆಯ 48, 60 ಕೆಜಿ ವಿಭಾಗಗಳಲ್ಲಿ ಪದಕ ಜಯಿಸಿದ ಭಾರತ

ಕೊವೆಂಟ್ರಿ (ಪಿಟಿಐ): ಭಾರತದ ಎಲ್. ಸುಶೀಲಾ ದೇವಿ ಮತ್ತು ವಿಜಯ್ ಕುಮಾರ್ ಯಾದವ್ ಅವರು ಜೂಡೊ ಸ್ಪರ್ಧೆಯಲ್ಲಿ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದುಕೊಂಡರು.

ಸೋಮವಾರ ನಡೆದ ಮಹಿಳೆಯರ 48 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಸುಶೀಲಾ ಅವರು ದಕ್ಷಿಣ ಆಫ್ರಿಕಾದ ಮೈಕೆಲಾ ವೈಟ್‌ಬೂಯಿ ಎದುರು ಸೋತರು. 4.25 ನಿಮಿಷ ನಡೆದ ಹಣಾಹಣಿಯಲ್ಲಿ ಸುಶೀಲಾ, ಸೋಲುವ ಮುನ್ನ ಎದುರಾಳಿಗೆ ತಕ್ಕ ಪೈಪೋಟಿ ನೀಡುವಲ್ಲಿ ಯಶಸ್ವಿಯಾದರು.

27 ವರ್ಷದ ಸುಶೀಲಾ ಅವರು ಕಾಮನ್‌ವೆಲ್ತ್ ಕೂಟದಲ್ಲಿ ಗೆದ್ದ ಎರಡನೇ ಪದಕ ಇದು. 2014 ಗ್ಲಾಸ್ಗೊ ಕೂಟದಲ್ಲೂ ಅವರು ‘ರನ್ನರ್ ಅಪ್’ ಆಗಿ ಬೆಳ್ಳಿ ಪಡೆದಿದ್ದರು.

ಮಣಿಪುರ ಪೊಲೀಸ್ ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಆಗಿರುವ ಸುಶೀಲಾ, ಕ್ವಾರ್ಟರ್ ಫೈನಲ್‌ನಲ್ಲಿ ಮಾಲವಿಯ ಹ್ಯಾರಿಯೆಟ್ ಬೊನಫೇಸ್ ವಿರುದ್ಧವೂ, ಸೆಮಿಫೈನಲ್‌ನಲ್ಲಿ ಮಾರಿಷಸ್‌ನ ಪ್ರಿಸಿಲಾ ಮೊರಾಂಡ್ ಎದುರೂ ಗೆದ್ದಿದ್ದರು.

ಯಾದವ್ ಅವರು ಪುರುಷರ 60 ಕೆ.ಜಿ. ವಿಭಾಗದಲ್ಲಿ ಕಂಚು ಜಯಿಸಿದರು. ಮೂರನೇ ಸ್ಥಾನಕ್ಕಾಗಿ ನಡೆದ ಪೈಪೋಟಿಯಲ್ಲಿ ಅವರು ಸೈಪ್ರಸ್‌ನ ಪೆಟ್ರೋಸ್ ಕ್ರಿಸ್ಟೊಡೌಲಿಡೆಸ್ ಎದುರು ಗೆದ್ದರು. ಪ್ರಭಾವಿ ಪ್ರದರ್ಶನ ನೀಡಿದ ಅವರು ಕೇವಲ 58 ಸೆಕೆಂಡುಗಳಲ್ಲಿ ಗೆಲುವು ಒಲಿಸಿಕೊಂಡರು.

26 ವರ್ಷದ ಯಾದವ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಜೋಶುವ ಕಟ್ಜ್ ಎದುರು ಪರಾಭವಗೊಂಡಿದ್ದರು. ಆದರೆ ‘ರೀಪೇಜ್’ನಲ್ಲಿ ಗೆದ್ದು ಕಂಚಿನ ಪದಕದ ಪಂದ್ಯಕ್ಕೆ ಅರ್ಹತೆ ಗಿಟ್ಟಿಸಿಕೊಂಡಿದ್ದರು.

ಪುರುಷರ 66 ಕೆ.ಜಿ. ವಿಭಾಗದಲ್ಲಿ ಜಸ್ಲೀನ್ ಸಿಂಗ್ ಸೈನಿ ಅವರು ಸೆಮಿಫೈನಲ್‌ನಲ್ಲಿ ಸ್ಕಾಟ್ಲೆಂಡ್‌ನ ಫಿನ್ಲೆ ಆ್ಯಲನ್ ಎದುರು ಪರಾಭವಗೊಂಡರು. ಕಂಚಿನ ಪದಕಕ್ಕಾಗಿ ನಡೆಯುವ ಪಂದ್ಯದಲ್ಲಿ ಅವರು ಆಸ್ಟ್ರೇಲಿಯಾದ ನೇಥನ್ ಕಟ್ಜ್ ಎದುರು ಸೆಣಸಾಡುವರು.

ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ಸುಚಿಕಾ ತರಿಯಲ್ ಅವರು ಕಂಚಿನ ಪದಕಕ್ಕಾಗಿ ದಕ್ಷಿಣ ಆಫ್ರಿಕಾದ ಡೋಣ್ ಬ್ರೆಟೆನ್‌ಬ್ಯಾಚ್ ಅವರನ್ನು ಎದುರಿಸುವರು.



ಭಾರತದ ಸುಶೀಲಾ ದೇವಿ (ಬಿಳಿ) ಮತ್ತು ದಕ್ಷಿಣ ಆಫ್ರಿಕಾದ ಮೈಕೆಲಾ ವೈಟ್‌ಬೂಯಿ ನಡುವಿನ ಪೈಪೋಟಿ –ಪಿಟಿಐ ಚಿತ್ರ

ಭಾರತ ತಂಡದ ಐತಿಹಾಸಿಕ ಸಾಧನೆ

ಮಹಿಳೆಯರ ಲಾನ್ ಬಾಲ್ಸ್: ಮೊದಲ ಬಾರಿಗೆ ಫೈನಲ್‌ಗೆ ಲಗ್ಗೆ; ಪದಕ ಖಚಿತ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಮಹಿಳಾ ತಂಡದವರು ಲಾನ್‌ಬಾಲ್ಸ್ ಸ್ಪರ್ಧೆಯ ಫೋರ್ಸ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿ ಐತಿಹಾಸಿಕ ಸಾಧನೆ ಮಾಡಿದ್ದಾರೆ.

ಕಾಮನ್‌ವೆಲ್ತ್ ಕೂಟದ ಲಾನ್‌ಬಾಲ್ಸ್‌ನಲ್ಲಿ ಭಾರತ ಫೈನಲ್ ಪ್ರವೇಶಿಸಿದ್ದು ಇದೇ ಮೊದಲು. ಮಂಗಳವಾರ ನಡೆಯಲಿರುವ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡದ ಸವಾಲು ಎದುರಿಸಲಿದೆ. ಚಿನ್ನ ಅಥವಾ ಬೆಳ್ಳಿ ಖಚಿತಪಡಿಸಿರುವ ಭಾರತ ತಂಡ ಇದೇ ಮೊದಲ ಬಾರಿ ಚೊಚ್ಚಲ ಪದಕಕ್ಕೆ ಮುತ್ತಿಡಲಿದೆ.

ಸೋಮವಾರ ನಡೆದ ಸೆಮಿಫೈನಲ್‌ನಲ್ಲಿ ಲವ್ಲಿ ಚೌಬೆ, ಪಿಂಕಿ, ನಯನ್ಮೊನಿ ಸೈಕಿಯಾ ಮತ್ತು ರೂಪಾ ರಾಣಿ ಟಿರ್ಕೆ ಅವರನ್ನೊಳಗೊಂಡ ಭಾರತ 16–13 ರಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿತು.

‘ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಪದಗಳೇ ಸಿಗುತ್ತಿಲ್ಲ. ಸಂಘಟಿತ ಪ್ರಯತ್ನದಿಂದ ಫೈನಲ್ ಪ್ರವೇಶಿಸಿದ್ದೇವೆ. ಆದರೆ ನಮ್ಮ ಪಯಣ ಇಲ್ಲಿಗೆ ಕೊನೆಗೊಂಡಿಲ್ಲ. ದಕ್ಷಿಣ ಆಫ್ರಿಕಾ ತಂಡದ ಎದುರೂ ಇದೇ ಪ್ರದರ್ಶನ ಮುಂದುವರಿಸಿ ಚಿನ್ನ ಗೆಲ್ಲಲು ಪ್ರಯತ್ನಿಸುತ್ತೇವೆ’ ಎಂದು ಸ್ಪರ್ಧೆಯ ಬಳಿಕ ರಾಣಿ ಟಿರ್ಕೆ ಪ್ರತಿಕ್ರಿಯಿಸಿದರು.

ನ್ಯೂಜಿಲೆಂಡ್ ಎದುರಿನ ಹಣಾಹಣಿಯ ಆರಂಭದಲ್ಲಿ ಭಾರತ 0–5 ರಲ್ಲಿ ಹಿನ್ನಡೆಯಲ್ಲಿತ್ತು. ಸೆಲಿನಾ ಗೊಡಾರ್ಡ್, ನಿಕೋಲ್ ಟೂಮಿ, ಟೇಯ್ಲ್ ಬ್ರೂಸ್ ಮತ್ತು ವಾಲ್ ಸ್ಮಿತ್ ಅವರು ತಮ್ಮ ತಂಡಕ್ಕೆ ಉತ್ತಮ ಆರಂಭ ನೀಡಿದರು. ಮರುಹೋರಾಟ ನಡೆಸಿದ ಭಾರತ 7–7ರಲ್ಲಿ ಸಮಬಲ ಸಾಧಿಸಿತು.

ಆ ಬಳಿಕವೂ ಗುರಿ ಹಿಡಿಯುವಲ್ಲಿ ನಿಖರ ಪ್ರದರ್ಶನ ಮುಂದುವರಿಸಿ 10–7 ರಲ್ಲಿ ಮುನ್ನಡೆ ಗಳಿಸಿತು. ಪಟ್ಟುಬಿಡದ ನ್ಯೂಜಿಲೆಂಡ್ 13–12ರಲ್ಲಿ ಮತ್ತೆ ಮುನ್ನಡೆ ತನ್ನದಾಗಿಸಿಕೊಂಡಿತು. ಆದರೆ ಕೊನೆಯಲ್ಲಿ ರಾಣಿ ಅವರ ಅತ್ಯುತ್ತಮ ಪ್ರದರ್ಶನದಿಂದ ಭಾರತ 16–13 ರಲ್ಲಿ ಗೆದ್ದಿತು.

ಭಾರತ ಪುರುಷರ ತಂಡ ಕ್ವಾರ್ಟರ್ ಫೈನಲ್‌ನಲ್ಲಿ 8–26 ರಲ್ಲಿ ನಾರ್ತರ್ನ್ ಐರ್ಲೆಂಡ್ ಎದುರು ಸೋತು ಹೊರಬಿದ್ದಿತ್ತು.

ಮಂಗಳವಾರ ಫೈನಲ್: ಭಾರತ–ದಕ್ಷಿಣ ಆಫ್ರಿಕಾ (ಸಂಜೆ 4.15)



ಲಾನ್ ಬಾಲ್ಸ್ ಸ್ಪರ್ಧೆಯಲ್ಲಿ ಫೈನಲ್ ಪ್ರವೇಶಿಸಿದ ಭಾರತ ತಂಡ –ಪಿಟಿಐ ಚಿತ್ರ

ಏನಿದು ಲಾನ್‌ಬಾಲ್ಸ್

ಹುಲ್ಲುಹಾಸಿನಲ್ಲಿ ಚೆಂಡನ್ನು ನಿರ್ದಿಷ್ಟ ದೂರದಿಂದ ಗುರಿಯೆಡೆಗೆ ಉರುಳಿಸಿ ಆಡುವ ಆಟವೇ ಲಾನ್ ಬಾಲ್ಸ್. ಚೆಂಡನ್ನು ಉರುಳಿಸಬೇಕಾದ ಗುರಿಯನ್ನು ‘ದಿ ಜಾಕ್’ ಎಂಬ ಹೆಸರಿನಿಂದ ಕರೆಯುವರು. ಫೋರ್ಸ್ ವಿಭಾಗದಲ್ಲಿ ಪ್ರತಿ ತಂಡದಲ್ಲಿ ನಾಲ್ವರು ಸ್ಪರ್ಧಿಗಳು ಇರುವರು.

ಎಲ್ಲ ಸ್ಪರ್ಧಿಗಳ ಪ್ರದರ್ಶನವನ್ನು ಆಧರಿಸಿ ಪಾಯಿಂಟ್ಸ್ ನಿರ್ಧರಿಸಲಾಗುತ್ತದೆ. ‘ದಿ ಜಾಕ್’ಗೆ ಗುರಿ ಹಿಡಿಯುವ ಅಥವಾ ಅದಕ್ಕೆ ಹತ್ತಿರವಾಗಿ ಚೆಂಡನ್ನು ಉರುಳಿಸುವ ತಂಡ ಹೆಚ್ಚು ಪಾಯಿಂಟ್ಸ್ ಗಳಿಸಿ ಗೆಲುವು ಪಡೆಯುತ್ತದೆ. ಈ ಆಟವನ್ನು ಸಿಂಗಲ್ಸ್, ಡಬಲ್ಸ್ ಮತ್ತು ಫೋರ್ಸ್ (ನಾಲ್ವರು ಸ್ಪರ್ಧಿಗಳು) – ಹೀಗೆ ಮೂರು ವಿಭಾಗಗಳಲ್ಲಿ ಆಡಲಾಗುತ್ತದೆ.

200 ಮೀಟರ್ಸ್ ಬಟರ್‌ಫ್ಲೈನಲ್ಲಿ ಸಜನ್‌ಗೆ 9ನೇ ಸ್ಥಾನ

ಶ್ರೀಹರಿ ನಟರಾಜ್ ಫೈನಲ್‌ಗೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ಅವರು ಪುರುಷರ ಈಜು ಸ್ಪರ್ಧೆಯ 50 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದು, ಪದಕದ ಭರವಸೆಯನ್ನು ಜೀವಂತವಾಗಿರಿಸಿಕೊಂಡಿದ್ದಾರೆ.

ಭಾನುವಾರ ನಡೆದ ಸೆಮಿಫೈನಲ್‌ನಲ್ಲಿ ಬೆಂಗಳೂರಿನ ಈಜುಪಟು 25.38 ಸೆ.ಗಳಲ್ಲಿ ಗುರಿತಲುಪಿದರು. ಒಟ್ಟಾರೆಯಾಗಿ ಎಂಟನೇ ಸ್ಥಾನ ಪಡೆದು ಫೈನಲ್‌ಗೆ ಅರ್ಹತೆ ಪಡೆದುಕೊಂಡರು. ಇದಕ್ಕೂ ಮುನ್ನ ಹೀಟ್ಸ್‌ನಲ್ಲಿ ಅವರು 25.52 ಸೆ.ಗಳಲ್ಲಿ ಗುರಿ ತಲುಪಿ ಸೆಮಿಫೈನಲ್‌ನಲ್ಲಿ ಸ್ಥಾನ ಪಡೆದಿದ್ದರು.

ಭಾರತದ ಇನ್ನೊಬ್ಬ ಈಜುಪಟು ಸಜನ್ ಪ್ರಕಾಶ್ ಅವರು ಪುರುಷರ 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ 9ನೇ ಸ್ಥಾನ ಪಡೆದುಕೊಂಡರು.

ಹೀಟ್ಸ್‌ನಲ್ಲಿ 1 ನಿ. 58.99 ಸೆ.ಗಳಲ್ಲಿ ಗುರಿ ತಲುಪಿದ ಅವರು ಫೈನಲ್‌ಗೆ ‘ರಿಸರ್ವ್’ ಸ್ಪರ್ಧಿಯಾಗಿದ್ದರು. ಫೈನಲ್ ಪ್ರವೇಶಿಸಿದ್ದ ಎಂಟು ಈಜುಪಟುಗಳಲ್ಲಿ ಒಬ್ಬರು ಹಿಂದೆ ಸರಿದರೆ ಸಜನ್‌ಗೆ ಅವಕಾಶ ಲಭಿಸುತ್ತಿತ್ತು. ಆದರೆ ಭಾರತದ ಸ್ಪರ್ಧಿಗೆ ಫೈನಲ್‌ನಲ್ಲಿ ಅವಕಾಶ ಸಿಗಲಿಲ್ಲ. ಒಂಬತ್ತನೇ ಸ್ಥಾನ ಗಳಿಸಿದರು.

ಸಜನ್ ಅವರು 100 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಲು ವಿಫಲರಾದರು.



200 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಸ್ಪರ್ಧಿಸಿದ ಸಜನ್ ಪ್ರಕಾಶ್ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್ ಫೈನಲ್‌ಗೆ ಭಾರತ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಬ್ಯಾಡ್ಮಿಂಟನ್ ತಂಡ ಮಿಶ್ರ ತಂಡ ವಿಭಾಗದ ಫೈನಲ್ ಪ್ರವೇಶಿಸಿತು.

ಸೋಮವಾರ ರಾತ್ರಿ ನಡೆದ ಫೈನಲ್‌ನಲ್ಲಿ ಭಾರತ 3–0 ರಲ್ಲಿ ಸಿಂಗಪುರ ತಂಡವನ್ನು ಮಣಿಸಿತು. ಫೈನಲ್‌ನಲ್ಲಿ ಮಲೇಷ್ಯಾ ಜತೆ ಪೈಪೋಟಿ ನಡೆಸಲಿದೆ.

ಸೆಮಿಫೈನಲ್‌ನ ಪುರುಷರ ಡಬಲ್ಸ್ ವಿಭಾಗದ ಪಂದ್ಯದಲ್ಲಿ ಸಾತ್ವಿಕ್‌ಸಾಯಿರಾಜ್ ರೆಡ್ಡಿ– ಚಿರಾಗ್ ಶೆಟ್ಟಿ 21–11, 21–12 ರಲ್ಲಿ ಯೊಂಗ್ ಕಾಯ್ ಟೆರಿ–ಜುನ್ ಕಿಯಾನ್ ವೆಕ್ ಎದುರು ಗೆದ್ದು 1–0 ಮುನ್ನಡೆ ತಂದಿತ್ತರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು 21–11, 21–12 ರಲ್ಲಿ ಜಿಯಾ ಮಿನ್ ವಿರುದ್ಧ ಗೆದ್ದರು. ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ 21–18, 21–15 ರಲ್ಲಿ ಲೊ ಕೀನ್ ಯೆವ್ ಅವರನ್ನು ಮಣಿಸಿದರು.

ಫೈನಲ್ ಇಂದು: ಭಾರತ– ಮಲೇಷ್ಯಾ (ರಾತ್ರಿ 10ಕ್ಕೆ)

ಇಂದಿನಿಂದ ಅಥ್ಲೆಟಿಕ್ಸ್: ಪದಕ ಭರವಸೆ ಮೂಡಿಸಿರುವ ಸಬ್ಳೆ, ಎಲ್ದೋಸ್

ಸೀಮಾ, ಶ್ರೀಶಂಕರ್ ಮೇಲೆ ನಿರೀಕ್ಷೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕೂಟದ ಅಥ್ಲೆಟಿಕ್ಸ್ ಸ್ಪರ್ಧೆಗಳು ಮಂಗಳವಾರ ಆರಂಭವಾಗಲಿದ್ದು, ನೀರಜ್ ಚೋಪ್ರಾ ಅವರ ಅನುಪಸ್ಥಿತಿಯ ನಡುವೆಯೂ ಭಾರತ ತಂಡ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕಳೆದ ಬಾರಿಯ ಕೂಟದಲ್ಲಿ ನೀರಜ್, ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ಜಯಿಸಿದ್ದರು. ಆ ಬಳಿಕ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದ್ದ ಅವರು, ಈಚೆಗೆ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪಡೆದಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನ ವೇಳೆ ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದ ಅವರು ಸಂಪೂರ್ಣವಾಗಿ ಚೇತರಿಸಿಕೊಳ್ಳದ ಕಾರಣ ಕಾಮನ್‌ವೆಲ್ತ್ ಕೂಟದಿಂದ ಹಿಂದೆ ಸರಿದಿದ್ದರು. ಅವರ ಗೈರುಹಾಜರಿ ಭಾರತಕ್ಕೆ ಹಿನ್ನಡೆ ಉಂಟುಮಾಡಿದೆಯಾದರೂ, ಪದಕದ ಭರವಸೆ ಮೂಡಿಸಿರುವ ಇತರ ಅಥ್ಲೀಟ್‌ಗಳಿಂದ ಉತ್ತಮ ಪ್ರದರ್ಶನ ನಿರೀಕ್ಷಿಸಲಾಗಿದೆ.

ಲಾಂಗ್‌ಜಂಪರ್ ಮುರಳಿ ಶ್ರೀಶಂಕರ್, ಸ್ಟೀಪಲ್ ಚೇಸ್‌ನಲ್ಲಿ ಅವಿನಾಶ್ ಸಬ್ಳೆ, ಮಹಿಳಾ ಡಿಸ್ಕಸ್ ಥ್ರೋ ಅಥ್ಲೀಟ್ ಸೀಮಾ ಪೂನಿಯಾ ಮತ್ತು ಜಾವೆಲಿನ್ ಥ್ರೋ ಸ್ಪರ್ಧಿ ಅನುರಾಣಿ ಅವರು ಪದಕದ ಭರವಸೆ ಮೂಡಿಸಿದ್ದಾರೆ. ಟ್ರಿಪಲ್ ಜಂಪ್‌ನಲ್ಲಿ ಪ್ರವೀಣ್ ಚಿತ್ರವೇಲ್, ಅಬ್ದುಲ್ಲಾ ಅಬೂಬಕರ್ ಮತ್ತು ಎಲ್ದೋಸ್ ಪೌಲ್ ಅವರಲ್ಲಿ ಕನಿಷ್ಠ ಒಬ್ಬರು ಪದಕ ಗೆಲ್ಲುವರೆಂದು ನಿರೀಕ್ಷಿಸಲಾಗಿದೆ.

ಯೂಜಿನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿದ್ದ ಐವರು ಅಥ್ಲೀಟ್‌ಗಳು ತಂಡದಲ್ಲಿರುವ ಕಾರಣ ಭಾರತ ಈ ಬಾರಿ ಕನಿಷ್ಠ ಆರು ಪದಕಗಳನ್ನು ಎದುರುನೋಡುತ್ತಿದೆ.

ಕಾಮನ್‌ವೆಲ್ತ್‌ನಲ್ಲಿ ಭಾರತದ ಅಥ್ಲೀಟ್‌ಗಳ ಅತ್ಯುತ್ತಮ ಪ್ರದರ್ಶನ 2010ರ ನವದೆಹಲಿ ಕೂಟದಲ್ಲಿ ದಾಖಲಾಗಿತ್ತು. ಅಲ್ಲಿ 2 ಚಿನ್ನ, 3 ಬೆಳ್ಳಿ ಮತ್ತು 7 ಕಂಚು ಜಯಿಸಿತ್ತು.

ಎರಡನೇ ಅತ್ಯುತ್ತಮ ಪ್ರದರ್ಶನ 2014 ಮತ್ತು 2018ರ ಕೂಟಗಳಲ್ಲಿ ಮೂಡಿಬಂದಿತ್ತು. ಈ ಕೂಟಗಳಲ್ಲಿ ತಲಾ ಒಂದು ಚಿನ್ನ, ಬೆಳ್ಳಿ, ಕಂಚು ಪಡೆದಿತ್ತು.

ಭಾನುವಾರ ಪುರುಷರ ಲಾಂಗ್‌ಜಂಪ್ ಸ್ಪರ್ಧೆಯ ಅರ್ಹತಾ ಸುತ್ತು ನಡೆಯಲಿದ್ದು, ಶ್ರೀಶಂಕರ್ ಮತ್ತು ಮಹಮ್ಮದ್ ಅನೀಸ್ ಯಹ್ಯಾ ಕಣಕ್ಕಿಳಿಯಲಿದ್ದಾರೆ. ಇತ್ತೀಚಿನ ಹಲವು ಕೂಟಗಳಲ್ಲಿ 8 ಮೀ. ಗಿಂತ ಹೆಚ್ಚಿನ ಸಾಧನೆ ಮಾಡಿರುವ ಶ್ರೀಶಂಕರ್, ಅದೇ ಪ್ರದರ್ಶನ ಪುನರಾವರ್ತಿಸಿದರೆ ಪದಕ ಗೆಲ್ಲುವ ಸಾಧ್ಯತೆಯಿದೆ.

ಕಾಮನ್‌ವೆಲ್ತ್ ಕೂಟದ ಲಾಂಗ್‌ಜಂಪ್‌ನಲ್ಲಿ ಕಣಕ್ಕಿಳಿಯಲಿರುವ ಸ್ಪರ್ಧಿಗಳಲ್ಲಿ ಈ ಋತುವಿನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿರುವುದು ಶ್ರೀಶಂಕರ್. ಆದ್ದರಿಂದ ಅವರ ಮೇಲಿನ ನಿರೀಕ್ಷೆ ಹೆಚ್ಚಿದೆ.

ಮಹಿಳಾ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಸೀಮಾ, ಪದಕ ಗೆಲ್ಲುವುದು ಬಹುತೇಕ ಖಚಿತ. ಈ ಹಿಂದಿನ ನಾಲ್ಕು ಕೂಟಗಳಲ್ಲಿ ಅವರು ಒಮ್ಮೆಯೂ ಬರಿಗೈಯಲ್ಲಿ ಮರಳಿಲ್ಲ. ಮೂರು ಬೆಳ್ಳಿ ಹಾಗೂ ಒಂದು ಕಂಚು ಗೆದ್ದಿದ್ದು, ಐದನೇ ಪದಕದ ನಿರೀಕ್ಷೆಯಲ್ಲಿದ್ದಾರೆ.



ಎಲ್ದೋಸ್ ಪೌಲ್

ಬಾಕ್ಸಿಂಗ್; ಎಂಟರ ಘಟ್ಟಕ್ಕೆ ಅಮಿತ್, ಹುಸಾಮುದ್ದೀನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅಮಿತ್ ಪಂಘಾಲ್ ಮತ್ತು ಮೊಹಮ್ಮದ್ ಹುಸಾಮುದ್ದೀನ್ ಕಾಮನ್‌ವೆಲ್ತ್ ಕ್ರೀಡಾಕೂಟದ ಪುರುಷರ ಬಾಕ್ಸಿಂಗ್‌ನಲ್ಲಿ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟರು.

ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕವಿಜೇತ ಅಮಿತ್ ಸೋಮವಾರ ಇಲ್ಲಿ ನಡೆದ ಫ್ಲೈವೇಟ್ (51ಕೆ.ಜಿ) ವಿಭಾಗದಲ್ಲಿ ವನೌತುನ ನಾಮ್ರಿ ಬೆರಿ ವಿರುದ್ಧ ಗೆದ್ದರು.

ಎಡಗೈ ಮತ್ತು ಬಲಗೈಗಳಿಂದ ಪಂಚ್‌ಗಳನ್ನು ಚುರುಕಾಗಿ ನೀಡುವಲ್ಲಿ ಯಶಸ್ವಿಯಾದ ಅಮಿತ್ ಎದುರಾಳಿಯನ್ನು ಒತ್ತಡಕ್ಕೆ ಸಿಲುಕಿಸಿದರು. ಚುರುಕಾದ ಪಾದಚಲನೆ ಮೂಲಕ ನಾಮ್ರಿಯ ಪಂಚ್‌ಗಳನ್ನು ತಪ್ಪಿಸಿಕೊಂಡ ಅಮಿತ್ ಮೇಲುಗೈ ಸಾಧಿಸಿದರು. ಮೂರು ಸುತ್ತುಗಳಲ್ಲಿಯೂ ಅಮಿತ್ ಪಾರಮ್ಯ ಮೆರೆದರು. ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಸ್ಕಾಟ್ಲೆಂಡ್‌ನ 20 ವರ್ಷದ ಲೆನನ್ ಮುಲಿಗಾನ್ ವಿರುದ್ಧ ಸೆಣಸುವರು.

ಫೆದರ್‌ವೇಟ್ ವಿಭಾಗದ ಪ್ರೀಕ್ವಾರ್ಟರ್ ಫೈನಲ್‌ನಲ್ಲಿ ಮೊಹಮ್ಮದ್ 5–0ಯಿಂದ ಬಾಂಗ್ಲಾದೇಶದ ಮೊಹಮ್ಮದ್ ಸಲೀಂ ಹುಸೇನ್ ವಿರುದ್ಧ ಪಾರಮ್ಯ ಮೆರೆದರು. ಚುರುಕಾದ ಪಂಚ್‌ಗಳನ್ನು ಪ್ರಯೋಗಿಸಿದ ಭಾರತದ ಬಾಕ್ಸರ್ ಯಾವುದೇ ಹಂತದಲ್ಲಿಯೂ ತಲೆಬಾಗಲಿಲ್ಲ ಮತ್ತು ಹಿಂದೆಜ್ಜೆ ಇಡಲಿಲ್ಲ. ಆರಂಭದಿಂದಲೂ ಆಕ್ರಮಣಶೀಲರಾದ ಅವರ ಮುಂದೆ ಬಾಂಗ್ಲಾ ಬಾಕ್ಸರ್ ಶರಣಾದರು. ಎಂಟರ ಘಟ್ಟದಲ್ಲಿ ಅವರು ನಮಿಬಿಯಾದ ಟ್ರೈಗೇಮ್ ಮಾರ್ನಿಗ್ ಎನ್‌ಡಿವೆಲೊ ಅವರನ್ನು ಎದುರಿಸುವರು.



ಅಮಿತ್ ಪಂಘಾಲ್

ಹಾಕಿ: ಭಾರತದ ಜಯ ತಪ್ಪಿಸಿದ ಇಂಗ್ಲೆಂಡ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಪಂದ್ಯದ ಮೊದಲಾರ್ಧ ಅವಧಿಯಲ್ಲಿ ಮೂರು ಗೋಲುಗಳ ಮುನ್ನಡೆಯಿದ್ದರೂ ಜಯ ಗಳಿಸಲು ಭಾರತ ತಂಡಕ್ಕೆ ಸಾಧ್ಯವಾಗಲಿಲ್ಲ. ದಿಟ್ಟ ಆಟವಾಡಿದ ಇಂಗ್ಲೆಂಡ್ 4–4ರಿಂದ ಸಮಬಲ ಸಾಧಿಸಿತು.

ಸೋಮವಾರ ನಡೆದ ಬಿ ಗುಂಪಿನ ಪುರುಷರ ಹಾಕಿ ಪಂದ್ಯದಲ್ಲಿ ಲಲಿತ್ ಉಪಾಧ್ಯಾಯ (3ನೇ ನಿ), ಮನದೀಪ್ ಸಿಂಗ್ (13 ಮತ್ತು 22 ನಿ) ಪ್ರಥಮಾರ್ಧದಲ್ಲಿಯೇ ಭಾರತಕ್ಕೆ 3–0 ಮುನ್ನಡೆ ಗಳಿಸಿಕೊಟ್ಟಿದ್ದರು. 46ನೇ ನಿಮಿಷದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದರು.

ದ್ವಿತೀಯಾರ್ಧದಲ್ಲಿ ಪುಟಿದೆದ್ದ ಇಂಗ್ಲೆಂಡ್ ಆಟಗಾರರು ಅಮೋಘ ಆಟವಾಡಿದರು. ಲಿಯಾಮ್ ಅನ್ಸೆಲ್ (42ನೇ ನಿ), ನಿಕ್ ಬ್ಯಾಂಡುರಕ್ (47ನೆ ನಿ, 53ನಿ) ಹಾಗೂ ಫಿಲ್ ರಾಪರ್ (53 ನಿ) ಗೋಲು ಗಳಿಸಿ ತಂಡವನ್ನು ಸೋಲಿನಿಂದ ಪಾರು ಮಾಡಿದರು. ಪಂದ್ಯದ ಮುಕ್ತಾಯಕ್ಕೆ ಎರಡು ನಿಮಿಷ ಬಾಕಿಯಿದ್ದಾಗ ಇಂಗ್ಲೆಂಡ್ ಪೆನಾಲ್ಟಿ ಅವಕಾಶ ಪಡೆದಿತ್ತು. ಭಾರತದ ರಕ್ಷಣಾ ಪಡೆಯು ಇಂಗ್ಲೆಂಡ್ ಗೋಲು ಗಳಿಕೆಯ ಗುರಿಯನ್ನು ತಪ್ಪಿಸಿದರು.

ಬುಧವಾರ ನಡೆಯುವ ಪಂದ್ಯದಲ್ಲಿ ಭಾರತವು ಕೆನಡಾ ತಂಡವನ್ನು ಎದುರಿಸಲಿದೆ.

‘ಪಿಕೆಎಲ್: ಪವನ್‌ಗೆ ಜಾಕ್‌ಪಾಟ್ ನಿರೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಟೂರ್ನಿಯ ಒಂಬತ್ತನೇ ಆವೃತ್ತಿಗೆ ಆಟಗಾರರ ಹರಾಜು ಪ್ರಕ್ರಿಯೆ ಇದೇ ಶುಕ್ರವಾರ ಮತ್ತು ಶನಿವಾರ ನಡೆಯಲಿದ್ದು ಪವನ್ ಕುಮಾರ್ ಶೆರಾವತ್ ಅವರಿಗೆ ಹೆಚ್ಚಿನ ಮೌಲ್ಯ ಲಭಿಸುವ ನಿರೀಕ್ಷೆಯಿದೆ ಎಂದು ಭಾರತ ಕಬಡ್ಡಿ ತಂಡದ ಮಾಜಿ ನಾಯಕ ಅನೂಪ್ ಕುಮಾರ್ ಹೇಳಿದರು.

ಸ್ಟಾರ್ ಸ್ಪೋರ್ಟ್ಸ್ ವಾಹಿನಿ ಆಯೋಜಿಸಿದ್ದ ‘ಟೋಟಲ್ ಕಬಡ್ಡಿ ಆಕ್ಷನ್ ಸ್ಪೆಷಲ್‘ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಪವನ್ ಅವರನ್ನು ಬೆಂಗಳೂರು ಬುಲ್ಸ್ ಈ ಬಾರಿ ಬಿಡುಗಡೆ ಮಾಡಿದ್ದರೂ ಮತ್ತೆ ತಂಡಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸಲಿದೆ‘ ಎಂದು ಅನೂಪ್ ಹೇಳಿದರು. ಮುಂಬೈನಲ್ಲಿ ನಡೆಯುವ ಹರಾಜು ಪ್ರಕ್ರಿಯೆನ್ನು ಸ್ಟಾರ್ ಸ್ಪೋರ್ಟ್ಸ್ ನೇರ ಪ್ರಸಾರ ಮಾಡಲಿದೆ.

ಸ್ಕ್ವಾಷ್: ಸೆಮಿಫೈನಲ್‌ಗೆ ಸೌರವ್, ಸುನೈನಾ ಮುನ್ನಡೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಸ್ಕ್ವಾಷ್ ಆಟಗಾರ ಸೌರವ್ ಘೋಷಾಲ್ ಅವರು ಕ್ರೀಡಾಕೂಟದ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿದ್ದಾರೆ.

ಸೋಮವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅವರು 11-5 8-11 11-7 11-3ರಿಂದ ಸ್ಕಾಟ್ಲೆಂಡ್‌ನ ಗ್ರೆಗ್ ಲೊಬ್ಬನ್ ಎದುರು ಗೆದ್ದರು.

ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೌರವ್ 11-6, 11-2, 11-6ರಿಂದ ಕೆನಡಾದ ಡೇವಿಡ್ ಬೈಲಾರ್ಜಿಯನ್ ಅವರನ್ನು ಸೋಲಿದ್ದರು. ಕಾಮನ್‌ವೆಲ್ತ್ ಕ್ರೀಡಾಕೂಟದ ಸ್ಕ್ವಾಷ್‌ನಲ್ಲಿ ಭಾರತ ಚೊಚ್ಚಲ ಪದಕದ ನಿರೀಕ್ಷೆಯಲ್ಲಿದೆ.

ಸೆಮಿಫೈನಲ್‌ಗೆ ಸುನೈನಾ: ಮಹಿಳಾ ಸಿಂಗಲ್ಸ್‌ನ ಪ್ಲೇಟ್ ವಿಭಾಗದಲ್ಲಿ ಭಾರತದ ಸುನೈನಾ ಕುರುವಿಲ್ಲಾ ಅವರೂ ನಾಲ್ಕರ ಘಟ್ಟ ತಲುಪಿದರು. ಸೋಮವಾರ ನಡೆದ ಎಂಟರಘಟ್ಟದ ಪಂದ್ಯದಲ್ಲಿ ಅವರು 11-3, 11-2, 11-2ರಿಂದ ಶ್ರೀಲಂಕಾದ ಚನಿತ್ಮಾ ಸಿನಲಿ ಅವರನ್ನು ಪರಾಭವಗೊಳಿಸಿದರು.

ಜೋಷ್ನಾಗೆ ಸೋಲು: ಮಹಿಳಾ ಸಿಂಗಲ್ಸ್‌ನ ಕ್ವಾರ್ಟರ್‌ಫೈನಲ್‌ನಲ್ಲಿ ಜೋಷ್ನಾ ಚಿಣ್ಣಪ್ಪ 9–11, 5–11, 13–15ರಿಂದ ಕೆನಡಾದ ಹಾಲಿ ನೌಟನ್ ಎದುರು ಸೋತರು.



ಸೌರವ್ ಘೋಷಾಲ್– ಪಿಟಿಐ ಚಿತ್ರ